ಮಂಗಳೂರು
ಶನಿವಾರ, 28 ಮಾರ್ಚ್ 2026
ಸಂಪುಟ 48, ಸಂಚಿಕೆ 9 ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮತಾಂತರ ತಡೆಗಾಗಿ ಕಠಿಣ ಕಾಯ್ದೆ | ೦೨
ಪುರಾತನ ಮೂರು ಶಿಲ್ಪ ಮರಳಿ ಭಾರತಕ್ಕೆ | ೦೨
ಮನರನ್‌ಜನಾ ಹಬ್ಬ ಇಂದಿನಿಂದ ಶುರು | ೧೧

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಪುಷ್ಯ

ದಿನದ ಮಾತು

ವಿದ್ವತ್ತು ಮತ್ತು ಸಾರ್ವಭೌಮತ್ವವನ್ನು ಒಂದಾಗಿ ಪರಿಗಣಿಸಲಾಗದು. ರಾಜನು ಅವನ ರಾಜ್ಯದಲ್ಲಿ ಮಾತ್ರ ಗೌರವಿಸಲ್ಪಡುತ್ತಾನೆ. ಆದರೆ ಒಬ್ಬ ವಿದ್ವಾಂಸ ಎಲ್ಲೆಡೆ ಗೌರವಾನ್ವಿತ.

▲ ಪಂಚತಂತ್ರ

ವಿಶುದ್ಧ ಚಕ್ರಕ್ಕೆ ನಿತ್ಯಾನುಷ್ಠಾನ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಇಂದು, ನಾಳೆ ತೆರೆದಿರಲಿದೆ ಉಪ ನೋಂದಣಿ ಕಚೇರಿ

• **ಬೆಂಗಳೂರು:** ರಾಜ್ಯದ ಎಲ್ಲಾ ಉಪ ನೋಂದಣಿ ಕಚೇರಿಗಳು ಶನಿವಾರ (ಮಾ.28) ಮತ್ತು ಭಾನುವಾರ (ಮಾ.29)ರ ರಜಾ ದಿನಗಳಂದು ಕರ್ತವ್ಯದ ನಿರ್ವಹಿಸುವ ದಿನಗಳೆಂದು ಘೋಷಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ. ಕರ್ನಾಟಕ ನೋಂದಣಿ ನಿಯಮಗಳು, 1965ರ ಚಾಪ್ಟರ್-2ರ ನಿಯಮ5ಕ್ಕೆ 2024ರಲ್ಲಿ ತಂದಿರುವ ತಿದ್ದುಪಡಿಯನ್ವಯ, ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಎರಡೂ ರಜಾ ದಿನಗಳಾದ ಶನಿವಾರ ಮತ್ತು ಭಾನುವಾರ ಕರ್ತವ್ಯದ ನಿರ್ವಹಿಸುವ ದಿನಗಳೆಂದು ಘೋಷಿಸಿ ಕಂದಾಯ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿಯವರು ಶುಕ್ರವಾರ ಆದೇಶಿಸಿದ್ದಾರೆ.

ಮೋದಿ, ನಾನು ಸೇರಿದರೆ ಎಲ್ಲವೂ ಸಾಧ್ಯ: ಟ್ರಂಪ್

• **ಹೊಸದಿಲ್ಲಿ:** ನಾನು ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ನಮ್ಮ ಚಿಂತನೆಗಳನ್ನು ನೇರ ಕೃತಿರೂಪಕ್ಕಿಳಿಸುವವರು. ಈ ತಾಕತ್ತು ಬಹುತೇಕರಿಗೆ ಇರುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಶ್ಚಿಮ ಏಷ್ಯಾ ಸಮರ ಮಧ್ಯೆ ಪ್ರಧಾನಿ ಮೋದಿ ಅವರನ್ನು ಮಗದೊಮ್ಮೆ ಹೊಗಳಿದ್ದಾರೆ. ಭಾರತದಲ್ಲಿನ ಅಮೆರಿಕ ದೂತಾವಾಸದಲ್ಲಿ ಶುಕ್ರವಾರ ಅಂಟಿಸಿರುವ ಪೋಸ್ಟ್ ಒಂದರಲ್ಲಿ ಈ ರೀತಿ ಉಲ್ಲೇಖವಿದೆ.

• ಪುಟ ೦೨

ನೋಯ್ಡಾ ಏರ್‌ಪೋರ್ಟ್ ಹಂತ 1ಕ್ಕೆ ಇಂದು ಚಾಲನೆ

• ಪುಟ ೦೨

ಇನ್ನು ಅಮೆರಿಕದ ಕರೆನ್ಸಿ ನೋಟಲ್ಲಿ ಟ್ರಂಪ್ ಸಹಿ

• ಪುಟ ೦೨

ಶ್ರೀನಗರದಲ್ಲಿ ಹಿಮಪಾತ: ಏಳು ಜನ ಸಾವು


• ಪುಟ ೦೨

ನಾವು ಮೌಲ್ಯಾಧಾರಿತ ಸಮಾಜದೆಡೆಗೆ ಸಾಗುವಂತಾಗಲಿ

• ಪುಟ ೫

ಬಾಕಿ ಹಣ ನೀಡದ ಸಕ್ಕರೆ ಕಾರ್ಖಾನೆಗಳಿಗೆ ನೋಟಿಸ್

• ಪುಟ ೫



ರಾಮನವಮಿ ಅಂಗವಾಗಿ ಶುಕ್ರವಾರ ಅಯೋಧ್ಯೆಯ ಶ್ರೀರಾಮನಿಗೆ ಸೂರ್ಯತಿಲಕ ಸ್ಪರ್ಶಿಸಿದ ಕ್ಷಣವನ್ನು ಪ್ರಧಾನಿ ಮೋದಿ ನೇರ ಪ್ರಸಾರ ವೀಕ್ಷಿಸಿ ನಮಿಸುತ್ತಿರುವುದು.

ಮಧ್ಯಪ್ರಾಚ್ಯ ಬಿಕ್ಕಟ್ಟು | ಸಿಎಂಗಳ ಜತೆ ಮೋದಿ ಚರ್ಚೆ

ಇಂಧನ ಭದ್ರತೆ, ಜನ ಹಿತ ರಕ್ಷಣೆಗೆ ಆದ್ಯತೆ

ಲಾಕ್‌ಡೌನ್ ಪ್ರಸ್ತಾವವಿಲ್ಲ, ಆತಂಕ ಬೇಡ: ನಿರ್ಮಲಾ

• ಪುಟ ೧೨

ರಾಜ್ಯಕ್ಕೆ 20% ವಾಣಿಜ್ಯ ಅಡುಗೆ ಅನಿಲ ಹೆಚ್ಚಳ: ಪ್ರಧಾನಿ ಸಕಾರಾತ್ಮಕ ಸ್ಪಂದನೆ

• ಪುಟ ೭



• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಸಂಘರ್ಷದಿಂದ ಉಂಟಾದ ಜಾಗತಿಕ ಪರಿಸ್ಥಿತಿ ಇನ್ನೂ ಮಾರಕವಾಗಿ ಬದಲಾಗುತ್ತಿದ್ದು, ಆರ್ಥಿಕ ಮತ್ತು ವಾಣಿಜ್ಯ ಸ್ಥಿರತೆ ಕಾಯ್ದುಕೊಳ್ಳುವುದು, ಇಂಧನ ಭದ್ರತೆ ಖಚಿತಪಡಿಸಿಕೊಳ್ಳುವುದು, ಕೈಗಾರಿಕೆ ಮತ್ತು ಸರಬರಾಜು ಸರಪಳಿಗಳನ್ನು ಬಲಪಡಿಸುವುದು ಹಾಗೂ ನಾಗರಿಕರ ಹಿತಾಸಕ್ತಿಯನ್ನು ರಕ್ಷಿಸುವುದು ಸರ್ಕಾರದ ಪ್ರಮುಖ ಆದ್ಯತೆಗಳಾಗಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.



ಮುಖ್ಯಮಂತ್ರಿಗಳ ಜತೆಗೆ ವರ್ಚುವಲ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಪರಿಸ್ಥಿತಿಯು ನಿರಂತರ ಮೇಲ್ವಿಚಾರಣೆ ಮತ್ತು ತ್ವರಿತವಾಗಿ ಹೊಂದಿಕೊಳ್ಳುವ ಕಾರ್ಯತಂತ್ರಗಳ ಅಗತ್ಯವನ್ನು ವಿವರಿಸುತ್ತದೆ ಎಂದರು.

ಕೇಂದ್ರ ಮತ್ತು ರಾಜ್ಯಗಳ ನಡುವೆ ನಿರಂತರ ಸಂವಹನ ಮತ್ತು ಸಮನ್ವಯ ಅಗತ್ಯವಿದ್ದು, ಸಮಯೋಚಿತ ಮಾಹಿತಿಯ ಹಂಚಿಕೆ ಹಾಗೂ ಜಂಟಿ ನಿರ್ಧಾರಗಳಿಂದ ಪ್ರತಿಕ್ರಿಯೆಗಳು ವೇಗವಾಗಿ ಮತ್ತು ಸಮನ್ವಯವಾಗಿ ನಡೆಯುತ್ತವೆ ಎಂದರು. ➡ಪುಟ ೪

ರಾಜ್ಯಗಳಿಗೆ ಪ್ರಧಾನಿ ಸಲಹೆ

- ಟೀಂ ಇಂಡಿಯಾ ಆಗಿ ಕೆಲಸ ಮಾಡಬೇಕು
- ಸಮಸ್ಯೆ ಪರಿಹರಿಸಿಕೊಳ್ಳಲು ಎಲ್ಲರೂ ಒಗ್ಗಟ್ಟಾಗಿರಬೇಕು
- ಒಟ್ಟಾಗಿ ಕೆಲಸ ಮಾಡಿದರೆ ಸಮಸ್ಯೆ ಪರಿಹಾರ ಸುಲಭ
- ಆರ್ಥಿಕ, ವ್ಯಾಪಾರ ಸ್ಥಿತಿ ಕಾಪಾಡಿಕೊಳ್ಳಬೇಕು
- ನಾಗರಿಕರ ಹಿತಾಸಕ್ತಿ ಕಾಪಾಡಲು ಆದ್ಯತೆ ನೀಡಿ
- ತಪ್ಪು ಮಾಹಿತಿ, ವದಂತಿ ಹರಡದಂತೆ ಕ್ರಮ ವಹಿಸಿ

ಅಬಕಾರಿ ಸುಂಕ ಕಡಿತ



ಡೀಸೆಲ್‌ಗಿಲ್ಲ ತೆರಿಗೆ, ಪ್ರತಿ ಲೀಟರ್ ಪೆಟ್ರೋಲ್‌ಗೆ 10 ರೂ. ಇಳಿಕೆ , ಬೆಲೆ ಏರಿಕೆ ತಡೆಗೆ ಕೇಂದ್ರ ಕ್ರಮ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿ ನಡುವೆ ಜಾಗತಿಕ ಕಚ್ಚಾ ತೈಲ ಬೆಲೆಗಳು ಏರಿಕೆಯಾಗುವ ಆತಂಕ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಲೀಟರ್‌ಗೆ 10 ರೂ. ಕಡಿತಗೊಳಿಸಿದೆ. ➡ಪುಟ ೪

ಇನ್ನು ತೃತೀಯ ಭಾಷೆಗಿಲ್ಲ ಅಂಕ | ಈ ವರ್ಷದಿಂದಲೇ ಜಾರಿ

525 ಅಂಕಕ್ಕಿಳಿದ ಎಸ್ಸೆಸ್ಸೆಲ್ಸಿ ಪರೀಕ್ಷೆ

• **ಬೆಂಗಳೂರು:** ರಾಜ್ಯದಲ್ಲಿ ಈವರೆಗೆ 625 ಅಂಕಗಳಿಗೆ ನಡೆಯುತ್ತಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು 525 ಅಂಕಗಳಿಗೆ ಇಳಿಸಲು ಸರ್ಕಾರ ತೀರ್ಮಾನಿಸಿದೆ. ಇನ್ನು ಮುಂದೆ ತೃತೀಯ ಭಾಷೆಯಲ್ಲಿ ಪಾಸ್ ಅಥವಾ ಫೇಲ್ ಎಂಬ ಪದ್ಧತಿ ಇರುವುದಿಲ್ಲ. ಆದರ ಅಂಕಗಳನ್ನು ಮುಖ್ಯ ಫಲಿತಾಂಶಕ್ಕೆ ಪರಿಗಣಿಸದೆ ಕೇವಲ ಗ್ರೇಡ್ ನೀಡುವ ವ್ಯವಸ್ಥೆಯನ್ನು ಈ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲು ನಿರ್ಧರಿಸಿದೆ.



ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ತೃತೀಯ ಭಾಷೆ ಹಿಂದಿ ಪರೀಕ್ಷೆ ನಡೆಸುವುದಕ್ಕೆ ಕನ್ನಡಪರ ಸಂಘಟನೆಗಳು ಸೇರಿದಂತೆ ರಾಜ್ಯಾದ್ಯಂತ ಭಾರೀ ವಿರೋಧ ವ್ಯಕ್ತವಾಗಿತ್ತು. ಸಾರ್ವಜನಿಕರಿಂದ, ವಿವಿಧ ಸಂಘಟನೆಗಳಿಂದ ತೀವ್ರ ಒತ್ತಡ ಹಾಗೂ ಮನವಿಗಳು ಬಂದಿದ್ದವು.

ಈ ಮಧ್ಯೆ ಮಾ.31ರಂದು ನಡೆಯಬೇಕಾಗಿದ್ದ ಪರೀಕ್ಷೆಯನ್ನು ಮಹಾವೀರ ಜಯಂತಿ ಹಿನ್ನೆಲೆಯಲ್ಲಿ ಒಂದು ದಿನ ಮೊದಲೇ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಇದೀಗ ಈ ಪರೀಕ್ಷೆಯ ಅಂಕವನ್ನೂ ಪರಿಗಣಿಸುವುದಿಲ್ಲ. ಈ ಮೂಲಕ ಇದೇ ವರ್ಷದಿಂದಲೇ ತೃತೀಯ ಭಾಷೆಯನ್ನು ಕಡ್ಡಾಯ ವಿಷಯದಿಂದ ಹೊರಗಿಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ➡ಪುಟ ೪

ಎಲ್ಲ ಪಠ್ಯಕ್ರಮ ಶಾಲೆಗೂ ಅನ್ವಯ

2026-27ರ ಶೈಕ್ಷಣಿಕ ಸಾಲಿನಲ್ಲಿ 1ನೇ ತರಗತಿಯ ಪ್ರವೇಶ ವಯೋಮಿತಿಯಲ್ಲಿ ನೀಡಲಾಗಿರುವ 60 ದಿನಗಳ ವಿನಾಯಿತಿಯು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪಠ್ಯಕ್ರಮ (ಸಿಬಿಎಸ್‌ಇ, ಐಸಿಎಸ್‌ಇ ಒಳಗೊಂಡಂತೆ) ಶಾಲೆಗಳಿಗೂ ಅನ್ವಯಿಸುತ್ತದೆ. ಈ ಕುರಿತು ಸಿಬಿಎಸ್‌ಇ ಮತ್ತು ಇತರೆ ರಾಜ್ಯಗಳ ಪಾಲಿಸಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಗುವುದು. ಈ ಬಗ್ಗೆ ಈಗಾಗಲೇ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಚರ್ಚಿಸಲಾಗಿದೆ. ಇತರ ರಾಜ್ಯಗಳಲ್ಲಿನ ಶಿಕ್ಷಣ ಪದ್ಧತಿಯ ಮಾಹಿತಿ ಕೋರಲಾಗಿದೆ. ➡ಪುಟ ೪

ನಮ್ಮ ಸರ್ಕಾರದ ಪ್ರಮುಖ ಉದ್ದೇಶ ಸರ್ಕಾರಿ ಶಾಲೆಗಳ ಸಬಲೀಕರಣ, ಪಾರದರ್ಶಕತೆ ಕಾಯ್ದುಕೊಳ್ಳುವುದು ಮತ್ತು ವಿದ್ಯಾರ್ಥಿಗಳನ್ನು ಪರೀಕ್ಷಾ ಒತ್ತಡದಿಂದ ಮುಕ್ತಗೊಳಿಸುವುದಾಗಿದೆ. ಈ ನಿಟ್ಟಿನಲ್ಲಿ ವಾರ್ಷಿಕ 3 ಪರೀಕ್ಷೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಅಂಕ ಉಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

■ **ಮಧು ಬಂಗಾರಪ್ಪ,** ಶಾಲಾ ಶಿಕ್ಷಣ, ಸಾಕ್ಷರತಾ ಸಚಿವ

ಕೆಎಸ್‌ಸಿಎಗೆ ಡಿಕೆಶಿ ಸೂಚನೆ | ಡಿಸಿಎಂ ನೇತೃತ್ವದ ಸಭೆ ನಿರ್ಧಾರ

ಶಾಸಕರಿಗೆ ತಲಾ 2 ಐಪಿಎಲ್ ಟಿಕೆಟ್

• **ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಪಂದ್ಯಗಳಿಗೆ ನಾಲ್ಕು ಟಿಕೆಟ್‌ಗಳಿಗೆ ಬೇಡಿಕೆಯಿಟ್ಟಿದ್ದ ಶಾಸಕರಿಗೆ ಎರಡು ಟಿಕೆಟ್ ಕೊಡಿಸುವಲ್ಲಿ ಡಿಸಿಎಂ ಯಶಸ್ವಿಯಾಗಿದ್ದಾರೆ. ಮೊದಲ ಪಂದ್ಯಕ್ಕೆ ಪ್ರತಿ ಶಾಸಕರಿಗೆ ಎರಡು ಟಿಕೆಟ್ ನೀಡುವಂತೆ ಕೆಎಸ್‌ಸಿಎಗೆ ಸೂಚಿಸಿದ್ದಾರೆ.

ಸಂಸದರು ಹಾಗೂ ಶಾಸಕರಿಗೆ ಐಪಿಎಲ್ ಸೇರಿದಂತೆ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳ ಟಿಕೆಟ್ ವಿತರಣೆ ಸಂಬಂಧ ವಿಧಾನಸಭೆ ಕಲಾಪದಲ್ಲಿ ವಿಷಯ ಪ್ರಸ್ತಾಪವಾದ ಹಿನ್ನೆಲೆಯಲ್ಲಿ ಹಾಗೂ ಸ್ಪೀಕರ್ ಯು. ಟಿ. ಖಾದರ್ ಅವರು ನೀಡಿದ ಸೂಚನೆ ಮೇರೆಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ವಿನಯ್ ಮತ್ತಿತರರ ಜತೆ ವಿಧಾನಸೌಧದಲ್ಲಿ ಶುಕ್ರವಾರ ಸಮಾಲೋಚನೆ ನಡೆಸಿದರು. ➡ಪುಟ ೪



ಸುರಕ್ಷತೆ ಕುರಿತು ಸಿಎಸ್ ಸಭೆ

ಶನಿವಾರದಿಂದ (ಮಾ.28) ಐಪಿಎಲ್ ಪಂದ್ಯಾವಳಿಗಳು ಆರಂಭವಾಗಲಿರುವ ಹಿನ್ನೆಲೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಕೆಎಸ್‌ಸಿಎ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಸುರಕ್ಷತೆ ಕುರಿತಾಗಿ ಸುದೀರ್ಘ ಸಭೆ ನಡೆಸಿ ಸಲಹೆ, ಸೂಚನೆಗಳನ್ನು ನೀಡಿದರು. ➡ಪುಟ ೪

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮಾಹಿತಿ

ಸಾದಿಕ್ ಪೈಲ್ವಾನ್ ಕಣದಿಂದ ನಿವೃತ್ತಿ

• **ಬೆಂಗಳೂರು:** ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಸಾದಿಕ್ ಪೈಲ್ವಾನ್ ಚುನಾವಣಾ ಕಣದಿಂದ ಹಿಂದೆ ಸರಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಯಶಸ್ವಿಯಾಗಿದ್ದಾರೆ.



ನಾಮಪತ್ರ ಸಲ್ಲಿಸಿದ್ದ ಸಾದಿಕ್ ಅವರನ್ನು ಕೆಪಿಸಿಸಿ ಕಚೇರಿಯಲ್ಲಿ ಖುದ್ದಾಗಿ ಭೇಟಿ ಮಾಡಿದ ಸಿಎಂ ಹಾಗೂ ಡಿಸಿಎಂ ಅವರು ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಳಿಕ ಕಾಂಗ್ರೆಸ್ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ಕಡೆ ಕಾಂಗ್ರೆಸ್ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ➡ಪುಟ ೪



ರಾಜ್ಯದಲ್ಲಿ ಕೆಲವು ಬೆಳವಣಿಗೆಗಳಾಗಿತ್ತು. ಈಗ ಕಾಂಗ್ರೆಸ್‌ನಲ್ಲಿ ಸಂಭ್ರಮದ ದಿನ. ಕಾಂಗ್ರೆಸ್‌ನ ಮನೆಯವರೇ ವಾಪಸ್ ಮನೆಯನ್ನು ಸೇರಿದ್ದಾರೆ. ಎಲ್ಲವೂ ಬಗೆಹರಿದಿದೆ.

■ **ರಣದೀಪ್‌ಸಿಂಗ್ ಸುರ್ಜೇವಾಲಾ,** ರಾಜ್ಯ ಕಾಂಗ್ರೆಸ್ ಉಸ್ತುವಾರಿ

ರಾಮನವಮಿ ದಿನ ಲಕ್ಷಾಂತರ ಭಕ್ತರಿಂದ ರಾಮಲಲಾ ದರ್ಶನ

• **ಅಯೋಧ್ಯೆ:** ಚೈತ್ರ ನವರಾತ್ರಿಯ ಒಂಭತ್ತನೇ ದಿನ ಅವತರಿಸಿದ ಭಗವಾನ್ ಶ್ರೀರಾಮಚಂದ್ರನ ಅಯೋಧ್ಯಾ ಮಂದಿರದಲ್ಲಿ ಶುಕ್ರವಾರ ಲಕ್ಷಾಂತರ ಭಕ್ತರು ಸೇರಿದ್ದರು. ರಾಮನವಮಿ ಹಿನ್ನೆಲೆಯಲ್ಲಿ ದ್ವಿತೀಯ ಬಾರಿ ವಿಶಿಷ್ಟವಾಗಿ ಸೂರ್ಯತಿಲಕದಿಂದ ಪ್ರಕಾಶಿತ, ಪುಷ್ಪ -ಆಭರಣಗಳಿಂದ ಶೋಭಿತ ರಾಮಲಲಾನ ಕಾಣಲು, ಬಾಲರಾಮನ ದರ್ಶನ ಮಾತ್ರದಿಂದಲೆ ಪುನೀತರಾಗಲು ಭಕ್ತರು ಮುಂಜಾನೆಯಿಂದಲೇ ಪ್ರವಾಹೋಪಾದಿಯಲ್ಲಿ ಶ್ರೀರಾಮಮಂದಿರದತ್ತ ಹೆಜ್ಜೆ ಹಾಕಿದ್ದರು. ಮಧ್ಯಾಹ್ನ 12 ಗಂಟೆಗೆ ಪವಿತ್ರ ಅಭಿಜಿತ್ ಮುಹೂರ್ತದಲ್ಲಿ ಬಾಲರಾಮನಿಗೆ ಸೂರ್ಯ ತಿಲಕ ವಿಧಿಯನ್ನು ವಿಧಿಬದ್ಧವಾಗಿ ನೆರವೇರಿಸಲಾಯಿತು. ವಿಧಿಪ್ರಕಾರ ಆದಿತ್ಯನ ತೇಜೋಮಯ ಪ್ರಖರ ರಶ್ಮಿಗಳು ಭಗವಂತನ ಹಣೆ ಭಾಗವನ್ನು ನೇರವಾಗಿ ಸ್ಪರ್ಶಿಸಿದ್ದವು. • ವಿವರ ಪುಟ ೦೨

ಮೂರು ವರ್ಷಗಳಲ್ಲಿ 273ಕ್ಕೂ ಹೆಚ್ಚು ಮಂದಿ ಸಾವು

ಹಾವು ಕಡಿತದಿಂದ ಸಾವು ಹೆಚ್ಚಳ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 273ಕ್ಕೂ ಹೆಚ್ಚು ಮಂದಿ ಹಾವು ಕಚ್ಚಿದ್ದರಿಂದ ಮೃತಪಟ್ಟಿದ್ದು, ಗ್ರಾಮೀಣ ಭಾಗಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿವೆ.

ಅದರಲ್ಲೂ ರಾಜ್ಯದಲ್ಲಿ ಹಾವು ಕಡಿತದಿಂದ ಅಸುನೀಗುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಈ ಸಾವಿನ ಸಂಖ್ಯೆ ಹೆಚ್ಚಲು ಹಲವು ಕಾರಣಗಳಿವೆ. ಹಾವಿನ ವಿಷವು ನರಮಂಡಲ, ರಕ್ತ ಅಥವಾ ಸ್ನಾಯುಗಳ ಮೇಲೆ ಪರಿಣಾಮ ಬೀರಿ, ಚಿಕಿತ್ಸೆ ವಿಳಂಬವಾದರೆ ಶ್ವಾಸಕೋಶದ ವೈಫಲ್ಯ ಅಥವಾ ಹೃದಯಸ್ತಂಭನದಿಂದ ಸಾವು ಸಂಭವಿಸುತ್ತದೆ. ಹಾವು ಕಡಿತ ಪ್ರಕರಣಗಳು ಹಾಗೂ ಮೃತಪಡುವವರ ಸಂಖ್ಯೆಯ ವರದಿ ಪ್ರಮಾಣವು ವರ್ಷದಿಂದ ವರ್ಷಕ್ಕೆ ಏರಿಕೆಯಾಗಿರುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಪ್ರತಿ ವರ್ಷ ಭಾರತದಲ್ಲಿ 50 ಸಾವಿರ ಮರಣಗಳು ಸಂಭವಿಸುತ್ತಿವೆ. ಅದರಂತೆ ರಾಜ್ಯದಲ್ಲಿ, ಹಾವು ಕಡಿತದಿಂದ 2023ರಲ್ಲಿ 19 ಜನ ಮೃತಪಟ್ಟರೆ, 2024ರಲ್ಲಿ 100 ಜನ, 2025ರಲ್ಲಿ 154 ಜನರು ಮೃತಪಟ್ಟಿದ್ದಾರೆ. ➡ಪುಟ ೪

ವರ್ಷದಿಂದ ವರ್ಷಕ್ಕೆ ಏರಿಕೆ



ಮೃತಪಟ್ಟ ಕುಟುಂಬಕ್ಕೆ ಪರಿಹಾರ

ಹಾವು ಕಡಿತದಿಂದ ಮೃತಪಟ್ಟವರ ಕುಟುಂಬಕ್ಕೆ, ಜಿಲ್ಲಾಡಳಿತದ ಮೂಲಕ ಅರ್ಜಿ ಸಲ್ಲಿಸಿದರೆ ಪರಿಹಾರ ಮೊತ್ತ ಲಭ್ಯವಾಗಲಿದೆ. ಅಲ್ಲದೆ, ರಾಜ್ಯದ ಸರ್ಕಾರಿ, ಸಂಯೋಜಿತ ಖಾಸಗಿ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಉಚಿತ ಚಿಕಿತ್ಸೆ ಒದಗಿಸಲು ಆದೇಶಿಸಲಾಗಿದೆ. ಆದರೆ, ಪರಿಹಾರ ಪಡೆಯಲು ಮರಣೋತ್ತರ ಪರೀಕ್ಷಾ ವರದಿ, ಪೊಲೀಸ್ ದೂರು, ಮತ್ತು ಮರಣ ಪ್ರಮಾಣಪತ್ರ ಕಡ್ಡಾಯಗೊಳಿಸಲಾಗಿದೆ.

ನೇಪಾಳ ಪ್ರಧಾನಿ ಆಗಿ ಬಾಲೇಂದ್ರ ಶಾ ಪ್ರಮಾಣ

• **ಕಠ್ಮಂಡು:** ನೇಪಾಳ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಬಾಲೇಂದ್ರ ಶಾ ಅವರು ಶುಕ್ರವಾರ ನೇಪಾಳದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರೀಯ ಸ್ವತಂತ್ರ ಪಕ್ಷದ (ಆರ್‌ಎಸ್‌ಪಿ) ನಾಯಕರಿಗೆ ರಾಷ್ಟ್ರಪತಿಗಳ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮಚಂದ್ರ ಪೌದೆಲ್ ಅವರು ಪ್ರಮಾಣವಚನ ಬೋಧಿಸಿದರು. ಈ ತಿಂಗಳ ಸಂಸತ್ ಚುನಾವಣೆಯಲ್ಲಿ ಆರ್‌ಎಸ್‌ಪಿ ಅಭೂತಪೂರ್ವ ಗೆಲುವು ದಾಖಲಿಸಿತ್ತು. ಕಠ್ಮಂಡುವಿನ ಮಾಜಿ ಮೇಯರ್ ಆಗಿರುವ ಷಾ, ನೇಪಾಳದ ಉನ್ನತ ಹುದ್ದೆಗೆ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಅತ್ಯಂತ ಕಿರಿಯ ನಾಯಕರಾಗಿದ್ದಾರೆ. ➡ಪುಟ ೪



ಬೆಳ್ಳಿ ಬಂಗಾರ (ಬೆಂಗಳೂರು)				ಷೇರು ಸೂಚ್ಯಂಕ			
ಬೆಳ್ಳಿ: 2,31,500(2,39,500)	ಅಪರಂಜಿ ಚಿನ್ನ: 14,360(14,620)	ಆಭರಣ ಚಿನ್ನ: 13,265(13,465)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)		ಬಿಎಸ್‌ಇ 73,583(1,690↓)	ಎನ್‌ಎಸ್‌ಇ 22,819(486↓)	$1=₹93.97

ಮಾನವೀಯ ಸಂಕಷ್ಟ ಗಂಭೀರ

ಸಂಯುಕ್ತ ರಾಷ್ಟ್ರಗಳ ವರದಿಯ ಪ್ರಕಾರ, ಇರಾನ್‌ನಲ್ಲಿ ಸಾವಿರಾರು ಮನೆಗಳು, ಆಸ್ಪತ್ರೆಗಳು ಮತ್ತು ಶಾಲೆಗಳು ಹಾನಿಗೊಳಗಾಗಿವೆ. ಸುಮಾರು 1.8 ಲಕ್ಷ ಜನರು ತಮ್ಮ ಮನೆ ಕಳೆದುಕೊಂಡಿದ್ದಾರೆ. ಲಕ್ಷಾಂತರ ಜನರು ವಲಸೆ ಹೋಗುವ ಅಪಾಯ ಎದುರಿಸುತ್ತಿದ್ದಾರೆ.

ಸಾವು-ನೋವು ಹೆಚ್ಚಳ

ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಮಂದಿ ಮೃತರಾಗಿದ್ದಾರೆ. ಲೆಬನಾನ್‌ನಲ್ಲಿ 1,100 ಮಂದಿ ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 18 ನಾಗರಿಕರು ಹಾಗೂ 4 ಸೈನಿಕರು ಬಲಿಯಾಗಿದ್ದಾರೆ. ಇರಾಕ್ ಸೇರಿದಂತೆ ಇತರ ಪ್ರದೇಶಗಳಲ್ಲೂ ಸಾವುಗಳು ವರದಿಯಾಗಿವೆ. ಸಂಘರ್ಷ ಮುಂದುವರಿದಂತೆ ಜಾಗತಿಕ ಆತಂಕ ಹೆಚ್ಚುತ್ತಿದೆ. ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿದ್ದರೂ, ತಕ್ಷಣದ ಶಾಂತಿಯ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಯುದ್ಧ ಇನ್ನಷ್ಟು ವಿಸ್ತರಿಸುವ ಭೀತಿ ಹೆಚ್ಚಾಗಿದೆ.

ಗುಜರಾತ್ ಬಂದರಿಗೆ ತಲುಪಿದ ಜಾಗ್ ವಸಂತ್

47,600 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತು ಬಂದ ಜಾಗ್ ವಸಂತ್ ಹಡಗು ಗುರುವಾರ ತಡರಾತ್ರಿ ಗುಜರಾತಿನ ಬಂದರಿಗೆ ಆಗಮಿಸಿದೆ. ಪಶ್ಚಿಮ ಏಷ್ಯಾದ ಯುದ್ಧದ ನಡುವೆ ಸುಮಾರು 23 ದಿನಗಳ ಕಾಲ ಜಲಮಾರ್ಗದಲ್ಲಿ ಸಿಲುಕಿಕೊಂಡಿದ್ದ ಈ ಹಡಗು ವಾಡಿನಾರ್ ಬಂದರಿಗೆ ಆಗಮಿಸಿದೆ. ದೇಶವು ಇಂಧನ ಪೂರೈಕೆ ಕೊರತೆ ಅನುಭವಿಸುತ್ತಿರುವ ಮಧ್ಯೆ ಈ ಬೆಳವಣಿಗೆ ನಡೆದಿದೆ. ಹಾರ್ಮುಜ್ ಜಲಸಂಧಿಯಲ್ಲಿ ಸಿಲುಕಿಕೊಂಡಿದ್ದ ಹಲವಾರು ಟ್ಯಾಂಕರ್‌ಗಳಲ್ಲಿ ಜಾಗ್ ವಸಂತ್ ಕೂಡ ಒಂದಾಗಿದೆ.

ಲಾಕ್‌ಡೌನ್ ಪ್ರಸ್ತಾಪವಿಲ್ಲ ಆತಂಕ ಬೇಡ: ನಿರ್ಮಲಾ

ಹೊಸದಿಲ್ಲಿ : ಪಶ್ಚಿಮ ಏಷ್ಯಾ ಯುದ್ಧದ ಹಿನ್ನೆಲೆಯಲ್ಲಿ ದೇಶದಲ್ಲಿ ಲಾಕ್‌ಡೌನ್ ವಿಧಿಸುವ ಪ್ರಸ್ತಾಪವಿಲ್ಲ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ವದಂತಿಗಳನ್ನು ಹರಡದಂತೆ ಹಾಗೂ ಭಯ ಸೃಷ್ಟಿಸದಂತೆ ಅವರು ಸಲಹೆ ನೀಡಿದ್ದಾರೆ. ಹೆಚ್ಚುತ್ತಿರುವ ಜಾಗತಿಕ ಕಚ್ಚಾ ತೈಲ ಬೆಲೆಗಳ ಹೊರೆ ಸಾಮಾನ್ಯ ಜನರ ಮೇಲೆ ಬೀಳದಂತೆ ನೋಡಿಕೊಳ್ಳುವ ಮೂಲಕ ಹಣಕಾಸಿನ ಕೊರತೆಯನ್ನು ನಿಯಂತ್ರಣದಲ್ಲಿಡಲು ಸರ್ಕಾರವು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು. ರಾಜ್ಯಸಭೆಯಲ್ಲಿ ಹಣಕಾಸು ಮಸೂದೆ, 2026ರ ಕುರಿತ ಚರ್ಚೆಗೆ ಉತ್ತರಿಸಿದ ಅವರು, ಹಲವಾರು ದೇಶಗಳು ಮೋಟಾರು ಇಂಧನದ ಬೆಲೆಗಳನ್ನು ಶೇ.1ರಷ್ಟು ಹೆಚ್ಚಿಸಿವೆ. ಆದರೆ ಭಾರತವು ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಯಥಾಸ್ಥಿತಿಯಲ್ಲಿ ಇರಿಸಿದೆ ಎಂದು ಹೇಳಿದರು.

ಜಂಟಿ ವರದಿ ಸಲ್ಲಿಸಲು ಇನ್ನಷ್ಟು ಕಾಲಾವಕಾಶ

ಹೊಸದಿಲ್ಲಿ: ಪ್ರಧಾನಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಗಂಭೀರ ಆರೋಪಗಳ ಮೇಲೆ ಸತತ 30 ದಿನಗಳ ಕಾಲ ಬಂಧನದಲ್ಲಿದ್ದರೆ ಅವರನ್ನು ಹುದ್ದೆಯಿಂದ ಕೆಳಗಿಳಿಸುವ ಮೂರು ಮಸೂದೆಗಳನ್ನು ಪರಿಶೀಲಿಸುವ ಜಂಟಿ ಸಂಸದೀಯ ಸಮಿತಿಗೆ ತನ್ನ ವರದಿಯನ್ನು ಸಲ್ಲಿಸಲು ಇನ್ನೂ ಹೆಚ್ಚಿನ ಸಮಯ ನೀಡಲಾಗಿದೆ. 2026ರ ಸಂಸತ್ತಿನ ಮುಂಗಾರು ಅಧಿವೇಶನದ ಕೊನೆಯ ವಾರದ ಮೊದಲ ದಿನದವರೆಗೆ ಲೋಕಸಭೆಯು ಶುಕ್ರವಾರ ಸಮಿತಿಗೆ ಕಾಲಾವಕಾಶ ನೀಡಿದೆ. ಸಾಮಾನ್ಯವಾಗಿ, ಮುಂಗಾರು ಅಧಿವೇಶನವು ಜುಲೈ ಮೂರನೇ ವಾರದಲ್ಲಿ ಪ್ರಾರಂಭವಾಗುತ್ತದೆ.



ಮಧ್ಯಪ್ರಾಚ್ಯ ಯುದ್ಧ: ಟ್ರಂಪ್ ಭರವಸೆಯ ಬಳಿಕವೂ ಇರಾನ್ ಕ್ಷಿಪಣಿ ದಾಳಿ, ಇಸ್ರೇಲ್ ಪ್ರತಿದಾಳಿ

ಸ್ಪಷ್ಟತೆ ಇಲ್ಲದ ಮಾತುಕತೆ, ಮುಂದುವರಿದ ಸಂಘರ್ಷ

ಇರಾನ್ ಮೇಲೆ ಶುಕ್ರವಾರ ಇಸ್ರೇಲ್ ಮತ್ತೊಮ್ಮೆ ಭಾರೀ ದಾಳಿಗಳನ್ನು ಆರಂಭಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯುದ್ಧ ಅಂತ್ಯಗೊಳಿಸುವ ಮಾತುಕತೆಗಳು ಚೆನ್ನಾಗಿ ನಡೆಯುತ್ತಿವೆ ಎಂದು ಹೇಳಿದರೂ, ತಳಮಟ್ಟದಲ್ಲಿ ಯಾವುದೇ ಶಾಂತಿ ಲಕ್ಷಣಗಳು ಕಾಣುತ್ತಿಲ್ಲ. ಇರಾನ್ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ತೋರಿಸದೆ ಮುಂದುವರಿದಿದ್ದು, ಸಂಘರ್ಷ ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಈ ಮಧ್ಯೆ ಟ್ರಂಪ್ ಅವರು ದಾಳಿಗೆ ಮತ್ತೆ ಹತ್ತು ದಿನಗಳ ವಿರಾಮ ಘೋಷಿಸಿದ್ದಾರೆ.

ಕ್ಷಿಪಣಿ ದಾಳಿ, ಮೊಳಗಿದ ಸೈರನ್: ಇಸ್ರೇಲ್ ನಗರಗಳಲ್ಲಿ ಏರ್ ರೇಡ್ ಸೈರನ್‌ಗಳು ನಿರಂತರವಾಗಿ ಮೊಳಗುತ್ತಿವೆ. ಇರಾನ್ ಹಾರಿಸಿದ ಕ್ಷಿಪಣಿಗಳನ್ನು ತಡೆಯಲು ಇಸ್ರೇಲ್ ಸೇನೆ ಪ್ರಯತ್ನಿಸುತ್ತಿದೆ. ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ದಾಳಿಗಳು ಇನ್ನಷ್ಟು ವಿಸ್ತಾರವಾಗುತ್ತವೆ ಎಂದು ಎಚ್ಚರಿಕೆ ನೀಡಿದ್ದಾರೆ. ನಾಗರಿಕರ ಮೇಲೆ ಕ್ಷಿಪಣಿಗಳನ್ನು ಹಾರಿಸುವುದನ್ನು ಇರಾನ್ ನಿಲ್ಲಿಸದಿದ್ದರೆ, ಇನ್ನಷ್ಟು ಗುರಿಗಳ ಮೇಲೆ ದಾಳಿ ನಡೆಸುವುದಾಗಿ ಹೇಳಿದ್ದಾರೆ. ಇಸ್ರೇಲ್ ಸೇನೆಯ ಪ್ರಕಾರ, ಶುಕ್ರವಾರ ನಡೆದ ದಾಳಿಗಳು ಟೆಹ್ರಾನ್‌ನ ಪ್ರಮುಖ ಸೈನಿಕ ಮತ್ತು ಕ್ಷಿಪಣಿ ಉತ್ಪಾದನಾ ಕೇಂದ್ರಗಳನ್ನು ಗುರಿಯಾಗಿಸಿಕೊಂಡಿವೆ. ಪಶ್ಚಿಮ ಇರಾನ್‌ನ ಕ್ಷಿಪಣಿ ಲಾಂಚರ್‌ಗಳು ಮತ್ತು ಸಂಗ್ರಹ ಕೇಂದ್ರಗಳನ್ನೂ ಹೊಡೆದಿದೆ.

ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಳ

ಬೈರೂತ್ ಮೇಲೆಯೂ ಹೊಗೆ ಕಾಣಿಸಿಕೊಂಡಿದ್ದು, ಲೆಬನಾನ್ ಪ್ರದೇಶದಲ್ಲೂ ಸಂಘರ್ಷ ತೀವ್ರವಾಗಿದೆ. ಅದೇ ಸಮಯದಲ್ಲಿ ಇರಾನ್ ಗಲ್ಫ್ ದೇಶಗಳತ್ತ ಡ್ರೋನ್ ಮತ್ತು ಕ್ಷಿಪಣಿಗಳನ್ನು ಹಾರಿಸುತ್ತಿದ್ದು, ಬಹ್ರೇನ್, ಕತಾರ್ ಮತ್ತು ಯುಎಇಗಳಲ್ಲಿ ಎಚ್ಚರಿಕೆ ಸೈರನ್‌ಗಳು ಮೊಳಗಿವೆ. ಸೌದಿ ಅರೇಬಿಯಾದ ರಾಜಧಾನಿ ರಿಯಾದ್ ಕಡೆಗೆ ಬಂದ ಕ್ಷಿಪಣಿಗಳನ್ನು ಅಲ್ಲಿನ ರಕ್ಷಣಾ ವ್ಯವಸ್ಥೆ ತಡೆದಿದೆ.

ಕುವೈತ್ ಮತ್ತು ಚೀನಾ ಯೋಜನೆಗೆ ಹೊಡೆತ

ಕುವೈತ್‌ನ ಪ್ರಮುಖ ಬಂದರುಗಳು ದಾಳಿಯಿಂದ ಹಾನಿಗೊಳಗಾಗಿವೆ. ಚೀನಾದ ಬೆಲ್ಟ್ ಅಂಡ್ ರೋಡ್ ಯೋಜನೆಯ ಭಾಗವಾಗಿರುವ ಒಂದು ನಿರ್ಮಾಣ ಯೋಜನೆಯೂ ಹಾನಿಗೊಳಗಾಗಿದೆ. ಇದು ಯುದ್ಧದ ಪರಿಣಾಮ ಜಾಗತಿಕ ಮಟ್ಟಕ್ಕೆ ವಿಸ್ತರಿಸುತ್ತಿರುವುದನ್ನು ಸೂಚಿಸುತ್ತದೆ.

ಆರ್ಥಿಕ ಪರಿಣಾಮ ಮತ್ತು ತೈಲ ಬೆಲೆ ಏರಿಕೆ

ಸ್ಟಾಕ್ ಮಾರುಕಟ್ಟೆಗಳು ಕುಸಿದಿದ್ದು, ತೈಲ ಬೆಲೆಗಳು ಗಗನಕ್ಕೇರಿವೆ. ಬ್ರೆಂಟ್ ಕಚ್ಚಾತೈಲ ಬೆಲೆ ಬ್ಯಾರೆಲ್‌ಗೆ 107 ಡಾಲರ್ ತಲುಪಿದ್ದು, ಯುದ್ಧ ಆರಂಭವಾದ ನಂತರ 45% ಏರಿಕೆಯಾಗಿದೆ. ಹಾರ್ಮುಜ್ ಜಲಸಂಧಿಯ ನಿಯಂತ್ರಣದ ಮೇಲೆ ಇರುವ ಸಂಘರ್ಷ ಜಾಗತಿಕ ಇಂಧನ ಸರಬರಾಜಿಗೆ ಭಾರಿ ಆತಂಕವನ್ನುಂಟು ಮಾಡುತ್ತಿದೆ.

ಪರಿಣಾಮಗಳ ಪರಾಮರ್ಶೆಗಾಗಿ ಸಮಿತಿ

ಹೊಸದಿಲ್ಲಿ: ಪಶ್ಚಿಮ ಏಷ್ಯಾ ಸಮರದಿಂದ ಉದ್ಭವಿಸುತ್ತಿರುವ ಸಮಸ್ಯೆಗಳತ್ತ ನಿಗಾ ಇರಿಸಲು, ರಕ್ಷಣಾ ಸಚಿವ ರಾಜನಾಥ ಸಿಂಗ್ ನೇತೃತ್ವದ ಅಂತರ್ ಸಚಿವಾಲಯ ಸಮಿತಿಯೊಂದನ್ನು ಕೇಂದ್ರ ಸರ್ಕಾರ ರಚಿಸಿದೆ. ಪಶ್ಚಿಮ ಏಷ್ಯಾ ಯುದ್ಧ ಸನ್ನಿವೇಶಗಳು ಮತ್ತು ಅವು ಭಾರತದ ಮೇಲೆ ಬೀರಬಹುದಾದ ಸಂಭಾವ್ಯ ಪರಿಣಾಮಗಳನ್ನು ಸಮಿತಿ ಪರಾಮರ್ಶಿಸಲಿದೆ ಎಂದು ಮೂಲಗಳು ತಿಳಿಸಿವೆ. ಗೃಹ ಸಚಿವ ಅಮಿತ್ ಶಾ, ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ, ಮತ್ತಿತರ ಹಿರಿಯ ನಾಯಕರು ಈ ಸಮಿತಿಯಲ್ಲಿದ್ದಾರೆ.

ಇಂಧನ ದಾಸ್ತಾನು ಸಾಕಷ್ಟಿದೆ: ಈ ಮಧ್ಯೆ, ದೇಶಾದ್ಯಂತ ಚಿಲ್ಲರೆ ಮಾರಾಟದ ಎಲ್ಲಾ ಪೆಟ್ರೋಲ್ ಪಂಪ್‌ಗಳು ಸಹಜವಾಗೇ ಕಾರ್ಯ ನಿರ್ವಹಿಸುತ್ತಿವೆ. ಎಲ್ಲಾ ಪೆಟ್ರೋಲ್ ಪಂಪ್‌ಗಳಲ್ಲೂ ಪೆಟ್ರೋಲ್, ಡೀಸೆಲ್ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನಿದೆ. ಹಾಗಾಗಿ ವದಂತಿಗಳ ನಂಬಿ ಭಯದಿಂದ ಖರೀದಿಗೆ ಆತುರಪಡದಿರಿ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಅಧಿಕೃತ ಹೇಳಿಕೆಯಲ್ಲಿ ಜನರನ್ನು ಎಚ್ಚರಿಸಿದೆ.

ಮಾತುಕತೆ ಪ್ರಯತ್ನ ವಿಫಲ

ಪಾಕಿಸ್ತಾನದ ಮೂಲಕ ಅಮೆರಿಕ ತನ್ನ ಪ್ರಸ್ತಾವನೆ ನೀಡಿದರೂ, ಇರಾನ್ ಅದನ್ನು ತಿರಸ್ಕರಿಸಿದೆ. ಇರಾನ್ ತನ್ನದೇ ಐದು ಅಂಶಗಳ ಪ್ರಸ್ತಾವನೆ ಮುಂದಿಟ್ಟಿದ್ದು, ಹಾರ್ಮುಜ್ ಜಲಸಂಧಿಯ ಮೇಲಿನ ತನ್ನ ಹಕ್ಕನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸಿದೆ. ಈ ನಡುವೆ ಈಜಿಪ್ಟ್, ಟರ್ಕಿ ಮತ್ತು ಪಾಕಿಸ್ತಾನ ಮಾತುಕತೆ ಏರ್ಪಡಿಸಲು ಪ್ರಯತ್ನಿಸುತ್ತಿವೆ.

ಅಮೆರಿಕದ ದ್ವಂದ್ವ ತಂತ್ರ

ಅಮೆರಿಕ ಒಂದು ಕಡೆ 15 ಅಂಶಗಳ ಶಾಂತಿ ಪ್ರಸ್ತಾವನೆ ನೀಡಿದರೆ, ಇನ್ನೊಂದು ಕಡೆ ಸಾವಿರಾರು ಸೇನೆಯನ್ನು ಮಧ್ಯಪ್ರಾಚ್ಯಕ್ಕೆ ಕಳುಹಿಸಿದೆ. ಸುಮಾರು 2,500 ಮರೈನ್ಸ್ ಮತ್ತು 1,000 ಪ್ಯಾರಾಟ್ರೂಪರ್‌ಗಳನ್ನು ನಿಯೋಜಿಸಲಾಗಿದೆ. ಇದು ಅಗತ್ಯವಿದ್ದರೆ ಸೈನಿಕ ಕ್ರಮ ಕೈಗೊಳ್ಳಲು ಸಿದ್ಧತೆ ಎಂಬ ಸೂಚನೆಯಾಗಿದೆ.

ಜಾಗತಿಕ ರಸಗೊಬ್ಬರ ಕೊರತೆ, ಆಹಾರ ಬೆಲೆ ಏರುಪೇರು ಸಾಧ್ಯತೆ

ಹನೋಯಿ: ಇರಾನ್‌ನಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಜಾಗತಿಕವಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗಳಿಗೆ ಪ್ರತಿಯಾಗಿ ಇರಾನ್ ಹಾರ್ಮುಜ್ ಜಲಸಂಧಿಯ ಮೂಲಕ ಸಾಗುವ ಸರಕುಗಳ ಮೇಲೆ ನಿರ್ಬಂಧ ಹೇರಿದೆ. ಇದರಿಂದ ಅನಿಲದ ಬೆಲೆಗಳು ಏರಿಕೆಯಾಗಿದ್ದು, ರಸಗೊಬ್ಬರ ಸರಬರಾಜು ಕಡಿಮೆಯಾಗಿದೆ.

ಈಗಾಗಲೇ ಹವಾಮಾನ ಬದಲಾವಣೆ ಮತ್ತು ಅಸ್ಥಿರ ಹವಾಮಾನದಿಂದ ಸಂಕಷ್ಟದಲ್ಲಿರುವ ಅಭಿವೃದ್ಧಿಶೀಲ ರಾಷ್ಟ್ರಗಳ ರೈತರು ಮಧ್ಯಪ್ರಾಚ್ಯ ಯುದ್ಧದ ಪರಿಣಾಮವಾಗಿ ಮತ್ತಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆ ವಿಶ್ವದಾದ್ಯಂತ ಆಹಾರ ಬೆಲೆಗಳು ಏರಿಕೆಯಾಗುವ ಸಾಧ್ಯತೆ ಇದೆ. ಗಲ್ಫ್ ದೇಶಗಳಿಂದ ರಸಗೊಬ್ಬರ ಆಮದು ಮೇಲೆ ರೈತರು ಅವಲಂಬಿತರಾಗಿದ್ದಾರೆ. ಬಿತ್ತನೆ ಕಾಲ ಆರಂಭವಾಗುತ್ತಿರುವ ಈ ಸಮಯದಲ್ಲಿ ಕೊರತೆ ಉಂಟಾಗಿರುವುದು ಕೃಷಿಯ ಮೇಲೆ ಮಾರಕ ಪರಿಣಾಮ ಬೀರಲಿದೆ. ಉತ್ಪಾದನಾ ವೆಚ್ಚ ಹೆಚ್ಚಾಗಿ ಆಹಾರ ಬೆಲೆ ಏರಿಕೆಯಾಗಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ನೈಟ್ರೋಜನ್, ಫಾಸ್ಫೇಟ್ ಸರಬರಾಜಿಗೆ ಹೊಡೆತ: ಹಾರ್ಮುಜ್ ಜಲಸಂಧಿ ಜಗತ್ತಿನ ತೈಲ ಸಾಗಣೆಯ ಸುಮಾರು 20% ಮತ್ತು ರಸಗೊಬ್ಬರ ವ್ಯಾಪಾರದ ಸುಮಾರು ಮೂರನೇ ಭಾಗವನ್ನು ನಿರ್ವಹಿಸುತ್ತದೆ. ಈ ಮಾರ್ಗದಲ್ಲಿ ಉಂಟಾದ ಅಡಚಣೆಯಿಂದ ನೈಟ್ರೋಜನ್ ಮತ್ತು ಫಾಸ್ಫೇಟ್ ಎಂಬ ಪ್ರಮುಖ ಪೋಷಕಾಂಶಗಳ ಸರಬರಾಜು ತೀವ್ರವಾಗಿ ಹಾನಿಗೊಳಗಾಗಿದೆ. ಯೂರಿಯಾ ಸೇರಿದಂತೆ ನೈಟ್ರೋಜನ್ ರಸಗೊಬ್ಬರಗಳ ಸರಬರಾಜು ಹೆಚ್ಚು ಪ್ರಭಾವಿತವಾಗಿದೆ. ಇದು ಬೆಳೆ ಬೆಳವಣಿಗೆಗೆ ಅಗತ್ಯವಾಗಿದ್ದು, ಉತ್ಪಾದನೆ ಹೆಚ್ಚಿಸಲು ಸಹಾಯಕವಾಗಿದೆ. ಆದರೆ ಸಾಗಣೆ ವಿಳಂಬ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ ಬೆಲೆ ಏರಿಕೆಯಿಂದ ಇದರ ಕೊರತೆ ಉಂಟಾಗಿದೆ. ಜಾಗತಿಕ ಯೂರಿಯಾ ವ್ಯಾಪಾರದ ಸುಮಾರು 30% ಈ ಯುದ್ಧದಿಂದ ತೊಂದರೆ ಅನುಭವಿಸುತ್ತಿದೆ.

ಇಥಿಯೋಪಿಯಾ ಮೊದಲಾದ ದೇಶಗಳು ಗಂಭೀರ ಕೊರತೆಯನ್ನು ಎದುರಿಸುತ್ತಿವೆ. ಆ ದೇಶ ತನ್ನ ನೈಟ್ರೋಜನ್ ರಸಗೊಬ್ಬರದ ಬಹುಪಾಲು ಗಲ್ಫ್ ಪ್ರದೇಶದಿಂದ ಆಮದು ಮಾಡಿಕೊಳ್ಳುತ್ತದೆ. ಯುದ್ಧಕ್ಕೂ ಮುನ್ನವೇ ಒತ್ತಡದಲ್ಲಿದ್ದ ಸರಬರಾಜು ವ್ಯವಸ್ಥೆ ಈಗ ಇನ್ನಷ್ಟು ದುರ್ಬಲವಾಗಿದೆ.



ಬಿತ್ತನೆ ಸಮಯದಲ್ಲಿ ಕೊರತೆ

ರಸಗೊಬ್ಬರವನ್ನು ಸಾಮಾನ್ಯವಾಗಿ ಬಿತ್ತನೆ ಸಮಯದಲ್ಲಿ ಬಳಸಲಾಗುತ್ತದೆ. ಈ ಸಮಯದಲ್ಲಿ ಸರಬರಾಜು ವಿಳಂಬವಾದರೆ ಬೆಳೆಗಳ ಆರಂಭಿಕ ಬೆಳವಣಿಗೆ ಕುಂಠಿತವಾಗುತ್ತದೆ ಮತ್ತು ಉತ್ಪಾದನೆ ಕಡಿಮೆಯಾಗುತ್ತದೆ. ಈ ಪರಿಣಾಮ ಈಗಾಗಲೇ ಅಮೆರಿಕ ಮತ್ತು ಯುರೋಪ್‌ನಲ್ಲಿ ಕಾಣಿಸುತ್ತಿದೆ. ಏಷ್ಯಾದ ಹಲವು ಭಾಗಗಳಲ್ಲಿ ಮುಂದಿನ ತಿಂಗಳಲ್ಲಿ ಬಿತ್ತನೆ ಆರಂಭವಾಗಲಿದ್ದು, ಅಲ್ಲಿ ಕೂಡ ಪರಿಣಾಮ ಬೀರುವ ನಿರೀಕ್ಷೆಯಿದೆ. ಚೀನಾ ಮತ್ತು ರಷ್ಯಾ ಮೊದಲಾದ ಪ್ರಮುಖ ಉತ್ಪಾದಕರು ತಮ್ಮ ದೇಶೀಯ ಅಗತ್ಯಗಳಿಗೆ ಆದ್ಯತೆ ನೀಡುತ್ತಿರುವುದರಿಂದ ಜಾಗತಿಕ ಕೊರತೆಯನ್ನು ಭರಿಸುವುದು ಕಷ್ಟವಾಗಿದೆ.

ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಹೆಚ್ಚು ಪರಿಣಾಮ

ಆಫ್ರಿಕಾ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ಸಮಸ್ಯೆ ಗಂಭೀರವಾಗಿದೆ. ಮಧ್ಯಪ್ರಾಚ್ಯ ಮತ್ತು ರಷ್ಯಾದಿಂದ ರಸಗೊಬ್ಬರ ಆಮದು ಮಾಡುವ ರೈತರು ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ. ಸಂಶೋಧನೆಗಳ ಪ್ರಕಾರ, ರಸಗೊಬ್ಬರ ಬಳಕೆಯಲ್ಲಿ ಸ್ವಲ್ಪ ವಿಳಂಬವೂ ಮಕ್ಕೆಜೋಳದ ಉತ್ಪಾದನೆಯನ್ನು ಸುಮಾರು 4% ರಷ್ಟು ಕಡಿಮೆ ಮಾಡಬಹುದು. ಈ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರಗಳು ಸಹಾಯಧನ ನೀಡುವುದು, ದೇಶೀಯ ಉತ್ಪಾದನೆಯನ್ನು ಉತ್ತೇಜಿಸುವುದು ಮತ್ತು ರಫ್ತು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬಹುದುದಾಗಿದೆ.

ಕಿರುಸುದ್ದಿ

ಇನ್ನು ಅಮೆರಿಕದ ಕರೆನ್ಸಿ ನೋಟಲ್ಲಿ ಟ್ರಂಪ್ ಸಹಿ



ವಾಷಿಂಗ್ಟನ್: ಇನ್ನು ಮುಂದೆ ಅಮೆರಿಕದಲ್ಲಿ ಮುದ್ರಣವಾಗುವ ಕರೆನ್ಸಿ ನೋಟುಗಳಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಹಿ ಇರಲಿದೆ ಎಂದು ಖಜಾನೆ ಇಲಾಖೆ ಘೋಷಿಸಿದೆ. ಈ ಮೂಲಕ ಕರೆನ್ಸಿಯಲ್ಲಿ ಹೆಸರು ಕಾಣಿಸಿಕೊಳ್ಳುವ ಮೊದಲ ಹಾಲಿ ಅಧ್ಯಕ್ಷರು ಎಂಬ ಹೆಗ್ಗಳಿಗೆಗೂ ಟ್ರಂಪ್ ಪಾತ್ರರಾಗಲಿದ್ದಾರೆ. ಈ ಮೂಲಕ ಅಧ್ಯಕ್ಷ ಟ್ರಂಪ್ ನಾಯಕತ್ವದಲ್ಲಿ, ನಾವು ಅಭೂತಪೂರ್ವ ಆರ್ಥಿಕ ಬೆಳವಣಿಗೆ, ಶಾಶ್ವತ ಡಾಲರ್ ಪ್ರಾಬಲ್ಯ ಮತ್ತು ಹಣಕಾಸಿನ ಶಕ್ತಿ ಮತ್ತು ಸ್ಥಿರತೆಯ ಹಾದಿಯಲ್ಲಿದ್ದೇವೆ ಎಂದು ತಿಳಿಸಿದ್ದಾರೆ. 1 ಡಾಲರ್‌ನ 24 ಕ್ಯಾರೆಟ್ ಚಿನ್ನದ ನಾಣ್ಯದಲ್ಲಿ ಟ್ರಂಪ್ ಅವರ ಚಿತ್ರವನ್ನು ಈ ಹಿಂದೆ ಮುದ್ರಿಸಲಾಗಿತ್ತು. ಈ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಕಳವಾದ ಪುರಾತನ 3 ಶಿಲ್ಪ ಮರಳಿ ಭಾರತಕ್ಕೆ

ವಾಷಿಂಗ್ಟನ್: ತಮಿಳುನಾಡಿನ ದೇವಾಲಯಗಳಿಂದ ಕಳವು ಮಾಡಲಾಗಿದೆ ಎಂದು ಸಂಶೋಧನೆ ದೃಢಪಡಿಸಿದ ನಂತರ, ಸ್ಮಿತ್ಸೋನಿಯನ್‌ನ ನ್ಯಾಷನಲ್ ಮ್ಯೂಸಿಯಂ ಆಫ್ ಏಷ್ಯನ್ ಆರ್ಟ್‌ನಿಂದ ಮೂರು ಪುರಾತನ ಶಿಲ್ಪಗಳು ಭಾರತಕ್ಕೆ ಮರಳಲು ಸಜ್ಜಾಗಿವೆ. ಒಂಬತ್ತನೇ ಶತಮಾನದ ಶಿವ ನಟರಾಜ ಕಂಚು, 12ನೇ ಶತಮಾನದ ಶಿವ ಮತ್ತು ಉಮಾ ಶಿಲ್ಪ ಮತ್ತು 16ನೇ ಶತಮಾನದ ಸಂತ ಸುಂದರಾರ್ ಅವರ ಪರವಿಯೊಂದಿಗೆ ಚಿತ್ರಣವನ್ನು ಹಿಂದಿರುಗಿಸಲು ಅಮೆರಿಕದ ಭಾರತದ ನಿಯೋಗದ ಉಪ ಮುಖ್ಯಸ್ಥ ನ್ಯಾಮ್ಸ್‌ಗೆ ಖಂಬಾ ಅವರು ನ್ಯಾಷನಲ್ ಮ್ಯೂಸಿಯಂ ಆಫ್ ಏಷ್ಯನ್ ಆರ್ಟ್ (ಎನ್‌ಎಂಎಎ) ನಿರ್ದೇಶಕ ಚೇಸ್ ರಾಬಿನ್ಸನ್ ಅವರೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದರು.

ಹಿಮಪಾತ; 7 ಜನ ಸಾವು

ಶ್ರೀನಗರ: ಲಡಾಖ್‌ನ ಜೋಜಿ ಲಾದಲ್ಲಿ ಶ್ರೀನಗರ-ಲೇಹ್ ಹೆದ್ದಾರಿಯಲ್ಲಿ ಭಾರೀ ಹಿಮಪಾತ ಸಂಭವಿಸಿ ಕನಿಷ್ಠ ಏಳು ಮಂದಿ ಮೃತಪಟ್ಟಿದ್ದು, ಇತರೆ ಏಳು ಮಂದಿ ಗಾಯಗೊಂಡಿದ್ದಾರೆ. ಅಧಿಕಾರಿಗಳ ಪ್ರಕಾರ, ಮಧ್ಯಾಹ್ನ ಭಾರೀ ಹಿಮಪಾತದ ನಂತರ ಕನಿಷ್ಠ 15 ವಾಹನಗಳು ಸಂಪೂರ್ಣವಾಗಿ ಹಿಮದೊಳಗೆ ಸಿಲುಕಿಕೊಂಡಿವೆ. ಏತನ್ಮಧ್ಯೆ, ಆಡಳಿತವು ಪೊಲೀಸರು, ಸೇನೆ, ಗಡಿ ರಸ್ತೆಗಳ ಸಂಸ್ಥೆ, ಎಸ್‌ಡಿಆರ್‌ಎಫ್ ಮತ್ತು ಸೋನಾಮಾರ್ಗ್ ಮತ್ತು ದ್ರಾಸ್‌ನ ಜಿಲ್ಲಾ ಆಡಳಿತಗಳನ್ನು ಒಳಗೊಂಡ ಪ್ರಮುಖ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ.

ಮೋದಿ, ನಾನು ಸೇರಿದರೆ ಎಲ್ಲವೂ ಸಾಧ್ಯ: ಟ್ರಂಪ್

ಹೊಸದಿಲ್ಲಿ: ನಾನು ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ನಮ್ಮ ಚಿಂತನೆಗಳನ್ನು ನೇರ ಕೃತಿರೂಪಕ್ಕಿಳಿಸುವವರು. ಈ ತಾಕತ್ತು ಬಹುತೇಕರಿಗೆ ಇರುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಶ್ಚಿಮ ಏಷ್ಯಾ ಸಮರ ಮಧ್ಯೆ ಪ್ರಧಾನಿ ಮೋದಿ ಅವರನ್ನು ಮಗದೊಮ್ಮೆ ಹೊಗಳಿದ್ದಾರೆ. ಭಾರತದಲ್ಲಿನ ಅಮೆರಿಕ ದೂತಾವಾಸದಲ್ಲಿ ಶುಕ್ರವಾರ ಅಂಟಿಸಿರುವ ಪೋಸ್ಟ್ ಒಂದರಲ್ಲಿ ಈ ರೀತಿ ಉಲ್ಲೇಖವಿದೆ. ಪೋಸ್ಟ್‌ನಲ್ಲಿ ಇಬ್ಬರೂ ನಾಯಕರ ಫೋಟೋಗಳಿವೆ. ಪ್ರಧಾನಿ ಮೋದಿ ಅವರು ಸಮರ್ಥ ನಾಯಕನೆಂದು ಟ್ರಂಪ್ ಪ್ರಶಂಸಿಸುವ ಮುಖೇನ, ಭಾರತದೊಂದಿಗೆ ಅಮೆರಿಕದ ಬಾಂಧವ್ಯ ಬಲಿಷ್ಠವಾಗಿದೆ ಎಂದು ಬಿಂಬಿಸಲಾಗಿದೆ. ಭಾರತದೊಂದಿಗಿನ ನಮ್ಮ ಅಭೂತಪೂರ್ವ ಬಾಂಧವ್ಯ ಮುಂದೆ ಇನ್ನಷ್ಟು ಬಲಿಷ್ಠವಾಗಿ ಮುಂದುವರಿಯಲಿದೆ ಎಂದು ಚಿತ್ರದಲ್ಲಿರುವ ಟ್ರಂಪ್ ಸಂದೇಶದಲ್ಲಿ ಹೇಳಲಾಗಿದೆ. ಪ.ಏಷ್ಯಾ ಸಂಘರ್ಷಕ್ಕೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಅಮೆರಿಕ ಅಧ್ಯಕ್ಷ ಟ್ರಂಪ್‌ರೊಂದಿಗೆ ಮಂಗಳವಾರ ಫೋನ್ ಸಂಭಾಷಣೆ ನಡೆಸಿದ ಬೆರಳೆಣಿಕೆ ದಿನಗಳಲ್ಲಿ ಅಮೆರಿಕ ದೂತಾವಾಸದಲ್ಲಿ ಈ ಪೋಸ್ಟ್ ಹಾಕಲಾಗಿದೆ. ಪ.ಏಷ್ಯಾದಲ್ಲಿ ಸಮರ ನಿಲ್ಲಬೇಕು ಮತ್ತು ಆದಷ್ಟು ಶೀಘ್ರ ಶಾಂತಿ ಮರುನೆಲೆಸಬೇಕೆಂಬುದು ಭಾರತದ ಆಶಯ ಮತ್ತು ಭಾರತ ಇದನ್ನು ಬೆಂಬಲಿಸುತ್ತದೆ. ಹಾರ್ಮುಜ್ ಜಲಸಂಧಿಯನ್ನು ಜಾಗತಿಕ ನೌಕಾಯಾನಕ್ಕೆ ಮುಕ್ತಗೊಳಿಸುವುದಕ್ಕೆ ಪ್ರಾಧಾನ್ಯತೆ ಮುಖ್ಯವೆಂದು ಪ್ರಧಾನಿ ಮೋದಿ ಟ್ರಂಪ್ ಜತೆಗಿನ ಫೋನ್ ಸಂಭಾಷಣೆಯಲ್ಲಿ ಹೇಳಿದ್ದರು.

ಬಲವಂತದ ಮತಾಂತರ ತಡೆಗಾಗಿ ಕಠಿಣ ಕಾಯ್ದೆ

ಹೊಸದಿಲ್ಲಿ: ಬಲವಂತದ ಮತಾಂತರಗಳು ರಾಷ್ಟ್ರೀಯ ಭದ್ರತೆಗೆ ಗಂಡಾಂತರವಾಗಿ ಪರಿಣಮಿಸಿದೆ ಮತ್ತು ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ಅಸ್ಮಿತೆಯನ್ನು ವ್ಯವಸ್ಥಿತವಾಗಿ ನಾಶಪಡಿಸುತ್ತಿದೆ. ಈ ಅಪಾಯ ತಡೆಯಲು, ಬಲವಂತದ ಮತಾಂತರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕಾಯಿದೆ ಜಾರಿಗೊಳಿಸಬೇಕೆಂದು ಮಧ್ಯಪ್ರದೇಶದ ಬಿಜೆಪಿ ಸಂಸದ ಸುಮೇರ್ ಸಿಂಗ್ ಸೋಲಂಕಿ ಶುಕ್ರವಾರ ಆಗ್ರಹಿಸಿದ್ದಾರೆ. ಸಂವಿಧಾನವು ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ. ಇದೇ ವೇಳೆ ವಂಚನೆ, ಒತ್ತಡ, ಶೋಷಣೆ ಮುಖೇನ ಮತಾಂತರವು ಕಾನೂನು ಪ್ರಕಾರ ಮತ್ತು ನೈತಿಕವಾಗಿಯೂ ಅಪರಾಧವಾಗಿದೆ ಎಂದು ಸೋಲಂಕಿ ರಾಜ್ಯಸಭೆಯಲ್ಲಿ ಶೂನ್ಯವೇಳೆಯಲ್ಲಿ ವಿಷಯವೆತ್ತಿ ಆರೋಪಿಸಿದರು. ಈ ರೀತಿಯ ಮತಾಂತರಗಳು ನಮ್ಮ ದೇಶದ ರಾಷ್ಟ್ರೀಯ ಭದ್ರತೆಗೆ ಗಂಡಾಂತರವಾಗಿ ಪರಿಣಮಿಸಿದೆ ಮತ್ತು ಇದಕ್ಕೆ ತುರ್ತಾಗಿ ಕಡಿವಾಣ ಹಾಕಬೇಕಿದೆ ಎಂದು ಆಗ್ರಹಿಸಿದರು. ಬುಡಕಟ್ಟು ಸಮುದಾಯಗಳ ಅಸ್ಮಿತೆಗೆ ಸನಾತನ ಧರ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳೇ ಮೂಲಬುನಾದಿಯಾಗಿದೆ. ಈ ಸಮುದಾಯದ ಜನರನ್ನು ಬೆದರಿಸಿ, ಮೋಸದಿಂದ, ಉದ್ಯೋಗಾವಕಾಶ ಕೊಡಿಸುವ, ವೈದ್ಯಕೀಯ ಚಿಕಿತ್ಸೆ ಮತ್ತು ಶಿಕ್ಷಣ ಕೊಡಿಸುವ ಆಮಿಷವೊಡ್ಡಿ, ಮೂಢನಂಬಿಕೆಗಳು ಮತ್ತು ತಪ್ಪುಮಾಹಿತಿ ಮುಖೇನ ನಂಬಿಸಿ ಮೋಸದಿಂದ ಮತಾಂತರಿಸಲಾಗುತ್ತಿದೆ. ಇವರ ಅನಕ್ಷರತೆ ಮತ್ತು ಬಡತನವನ್ನು ದೌರ್ಬಲ್ಯವಾಗಿಸಿಕೊಂಡು ಮೋಸದಿಂದಲೇ ಇವರನ್ನು ವಿವಾಹಗಳಿಗೆ ಒಪ್ಪಿಸಲಾಗುತ್ತದೆ. ಇಂತಹ ಸಂಘಟಿತ ಮತ್ತು ಸಾಮೂಹಿಕ ಮತಾಂತರಗಳು ಸಂಘಟಿತ ಅಪರಾಧಕ್ಕೆ ಸಮಾನವೆಂದು ಸೋಲಂಕಿ ಆರೋಪಿಸಿದರು.

ನೋಯ್ಡಾ ಏರ್‌ಪೋರ್ಟ್ ಹಂತ 1ಕ್ಕೆ ಇಂದು ಚಾಲನೆ

ಹೊಸದಿಲ್ಲಿ: ಬಹುನಿರೀಕ್ಷಿತ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೊದಲ ಹಂತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಉದ್ಘಾಟಿಸಲಿದ್ದಾರೆ. ಇದು ರಾಷ್ಟ್ರ ರಾಜಧಾನಿ ಪ್ರದೇಶದ ಎರಡನೇ ಪ್ರಮುಖ ವಿಮಾನ ನಿಲ್ದಾಣವಾಗಿದೆ. ಅಂತೆಯೇ ಇದು ದೇಶದ ಅತಿದೊಡ್ಡ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ಯೋಜನೆಗಳಲ್ಲಿ ಒಂದಾಗಿದೆ. ಈ ವಿಮಾನ ನಿಲ್ದಾಣದ ಅಭಿವೃದ್ಧಿಗೆ 11,200 ಕೋಟಿ ರೂ. ವೆಚ್ಚ ಮಾಡಲಾಗಿದೆ. ಸುಸ್ಥಿರ ಮತ್ತು ಭವಿಷ್ಯದ ಸಿದ್ಧ ಮೂಲಸೌಕರ್ಯ ಯೋಜನೆಯಾಗಿ ವಿನ್ಯಾಸಗೊಳಿಸಲಾದ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಶೂನ್ಯ ಇಂಧನ ಹೊರಸೂಸುವಿಕೆ ಸೌಲಭ್ಯವಾಗಿ ಕಾರ್ಯನಿರ್ವಹಿಸುವ ಗುರಿ ಹೊಂದಿದೆ. ಇಂಧನ-ದಕ್ಷ ವ್ಯವಸ್ಥೆಗಳು ಮತ್ತು ಪರಿಸರ ಜವಾಬ್ದಾರಿಯುತ ವ್ಯವಸ್ಥೆಯನ್ನು ಸಂಯೋಜಿಸುತ್ತದೆ. ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪೂರಕವಾಗಿ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ದಿಲ್ಲಿ-ಎನ್‌ಸಿಆರ್ ಪ್ರದೇಶದ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಅಭಿವೃದ್ಧಿಪಡಿಸಲಾಗಿದೆ. ಈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಸದ್ಯ ವರ್ಷಕ್ಕೆ 12 ದಶಲಕ್ಷ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಸಂಪೂರ್ಣವಾಗಿ ಅಭಿವೃದ್ಧಿಗೊಂಡ ನಂತರ, ವಿಮಾನ ನಿಲ್ದಾಣವು ಒಟ್ಟು 7 ಕೋಟಿ ಪ್ರಯಾಣಿಕರ ನಿರ್ವಹಣಾ ಸಾಮರ್ಥ್ಯವನ್ನು ಹೊಂದಿರುತ್ತದೆ. ಇದು ರಾಷ್ಟ್ರ ರಾಜಧಾನಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಟ್ಟಣೆಯನ್ನು ಕಡಿಮೆ ಮಾಡುತ್ತದೆ.

ರೈಲ್ವೆಯ ಸಾವಿರ ಹೆಕ್ಟೇರ್ ಭೂಮಿ ಅತಿಕ್ರಮಣ!

ಹೊಸದಿಲ್ಲಿ: ಭಾರತೀಯ ರೈಲ್ವೆ ಒಡೆತನದ ಸುಮಾರು 1,068 ಹೆಕ್ಟೇರ್ ಭೂಮಿ ದೇಶಾದ್ಯಂತ ಅತಿಕ್ರಮಣವಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶುಕ್ರವಾರ ರಾಜ್ಯಸಭೆಗೆ ತಿಳಿಸಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಎಲ್ಲಾ ರೈಲ್ವೆ ಭೂಮಿ ಬಳಕೆಯನ್ನು ನೋಡಿದರೆ, ಸುಮಾರು ಶೇ.80 ರಷ್ಟು ಭೂಮಿ ಹಳಿಗಳಿವೆ. ಅದರ ಸುತ್ತಲೂ ಶೇ.5ರಷ್ಟು ಭೂಮಿ ಇದೆ. ಉಳಿದ ಶೇ.15ರಷ್ಟು ಭೂಮಿಯನ್ನು ನಿಲ್ದಾಣಗಳು, ವಸಾಹತುಗಳು, ಆಸ್ಪತ್ರೆಗಳು ಮತ್ತು ಇತರ ವಸ್ತುಗಳ ಅಭಿವೃದ್ಧಿಗೆ ಬಳಸಲಾಗುತ್ತದೆ ಎಂದು ಹೇಳಿದರು. ದೇಶದಲ್ಲಿ ಸುಮಾರು ಶೇ. 0.01ರಷ್ಟು ರೈಲ್ವೆ ಭೂಮಿಯು ಅಕ್ರಮ ಅತಿಕ್ರಮಣದಲ್ಲಿದೆ ಎಂದು ಅವರು ಸದನದಲ್ಲಿ ಸದಸ್ಯರಿಗೆ ತಿಳಿಸಿದರು. ಭೂಮಿಯ ಮೇಲಿನ ಈ ಅಕ್ರಮ ಅತಿಕ್ರಮಣವು ಗಂಭೀರ ಸಮಸ್ಯೆಯಾಗಿದೆ. ಇದಕ್ಕೆ ಸೂಕ್ತ ಕ್ರಮವನ್ನು ಸಹ ತೆಗೆದುಕೊಳ್ಳಲಾಗಿದೆ. ಆದರೆ ಸಕಾಲಿಕ ಕ್ರಮವನ್ನೂ ತೆಗೆದುಕೊಳ್ಳಲಾಗಿದೆ. ಅಂತಹ ಕ್ರಮವನ್ನು ಕೈಗೊಂಡಾಗಲೆಲ್ಲಾ, ಮಾನವೀಯ ವಿಧಾನವನ್ನು ಅಳವಡಿಸಿಕೊಳ್ಳಲಾಗುತ್ತದೆ. ಸಾಧ್ಯವಾದಲ್ಲೆಲ್ಲಾ, ರಾಜ್ಯ ಸರ್ಕಾರಗಳೊಂದಿಗೆ ಒಟ್ಟಾಗಿ ಪ್ರಾಯೋಗಿಕ ಪರಿಹಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.



ಅಯೋಧ್ಯೆ: ರಾಮನವಮಿ ಹಿನ್ನೆಲೆ ರಾಮಲಲಾನ ದರ್ಶನ ಪಡೆದ ಲಕ್ಷಾಂತರ ಭಕ್ತರು

ಅಭಿಜಿತ್ ಮುಹೂರ್ತದಲ್ಲಿ ರಾಮನಿಗೆ ಸೂರ್ಯತಿಲಕ

ಅಯೋಧ್ಯೆ: ಚೈತ್ರ ನವರಾತ್ರಿಯ ಒಂಭತ್ತನೇ ದಿನ ಅವತರಿಸಿದ ಭಗವಾನ್ ಶ್ರೀರಾಮಚಂದ್ರನ ಅಯೋಧ್ಯಾ ಮಂದಿರದಲ್ಲಿ ಶುಕ್ರವಾರ ಲಕ್ಷಾಂತರ ಭಕ್ತರು ಸೇರಿದ್ದರು. ರಾಮನವಮಿ ಹಿನ್ನೆಲೆಯಲ್ಲಿ ದ್ವಿತೀಯ ಬಾರಿ ವಿಶಿಷ್ಟವಾಗಿ ಸೂರ್ಯತಿಲಕದಿಂದ ಪ್ರಕಾಶಿತ, ಪುಷ್ಪ -ಆಭರಣಗಳಿಂದ ಶೋಭಿತ ರಾಮಲಲಾನ ಕಾಣಲು, ಬಾಲರಾಮನ ದರ್ಶನ ಮಾತ್ರದಿಂದಲೆ ಪುನೀತರಾಗಲು ಭಕ್ತರು ಮುಂಜಾನೆಯಿಂದಲೇ ಪ್ರವಾಹೋಪಾದಿಯಲ್ಲಿ ಶ್ರೀರಾಮಮಂದಿರದತ್ತ ಹೆಜ್ಜೆ ಹಾಕಿದ್ದರು.

ಮಧ್ಯಾಹ್ನ 12 ಗಂಟೆಗೆ ಪವಿತ್ರ ಅಭಿಜಿತ್ ಮುಹೂರ್ತದಲ್ಲಿ ಬಾಲರಾಮನಿಗೆ ಸೂರ್ಯ ತಿಲಕ ವಿಧಿಯನ್ನು ವಿಧಿಬದ್ಧವಾಗಿ ನೆರವೇರಿಸಲಾಯಿತು. ವಿಧಿಪ್ರಕಾರ ಆದಿತ್ಯನ ತೇಜೋಮಯ ಪ್ರಖರ ರಶ್ಮಿಗಳು ಭಗವಂತನ ಹಣೆ ಭಾಗವನ್ನು ನೇರವಾಗಿ ಸ್ಪರ್ಷಿಸಿದ್ದವು. ವಿಶೇಷವಾಗಿ ತಯಾರಾದ ಲೆನ್ಸ್‌ಗಳ ನೆರವಿನಿಂದ ಈ ವಿಧಿಯನ್ನು ನಿರ್ವಿಘ್ನ 9 ನಿಮಿಷಗಳ ಕಾಲ ನಿರ್ವಹಿಸಲಾಯಿತು. ಗರ್ಭಗುಡಿಯಲ್ಲಿ ವೇದ ಸಂಪ್ರದಾಯಗಳಂತೆ ಸುಮಾರು 14 ಅರ್ಚಕರು ವಿಧಿ ವಿಧಾನಗಳನ್ನು ನೆರವೇರಿಸಿದರು. ಇದಾದ ಬೆನ್ನಲ್ಲೇ ಭಗವಂತನಿಗೆ 56 ಬಗೆಯ ನೈವೇದ್ಯಗಳ ಉಣಬಡಿಸಿ ಅಲ್ಪಾವಧಿಗೆ ಗರ್ಭಗುಡಿ ಬಾಗಿಲು ಹಾಕಲಾಯಿತು ಎಂದು ದೇಗುಲ ಟ್ರಸ್ಟ್ ಸದಸ್ಯರು ತಿಳಿಸಿದ್ದಾರೆ. ಮುಂಜಾನೆ ಭಗವಂತನಿಗೆ ಪೀತವರ್ಣದ ಪಟ್ಟೆಪೀತಾಂಬರ ತೊಡಿಸಲಾಗಿತ್ತು. ಮುಂಜಾನೆ 5.30ಕ್ಕೆ ಬೆಳಗಿನ ಆರತಿ ಎತ್ತಲಾಗಿತ್ತು. ಶ್ರೀರಾಮಲಲಾ ವಿಗ್ರಹಕ್ಕೆ ಪ್ರಾಣಪ್ರತಿಷ್ಠೆಯಾದ ನಂತರದಲ್ಲಿ ಭಗವಂತನ ಹಣೆಯನ್ನು ಸೂರ್ಯಕಿರಣಗಳು ಭಕ್ತಿಪ್ರೀತಿಯೊಂದಿಗೆ ಮುತ್ತಿಕ್ಕಿದ್ದು ಇದು ಸತತ ದ್ವಿತೀಯ ಬಾರಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಸಾಕ್ಷಿಯಾದ ಪ್ರಧಾನಿ ಮೋದಿ

ಅಯೋಧ್ಯೆಯ ರಾಮಮಂದಿರದಲ್ಲಿ ನಡೆದ ಸೂರ್ಯ ತಿಲಕ ಸಮಾರಂಭಕ್ಕೆ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ವರ್ಚುವಲ್ ಆಗಿ ಸಾಕ್ಷಿಯಾದರು. ಅಯೋಧ್ಯೆ ಶ್ರೀ ರಾಮ ಜನ್ಮಭೂಮಿ ಮಂದಿರದಲ್ಲಿ ನಡೆದ ಸೂರ್ಯ ತಿಲಕದ ದರ್ಶನವಾಯಿತು. ಪ್ರಭು ಶ್ರೀ ರಾಮನ ಆಶೀರ್ವಾದವು ನಮ್ಮ ಮೇಲೆ ಯಾವಾಗಲೂ ಇರಲಿ ಎಂದು ಮೋದಿ ಎಕ್ಸ್ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ವಿಶೇಷ ವಿನ್ಯಾಸದ ಪರಿಕರ ವ್ಯವಸ್ಥೆ: ಸುಮಾರು 65 ಅಡಿ ಎತ್ತರದಿಂದ ಭಾಸ್ಕರನ ಕಿರಣಗಳು ಭಗವಂತನ ಹಣೆಯನ್ನು ಸ್ಪರ್ಶಿಸಲು ಪೂರಕವಾಗುವಂತೆ 20ಅಷ್ಟಧಾತು ಪೈಪ್‌ಗಳು , ನಾಲ್ಕು ಲೆನ್ಸ್‌ಗಳು ಮತ್ತು ನಾಲ್ಕು ಕನ್ನಡಿಗಳನ್ನು ಒಳಗೊಂಡ ವಿಶೇಷ ವಿನ್ಯಾಸದ ಪರಿಕರವನ್ನು ಸಿದ್ಧಪಡಿಸಲಾಗಿತ್ತು.

ಪ್ರಧಾನ ಆಕರ್ಷಣೆ: ಮಧ್ಯಾಹ್ನ ಭಗವಂತನ ವಿಶಾಲವಾದ ಹಣೆಭಾಗವನ್ನು ಸೂರ್ಯರಶ್ಮಿಗಳು ಪ್ರೀತಿಯಿಂದ ಸ್ಪರ್ಷಿಸುವ ವಿಧಿಯು ಪ್ರಧಾನ ಆಕರ್ಷಣೆಯೆಂದು ರಾಮ ದೇವಾಲಯದ ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ ಸುದ್ದಿಗಾರರಲ್ಲಿ ಅಭಿಪ್ರಾಯಿಸಿದ್ದಾರೆ. ಸುಮಾರು 10ಲಕ್ಷ ಭಕ್ತರು ದೇಗುಲಕ್ಕೆ ಭೇಟಿ ನೀಡಿದ್ದಾರೆ. ದೇವಾಲಯ ಸಂಕೀರ್ಣ, ರಾಮಪಥ, ಭಕ್ತಿಪಥ ಹಾಗೂ ಜನ್ಮಭೂಮಿ ಪಥ ಸಹಿತ ಮಂದಿರ ಪರಿಸರದ ಅಕ್ಕಪಕ್ಕದ ದಾರಿಗಳೆಲ್ಲವು ರಾಮಭಕ್ತರಿಂದ ಗಿಜಿಗುಡುತ್ತಿದ್ದವು. ಬಿಗು ಭದ್ರತಾ ವ್ಯವಸ್ಥೆಯೊಂದಿಗೆ ರಾಮ ನವಮಿ ಉತ್ಸವ ಶಾಂತಿಯುತ ಆಚರಿಸಲ್ಪಟ್ಟಿತು ಎಂದು ಅಧಿಕಾರಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

ಕರಿಕ್ಕಕಂ ಶ್ರೀ ಚಾಮುಂಡಿ ಕ್ಷೇತ್ರ ಟ್ರಸ್ಟ್

ಸತ್ಯಕ್ಕೆ ಸಾಕ್ಷಿಯಾದ ಕ್ಷೇತ್ರ

ಕರಿಕ್ಕಕಂ ಶ್ರೀ ಚಾಮುಂಡಿ ಕ್ಷೇತ್ರ

ತಿರುವನಂತಪುರ-21, ದೂರವಾಣಿ (ಕ್ಷೇತ್ರ) 0471 2500989, ಕಚೇರಿ : 2507671, 7306090147
www.karikkakomsrichamunditemple.in email : karikkakomdevitemple@gmail.com



ದಾ ಡೀ ಮೀ ಕುಸುಮ ಮಂಜರಿ ನಿಕರ ವರ್ಣಲೋಹಿತ ಶರೀರಕೇ
ಯಾಮಿನಿ ರಮಣ ಖಂಡಮಂಡಿತ ಶಿಖಂಡಿಕೇ ತರಳಕುಂಡಲೇ
ಪಾಶಮಂಕುಶ ಮುದಂಚಿತ ದಧತಿ। ಕೋಮಳೇ ಕಮಲಲೋಚನೇ
ತಾವಕೇ ವಪುಷಿ ಸಂತತಂ ಜನನಿ। ಮಾಮಕಂ ಭವತು ಮಾನಸ

ದೇವಿಯ ಉತ್ಸವ ಸಂದರ್ಭಗಳಲ್ಲಿ ಪ್ರದಕ್ಷಿಣೆ ಬರುವ ರಥವನ್ನು ಚಿನ್ನದಿಂದ ಮುಚ್ಚಲಾಗುವುದು

ಕ್ಷೇತ್ರಗಳಲ್ಲಿ ದೇವಿಯ ಉತ್ಸವ ಸಂದರ್ಭಗಳಲ್ಲಿ ಪ್ರದಕ್ಷಿಣೆ ಬರುವ ರಥವನ್ನು ಹೊಸದಾಗಿ ತಯಾರಿಸಿ ಚಿನ್ನವನ್ನು ಹೊದಿಸುವುದಕ್ಕೆ ಟ್ರಸ್ಟ್ ನಿರ್ಧರಿಸಿದೆ. ಇದಕ್ಕಿರುವ ಚಿನ್ನವನ್ನು ಕೊಡುಗೆಯಾಗಿ ನೀಡಲು ಇಚ್ಛಿಸುವ ಭಕ್ತಾದಿಗಳು ಕ್ಷೇತ್ರದಲ್ಲಿ ದೇವಿಯ ನಡೆಯಲ್ಲಿ ಇಟ್ಟಿರುವ ಚಿನ್ನ ಸಮರ್ಪಣೆಯನ್ನು ಭಂಡಾರದಲ್ಲಿಯೋ, ಕೊಡುಗೆಗಳನ್ನು ಸಮರ್ಪಿಸಲು ಕ್ಷೇತ್ರದ ಟ್ರಸ್ಟ್‌ನ ಅಧಿಕೃತ ವೆಬ್‌ಸೈಟ್ ಮೂಲಕವೋ ಕ್ಷೇತ್ರ ಕೌಂಟರ್ ಮೂಲಕವೋ ಪಾವತಿಸಬಹುದಾಗಿದೆ.

ಉತ್ಸವ ಮಹಾಮಹಂ

2026 ಮಾರ್ಚ್ 24ರಿಂದ 30 ರ ತನಕ

ಪೊಂಗಾಲ

2026 ಮಾರ್ಚ್ 30 ಸೋಮವಾರ ಬೆಳಿಗ್ಗೆ 10.15ಕ್ಕೆ

2026 ಮಾರ್ಚ್ 28, 29 ದಿನಾಂಕಗಳಲ್ಲಿ ಬೆಳಿಗ್ಗೆ 8.40ಕ್ಕೆ
ದೇವಿ ರಥದಲ್ಲಿ ಪ್ರದಕ್ಷಿಣೆ ಬರುವುದು

24.03.2026ರಿಂದ 29.03.2026ರ ತನಕ ಪ್ರತೀದಿನವೂ ಬೆಳಿಗ್ಗೆ 11ರಿಂದ ಅಪರಾಹ್ನ 2ರ ತನಕ ಅನ್ನದಾನ ಇರುವುದು.

ಈ ಬಾರಿ 16ನೇ ಕರಿಕ್ಕಕಮ್ -2026 ಪ್ರಶಸ್ತಿ ಪುರಸ್ಕೃತರು
ಶ್ರೀ ಶ್ರೀ ಕುಮಾರನ್ ತಂಪಿ

ಪ್ರಿಯ ಭಕ್ತಾದಿಗಳೇ,

ಪುಣ್ಯ ಪುರಾತನವಾದ ಕರಿಕ್ಕಕಂ ಶ್ರೀ ಚಾಮುಂಡಿ ಕ್ಷೇತ್ರದ ಈ ವರ್ಷದ ಉತ್ಸವ ಮಹಾಮಹಂ 2026 ಮಾರ್ಚ್ 24ನೇ ತಾರೀಕು (1201 ಮೀನಂ 10) ಸಂಜೆ 5 ಗಂಟೆಯ ಗುರುಪೂಜೆಯೊಂದಿಗೆ ಆರಂಭಗೊಂಡಿದೆ. ಮಾರ್ಚ್ 28, 29ನೇ ದಿನಾಂಕಗಳಲ್ಲಿ (1201 ಮೀನಂ 14, 15) ಬೆಳಿಗ್ಗೆ 8.40ಕ್ಕೆ ಚಿನ್ನದ ರಥದಲ್ಲಿ ದೇವಿಯ ಪ್ರದಕ್ಷಿಣೆ ಹಾಗೂ ಮಾರ್ಚ್ 30 (1201 ಮೀನಂ 16) ಸೋಮವಾರ ಬೆಳಿಗ್ಗೆ 10.15ಕ್ಕೆ ಲಕ್ಷಾಂತರ ಮಹಿಳಾ ಭಕ್ತಾದಿಗಳು ಪಾಲ್ಗೊಳ್ಳುವ ಪೊಂಗಾಲ ಭಕ್ತಿ ಸಾಗರದ ವಾತಾವರಣದಲ್ಲಿ ನಡೆಯುವುದು. ದೇವಿಯ ಇಡವಾಳನ್ನು ಪೊಂಗಾಲ ರಥದಲ್ಲಿ ಪ್ರದಕ್ಷಿಣೆ ತಂದು ಅಪರಾಹ್ನ 2.15ಕ್ಕೆ ಪೊಂಗಾಲ ಸಮರ್ಪಣೆ, ರಾತ್ರಿ ಅತ್ತಾಳ ಪೂಜೆಯ ಬಳಿಕ ಗುರುಸಿ ರಥದಲ್ಲಿ ದೇವಿಯ ಇಡವಾಳ ಪ್ರದಕ್ಷಿಣೆ ಮಾಡಿ ವೈದಿಕ ವಿಧಿ ವಿಧಾನಗಳೊಂದಿಗಿರುವ ಗುರುಸಿಯೊಂದಿಗೆ ಸಮಾಪ್ತಿಗೊಳ್ಳುವುದು. ಉತ್ಸವ ದಿನಗಳಲ್ಲಿ ನಡೆಯುವ ಪೂಜೆ, ಅನ್ನದಾನ, ಪ್ರದಕ್ಷಿಣೆ ಹಾಗೂ ಪೊಂಗಾಲ ಮಹೋತ್ಸವದಲ್ಲಿ ಪಾಲ್ಗೊಂಡು ಎಲ್ಲಾ ಭಕ್ತಾದಿಗಳು ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿಸಿಕೊಳ್ಳುತ್ತೇವೆ.
ಉತ್ಸವ ಮಹಾಮಹಂ ಯಶಸ್ವಿಯಾಗಿ ನಡೆಯಲು ಎಲ್ಲಾ ಭಕ್ತಾದಿಗಳ ಸಹಾಯ ಸಹಕಾರಗಳನ್ನು ವಿನಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ.

- ಕಾರ್ಯದರ್ಶಿ

ಕರಿಕ್ಕಕಂ ಕ್ಷೇತ್ರದಲ್ಲಿ ರಕ್ತ ಚಾಮುಂಡಿ, ಬಾಲಚಾಮುಂಡಿ ನಡೆ ತೆರೆಯುವುದು ಪ್ರತೀ ವರ್ಷ ಒಂದು ಲಕ್ಷದಷ್ಟು ಬಾರಿ. ಎಲ್ಲಾ ಸಂಕಷ್ಟಗಳನ್ನು ನಿಮಿಷದೊಳಗೆ ಪರಿಹರಿಸಲ್ಪಡುವ ದೇವಿ ಸನ್ನಿಧಿಯಾಗಿದೆ- ಕರಿಕ್ಕಕಂ ಶ್ರೀ ಚಾಮುಂಡಿ ಕ್ಷೇತ್ರ. ಒಂದು ದೇವಿ ಸಂಕಲ್ಪವನ್ನು ಮೂರು ಭಾವಗಳಲ್ಲಿ ಅಂದರೆ ಚಾಮುಂಡಿ ದೇವಿ ಸಂಕಲ್ಪವನ್ನು ಚಾಮುಂಡಿ, ರಕ್ತ ಚಾಮುಂಡಿ, ಬಾಲ ಚಾಮುಂಡಿ ಎಂಬೀ ಮೂರು ಗರ್ಭಗುಡಿಗಳಲ್ಲಾಗಿ ಒಂದೇ ಪ್ರಾಧಾನ್ಯತೆಯೊಂದಿಗೆ ಆರಾಧಿಸುವ ಕ್ಷೇತ್ರವಾಗಿದೆ. ಶತ್ರುದೋಷಗಳ ಸಹಿತ ಯಾವುದೇ ಸಂಕಷ್ಟಗಳು, ತೊಂದರೆಗಳು ನಿಮಿಷದೊಳಗೆ ಭಸ್ಮಗೊಳ್ಳುತ್ತವೆ. ಉಗ್ರಸ್ವರೂಪಿಣೀಯಾದ ಇಲ್ಲಿನ ರಕ್ತ ಚಾಮುಂಡಿಯ ನಡೆಯು ಮಕ್ಕಳ ಸಂತಾನ ವರದಾಯಿನಿಯೂ ಆದ ಶಾಂತರೂಪಿಣಿಯಾಗಿದೆ. ಇಲ್ಲಿನ ಬಾಲಚಾಮುಂಡಿಯ ನಡೆಯು ಪ್ರತಿನಿತ್ಯ ಸರಾಸರಿ 280 ಬಾರಿ ಭಕ್ತಾದಿಗಳ ಹರಕೆಯಾಗಿ ನಡೆ ತೆರೆಯಲ್ಪಡುತ್ತದೆ. ಕ್ಷೇತ್ರದ ಕೌಂಟರ್‌ನಲ್ಲಿ 151 ರೂ. ಶುಲ್ಕ ಪಾವತಿಸಿ ರಶೀದಿ ಪಡೆಯುವ ಪ್ರತೀಯೋರ್ವರಿಗೂ ಪ್ರತೀ ಬಾರಿಯೂ ಈ ಸನ್ನಿಧಿಯು ತೆರೆದು ಮುಚ್ಚಲಾಗುತ್ತಿದೆ. ಈ ನಡೆಗಳು ತೆರೆಯಲ್ಪಡುವಾಗ ನಡೆಗೆ ನೇರವಾಗಿ ಎರಡು ಕೈಗಳೊಂದಿಗೆ ಭಕ್ತರು ರಕ್ತ ಚಾಮುಂಡಿ ಮತ್ತು ಬಾಲ ಚಾಮುಂಡಿಯ ಮುಂದೆ ಸಂಕಷ್ಟಗಳನ್ನು ಹೇಳುತ್ತಾರೆ. ಈ ವೇಳೆ ಮುಗ್ಧ ಮನಸ್ಸಿನಿಂದ ತಾಯಿಗೆ ಹರಕೆ ಸಮರ್ಪಿಸಿ ಧನ್ಯರಾಗುತ್ತಾರೆ. ನಡೆ ತೆರೆಯುವಾಗ ಈ ನಡೆಗಳಿಂದ ಮನಸಾರೆ ಪ್ರಾರ್ಥಿಸಿದರೆ ಆ ಕ್ಷಣದಲ್ಲಿಯೇ ತಾಯಿ ಅನುಗ್ರಹಿಸುತ್ತಾರೆ ಎಂಬುದು ಇಲ್ಲಿನ ಬಲವಾದ ನಂಬಿಕೆ. ಮಂಗಳವಾರ, ಶುಕ್ರವಾರ, ಆದಿತ್ಯವಾರದ ದಿನಗಳಲ್ಲಿ ಅತೀ ಹೆಚ್ಚು ಬಾರಿ ಈ ನಡೆಗಳು ತೆರೆಯಲ್ಪಡುತ್ತವೆ. ಭಕ್ತರಿಗೆ ಹರಕೆಗೆ ಅಲ್ಲದೆ ನಿತ್ಯ ಪೂಜೆಗೆ ಬೇಕಾಗಿ ಮಾತ್ರವೇ ಈ ನಡೆ ತೆರೆಯುವುದು. ಅದರಲ್ಲಿ ಸಂಜೆ ದೀಪಾರಾಧನೆಗೆ 6.30ಕ್ಕೆ ನಡೆ ತೆರೆಯುವಾಗ ಮಾತ್ರವೇ ಭಕ್ತರಿಗೆ ಒಟ್ಟಿಗಿರುವ ದರುಷನೆ ಸಾಧ್ಯವಾಗುವುದು. ಎಲ್ಲಾಸಮಯವೂ ಸಂಪತ್ತು , ಸಮೃದ್ಧಿಯನ್ನು ನೀಡುವ ಕರಿಕ್ಕಕಂ ಕ್ಷೇತ್ರದ ಈ ನಡೆಗಳು ರಾಜರ ಆಡಳಿತದ ಕಾಲದಿಂದ ತೊಡಗಿ ಪ್ರಸಿದ್ಧವಾಗಿದೆ. ಚಾಮುಂಡಿ ದೇವಿಯಾಗಿದೆ ಈ ಕ್ಷೇತ್ರದ ಪ್ರಧಾನ ಪ್ರತಿಷ್ಠೆ, ಕ್ಷಿಪ್ರಪ್ರಸಾದ ನೀಡುವವರಾಗಿದ್ದಾರೆ- ಕರಿಕ್ಕಕತ್ತಮ್ಮ. ಪ್ರಧಾನ ಗರ್ಭಗುಡಿಯ ಬಲಭಾಗದಲ್ಲಿ ಶ್ರೀ ರಕ್ತಚಾಮುಂಡಿ, ಬಾಲ ಚಾಮುಂಡಿ ದೇವಿಗಳು ನೆಲೆಗೊಂಡಿದ್ದಾರೆ. ಸತ್ಯಕ್ಕೆ ಸಾಕ್ಷಿಯಾದ ಕ್ಷೇತ್ರ ಎಂದು ಈ ದೇವಾಲಯವನ್ನು ಅರಿಯಲು ಪ್ರಧಾನ ಕಾರಣ ಶ್ರೀ ರತ್ತಚಾಮುಂಡಿ ದೇವಿಯ ಸಾನಿಧ್ಯವಾಗಿದೆ. ರಕ್ತ ಚಾಮುಂಡಿ, ಬಾಲ ಚಾಮುಂಡಿ ನಡೆಗಳಲ್ಲಿ ಪ್ರತಿಷ್ಠೆಯು ರೌದ್ರ ಭಾವದಲ್ಲಿಯೂ ಶಾಂತಭಾವದಲ್ಲಿಯೂ ಇರುವ ದೇವಿಯ ಗೋಡೆ ಚಿತ್ರವನ್ನು ಕ್ಷೇತ್ರದ ಒಳಭಾಗದಲ್ಲಿ ಚಿತ್ರೀಕರಿಸಲಾಗಿದೆ. ಹಿಂದೆ ರಾಜರ ಆಡಳಿತದ ಕಾಲದಲ್ಲಿ ಶ್ರೀ ರಕ್ತ ಚಾಮುಂಡಿ ನಡೆಯಲ್ಲಿ ನಿತ್ಯ ನಿರ್ವಹಣೆಯ ಸಲುವಾಗಿ ಪ್ರಜೆಗಳಿಂದ ಸತ್ಯವನ್ನು ಹೇಳಿಸಲ್ಪಡುತ್ತಿದ್ದದ್ದು ಇಲ್ಲಿಯಾಗಿದೆ. ಅಂದು ನ್ಯಾಯಾಲಯ ಮತ್ತು ಪೊಲೀಸರಿಗೆ ಸತ್ಯವನ್ನು ದೃಢೀಕರಿಸಲು ಸಾಧ್ಯವಾಗದ ಸಮಸ್ಯೆಗಳನ್ನು ಈ ನಡೆಯಲ್ಲಿ ಬಂದು ಸತ್ಯವನ್ನು ಹೇಳಿ ದೃಢೀಕರಿಸಲ್ಪಡುವುದು ನಿತ್ಯ ಘಟನೆಯಾಗಿತ್ತು. ಹಾಗೆ ಹಳೆಯ ಕಾಲದಲ್ಲಿ ಅರಮನೆಗಳಿಂದ ಘೋಷಣೆ ಮಾಡಿದ ಹೆಸರು ಸತ್ಯಕ್ಕೆ ಸಾಕ್ಷಿಯಾದ ಕ್ಷೇತ್ರ ಎಂಬ ಹೆಸರಾಗಿದೆ. ಈಗ ಹರಕೆಯಾಗಿ ಈ ನಡೆಗಳು ಒಂದು ವರ್ಷ ಸರಾಸರಿ ಒಂದು ಲಕ್ಷದಷ್ಟು ಮಂದಿ ಶತ್ರುದೋಷ, ಉದ್ಯೋಗಸಂಬಂಧವಾದ ಅಡ್ಡಿಗಳು ಹಣ ವ್ಯವಹಾರದಲ್ಲಿ ಸಂಭವಿಸಿದ ನಷ್ಟಗಳು, ಆಸ್ತಿ ವ್ಯವಹಾರಗಳ ತರ್ಕಗಳು, ರೋಗ ಸಂಕಷ್ಟಗಳು, ವಿವಾಹ ಅಡ್ಡಿಗಳು ಎಂಬಿತ್ಯಾದಿಗಳಿಗೆ ಪರಿಹಾರವನ್ನು, ಮಾಡಲಾದ ತಪ್ಪುಗಳಿಗೆ ಪ್ರಾಯಶ್ಚಿತ್ತಕ್ಕೆ 151 ರೂ. ಪಾವತಿಸಿ ರಕ್ತ ಚಾಮುಂಡಿ, ಬಾಲ ಚಾಮುಂಡಿ ನಡೆದ ತೆರೆದು ಪ್ರಾರ್ಥಿಸಿ ಸತ್ಯವನ್ನೇ ಹೇಳಲಾಗುತ್ತಿತ್ತು.

ಶ್ರೀ ಕ್ಷೇತ್ರಕ್ಕೆ ತಲುಪುವ ದಾರಿ

ರಾಷ್ಟ್ರೀಯ ಹೆದ್ದಾರಿ ಮೂಲಕ ಬರುವವರು ವರ್ಲ್ಡ್ ಮಾರ್ಕೆಟ್ ಜಂಕ್ಷನ್‌ನಿಂದ ಕಳಕೂಟಂ ಮೂಲಕ ಬಲಕ್ಕೆ ತಿರುಗಿ ವಾಳವಿಳ ಮೂಲಕ ದೇವಾಲಯವನ್ನು ತಲುಪಬೇಕು. ಎಂಸಿ ರಸ್ತೆ ಮೂಲಕ ಬರುವವರು ಕೇಶವದಾಸಪುರಕ್ಕೆ ಬಂದು ಅಲ್ಲಿಂದ ಪಾಳಯಂ, ಪೆಟ್ಟಾ ಮತ್ತು ಚಾಕ್ಕಾ ಬೈಪಾಸ್ ಮೂಲಕ ಹೋಗಬೇಕು. ನೆಯ್ಯಟ್ಟಿಂಗರದಿಂದ ಬರುವವರು ಕೀಳಕ್ಕೆಕೊಟ್ಟ ಮತ್ತು ಈಂಜಯಕ್ಕಲ್ ಜಂಕ್ಷನ್‌ಗೆ ಬಂದು ಬೈಪಾಸ್ ರಸ್ತೆ ಮೂಲಕವೂ, ಚಾಕ್ಕ ಅಟ್ಟುವರಾಂಬ ರಸ್ತೆಯ ಮೂಲಕವೂ ಶ್ರೀ ಕ್ಷೇತ್ರವನ್ನು ತಲುಪಬಹುದು. ಪ್ರತಿದಿನ ಬೆಳಿಗ್ಗೆ 5 ರಿಂದ ರಾತ್ರಿ 11.45 ರವರೆಗೆ ಮತ್ತು ಸಂಜೆ 4.30 ರಿಂದ ರಾತ್ರಿ 8.00 ರವರೆಗೆ ತೆರೆದಿರುತ್ತದೆ ಎಂದು ಭಕ್ತರಿಗೆ ತಿಳಿಯಪಡಿಸುತ್ತಿದ್ದೇವೆ.

ಆನ್‌ಲೈನ್‌ನಲ್ಲಿ ಬಲಿವಾಡು ಬುಕ್ಕಿಂಗ್

ಭಕ್ತರು ಟ್ರಸ್ಟ್‌ನ ಅಧಿಕೃತ ವೆಬ್‌ಸೈಟ್ www.karikkakomsrichamunditemple.in ಮೂಲಕ ಜಗತ್ತಿನ ಎಲ್ಲಿಂದಲಾದರೂ ಪೂಜೆಗಳು, ಅರ್ಚನೆಗಳು ಮತ್ತು ಪೊಂಗಲ್ ಕಾಣಿಕೆಗಳನ್ನು ಆನ್‌ಲೈನ್‌ನಲ್ಲಿ ಬುಕ್ ಮಾಡಬಹುದು. ನವೀಕರಣ, ಹಬ್ಬದ ಆಹಾರ ದೇಣಿಗೆಗಳು ಮತ್ತು ಇತರ ದೇಣಿಗೆಗಳು ಸೇರಿದಂತೆ ಎಲ್ಲಾ ಹಣಕಾಸಿನ ವಹಿವಾಟುಗಳನ್ನು ದೇವಾಲಯದ ದ್ವಾರಗಳಲ್ಲಿ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, UPI ಮೂಲಕ ಮಾಡಬಹುದು. ಪೂಜೆಗಳು ಮತ್ತು ಕಾಣಿಕೆಗಳ ಆನ್‌ಲೈನ್ ಬುಕಿಂಗ್ ಕುರಿತು ಪ್ರಶ್ನೆಗಳಿಗೆ, ದಯವಿಟ್ಟು 7306090147 ಅನ್ನು ಸಂಪರ್ಕಿಸಿ.

ಪ್ರತೀ ವರ್ಷದಂತೆ ಈ ವರ್ಷವೂ ಪೊಂಗಾಲ ದಿನವಾದ 2026 ಮಾರ್ಚ್ 30ನೇ ತಾರೀಕು ಪೊಂಗಾಲ ಪ್ರಾರಂಭಗೊಳ್ಳುವುದು ಮತ್ತು ನೈವೇದ್ಯ ಮಾಡುವ ದೃಶ್ಯಗಳನ್ನು 24 ನ್ಯೂಸ್ ಚಾನೆಲ್, ಜನಂ ಟಿ.ವಿ., ಅಮೃತ ಚಾನೆಲ್ ಎಂಬೀ ದೃಶ್ಯ ಮಾಧ್ಯಮಗಳು ನೇರ ಪ್ರಸಾರ ಮಾಡುವುದು. ಕ್ಷೇತ್ರ ಉತ್ಸವ ಮಾಹಮಹಂನ 7 ದಿನಗಳ ಸಮಾರಂಭಗಳು, ದೇವಿಯ ಪ್ರದಕ್ಷಿಣೆ, ಪೊಂಗಾಲ ಸಮಾರಂಭಗಳು, ಸಂಜೆ ನಡೆಯುವ ಕಲಾ ಕಾರ್ಯಕ್ರಮಗಳು ಕ್ಷೇತ್ರದ ಪೇಸ್‌ಬುಕ್ ಪೇಜ್, ಟಿ.ಸಿ. ಎನ್‌ಕೇಬಲ್‌ಗಳು, M7 News, Vigneth TV ಮುಂತಾದ ಆನ್‌ಲೈನ್ ಚಾನೆಲ್‌ಗಳ ಮೂಲಕ ವಿಶ್ವದ ಎಲ್ಲಿಂದಲೂ ಭಕ್ತಾದಿಗಳಿಗೆ ನೇರವಾಗಿ ವೀಕ್ಷಿಸಬಹುದಾಗಿದೆ.

6ನೇ ಶ್ರೀಮದ್ ದೇವಿ ಭಾಗವತ ನವಾಹಯಜ್ಞ

2026 ಮೇ 01 ರಿಂದ ಮೇ 10 ರವರೆಗೆ

ಯಜ್ಞಾಚಾರ್ಯ: ಶ್ರೀ ಹರೀಶ್ ಚಂದ್ರಶೇಖರನ್



ಇಂಧನ ಭದ್ರತೆ, ಜನ ಹಿತ ರಕ್ಷಣೆಗೆ ಆದ್ಯತೆ

ಪುಟ ೧➡ ಸರಬರಾಜು ಸರಪಳಿಗಳ ಸುಗಮ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳುವಂತೆ ಹಾಗೂ ಅಕ್ರಮ ಸಂಗ್ರಹಣೆ ಮತ್ತು ಅತಿಲಾಭ ಪಡೆಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ ಮೋದಿ, ತಪ್ಪು ಮಾಹಿತಿ ಮತ್ತು ವದಂತಿಗಳ ಹರಡುವಿಕೆಯನ್ನು ತಡೆಯುವ ಅಗತ್ಯವಿದೆ ಎಂದು ಎಚ್ಚರಿಸಿದರು. ಜನರಲ್ಲಿ ಆತಂಕ ಉಂಟಾಗದಂತೆ ನಿಖರ ಮತ್ತು ವಿಶ್ವಾಸಾರ್ಹ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ತಲುಪಿಸುವುದು ಅತ್ಯಗತ್ಯ ಎಂದರು.

ಪಶ್ಚಿಮ ಏಷ್ಯಾದ ಪರಿಸ್ಥಿತಿ ಉಲ್ಲೇಖಿಸಿ, ಭಾರತವು ಇಂತಹ ಜಾಗತಿಕ ಅಶಾಂತಿಗಳನ್ನು ಎದುರಿಸುವಲ್ಲಿ ಹಿಂದಿನಿಂದಲೂ ಅನುಭವ ಹೊಂದಿದೆ ಎಂದು ಹೇಳಿದರು. ಕೋವಿಡ್-19 ಮಹಾಮಾರಿಯ ಸಮಯದಲ್ಲಿ ಕೇಂದ್ರ ಮತ್ತು ರಾಜ್ಯಗಳು ಟೀಮ್ ಇಂಡಿಯಾ ಆಗಿ ಕೆಲಸ ಮಾಡಿ ಸರಬರಾಜು ಸರಪಳಿ, ವ್ಯಾಪಾರ ಮತ್ತು ದೈನಂದಿನ ಜೀವನದ ಮೇಲೆ ಪರಿಣಾಮವನ್ನು ಕಡಿಮೆ ಮಾಡಿದುದನ್ನು ಅವರು ನೆನಪಿಸಿದರು. ಈಗಿನ ಪರಿಸ್ಥಿತಿಯನ್ನೂ ಎದುರಿಸಲು ಸಹಕಾರ ಮತ್ತು ಸಮನ್ವಯದ ಅದೇ ಮನೋಭಾವವೇ ಭಾರತದ ದೊಡ್ಡ ಶಕ್ತಿ ಎಂದು ಮೋದಿ ಹೇಳಿದರು. ಆನ್‌ಲೈನ್ ಮೋಸಗಳು ಮತ್ತು ನಕಲಿ ಏಜೆಂಟ್‌ಗಳ ವಿರುದ್ಧ ಜಾಗ್ರತೆ ವಹಿಸಲು ಸಲಹೆ ನೀಡಿದ ಅವರು, ಗಡಿ ಮತ್ತು ಕರಾವಳಿ ರಾಜ್ಯಗಳಲ್ಲಿ ಸಾಗಣೆ, ಅಗತ್ಯ ವಸ್ತುಗಳು ಮತ್ತು ಸಮುದ್ರ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸಲು ವಿಶೇಷ ಗಮನಹರಿಸುವಂತೆ ಹೇಳಿದರು. ಜನರ ವಿಶ್ವಾಸವನ್ನು ಕಾಪಾಡುವುದು ಅತ್ಯಂತ ಮುಖ್ಯ ಎಂದು ಮೋದಿ ಒತ್ತಿಹೇಳಿದರು. ಅಗತ್ಯ ವಸ್ತುಗಳ ಲಭ್ಯತೆಯ ಬಗ್ಗೆ ಭರವಸೆ ನೀಡುವುದರಿಂದ ಜನರಲ್ಲಿ ಅನಗತ್ಯ ಆತಂಕ ತಡೆಯಬಹುದು ಎಂದು ಹೇಳಿದರು.

20% ವಾಣಿಜ್ಯ ಅಡುಗೆ ಅನಿಲ ಹೆಚ್ಚಳ: ಪ್ರಧಾನಿ ಸಕಾರಾತ್ಮಕ ಸ್ಪಂದನೆ

• ಬೆಂಗಳೂರು: ರಾಜ್ಯದ ಹೋಟೆಲ್‌ಗಳಿಗೆ ಸದ್ಯ ನೀಡುತ್ತಿರುವ ಶೇ.50ರಷ್ಟು ವಾಣಿಜ್ಯ ಅಡುಗೆ ಅನಿಲವನ್ನು ಇನ್ನೂ ಶೇ.20ರಷ್ಟು ಹೆಚ್ಚಿಸಲು ಪ್ರಧಾನಿಯವರಲ್ಲಿ ಮನವಿ ಮಾಡಿದ್ದು, ಪ್ರಧಾನಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು. ಕರ್ನಾಟಕ ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಿದ ಅವರು, ಸಭೆಯ ವಿವರವನ್ನು ಹಂಚಿಕೊಂಡರು. ಕರ್ನಾಟಕವೂ ಈ ವಿಷಮ ಪರಿಸ್ಥಿತಿಯಲ್ಲಿ, ಕೇಂದ್ರದ ಜತೆಗೆ ಇರುವುದಾಗಿ ಪ್ರಧಾನಿಗಳಿಗೆ ಭರವಸೆ ನೀಡಲಾಗಿದೆ ಎಂದು ಮುನಿಯಪ್ಪ ತಿಳಿಸಿದರು.

ಅಬಕಾರಿ ಸುಂಕ ಕಡಿತ

ಪುಟ ೧➡ ಗುರುವಾರ ತಡರಾತ್ರಿ ಹೊರಡಿಸಿದ ಅಧಿಸೂಚನೆಯ ಪ್ರಕಾರ, ಪೆಟ್ರೋಲ್ ಮೇಲಿನ ಸುಂಕವನ್ನು 13 ರೂ.ಗಳಿಂದ 3 ರೂ.ಗೆ ಇಳಿಸಲಾಗಿದ್ದು, ಡೀಸೆಲ್ ಮೇಲಿನ ಸುಂಕವನ್ನು 10 ರೂ.ರಿಂದ ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. ಇರಾನ್-ಅಮೆರಿಕ-ಇಸ್ರೇಲ್ ಸಂಘರ್ಷ ಹಾಗೂ ಹಾರ್ಮುಜ್ ಜಲಸಂಧಿಯ ಅಸ್ಥಿರತೆ ಈ ನಿರ್ಧಾರಕ್ಕೆ ಪ್ರಮುಖ ಕಾರಣವಾಗಿದ್ದು, ಇದರಿಂದ ಜಾಗತಿಕ ಇಂಧನ ಸರಬರಾಜಿನಲ್ಲಿ ಅಡಚಣೆ ಉಂಟಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ನಿಯಂತ್ರಿಸಲು ಸರ್ಕಾರ ಈ ಕ್ರಮ ಕೈಗೊಂಡಿದೆ. ಆದಾಗ್ಯೂ, ಸದ್ಯಕ್ಕೆ ಚಿಲ್ಲರೆ ಇಂಧನ ಬೆಲೆಗಳಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ.

2 ವಾರದಲ್ಲಿ 5,500 ಕೋಟಿ ರೂ. ಆದಾಯ ನಷ್ಟ: ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಲೀಟರ್‌ಗೆ 10ರೂ. ಕೇಂದ್ರ ಅಬಕಾರಿ ಸುಂಕ ಕಡಿತ ಹಾಗೂ ಏವಿಯೇಷನ್ ಟರ್ಬೈನ್ ಇಂಧನ(ಎಟಿಎಫ್) ಮತ್ತು ಡೀಸೆಲ್ ರಫ್ತು ಮೇಲಿನ ಸುಂಕ ಹೆಚ್ಚಳದಿಂದ ಎರಡು ವಾರಗಳಲ್ಲಿ ಕೇಂದ್ರ ಸರ್ಕಾರಕ್ಕೆ ಒಟ್ಟಾರೆ 5,500 ಕೋಟಿ ಆದಾಯ ನಷ್ಟವಾಗಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಬಕಾರಿ ಸುಂಕ ಕಡಿತದಿಂದ ಸುಮಾರು 7 ಸಾವಿರ ಕೋಟಿ ರೂ. ಆದಾಯ ನಷ್ಟವಾಗಲಿದ್ದು, ಡೀಸೆಲ್ ಮತ್ತು ಎಟಿಎಫ್ ರಫ್ತು ಮೇಲಿನ ವಿಶೇಷ ಹೆಚ್ಚುವರಿ ಸುಂಕದಿಂದ 1,500 ಕೋಟಿ ರೂ. ಹೆಚ್ಚುವರಿ ಆದಾಯ ಲಭಿಸಲಿದೆ ಎಂದು ಹೇಳಿದರು. ಅಬಕಾರಿ ಕಡಿತದ ನಂತರ ಪೆಟ್ರೋಲ್ ಮೇಲಿನ ಒಟ್ಟು ಸುಂಕ ಪ್ರತಿ ಲೀಟರ್‌ಗೆ 11.9 ರೂ. ಆಗಿದ್ದು, ಇದರಲ್ಲಿ ಮೂಲ ಸುಂಕ 1.40 ರೂ., ವಿಶೇಷ ಹೆಚ್ಚುವರಿ ಸುಂಕ 3 ರೂ., ಕೃಷಿ ಮೂಲಸೌಕರ್ಯ ಸೆಸ್ 2.50 ರೂ. ಹಾಗೂ ರಸ್ತೆ ಸೆಸ್ 5 ರೂ. ಸೇರಿವೆ. ಮಾ.26ರಿಂದ ಡೀಸೆಲ್ ಮತ್ತು ಎಟಿಎಫ್ ರಫ್ತು ಮೇಲೆ ಕ್ರಮವಾಗಿ 21.5 ರೂ. ಮತ್ತು 29.5 ರೂ. ಪ್ರತಿ ಲೀಟರ್ ಸುಂಕ ವಿಧಿಸಲಾಗಿದೆ.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಜಗತ್ತಿನ ಅತಿ ಕಲುಷಿತ ದೇಶಗಳಲ್ಲಿ ಪಾಕಿಸ್ತಾನಕ್ಕೆ ನಂಬರ್ ಒನ್ ಸ್ಥಾನ – ಸುದ್ದಿ

– ಹೊರಗಿನದೇ ಹೀಗಿರುವಾಗ ಒಳಗಿನ ಕಲುಷಿತ ಮಾನಸಿಕತೆ ಅದೆಷ್ಟು ಭೀಕರವಾಗಿದ್ದೀತು?

ದಿನ ಭವಿಷ್ಯ

ಮೇಷ ಕೆಲ ಅಹಿತಕರ ಪ್ರಸಂಗದಿಂದಾಗಿ ನಿಮ್ಮ ಆತ್ಮವಿಶ್ವಾಸ ಕುಸಿತ. ಹೋರಾಟ ಮನೋಭಾವ ಬಿಡಬೇಡಿ. ಇತರರ ಮನ ಒಪ್ಪಿಸಬೇಕಾಗಿಲ್ಲ.

ವೃಷಭ ಶುಭ ಸುದ್ದಿ ಕೇಳುವಿರಿ. ಕೌಟುಂಬಿಕ ಸಂಭ್ರಮ. ಆರೋಗ್ಯ ಸಮಸ್ಯೆ ನಿವಾರಣೆ. ನಿಮ್ಮ ಆರ್ಥಿಕ ಸ್ಥಿತಿ ಉತ್ತಮ ಪಡಿಸಲು ಯೋಜಿಸಿ.

ಮಿಥುನ ಮನಸ್ಸಿನ ಶಾಂತಿ ಕಾಪಾಡಿ. ವಾಗ್ವಾದ, ಸಂಘರ್ಷಕ್ಕೆ ಇಳಿಯದಿರಿ. ಹೊಸ ವ್ಯವಹಾರ ಆರಂಭಕ್ಕೆ ಕಾಲ ಸುಸೂತ್ರವಾಗಿದೆ. ಬಂಧು ಸಹಕಾರ.

ಕಟಕ ಉದ್ದಿಮೆಯಲ್ಲಿ ಹಣ ಹೂಡಲು ಸೂಕ್ತ ಸಮಯ. ನಿಮ್ಮ ಮೃದು ಸ್ವಭಾವ ಒಳ್ಳೆ ಫಲ ನೀಡದು. ಅವಶ್ಯ ಸಂದರ್ಭದಲ್ಲಿ ಕಠಿಣವಾಗಿ ವರ್ತಿಸಲು ಕಲಿಯಿರಿ.

ಸಿಂಹ ಅಹಿತಕರ ಪ್ರಸಂಗ ಎದುರಿಸುವಿರಿ. ಜಾಣ್ಮೆಯಿಂದ ನಿಭಾಯಿಸಿ. ಆಕರ್ಷಕ ವ್ಯಕ್ತಿಯ ಜತೆ ಸ್ನೇಹ ಬೆಳೆದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿ.

ಕನ್ಯಾ ಕಲಾವಿದರಿಗೆ ಉತ್ತಮ ದಿನ. ಕೌಟುಂಬಿಕ ಪರಿಸರ ಉಲ್ಲಾಸದಾಯಕ. ನೆಂಟರಿಷ್ಟರ ಸಮ್ಮುಖ ಆತ್ಮೀಯ ಕಾಲಕ್ಷೇಪ. ಆರ್ಥಿಕ ಉನ್ನತಿ.

ತುಲಾ ಸ್ಪಷ್ಟವಾಗಿ ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ. ಕಹಿಸತ್ಯ ಹೇಳಲು ಹಿಂಜರಿಕೆ ಬೇಡ. ವ್ಯವಹಾರದಲ್ಲಿ ತುಸು ಹಿನ್ನಡೆ ಉಂಟಾದೀತು.

ವೃಶ್ಚಿಕ ಹಳಬರ ಭೇಟಿ ಸಂಭವ. ಹಳೆ ನೆನಪು ಕೆದುಕುವಿರಿ. ನಿಮ್ಮ ವ್ಯವಹಾರದಲ್ಲಿ ಅಡ್ಡಿ ಒದಗೀತು. ಸಹನೆಯ ನಡೆ ಒಳ್ಳೆಯದು.

ಧನು ಕಠಿಣ ಪರಿಸ್ಥಿತಿ ಒದಗಿದರೂ ಆತ್ಮವಿಶ್ವಾಸ ಬಿಡಬೇಡಿ. ಎಲ್ಲ ಕಷ್ಟವೂ ತಾತ್ಕಾಲಿಕ. ಅನಿರೀಕ್ಷಿತ ನೆರವು ಒದಗಲಿದೆ. ಬಂಧು ಭೇಟಿಯಿಂದ ಸಂತಸ.

ಮಕರ ಸಂಘಟಿತ ಕಾರ್ಯದಿಂದ ಯಶಸ್ಸು. ಏಕಾಂಗಿ ಪ್ರಯತ್ನ ಫಲ ನೀಡದು. ಕೇಳಿದವರಿಗೆಲ್ಲ ಹಣ ನೀಡಬೇಡಿ. ಕೌಟುಂಬಿಕ ಹೊಣೆ ಹೆಚ್ಚಳ.

ಕುಂಭ ಮುತುವರ್ಜಿಯಿಂದ ಕೆಲಸ ನಿರ್ವಹಿಸಿ. ಉದಾಸೀನತೆ ಕಾರ್ಯ ಕೆಡಿಸಬಹುದು. ಸಂಬಂಧ ಪಡದ ವಿಚಾರದಲ್ಲಿ ಹಸ್ತಕ್ಷೇಪ ಮಾಡಬೇಡಿ.

ಮೀನ ಹಣದ ವಿವಾದ ಪರಿಹಾರ. ಸಂಬಂಧದಲ್ಲಿ ಯಾವುದೇ ಅನುಮಾನ ಇಟ್ಟುಕೊಳ್ಳದಿರಿ. ಸಂವಹನ ಕೊರತೆಯಿಂದ ಆಪ್ತರ ಜತೆ ಮುನಿಸು ಸಂಭವ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 3,7,5,1

ಮಹಾರಾಷ್ಟ್ರ ಕನ್ನಡಿಗರ ಜತೆ ಜಿಲ್ಲಾಧಿಕಾರಿ ಸಭೆಯಲ್ಲಿ ನಿರ್ಧಾರ

ಕನ್ನಡಿಗರ ಹಿತ ರಕ್ಷಣೆಗೆ ಒತ್ತು

• ಬೆಳಗಾವಿ: ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಹಿತರಕ್ಷಣೆಗಾಗಿ ಕರ್ನಾಟಕ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಗಡಿ ಸಚಿವ ಎಚ್.ಕೆ.ಪಾಟೀಲ್ ಅವರ ಸೂಚನೆಯಂತೆ ಬೆಳಗಾವಿಯಲ್ಲಿ ಸುಮಾರು ಎರಡು ದಶಕಗಳ ನಂತರ ಗಡಿ ಕನ್ನಡಿಗರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ನಡುವೆ ಐತಿಹಾಸಿಕ ಸಭೆ ನಡೆದಿದ್ದು, ಸುಮಾರು 24 ಪ್ರಮುಖ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ.

ಶುಕ್ರವಾರ ಜಿಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಹಿತ ರಕ್ಷಣೆ ಹಾಗೂ ಸಮಸ್ಯೆಗಳ ಕುರಿತು ಚರ್ಚೆಯಾಗಬೇಕೆಂದು ಗಡಿ ಸಚಿವರಾದ ಎಚ್.ಕೆ.ಪಾಟೀಲ ಅವರ ಸೂಚನೆಯಂತೆ ಮಹಾರಾಷ್ಟ್ರ ಗಡಿಯಲ್ಲಿರುವ ಕನ್ನಡಿಗರೊಂದಿಗೆ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ಕರೆಯಲಾಗಿತ್ತು.

ಸುಮಾರು 23 ವರ್ಷಗಳ ಬಳಿಕ ಜಿಲ್ಲಾಧಿಕಾರಿ ಮೊಹ್ಮದ್ ರೋಷನ್ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಮಹಾರಾಷ್ಟ್ರದ ಮಾಜಿ ಶಾಸಕ ವಿಕ್ರಮ್ ಸಾವಂತ್, ನಗರ ಪೊಲೀಸ್ ಆಯುಕ್ತ ಭೂಷಣ್ ಬೋರಸೆ, ಸೇರಿದಂತೆ ಮಹಾರಾಷ್ಟ್ರ ಗಡಿಭಾಗದ ಕನ್ನಡಿಗರು ಭಾಗಿಯಾಗಿ ಸುಮಾರು 24 ಅಂಶಗಳ ಕುರಿತು ಸುದೀರ್ಘ ಸಭೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ಮೊಹ್ಮದ್ ರೋಷನ್ ಅವರು, ಸುಮಾರು ತಿಂಗಳ ಹಿಂದೆ ಬೆಳಗಾವಿಯಲ್ಲಿರುವ ಮರಾಠಿ ಭಾಷಿಕರಿಗಾಗಿ ಒಂದು ಸಭೆ ಕರೆಯಲಾಗಿತ್ತು. ಅದರಂತೆ ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಸಮಸ್ಯೆಗಳನ್ನು ಅರಿಯಲು ಈ ಸಭೆ ಆಯೋಜಿಸಲಾಗಿದೆ. ಮಹಾರಾಷ್ಟ್ರದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳಿಗೆ ಕರ್ನಾಟಕ ಸರ್ಕಾರದಿಂದ ಒದಗಿಸಬಹುದಾದ ಹೆಚ್ಚಿನ ಸವಲತ್ತುಗಳು ಮತ್ತು ಕರ್ನಾಟಕದಲ್ಲಿರುವ ಮರಾಠಿ ಮಾಧ್ಯಮ ಶಾಲೆಗಳಿಗೆ ಕರ್ನಾಟಕ ಸರ್ಕಾರ ನೀಡುವ ಕುರಿತು ಚರ್ಚೆ ನಡೆದಿದೆ.

ಕರ್ನಾಟಕ ಸರ್ಕಾರದ ರಾಜ್ಯಮಟ್ಟದ ಯೋಜನೆಗಳನ್ನು ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೆ ತಲುಪಿಸಲು ಚರ್ಚಿಸಲಾಗಿದೆ. ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಸೇರಿದಂತೆ ಗಡಿಭಾಗದಲ್ಲಿ ಸದಾ ಶಾಂತಿ ಮತ್ತು ಸೌಹಾರ್ದತೆಯಿರಬೇಕು. ಇದರಿಂದ ಸಮಸ್ಯೆ ಪರಿಹರಿಸಲು ಸಾಧ್ಯ. ಮತ್ತೆ 2-3 ಸುತ್ತಿನ ಸಭೆ ನಡೆಸಿ, ಸೂಕ್ಷ್ಮತೆಗಳನ್ನು ಅರಿತು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದರು.



> ಕರ್ನಾಟಕ-ಮಹಾರಾಷ್ಟ್ರದ ಸೌಹಾರ್ದತೆ ಕಾಪಾಡಲು ಬಂದಿರುವಾಗ ಬೆಳಗಾವಿಯಲ್ಲಿ ಕೆಲ ಸಂಘಟನೆಗಳು ಗಡಿ ವಿವಾದಕ್ಕಾಗಿ ಹೋರಾಡುತ್ತಿವೆ. ಮಾತೃಭಾಷೆಯ ಪ್ರೇಮ ಎಲ್ಲರಿಗೂ ಇರುವುದು ಸಹಜ. ಆದರೆ, ಅದಕ್ಕಿಂತ ಮೊದಲು ಬರುವುದು ಮಾನವೀಯತೆ. ಮಾನವೀಯ ಮೌಲ್ಯಗಳನ್ನು ಆಧರಿಸಿ ಅರಿತು ಬೆರೆತು ಬಾಳಬೇಕು.
>
> ■ **ವಿಕ್ರಮ್ ಸಾವಂತ್,** ಮಹಾರಾಷ್ಟ್ರದ ಮಾಜಿ ಶಾಸಕ

ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೆ ಬಸ್ಸಿನ ವ್ಯವಸ್ಥೆ, ರಸ್ತೆ ಅಭಿವೃದ್ಧಿ, ನೀರಿನ ಸಮಸ್ಯೆ, ಸೇರಿದಂತೆ ಇನ್ನುಳಿದ ಸಮಸ್ಯೆಗಳನ್ನು ನಮ್ಮ ಮಟ್ಟದಲ್ಲಿ ಪರಿಹರಿಸಲು ಪ್ರಯತ್ನಿಸಲಾಗುವುದು. ನಮ್ಮ ಹಂತದಲ್ಲಿ ಸಾಧ್ಯವಾಗದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಜಿಲ್ಲಾಧಿಕಾರಿ ಭರವಸೆ ನೀಡಿದರು.

ಜತ್ ತಾಲೂಕಿನ ಕೆಲ ಹಳ್ಳಿಗಳು ನೀರಿನ ಸಮಸ್ಯೆಗೆ ಸೋತು ಕರ್ನಾಟಕಕ್ಕೆ ಸೇರುವ ಠರಾವನ್ನು ಪಂಚಾಯಿತಿಯಲ್ಲಿ ಪಾಸ್ ಮಾಡಿವೆ. ಈ ಕುರಿತು ಅರ್ಜಿಗಳು ಬಂದಲ್ಲಿ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು. ಇನ್ನು ಮಹಾರಾಷ್ಟ್ರದ ಮಾಜಿ ಶಾಸಕರಾದ ವಿಕ್ರಮ್ ಸಾವಂತ್ ಅವರು ಈಗಾಗಲೇ ಗಡಿಭಾಗದ ಸಮಸ್ಯೆಗಳ ಕುರಿತು ಸಚಿವರಾದ ಎಚ್.ಕೆ.ಪಾಟೀಲ್ ಮತ್ತು ಎಂ.ಬಿ.ಪಾಟೀಲರನ್ನು ಭೇಟಿಯಾಗಿ ಗಮನ ಸೆಳೆಯಲಾಗಿತ್ತು.

ನಮ್ಮ ಕ್ಷೇತ್ರದಲ್ಲಿ ಶೇ.65ರಷ್ಟು ಕನ್ನಡಿಗರಿದ್ದು, ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕೆಂಬ ಪ್ರಯತ್ನವಿದೆ. ಪ್ರಥಮವಾಗಿ ಶಿಕ್ಷಣ, ರಸ್ತೆ, ನೀರು, ಬಸ್, ಮೂಲಸೌಲಭ್ಯಗಳ ಕುರಿತು ಮಹತ್ವದ ಚರ್ಚೆಯಾಗಿದೆ. ಕರ್ನಾಟಕದ 865 ಹಳ್ಳಿಗಳಿಗೆ ಮಹಾರಾಷ್ಟ್ರದಿಂದ ವಿವಿಧ ಯೋಜನೆಗಳು ದೊರೆಯುತ್ತವೆಯೋ ಅದೇ ಮಾದರಿಯಲ್ಲಿ ಮಹಾರಾಷ್ಟ್ರದಲ್ಲಿರುವ 747 ಹಳ್ಳಿಗಳ ಕನ್ನಡಿಗರಿಗೆ ಮೀಸಲಾತಿ ಸಿಗಬೇಕು. ಮಹಾರಾಷ್ಟ್ರ ಮತ್ತು ಕರ್ನಾಟಕದ ಜನರು ಮಾನವೀಯತೆಯ ದೃಷ್ಟಿಯಿಂದ ನೀರಿನ ನಿರ್ವಹಣೆಯಾಗಬೇಕು. ಜತ್, ಅಕ್ಕಲಕೋಟ್, ಸೋಲ್ಲಾಪುರಗಳಲ್ಲಿ ನೀರಿನ ಸಮಸ್ಯೆಯಿದ್ದು, ಮಳೆಗಾಲದಲ್ಲಿ ಕರ್ನಾಟಕದ ತುಬಚಿ-ಬಬಲೇಶ್ವರದಿಂದ ನೀರು ನೀಡಿ ಮತ್ತು ಬೇಸಿಗೆಯಲ್ಲಿ ತೆಗೆದುಕೊಳ್ಳುವ ನೀತಿಯನ್ನು ಅನುಸರಿಸಬೇಕಾಗಿದೆ. ಗಡಿಯಲ್ಲಿ ಶಿಕ್ಷಣ ಪಡೆದವರಿಗೆ ಶೇ.5ರಷ್ಟು ಮೀಸಲಾತಿ ಕರ್ನಾಟಕದಲ್ಲಿ ನೀಡಬೇಕು ಎಂದರು.

ಶಾಲೆ ಸ್ಥಾಪಿಸಲು ಸ್ವಂತ ಭೂಮಿ ಹೊಂದಿರಬೇಕು

• ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ ಪೂರ್ವ ಪ್ರಾಥಮಿಕ ದಿಂದ ಪ್ರೌಢ ಶಾಲೆಗಳನ್ನು ಸ್ಥಾಪಿಸಲು ಬಯಸುವ ಖಾಸಗಿ ಸಂಸ್ಥೆಗಳು ಕನಿಷ್ಠ 15 ವರ್ಷಗಳ ಕಾಲ ನೋಂದಾಯಿತ ಗುತ್ತಿಗೆ ಅಥವಾ ಸ್ವಂತ ಭೂಮಿಯನ್ನು ಹೊಂದಿರಬೇಕು ಎಂಬ ಕರಡು ನಿಯಮವನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಕಟಿಸಿದೆ.

ಈ ಕುರಿತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ) (ತಿದ್ದುಪಡಿ) ನಿಯಮಗಳು 2026 ರ ಕರಡನ್ನು ಸರ್ಕಾರ ಹೊರಡಿಸಿದೆ. ಹೊಸ ಕರಡಿನಂತೆ ಭೂಮಾಲೀಕತ್ವದ ಪುರಾವೆಯಾಗಿ ಶಿಕ್ಷಣ ಸಂಸ್ಥೆಗಳು ಇನ್ನು ಮುಂದೆ (ಪಹಣಿ), ಇ-ಖಾತಾ ಅಥವಾ ಖಾತಾ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು.

ಈ ಭೂಮಿಯು ಶಾಲಾ ಕಟ್ಟಡ ಮತ್ತು ಆಟದ ಮೈದಾನಕ್ಕೆ ಪೂರಕವಾಗಿರಬೇಕು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆದಿರಬೇಕು ಎಂದು ಸೂಚಿಸಲಾಗಿದೆ.

ಹಾಗೆಯೇ ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಬದಲಾವಣೆ ಅಥವಾ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಬದಲಾವಣೆ ಅಥವಾ ಸ್ಥಳ ಬದಲಾವಣೆ) (ತಿದ್ದುಪಡಿ) ನಿಯಮಗಳು, 2026 ರ ಕರಡನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಉರುಳಿಗೆ ಸಿಲುಕಿ ಹುಲಿ ಸಾವು

• ಮೈಸೂರು: ಉರುಳಿಗೆ ಸಿಲುಕಿ ಹುಲಿಯೊಂದು ಸಾವಿಗೀಡಾಗಿರುವ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನ ನಾಗರಹೊಳೆ ಹುಲಿ ಮೀಸಲು ಅರಣ್ಯದ ಮೆಟ್ಟಿಕುಪ್ಪೆ ಶ್ರೇಣಿಯ ಬಳಿ ನಡೆದಿದೆ. ಹುಲಿ ಮೀಸಲು ಅರಣ್ಯದ ಗಡಿಯಿಂದ 300 ಮೀಟರ್ ದೂರದಲ್ಲಿರುವ ಆಸನಗುಂಡಿಯ ಗಿರೀಶ್ ಎಂಬುವರಿಗೆ ಸೇರಿದ ಫಾರಂ ಹೌಸ್‌ನ ಜಮೀನಿನಲ್ಲಿ ಕಾಡು ಹಂದಿಯನ್ನು ಬಲೆಗೆ ಬೀಳಿಸಲು ಬಲೆ ಹಾಕಲಾಗಿತ್ತು.

ಹಾವು ಕಡಿತ: ಸಾವು ಹೆಚ್ಚಳ

ಪುಟ ೧➡ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಹಾವು ಕಡಿತ ಪ್ರಕರಣಗಳನ್ನು ಹಾಗೂ ಹಾವು ಕಡಿತದಿಂದ ಸಂಭವಿಸುವ ಮರಣಗಳನ್ನು ಘೋಷಿತ ಖಾಯಿಲೆ ಎಂದು ಘೋಷಿಸಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿರುವುದರಿಂದ, ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳು ಕಡ್ಡಾಯವಾಗಿ ಕೇಂದ್ರ ಸರ್ಕಾರದ ಸಮಗ್ರ ಆರೋಗ್ಯ ಮಾಹಿತಿ ವೇದಿಕೆ ದಾಖಲು ಮಾಡುತ್ತಿರುತ್ತವೆ.

ಸರ್ಕಾರದ ಕ್ರಮಗಳು: ಎಲ್ಲಾ ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ವರದಿ ಮಾಡುವುದು ಕಡ್ಡಾಯಗೊಳಿಸಲಾಗಿದೆ. ರಾಜ್ಯದಲ್ಲಿ ಈಗಾಗಲೇ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಆ್ಯಂಟಿ ಸ್ನೇಕ್ ವೆನಮ್ (ಎಎಸ್‌ವಿ) ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ.

ರಾಜ್ಯದ ಎಲ್ಲಾ ತಾಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳನ್ನು ಹಾವು ಕಡಿತ ಚಿಕಿತ್ಸಾ ಕೇಂದ್ರಗಳಾಗಿ ಗುರುತಿಸಲಾಗಿದ್ದು, ಈ ಆಸ್ಪತ್ರೆಗಳಲ್ಲಿ ದಿನದ 24 ಗಂಟೆಯು ಹಾವು ಕಡಿತಕ್ಕೆ ಚಿಕಿತ್ಸೆ ಹಾಗೂ ಕಡಿತದಿಂದ ಉಂಟಾಗುವ ಬೇರೆ ಬೇರೆ ತೊಂದರೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯಾಧಿಕಾರಿಗಳು ಹಾಗೂ ಇತರೆ ಆರೋಗ್ಯ ಸಿಬ್ಬಂದಿ ವಿವಿಧ ಹಂತಗಳಲ್ಲಿ ಹಾವು ಕಡಿತ ಚಿಕಿತ್ಸೆಯ ಬಗ್ಗೆ ತರಬೇತಿ ನೀಡಲಾಗಿದೆ. ಸಾಂಪ್ರದಾಯಿಕ/ನಾಟಿ ಚಿಕಿತ್ಸಕರಿಂದ ಹಾವು ಕಡಿತ ಪ್ರಕರಣಗಳು ಆಸ್ಪತ್ರೆ ಸೇರುವುದು ತಡವಾದಲ್ಲಿ ಅಥವಾ ಮರಣ ಹೊಂದಿದಲ್ಲಿ ಅವರ ಮೇಲೆ ಕೆಪಿಎಂಇ ಕಾಯ್ದೆ ಅಡಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಕ್ರಮ ವಹಿಸಲು ಸೂಚಿಸಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಮುಂಗಡ ಹಣಕ್ಕಾಗಿ ಒತ್ತಾಯಿಸದೆ ಹಾವು ಕಚ್ಚಿದ ಸಂತ್ರಸ್ತರಿಗೆ ತಕ್ಷಣ ಜೀವ ಉಳಿಸುವ ಚಿಕಿತ್ಸೆ ಒದಗಿಸುವಂತೆ ಆದೇಶಿಸಲಾಗಿದೆ.



> ಹಾವು ಕಡಿತ ಮತ್ತು ಮರಣಗಳನ್ನು ತಡೆಗಟ್ಟಲು ದೇಶದಲ್ಲೇ ಪ್ರಪ್ರಥಮ ಬಾರಿಗೆ ರಾಜ್ಯದಲ್ಲಿ ವಿವಿಧ ಇಲಾಖೆಗಳು ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ರಾಜ್ಯ ಕ್ರಿಯಾಯೋಜನೆಗೆ ಈಗಾಗಲೇ ಚಾಲನೆ ನೀಡಲಾಗಿದೆ. ಈ ಸಂಬಂಧ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುತ್ತಿದೆ.
>
> ■ **ದಿನೇಶ್ ಗುಂಡೂರಾವ್,** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ

525 ಅಂಕಕ್ಕಿಳಿದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪುಟ ೧➡ **ಯಾವುದೇ ತೃತೀಯ ಭಾಷೆಗೆ ಗ್ರೇಡ್ ಮಾತ್ರ:** ಒಟ್ಟು 1,64,000 ವಿದ್ಯಾರ್ಥಿಗಳು ತೃತೀಯ ಭಾಷೆ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದು, ಅದರಲ್ಲಿ 1,48,000 ವಿದ್ಯಾರ್ಥಿಗಳು ಕೇವಲ ಹಿಂದಿ ಭಾಷೆಯಲ್ಲಿಯೇ ಫೇಲ್ ಆಗಿರುವ ಆತಂಕಕಾರಿ ಅಂಶವನ್ನು ಸಚಿವರು ಮುಂದಿಟ್ಟಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಿಂದಿ, ಸಂಸ್ಕೃತ, ತುಳು, ಮರಾಠಿ, ಅರೇಬಿಕ್ ಸೇರಿದಂತೆ ಪಠ್ಯಕ್ರಮದಲ್ಲಿರುವ ಎಲ್ಲಾ ತೃತೀಯ ಭಾಷೆಗೆ ಕಡ್ಡಾಯವಾಗಿ ಪರೀಕ್ಷೆ ಬರೆಯಬೇಕಾಗಿದೆ. ಜತೆಗೆ ತೃತೀಯ ಭಾಷೆಯು ಕೇವಲ ಗ್ರೇಡಿಂಗ್ (ಎ,ಬಿ,ಸಿ,ಡಿ)ಗೆ ಮಾತ್ರ ಸೀಮಿತವಾಗಲಿದ್ದು, ವಾರ್ಷಿಕ ಅಂಕಗಳ ಪಟ್ಟಿಗೆ ಪರಿಗಣನೆಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

16 ವರ್ಷದೊಳಗಿನ ಮಕ್ಕಳಿಗೆ ಸೋಷಿಯಲ್ ಮೀಡಿಯಾ ನಿರ್ಬಂಧ: ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಭವಿಷ್ಯ ದೃಷ್ಟಿಯಲ್ಲಿಟ್ಟುಕೊಂಡು 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆ ನಿರ್ಬಂಧಿಸುವ ಮಹತ್ವದ ಪ್ರಸ್ತಾವವನ್ನು ಸದನದಲ್ಲಿ ಚರ್ಚಿಸಲಾಗಿದ್ದು, ಎಲ್ಲರಿಂದಲೂ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಈ ಸಮಸ್ಯೆಯು ಕೇವಲ ಸರ್ಕಾರದ ಮಟ್ಟದಲ್ಲಿ ಬಗೆಹರಿಯುವುದಿಲ್ಲ. ಪೋಷಕರು ತಮ್ಮ ಮಕ್ಕಳ ಮೊಬೈಲ್ ಬಳಕೆಯ ಮೇಲೆ ಹೆಚ್ಚಿನ ಜವಾಬ್ದಾರಿ ವಹಿಸಬೇಕು ಎಂದು ಸಚಿವರು ಮನವಿ ಮಾಡಿದರು.

ಎಲ್ಲ ಪಠ್ಯಕ್ರಮ ಶಾಲೆಗೂ ಅನ್ವಯ

ಪುಟ ೧➡ ಇಲಾಖೆಯಿಂದ ಸ್ಪಷ್ಟನೆ ದೊರೆತ ತಕ್ಷಣ ಈ ಕುರಿತಾದ ಗೊಂದಲಗಳು ಬಗೆಹರಿಯಲಿವೆ ಎಂದು ಸಚಿವರು ತಿಳಿಸಿದರು. ರಾಜ್ಯ ಶಿಕ್ಷಣ ನೀತಿಯ (ಎಸ್‌ಇಪಿ) ಶಿಫಾರಸುಗಳನ್ನು ಇನ್ನೂ ಸಚಿವ ಸಂಪುಟದ ಮುಂದೆ ಮಂಡಿಸಬೇಕಿದ್ದು, ಒಮ್ಮೆ ಅದನ್ನು ಮಂಡಿಸಿ ಅನುಮೋದನೆ ಪಡೆದ ನಂತರ, ನಾವು ಕಾಯಂ ಆಗಿ ಅನ್ವಯವಾಗುವ ಮಾರ್ಗಸೂಚಿಗಳು ಮತ್ತು ಆದೇಶವನ್ನು ಹೊರಡಿಸುತ್ತೇವೆ.



ಜತೆಗೆ ಕಿಂಡರ್ ಗಾರ್ಡನ್ ಪ್ರವೇಶದ ವಯೋಮಿತಿಗೆ ಸಂಬಂಧಿಸಿದಂತೆ ಸರಿಯಾದ ಮಾರ್ಗಸೂಚಿಗಳಿಲ್ಲದ ಕಾರಣ, ಪೋಷಕರಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ನಾವು ಸ್ಪಷ್ಟತೆ ನೀಡಬೇಕಾಗಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ನೇಪಾಳ ಪ್ರಧಾನಿ ಆಗಿ ಬಾಲೇಂದ್ರ ಶಾ ಪ್ರಮಾಣ

ಪುಟ ೧➡ **ಮೋದಿ ಅಭಿನಂದನೆ:** ಪ್ರಮಾಣವಚನ ಕಾರ್ಯಕ್ರಮ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು, ಬಾಲೇಂದ್ರ ಶಾ ಅವರನ್ನು ಅಭಿನಂದಿಸಿದ್ದಾರೆ. ಇದೇ ವೇಳೆ, ಭಾರತ-ನೇಪಾಳ ಸಂಬಂಧಗಳನ್ನು ಮುನ್ನಡೆಸಲು ತಮ್ಮ ನೇಪಾಳದ ಸಹವರ್ತಿಗಳೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿರುವುದಾಗಿ ಹೇಳಿದ್ದಾರೆ. ಪ್ರಧಾನಿ ಆಗಿ ನಿಮ್ಮ ಆಯ್ಕೆಯು ನೇಪಾಳದ ಜನರು ನಿಮ್ಮ ನಾಯಕತ್ವದ ಮೇಲೆ ಇಟ್ಟಿರುವ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ.

ಶಾಸಕರಿಗೆ ತಲಾ 2 ಐಪಿಎಲ್ ಟಿಕೆಟ್

ಪುಟ ೧➡ ಸಭೆಯ ಬಳಿಕ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ಶಾಸಕರಿಗೆ ಟಿಕೆಟ್ ಕೇಳುವ ಹಕ್ಕಿದೆ ಎಂದು ಹೇಳಿದ್ದಾರೆ. ಸರ್ಕಾರದ ಭಾಗವಾಗಿರುವ ಕಾರಣ ಅವರಿಗೆ ಅವಕಾಶ ಕಲ್ಪಿಸಬೇಕು ಎಂದರು.ಅಲ್ಲದೇ ಮೊದಲ ಪಂದ್ಯದ ಟಿಕೆಟ್‌ಗಳು ಈಗಾಗಲೇ ಮಾರಾಟವಾಗಿವೆ ಎಂದು ಕೆಎಸ್‌ಸಿಎ ಮಾಹಿತಿ ನೀಡಿದೆ. ಹೀಗಾಗಿ ಈ ಪಂದ್ಯಕ್ಕೆ ಪ್ರತಿ ಶಾಸಕರಿಗೆ ಹಾಗೂ ಸಂಸದರಿಗೆ ಎರಡು ಟಿಕೆಟ್ ನೀಡಲು ಸೂಚಿಸಿದ್ದು, ಅವರೂ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ಎರಡು ಟಿಕೆಟ್ ನೀಡಲು ಒಪ್ಪಿದ ಕೆಎಸ್‌ಸಿಎ: ಚಿನ್ನಸ್ವಾಮಿ ಮೈದಾನದಲ್ಲಿ ನಡೆಯಲಿರುವ ಪಂದ್ಯಕ್ಕಾಗಿ ಶಾಸಕರಿಗೆ 1+1 ಟಿಕೆಟ್ ನೀಡಲು ಕೆಎಸ್‌ಸಿಎ ಒಪ್ಪಿಕೊಂಡಿದೆ. ಈ ಕುರಿತು ಕೆಎಸ್ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಗೂ ಪದಾಧಿಕಾರಿಗಳು ಸಿಎಂ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ, ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ ಆಹ್ವಾನ ನೀಡಿದ್ದಾರೆ. ಭೇಟಿಯ ವೇಳೆ ಸಿಎಂ ಶಾಸಕರಿಗೆ ಹೆಚ್ಚುವರಿ ಟಿಕೆಟ್ ನೀಡುವಂತೆ ಬೇಡಿಕೆ ಇಟ್ಟಿದ್ದು, ನಾಲ್ಕು ಟಿಕೆಟ್ ಕೊಡಲು ಸೂಚಿಸಿದ್ದಾರೆ ಎನ್ನಲಾಗಿದೆ. ಇದಕ್ಕೆ ಕೆಎಸ್‌ಸಿಎ ಒಪ್ಪಿಗೆ ಸೂಚಿಸಿದ್ದು, ಈಗಾಗಲೇ ಮೊದಲ ಪಂದ್ಯದ ಟಿಕೆಟ್‌ಗಳು ಮಾರಾಟವಾಗಿರುವ ಹಿನ್ನೆಲೆಯಲ್ಲಿ ಶನಿವಾರದ ಪಂದ್ಯಕ್ಕೆ 1+1 ಟಿಕೆಟ್ ಹಾಗೂ ಮುಂದಿನ ಪಂದ್ಯಗಳಿಗೆ 4 ಟಿಕೆಟ್ ನೀಡುವುದಾಗಿ ಭರವಸೆ ನೀಡಿದೆ.

ಸುರಕ್ಷತೆ ಕುರಿತು ಸಿಎಸ್ ಸಭೆ

ಪುಟ ೧➡ ಕ್ರಿಕೆಟ್ ಪ್ರೇಮಿಗಳ ಸುರಕ್ಷತೆಗೆ ಕ್ರೀಡಾಂಗಣದ ಒಳಗೆ ಮತ್ತು ಕ್ರೀಡಾಂಗಣದ ಸುತ್ತ ರೂಪಿಸಿರುವ ಭದ್ರತಾ ವ್ಯವಸ್ಥೆ, ನಗರದ ಸಂಚಾರ ವ್ಯವಸ್ಥೆಯಲ್ಲಿ ಮಾಡಿಕೊಳ್ಳಲಾಗಿರುವ ಬದಲಾವಣೆಗಳು, ಪಾರ್ಕಿಂಗ್ ವ್ಯವಸ್ಥೆ, ಕ್ರೀಡಾಂಗಣದ ಒಳಗೆ ಕುಡಿಯುವ ನೀರು ಸೇರಿದಂತೆ ಇತರೆ ಅತ್ಯಾವಶ್ಯಕ ಸಂಗತಿಗಳ ಕುರಿತಾಗಿ ಮಾಹಿತಿ ಪಡೆದುಕೊಂಡರು. ಪಂದ್ಯಾವಳಿ ಆಯೋಜನೆಗೆ ಸರ್ಕಾರ ವಿಧಿಸಿರುವ ಷರತ್ತುಗಳು ಮತ್ತು ಎಚ್ಚರಿಕೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಭೆಯಲ್ಲಿ ಸೂಚನೆ ನೀಡಿದರು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಂಸ್ಥೆಗಳು ಹೈ ಅಲರ್ಟ್ ಆಗಿರಬೇಕು. ಆಯಾ ಕ್ಷಣದ ಮಾಹಿತಿಗಳನ್ನು ಮೇಲಿನ ಅಧಿಕಾರಿಗಳಿಗೆ ನಿಯಮಿತವಾಗಿ ವಿನಿಮಯ ಮಾಡಿಕೊಳ್ಳಬೇಕು ಎನ್ನುವ ಸೂಚನೆಗಳನ್ನು ನೀಡಿದರು.

ಸಾದಿಕ್ ಪೈಲ್ವಾನ್ ಕಣದಿಂದ ನಿವೃತ್ತಿ

ಪುಟ ೧➡ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಾದಿಕ್ ಪೈಲ್ವಾನ್ ಅವರು ನನಗೆ ಬಹಳ ವರ್ಷಗಳಿಂದ ಪರಿಚಿತರು. ಮೈಸೂರಿನ ಕುಸ್ತಿ ಅಖಾಡಗಳಲ್ಲಿ ಅವರು ಪಾಲ್ಗೊಂಡಾಗ ಭೇಟಿಯಾಗುತ್ತಿದ್ದೆ ಎಂದರು.

ಅಭ್ಯರ್ಥಿಯಾಗಬೇಕೆಂದು ಯಾವುದೇ ವ್ಯಕ್ತಿ ಬಯಸುವುದು ತಪ್ಪಲ್ಲ. ನಿನ್ನೆ 11 ಜನ ನಾಮಪತ್ರ ಹಿಂಪಡೆದಿದ್ದಾರೆ. ಪಕ್ಷದ ಕೋರಿಕೆ ಮೇರೆಗೆ ಸಾದಿಕ್ ಅವರು ಚುನಾವಣಾ ಕಣದಿಂದ ನಿವೃತ್ತರಾಗಿರುವುದಕ್ಕೆ ಅವರಿಗೆ ಧನ್ಯವಾದಗಳು. ಶಾಸಕರಾದ ರಿಜ್ವಾನ್ ಅರ್ಷದ್, ಸಲೀಂ ಅಹ್ಮದ್, ನಜೀರ್ ಅಹ್ಮದ್ ಅವರು ದಾವಣಗೆರೆಗೆ ಭೇಟಿ ನೀಡಿದ್ದರು. ಅವರು ತಲುಪುವುದು ತಡವಾದ್ದರಿಂದ ನಾಮಪತ್ರ ಸಲ್ಲಿಸುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ನಾನು ವಿಧಾನಪರಿಷತ್‌ನಲ್ಲಿ ಉತ್ತರ ನೀಡಬೇಕಿದ್ದರಿಂದ ಖುದ್ದು ಭೇಟಿ ಮಾಡಲಾಗಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

ಪಕ್ಷದ ಕಟ್ಟಾಳು; ನಿಷ್ಠಾವಂತ ಕಾರ್ಯಕರ್ತ: ಸಾದಿಕ್ ಪೈಲ್ವಾನ್ ಅವರು ಕಾಂಗ್ರೆಸ್‌ನಲ್ಲಿ ಸುಮಾರು 40 ವರ್ಷಗಳಿಂದ ಇದ್ದು, ಪಕ್ಷದ ಕಟ್ಟಾಳು. ದಾವಣಗೆರೆಯಲ್ಲಿ 70 ಸಾವಿರ ಮುಸ್ಲಿಂ ಮತದಾರರಿದ್ದಾರೆ. ಹೀಗಾಗಿ ಸಾದಿಕ್ ಟಿಕೆಟ್ ಆಕಾಂಕ್ಷಿ ಯಾಗಿದ್ದರು. ಹೈಕಮಾಂಡ್ ಇದನ್ನು ಪರಿಶೀಲಿಸಿ, ಮೃತರಾದವರ ಕುಟುಂಬದವರಿಗೆ ಟಿಕೆಟ್ ನೀಡುವ ಪದ್ಧತಿಯಂತೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರ ಪುತ್ರ ಸಮರ್ಥ್‌ಗೆ ಟಿಕೆಟ್ ನೀಡಲಾಗಿದೆ ಎಂದರು.

ಸಾದಿಕ್ ಎದೆಯಲ್ಲಿ ಪಕ್ಷ ನಿಷ್ಠೆ: ಡಿಸಿಎಂ


ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ದಾವಣಗೆರೆ ವಿಷಯದಲ್ಲಿ ಕೆಲವರು ದೊಡ್ಡ ಆತಂಕ ತೋರಿಸುತ್ತಿದ್ದರು. ಆದರೆ, ನಮಗೆ ನಮ್ಮ ಸಿದ್ಧಾಂತದ ಮೇಲೆ ನಂಬಿಕೆಯಿತ್ತು. ಸಾದಿಕ್ ಪೈಲ್ವಾನ್ ಹುಟ್ಟು ಕಾಂಗ್ರೆಸ್ಸಿಗ. ಅವರ ಎದೆಯಲ್ಲಿ ಪಕ್ಷ ನಿಷ್ಠೆಯೇ ಕಾಣುತ್ತಿದೆ. ಕಾಂಗ್ರೆಸ್ ಪಕ್ಷಕ್ಕೆ ತೊಂದರೆ ಆಗಬಾರದು ಎಂದು ಪೈಲ್ವಾನ್ ಒಪ್ಪಿಕೊಂಡಿದ್ದಾರೆ. ಮಲ್ಲಿಕಾರ್ಜುನ ಹಾಗೂ ಸಾದಿಕ್ ಪೈಲ್ವಾನ್ ಅಣ್ಣತಮ್ಮಂದಿರ ರೀತಿ ಇದ್ದವರು. ಪಕ್ಷವನ್ನು ಗೆಲ್ಲಿಸುತ್ತೇವೆ. ದೇಶಕ್ಕೆ ಒಂದು ಒಳ್ಳೆಯ ಸಂದೇಶ ಹೋಗಬೇಕು ಎಂದು ಸಾದಿಕ್ ಪೈಲ್ವಾನ್ ತಿಳಿಸಿದ್ದಾರೆ. ಹೀಗಾಗಿ ಸಾದಿಕ್ ಪೈಲ್ವಾನ್ ಅವರನ್ನು ಅಭಿನಂದಿಸುತ್ತೇನೆ ಎಂದರು.



> ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ನಾಡಿನಲ್ಲಿ ಕಾಂಗ್ರೆಸ್ ಆಡಳಿತ ಮಾಡಿಕೊಂಡು ಬಂದಿದೆ. ಒಂದು ಮನೆಯಲ್ಲಿ ಅಣ್ಣ ತಮ್ಮಂದಿರ ನಡುವೆ ಒಡಕು ಬಂದರೆ ಹಿರಿಯರು ಸರಿ ಮಾಡ್ತಾರೆ. ನಾನು ನನ್ನ ಮನೆಗೆ ಬಂದಿದ್ದೇನೆ. ಬಂಡಾಯ ಸ್ಪರ್ಧೆಯಿಂದ ನಾನು ನಿವೃತ್ತಿ ಆಗಿದ್ದೇನೆ.
>
> ■ **ಸಾದಿಕ್ ಪೈಲ್ವಾನ್,** ಕಾಂಗ್ರೆಸ್ ಮುಖಂಡ

ಬಿಜೆಪಿ ಅಭ್ಯರ್ಥಿ ಪರ ಬೊಮ್ಮಾಯಿ ಮತಯಾಚನೆ

• ದಾವಣಗೆರೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಹಿಂದ ಸಮುದಾಯಗಳ ಜೊತೆಗೆ ಗುತ್ತಿಗೆ ಆಧಾರದ ರಾಜಕಾರಣವನ್ನು ಮಾಡುತ್ತ ಬಂದಿದ್ದಾರೆ. ದಾವಣಗೆರೆ ಜನರು ಸ್ವಾಭಿಮಾನ ಉಳಿಸಿಕೊಂಡು ಈ ಸರ್ಕಾರ ಕಿತ್ತೊಗೆಯುವ ತೀರ್ಮಾನ ಮಾಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಕರೆ ನೀಡಿದರು.



ದಾವಣಗೆರೆಯ ಉಪಚುನಾವಣೆಯ ಹಿನ್ನೆಲೆಯಲ್ಲಿ ಶುಕ್ರವಾರ ನಾಗನೂರು ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರ ಪರವಾಗಿ ಮತಯಾಚನೆ ಮಾಡಿದರು. ಈ ಚುನಾವಣೆ ದಾವಣ ಗೆರೆಗೆ ಸೀಮಿತವಾಗಿರದ ಚುನಾವಣೆ. ದಾವಣಗೆರೆ ಮೀರಿ ಇರುವ ಚುನಾವಣೆ. ಇದನ್ನು ಮತದಾರರು ಅರ್ಥ ಮಾಡಿಕೊಂಡರೆ ಅವರು ಕೇವಲ ದಾವಣಗೆರೆ ಅಭಿವೃದ್ಧಿಗೆ ಮಾತ್ರವಲ್ಲ. ಒಂದು ಸುವ್ಯವಸ್ಥಿತ ಅಭಿವೃದ್ಧಿಗೆ ನಾಂದಿ ಹಾಡಲು ದಾವಣಗೆರೆ ದಕ್ಷಿಣದ ಮತದಾರರಿಗೆ ಅವಕಾಶ ಇದೆ ಎಂದರು. ದಾವಣಗೆರೆಗೆ ಹತ್ತಿರ ಇರುವ ಗ್ರಾಮೀಣ ಪ್ರದೇಶ ಅತ್ಯಂತ ಫಲವತ್ತಾದ ಭೂಮಿ, ನೀವು ಅತ್ಯಂತ ಪುಣ್ಯವಂತರು. ನಾವು ಒಣ ಬೇಸಾಯದಿಂದ ಬಂದವರು. ಈ ಪರಿಸರದ ತಕ್ಕ ಹಾಗೆ ನಿಮ್ಮ ಬದುಕು ಹಸಿರು ಮತ್ತು ಹಸನಾಗಬೇಕು. ಅದಕ್ಕಾಗಿ ಯೋಗ್ಯವಾದ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು. ಇದುವರೆಗೂ ಹಿರಿಯರಿದ್ದರು. ಗೌರವ ನಮ್ಮ ಸಂಸ್ಕೃತಿ, ಸಂಸ್ಕಾರ ಅವರನ್ನು ಆಯ್ಕೆ ಮಾಡಿಕೊಂಡು ಬಂದಿದ್ದೀರಿ ಎಂದು ಬೊಮ್ಮಾಯಿ ಎಂದು ಹೇಳಿದರು.

ಮಾಹಿತಿ ನೀಡದ ಅಧಿಕಾರಿಗಳ ವಿರುದ್ಧ ಕ್ರಮ

• ಬೆಂಗಳೂರು: ಮಾಹಿತಿ ಹಕ್ಕು ಕಾಯ್ದೆಯಡಿ ಸಾರ್ವಜನಿಕರು ಕೇಳಿದ ಮಾಹಿತಿಯನ್ನು ನೀಡಲು ವಿಫಲರಾದ ಅಧಿಕಾರಿಗಳ ವಿರುದ್ಧ ಕರ್ನಾಟಕ ಮಾಹಿತಿ ಆಯೋಗವು ಕಠಿಣ ಕ್ರಮ ಕೈಗೊಂಡಿದೆ. ಉಡುಪಿ ಜಿಲ್ಲೆಯ ಕಾರ್ಕಳದ ಶ್ರೀ ಮಾರಿಯಮ್ಮ ದೇವಾಲಯದ ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಆಗಿರುವ ಆಡಳಿತ ಮೊಕ್ತೇಸರ ಕೆ.ಪಿ. ಗೋಪಾಲಕೃಷ್ಣರಾವ್ ಅವರಿಗೆ ಪ್ರತ್ಯೇಕ ನಾಲ್ಕು ಪ್ರಕರಣಗಳಲ್ಲಿ ಒಟ್ಟು ಒಂದು ಲಕ್ಷ ರೂ. ದಂಡ ವಿಧಿಸಿ ಮಾಹಿತಿ ಆಯುಕ್ತರು ಮಹತ್ವದ ಆದೇಶ ಹೊರಡಿಸಿದ್ದಾರೆ.

ಅರ್ಜಿದಾರರಾದ ಸೋಮನಾಥ ನಾಯಕ್ ಕೆ. ಅವರು ದೇವಾಲಯಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ಕೋರಿ ಅರ್ಜಿ ಸಲ್ಲಿಸಿದ್ದರು. ಶ್ರೀಮಾರಿಯಮ್ಮ ದೇವಾಲಯವು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ಎ ಗ್ರೇಡ್ ದೇವಾಲಯವಾಗಿದ್ದು, ಸರ್ಕಾರದಿಂದ ನೇಮಕಗೊಂಡ ಅಧಿಕಾರಿಯೇ ಮಾಹಿತಿ ನೀಡಲು ನಿರಾಕರಿಸಿದ್ದರು.

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅಭಿಮತ

ನಾವು ಮೌಲ್ಯಾಧಾರಿತ ಸಮಾಜದೆಡೆಗೆ ಸಾಗುವಂತಾಗಲಿ

ಮೈಸೂರು: ನಿಯಮಾಧಾರಿತವಾಗಿರುವ ಸಮಾಜದಿಂದ ಮೌಲ್ಯಾಧಾರಿತ ಸಮಾಜದೆಡೆಗೆ ಸಾಗಬೇಕಾದ ಅನಿವಾರ್ಯತೆ ಇದೆ ಎಂದು ಭಾರತೀಯ ಜನತಾಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದರು.

ಪ್ರಜ್ಞಾ ಪ್ರವಾಹ ಕರ್ನಾಟಕದ ವತಿಯಿಂದ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾದ ಮೂರನೇ ದಿನವಾದ ಶುಕ್ರವಾರ ನಡೆದ 'ಏಕಾತ್ಮ ಮಾನವ ದರ್ಶನ: ಭಾರತದ ವಿಶ್ವದೃಷ್ಟಿ' ವಿಚಾರ ಸಂಕಿರಣದಲ್ಲಿ Philosophy to Policy Contemporary Political, Economic and Civilizational Challenges: Bharatiya Perspective ವಿಷಯ ಕುರಿತು ನಡೆದ ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಬ್ಬ ವ್ಯಕ್ತಿ ತನ್ನ ಮೌಲ್ಯಗಳಿಂದ ದೇವರಾಗಬಹುದು ಎನ್ನುವುದನ್ನು ತೋರಿಸಿಕೊಟ್ಟು, ಸಕಲ ಕಾಲಕ್ಕೂ ಮಾದರಿಯಾದವನು ಪ್ರಭು ಶ್ರೀರಾಮ ಎಂದರು.

ಭಾರತೀಯ ದೃಷ್ಟಿಕೋನದ ಅನುಷ್ಠಾನಕ್ಕೆ ವ್ಯಕ್ತಿ, ಸಮಾಜ, ಶಿಕ್ಷಣ ಕ್ಷೇತ್ರ, ನೀತಿ ನಿರೂಪಕರು ಮತ್ತು ಅಧಿಕಾರಿ ವರ್ಗ, ಜನಪ್ರತಿನಿಧಿಗಳ ಹಂತಗಳಲ್ಲಿ ಸವಾಲುಗಳು ಎದುರಾಗಬಹುದು. ಇದೆಲ್ಲದಕ್ಕಿಂತಲೂ ಒಂದು ದೊಡ್ಡ ಸವಾಲಾಗಿ ಪಾಶ್ಚಾತ್ಯ ಯೋಚನೆ, ಜೀವನ ಶೈಲಿಯಿಂದ ಪ್ರಭಾವಕ್ಕೆ ಒಳಗಾಗಿರುವ ಜನಮಾನಸ ನಮ್ಮ ಮುಂದಿದೆ. ಸಮಾಜವನ್ನು ನಿರ್ವಸಾಹತೀಕರಣ ಮಾಡಬೇಕು. ಆದರೆ ಅದಕ್ಕಾಗಿ ಪ್ರಯತ್ನಿಸುವವರೇ ವಸಾಹತುಶಾಹಿ ಮಾನಸಿಕತೆಗೆ ಒಳಗಾಗಿರುವಾಗ ಈ ಪ್ರಯತ್ನ ಸಫಲಗೊಳ್ಳುವುದಾದರೂ ಹೇಗೆ ಎಂದು ಪ್ರಶ್ನಿಸಿದರು.

ಸಿದ್ಧಾಂತಹೀನ ಮತದಾರ, ಸಿದ್ಧಾಂತ ಹೀನ ರಾಜ್ಯ ವ್ಯವಸ್ಥೆಯನ್ನು ನಿರ್ಮಿಸುತ್ತಾನೆ. ಇದರಿಂದಾಗಿ ಭವಿಷ್ಯದಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅನ್ಯ ರಾಜ್ಯಗಳಲ್ಲಿ ರಾಜ ಮತ್ತು ಋಷಿಯ ವ್ಯವಸ್ಥೆ ಇದೆ. ಭಾರತದಲ್ಲಿ ಮಾತ್ರ ಅವುಗಳ ಸಮನ್ವಯಗೊಂಡ ರಾಜರ್ಷಿ ಎಂಬ ಕಲ್ಪನೆಯೂ ಇದೆ. ಎಲ್ಲಾ ರಾಜಕೀಯ ವ್ಯವಸ್ಥೆಯಲ್ಲಿ ಉತ್ತಮ ಜನಪ್ರತಿನಿಧಿಗಳಿದ್ದಾರೆ. ಆದರೆ, ಪೀಳಿಗೆಗೊಬ್ಬ ಉತ್ತಮ ಜನಪ್ರತಿನಿಧಿಯ ನಿರ್ಮಾಣವಾಗುತ್ತಿದೆ. ಅಂತಹವರ ಸಂಖ್ಯೆ ಹೆಚ್ಚಾಗಬೇಕು. ರಾಜ್ಯದ ನಿಯಂತ್ರಣ ಕಡಿಮೆಯಾಗಿ ಸಮಾಜ ಕೇಂದ್ರಿತ ನಿರ್ವಹಣೆ ಜಾಸ್ತಿಯಾಗಬೇಕು. ಹೆಚ್ಚು ಮೌಲ್ಯಗಳು ಮುನ್ನೆಲೆಗೆ ಬರಬೇಕು. ಆದಕ್ಕಾಗಿ ಮತದಾರ ಜಾಗೃತನಾಗಬೇಕು ಎಂದು ತಿಳಿಸಿದರು.

ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಸದಸ್ಯಪ್ರೊ.ಕೆ.ವಿ.ರಾಜು, ವಿವಿಧ ಕ್ಷೇತ್ರದಲ್ಲಿ ಏಕಾತ್ಮಮಾನವ ದರ್ಶನವನ್ನು ಯಾವ ಹಂತದಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಸ್ಪಷ್ಟತೆ ನಮಗೆ ಇರಬೇಕು ಎಂದರು.

ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಾಂತಿಶ್ರೀಧುಲಿಪುಡಿ ಪಂಡಿತ ಮಾತನಾಡಿ, ಭಾರತೀಯ ಕಥನವನ್ನು ಸಮರ್ಥವಾಗಿ ಜಗತ್ತಿನ ಎದುರು ಇಡುವುದಕ್ಕೆ ಸಹಕಾರಿಯಾಗುವಂತೆ ಶಿಕ್ಷಣ ವ್ಯವಸ್ಥೆಯನ್ನು ಸಿದ್ಧಪಡಿಸಬೇಕು. ಧ್ರುವೀಕರಣಗೊಂಡಿರುವ ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಭಾರತೀಯ ನಾಗರಿಕತೆಯ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪಸರಿಸುವ ಅವಶ್ಯಕತೆ ಹೆಚ್ಚಿದೆ ಎಂದರು.

ವಿಮರ್ಶೆ ಮುಖ್ಯವಾಗಲಿ

ಶಿಕ್ಷಣ ಕ್ಷೇತ್ರದಲ್ಲಿ ಅಧ್ಯಯನ ಮತ್ತು ಅಧ್ಯಾಪನದ ವಸ್ತು ಹೇಗಿದೆ ಮತ್ತು ಹೇಗಿರಬೇಕು ಎನ್ನುವುದರ ವಿಮರ್ಶೆ



ಮುಖ್ಯ. ನಾವು ಪ್ರಸ್ತುತ ಅಳವಡಿಸಿಕೊಡಿರುವ ಅಧ್ಯಯನ ಮತ್ತು ಅಧ್ಯಾಪನದ ಮಾದರಿ ಸರಿಯಿದೆಯೇ ಎಂದು ಅಳೆಯುವುದಕ್ಕೆ ಸರಿಯಾದ ಮಾನದಂಡಗಳನ್ನು ಗುರುತಿಸಬೇಕು. ಈಗಾಗಲೇ ಏಕಾತ್ಮಮಾನ ದರ್ಶನದ ಹಾದಿಯಲ್ಲಿ ಮುನ್ನಡೆಯುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ, ರಾಷ್ಟ್ರೋತ್ಥಾನ ಪರಿಷತ್, ಅನೇಕ ಗುರುಕುಲಗಳು, ರಾಮಕೃಷ್ಣ ಮಿಷನ್ ಆದಿಯಾಗಿ ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳು ಅಳವಡಿಸಿಕೊಂಡಿರುವ ಮಾದರಿಗಳನ್ನು ನಮ್ಮ ಅನೇಕ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದು ಬಿ.ಎಲ್. ಸಂತೋಷ್ ಹೇಳಿದರು.

ಶ್ರೀರಾಮ ನವಮಿ



ಬೆಂಗಳೂರಿನ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶುಕ್ರವಾರ ಶ್ರೀರಾಮ ನವಮಿ ಆಚರಣೆ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭಾಗವಹಿಸಿದ್ದರು. ಬೆಂಗಳೂರು ವಿಭಾಗ ಪ್ರಭಾರಿ ರಾಜಣ್ಣ, ಸಹ ಪ್ರಭಾರಿ ಕಿರಣ್ ಇದ್ದರು.

ಕಿರುಸುದ್ದಿ

ಇಂದು ವೈರಮುಡಿ ಕಿರೀಟ ಧಾರಣೆ

ಮಂಡ್ಯ: ಮಾ. 28 ರಂದು ಶ್ರೀ ವೈರಮುಡಿ ಕಿರೀಟಧಾರಣೆ ಉತ್ಸವ ನೆಡೆಯಲಿದೆ. ವೈರಮುಡಿ ಬ್ರಹೋತ್ಸವ ಸಂಬಂಧ ದೇವಾಲಯ ಮತ್ತು ಇತರೆ ಇಲಾಖೆಗಳಿಂದ ಕ್ಷೇತ್ರದಲ್ಲಿ ಕೈಗೊಳ್ಳಬೇಕಾಗಿರುವ ಪೂರ್ವಸಿದ್ಧತೆ ಮತ್ತು ಮುಂಜಾಗ್ರತಾ ಕ್ರಮಗಳ ಸಿದ್ದತಾ ಪೂರ್ವಭಾವಿ ಸಭೆಗಳನ್ನು ನಡೆಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ವೈರಮುಡಿ ಕಿರೀಟಧಾರಣೆ ಉತ್ಸವಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಸಾರಿಗೆ ಸಂಸ್ಥೆ ವತಿಯಿಂದ ಮೇಲುಕೋಟೆಗೆ ಸಂಪರ್ಕ ಕಲ್ಪಿಸುವ ಎಲ್ಲಾ ಪ್ರಮುಖ ಪಟ್ಟಣ, ನಗರ ಭಾಗಗಳಿಂದ ಸುಮಾರು 140 ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಮುಂಗಡ ಸೀಟು ಕಾಯ್ದಿರಿಸುವ ವ್ಯವಸ್ಥೆ ಹಾಗೂ ಮಂಡ್ಯ ನಗರದಿಂದ ನಿರಂತರ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ದಾಸೋಹ ವ್ಯವಸ್ಥೆ: ದೇವಾಲಯದ ದಾಸೋಹ ಭವನದಲ್ಲಿ ವೈರಮುಡಿ ಬ್ರಹೋತ್ಸವ ನಡೆಯುವ ದಿನ ಭಕ್ತಾದಿಗಳಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದೆ. ಮಾ 28 ರಂದು ಬೆಳಗ್ಗೆ 08. 00 ಗಂಟೆಯಿಂದ ಮಾ. 29 ರಂದು ಬೆಳಗ್ಗೆ 08-00 ಗಂಟೆಯವರೆಗೆ ನಿರಂತರವಾಗಿ ಭಕ್ತಾದಿಗಳಿಗೆ ಪ್ರಸಾದ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

24ಗಂಟೆಗಳ ಆರೋಗ್ಯ ಸೇವೆ: ವೈರಮುಡಿ ಬ್ರಹೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಮತ್ತು ಸಾರ್ವಜನಿಕರು ಭಾಗವಹಿಸುವುದರಿಂದ ತುರ್ತು ವೈದ್ಯಕೀಯ ಸೇವೆ ಹಾಗೂ ಇತರೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಮೂರು ಮಕ್ಕಳ ಸಹಿತ ತಾಯಿ ಆತ್ಮಹತ್ಯೆ

ಇಂಡಿ: ಜೀವನದಲ್ಲಿ ಜಿಗುಪ್ಸೆಗೊಂಡು ಮಹಿಳೆಯೊಬ್ಬಳು ತನ್ನ ಮೂರು ಮಕ್ಕಳೊಂದಿಗೆ ಬಾವಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಮಿರಗಿ ಗ್ರಾಮದ ಜಮೀನೊಂದರಲ್ಲಿ ಸಂಭವಿಸಿದೆ. ಮೃತ ಮಹಿಳೆ ಮಿರಗಿ ಗ್ರಾಮದ ರಾಜಶ್ರೀ ಶಂಕ್ರೆಪ್ಪ ಹಳ್ಳೂರ(29) ಎಂದು ಗುರುತಿಸಲಾಗಿದ್ದು, ತನ್ನ ತವರು ಮನೆ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿನ ಧರಿಕೊಣ್ಣೂರು ಗ್ರಾಮಕ್ಕೆ ಹೋಗಿ ಬರುತ್ತೇನೆ ಎಂದು ತನ್ನ ಗಂಡನನ್ನು ಕೇಳಿದಾಗ ಇಂದು ಬೇಡ ನಾಳೆ ಹೊಗು ಎಂದು ಮುಂದುಡುತ್ತಾ ಬಂದ ಪರಿಣಾಮ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ. ಮಹಿಳೆ ತನ್ನ ಮಕ್ಕಳಾದ ಅನುಶ್ರೀ(6), ತನುಶ್ರೀ (3), ಸಂತೋಷ(1) ಮುಗ್ದ ಮಕ್ಕಳನ್ನು ಬಾವಿಗೆ ತಳ್ಳಿ ತಾನು ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಕುರಿತು ಇಂಡಿ ಗ್ರಾಮಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈಜಲು ಹೋದ ನಾಲ್ವರ ಸಾವು

ರಾಯಚೂರು: ಆಂಧ್ರ ಪ್ರದೇಶದ ಕರ್ನೂಲ ಜಿಲ್ಲಾ ಆದೋನಿ ತಾಲೂಕಿನ ಕಂದುಕೂರು ಬಳಿ ತುಂಗಭದ್ರಾ ನದಿಯಲ್ಲಿ ಈಜಲು ಹೋದ ಜಿಲ್ಲೆಯ ನಾಲ್ವರು ಮೃತಪಟ್ಟ ಘಟನೆ ನಡೆದಿದೆ. ಮೃತರನ್ನು ಜಿಲ್ಲೆಯ ಮಾನ್ವಿ ತಾಲೂಕಿನ ಕುರಿಡಿ ಗ್ರಾಮದ ದಾಸರಿ ಉಮಾಮತಿ (28), ದಾಸರಿ ರತ್ನಮ್ಮ (26), ದಾಸರಿ ಶಿವಾನಂದ (20) ಮತ್ತು ದಾಸರಿ ಮಹೇಶ್ (20) ಎಂದು ಗುರುತಿಸಲಾಗಿದೆ. ಮೃತರು ಆಂಧ್ರ ಪ್ರದೇಶದ ಕಂದಕೂರು ಗ್ರಾಮದಲ್ಲಿ ಮದುವೆ ಸಮಾರಂಭದಲ್ಲಿ ಪಾಲ್ಗೊಂಡು ಮರಳಿ ಸ್ವಗ್ರಾಮಕ್ಕೆ ಮರಳುವ ಸಂದರ್ಭದಲ್ಲಿ ಬಿಸಿಲಿನ ತಾಪವನ್ನು ತಾಳಲಾರದೇ ನದಿಯಲ್ಲು ಈಜಲು ಹೋಗಿದ್ದಾರೆ. ಆದರೆ, ಇವರು ನದಿಯಲ್ಲಿ ಈಜಲು ಹೋದ ಜಾಗ ಬಹಳ ಆಳವಿದ್ದ ಕಾರಣ ಇವರು ಕಾಲು ಜಾರಿ ಗುಂಡಿಗೆ ಬಿದ್ದ ಕಾರಣ ಇವರೆಲ್ಲ ಮೃತಪಟ್ಟಿದ್ದಾರೆ.

ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸರ್ಕಾರ ನಿರ್ದೇಶನ

ಬಾಕಿ ಹಣ ನೀಡದ ಸಕ್ಕರೆ ಕಾರ್ಖಾನೆಗಳಿಗೆ ನೋಟಿಸ್

ಬೆಂಗಳೂರು: ರಾಜ್ಯದಲ್ಲಿ ಪ್ರಸಕ್ತ ಹಂಗಾಮಿನಲ್ಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಿದ್ದು, ನಾಲ್ಕು ಸಹಕಾರಿ ಸೇರಿದಂತೆ ಒಟ್ಟು 16 ಸಕ್ಕರೆ ಕಾರ್ಖಾನೆಗಳು ನಿಯಮಾನುಸಾರ ಕಬ್ಬಿನ ಬಿಲ್ ಪಾವತಿ ಮಾಡದ ಕಾರಣ ರಿಕವರಿ ಸರ್ಟಿಫಿಕೇಟ್ (ವಸೂಲಾತಿ ದೃಢೀಕರಣ ಪತ್ರ) ಜಾರಿ ಮಾಡಲಾಗಿದೆ.

ರೈತರಿಗೆ ಕೊಡಬೇಕಾದ ಕಬ್ಬಿನ ಬಿಲ್ ಬಾಕಿಯನ್ನು ಕಂದಾಯ ಬಾಕಿ ಎಂದು ಪರಿಗಣಿಸಿ ಪ್ರತಿಶತ 15 ರಷ್ಟು ಬಡ್ಡಿಯೊಂದಿಗೆ ರೈತರಿಗೆ ಕೊಡಿಸಬೇಕು ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕ ಗೋವಿಂದರೆಡ್ಡಿ ಅವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕೆಲವು ಸಕ್ಕರೆ ಕಾರ್ಖಾನೆಗಳು ಕಬ್ಬಿನ ಬಿಲ್ ಬಾಕಿ ಉಳಿಸಿಕೊಂಡಿದ್ದು, ಅಂತಹ ಕಾರ್ಖಾನೆಗಳಗೆ ಬಾಕಿಯನ್ನು ತಕ್ಷಣ ಪಾವತಿ ಮಾಡಬೇಕು ಎಂದು ನೋಟಿಸ್ ಜಾರಿ ಮಾಡಲಾಗಿತ್ತು. ನೋಟಿಸ್ ನೀಡಿದ ನಂತರವೂ ಕೆಲವು ಕಾರ್ಖಾನೆಗಳು ಬಾಕಿ ಉಳಿಸಿಕೊಂಡ ಹಿನ್ನೆಲೆಯಲ್ಲಿ ರಿಕವರಿ ಸರ್ಟಿಫಿಕೇಟ್ ಜಾರಿ ಮಾಡಲಾಗಿದೆ ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ತಿಳಿಸಿದ್ದಾರೆ.

ಕಳೆದ ಹಂಗಾಮಿಗೆ ಹೋಲಿಕೆ ಮಾಡಿದರೆ ಕಾರ್ಖಾನೆಗಳು ಘೋಷಿಸಿದ ದರದಂತೆ ಪ್ರತಿ ಟನ್ ಕಬ್ಬಿಗೆ 250 ರಿಂದ 300 ರೂ. ಹೆಚ್ಚಳವಾಗಿದೆ. ಕಬ್ಬಿನ ಬಿಲ್ ಪಾವತಿಯನ್ನು ಹೋಲಿಕೆ ಮಾಡಿದರೆ ಕಳೆದ ಹಂಗಾಮಿಗಿಂತ 4.709 ಕೋಟಿ ರೂ. ಹೆಚ್ಚಳವಾಗಲಿದೆ. ಕಬ್ಬಿನ ಬಿಲ್ ಪಾವತಿಯಲ್ಲಿ ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂದು ಹೇಳಿದ್ದಾರೆ.

2022-23ರ ಹಂಗಾಮಿನಲ್ಲಿ ಪ್ರತಿಶತ 102ರಷ್ಟು, 2023-24ರ ಹಂಗಾಮಿನಲ್ಲಿ ಪ್ರತಿಶತ 104ರಷ್ಟು ಹಾಗೂ 2024-25ನೇ ಹಂಗಾಮಿನಲ್ಲಿ ಪ್ರತಿಶತ 107.39ರಷ್ಟು ಹಣವನ್ನು ಪಾವತಿ ಮಾಡಲಾಗಿದ್ದು, ಇದು ಎಫ್.ಆರ್.ಪಿ ದರಕ್ಕಿಂತ ಹೆಚ್ಚಿದೆ. ಕಳೆದ ಹಂಗಾಮಿಗೆ ಹೋಲಿಕೆ ಮಾಡಿದರೆ ಈ ಹಂಗಾಮಿನಲ್ಲಿ, ಕಬ್ಬು ನುರಿಸುವಿಕೆ ಮತ್ತು ಸಕ್ಕರೆ ಉತ್ಪಾದನೆ ಪ್ರಮಾಣದಲ್ಲಿ ಪ್ರತಿಶತ 9 ರಷ್ಟು ಏರಿಕೆಯಾಗಿದೆ.ಈ ಮೂಲಕ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಸರ್ಕಾರ ಕೈಗೊಂಡ ಕ್ರಮಗಳ ಪರಿಣಾಮ ಸಕ್ಕರೆ ಇಳುವರಿ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

2025-26ನೇ ಹಂಗಾಮಿನ ಅಂತ್ಯಕ್ಕೆ ಸುಮಾರು 574 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ ಸುಮಾರು 23,250 ಕೋಟಿ ರೂ.ಗಳಷ್ಟು ಹಣವನ್ನು ಕಬ್ಬು ಪೂರೈಕೆ ಮಾಡಿದ ರೈತರಿಗೆ ಪಾವತಿಸುವ ಅಂದಾಜು ಇದೆ ಎಂದು ವಿವರಿಸಿದ್ದಾರೆ.

300 ಕೋಟಿ ರೂ. ನೆರವು ಬಿಡುಗಡೆ

ರಾಜ್ಯ ಸರ್ಕಾರ ಘೋಷಣೆ ಮಾಡಿದಂತೆ ಎಫ್‌ಆರ್‌ಪಿ ಮೇಲೆ ಪ್ರತಿ ಟನ್ ಕಬ್ಬಿಗೆ 50 ರೂ.ಗಳ ಆರ್ಥಿಕ ನೆರವನ್ನು ಕಬ್ಬು ಪೂರೈಕೆ ಮಾಡಿದ ರೈತರಿಗೆ ನೀಡಲು ರಾಜ್ಯ ಸರ್ಕಾರ 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಕಬ್ಬು ಬೆಳೆಗಾರರ ಅಭಿಪ್ರಾಯದಂತೆ ಈ ಹಣವನ್ನು ಸಕ್ಕರೆ ಕಾರ್ಖಾನೆಗಳಿಗೆ ಬಿಡುಗಡೆ ಮಾಡಲಾಗಿದೆ. ಸಕ್ಕರೆ ಕಾರ್ಖಾನೆಗಳ ಪಾಲಿನ 50 ರೂ. ಆರ್ಥಿಕ ನೆರವು ಸೇರಿ ಒಟ್ಟು ನೂರು ರೂ.ಗಳನ್ನು ಕಬ್ಬು ಬೆಳೆಗಾರರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕು ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಿದ್ದಾರೆ.





ದರ ಏರಿಕೆ ಮಾಡಿದರೆ ಹೋರಾಟ: ಅಶೋಕ

ಬೆಂಗಳೂರು: ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ದರ ಇಳಿಸಲು ಕ್ರಮ ವಹಿಸಿದೆ. ಆದರೆ, ಕಾಂಗ್ರೆಸ್ ಸರ್ಕಾರ ದರ ಏರಿಕೆ ಮಾಡಿ ಲಾಭ ಮಾಡಿಕೊಳ್ಳಲು ಮುಂದಾದರೆ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಎಚ್ಚರಿಕೆ ನೀಡಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಶ್ರೀರಾಮನವಮಿಯ ಸಮಯದಲ್ಲಿ ಪೆಟ್ರೋಲ್-ಡೀಸೆಲ್ ದರ ಇಳಿಸಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಧನ್ಯವಾದ ಸಲ್ಲಿಸುತ್ತೇನೆ. ಹಿಂದೆ ತುಪ್ಪದ ಮೇಲಿನ ಜಿಎಸ್‌ಟಿ ಇಳಿಸಿದಾಗ ಕಾಂಗ್ರೆಸ್ ಸರ್ಕಾರ ದರ ಏರಿಕೆ ಮಾಡಿತ್ತು. ಈಗ ತೈಲ ದರ ಏರಿಸಲು ಮುಂದಾದರೆ ತೀವ್ರ ಹೋರಾಟ ಮಾಡುತ್ತೇವೆ. ದರ ಇಳಿಕೆಯನ್ನು ಚುನಾವಣೆಗೆ ಲಿಂಕ್ ಮಾಡಬಾರದು. ದೇಶದಲ್ಲಿ ವರ್ಷವಿಡೀ ಚುನಾವಣೆ ನಡೆಯುತ್ತಿರುತ್ತದೆ. ಯಾವುದೇ ಉತ್ತಮ ಕ್ರಮ ಕೈಗೊಂಡರೂ ಕಾಂಗ್ರೆಸ್ ಪಕ್ಷದವರು ಟೀಕೆ ಮಾಡುತ್ತಾರೆ. ಈಗಲೂ ಹಾಗೆಯೇ ಟೀಕೆ ಮಾಡುತ್ತಿದ್ದಾರೆ ಎಂದರು.

ಮೆಟ್ರೊ ಯೋಜನೆ ಸಂಬಂಧ ಸಂಸದ ಪಿ.ಸಿ.ಮೋಹನ್ ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಯಲ್ಲಿ ಉತ್ತರ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 50:50 ಅನುಪಾತದಲ್ಲಿ ಅನುದಾನ ಹಂಚಿಕೆಯಾಗುತ್ತಿದೆ. ಆದರೆ, ಕೇಂದ್ರ ಕೇವಲ ಶೇ.12 ಪಾಲು ನೀಡಿದೆ ಎಂದು ರಾಜ್ಯ ಸರ್ಕಾರ ಉತ್ತರ ನೀಡಿದೆ. ಜಲಜೀವನ್ ಮಿಷನ್‌ನಲ್ಲಿ ಬಳಕೆಯಾದ ಅನುದಾನದ ಬಗ್ಗೆ ಪ್ರಮಾಣಪತ್ರ ನೀಡಿದೆ ಬಾಕಿ ಹಣ ಬಿಡುಗಡೆಯಾಗಿಲ್ಲ ಎಂದು ಆರ್.ಅಶೋಕ ಹೇಳಿದರು.

ಐಪಿಎಲ್ ಟಿಕೆಟ್ ಕಾರ್ಯಕರ್ತರಿಗೆ ನೀಡುತ್ತೇವೆ

ಬೆಂಗಳೂರಿನಲ್ಲಿ ಐಪಿಎಲ್ ಪಂದ್ಯದ ವೇಳೆ ಸರ್ಕಾರ ಸರಿಯಾದ ಭದ್ರತೆ ಕಲ್ಪಿಸಬೇಕಿದೆ. ಈ ಹಿಂದೆ ಪೊಲೀಸ್ ಭದ್ರತೆ ನೀಡದೆಯೇ ಸಚಿವರ ಕುಟುಂಬದವರು ಫೋಟೋ ಶೂಟ್ ಮಾಡಿಕೊಂಡು 11 ಅಮಾಯಕರ ಸಾವಾಗಿತ್ತು. ಇಂತಹ ಘಟನೆ ಮರುಕಳಿಸದಂತೆ ಕ್ರಮ ವಹಿಸಬೇಕು. ಅನಾಹುತವಾದರೆ ಸರ್ಕಾರವೇ ಹೊಣೆಯಾಗುತ್ತದೆ. ಶಾಸಕರಿಗೆ ಟಿಕೆಟ್ ನೀಡಿದರೆ ಅದನ್ನು ಕಾರ್ಯಕರ್ತರಿಗೆ ನೀಡುತ್ತೇವೆ. ನಾನೇನೂ ಐಪಿಎಲ್ ಪಂದ್ಯ ನೋಡಲು ಹೋಗುವುದಿಲ್ಲ. ಬೇರೆಯವರಿಗೆ ಅವಕಾಶ ನೀಡಲು ವಿಐಪಿ ಟಿಕೆಟ್ ಕೊಡಬಹುದು. ಇದಕ್ಕಾಗಿ ನೀತಿ ನಿಯಮ ರೂಪಿಸಬೇಕೆಂದು ಚರ್ಚೆಯಾಗಿದೆ. ಆನ್ ಲೈನ್‌ನಲ್ಲೇ ಕೊಡಿ ಎಂದು ನಾವು ಕೇಳಿದ್ದೇವೆ ಎಂದು ಅಶೋಕ ಹೇಳಿದರು.

ಅಲುಗಾಡುತ್ತಿರುವ ಸಿಎಂ ಕುರ್ಚಿ: ಶ್ರೀರಾಮುಲು

ಬಾಗಲಕೋಟೆ: ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರವರು ವಿಧಾನಸಭೆಯ ದ್ವಾರ ಬಾಗಿಲು, ಮೆಟ್ಟಿಲುಗಳನ್ನು ಹೊಸದು ಮಾಡಲು ಲಕ್ಷಾಂತರ ರೂ. ಖರ್ಚು ಮಾಡುತ್ತಾರೆ. ಅದರ ಜತೆಗೆ ಮುಖ್ಯಮಂತ್ರಿ ಯವರ ಕುರ್ಚಿಯ ನಟ್ಟು, ಬೋಲ್ಟ್ ಕೂಡ ರಿಪೇರಿ ಮಾಡಿಸಬೇಕು ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಿಧಾನಸಭೆಯ ಮುಂಭಾಗ ಶಾಸಕರ ಫೋಟೋ ಶೂಟ್ ಆಗಿದ್ದನ್ನು ನೋಡಿದರೆ ಸಭಾಧ್ಯಕ್ಷರಿಗೆ ಸಿಎಂ ಇಳಿಯುವ ಮುನ್ಸೂಚನೆ ದೊರೆತಿರುವ ಕಾರಣದಿಂದಲೇ ಶಾಸಕರೊಂದಿಗೆ ಫೋಟೋ ತೆಗೆಸಿಕೊಳ್ಳಲಾಗಿದೆ. ಸಿಎಂ ಕುರ್ಚಿಯನ್ನು ಕೂಡ ಗಟ್ಟಿಯಾಗಿ ದುರಸ್ತಿ ಮಾಡಿಸಬೇಕಾಗಿದೆ ಎಂದು ಸ್ಪೀಕರ್ ಅವರಿಗೆ ಹೇಳಿದರು.

ಬಿಜೆಪಿ ಸರ್ಕಾರವಿದ್ದಾಗ ಪರಿಶಿಷ್ಟ ಪಂಗಡದವರಿಗೆ ಶೇ.3ರಿಂದ 7ಕ್ಕೆ ಏರಿಸಲಾಯಿತು. ಪರಿಶಿಷ್ಟ ಜಾತಿಯವರಿಗೆ ಶೇ.17ಕ್ಕೆ ಏರಿಸಲಾಯಿತು. ಅವಾಗಲೂ ಸಚಿವ ಸತೀಶ ಜಾರಕಿ ಹೊಳಿ ಮಾತನಾಡಲಿಲ್ಲ. ಈಗಿನ ಕಾಂಗ್ರೆಸ್ ಸರ್ಕಾರ ಮೀಸಲಾತಿಯಲ್ಲಿ ಸಮುದಾಯದ ಜನರಿಗೆ ಕಡಿಮೆಯದಾಗ ಬಗ್ಗೆ, ವಾಲ್ಮೀಕಿ ನಿಗಮದ ಹಣದಲ್ಲಿ ನಡೆದ ಹಗರಣ ಕುರಿತು ಧ್ವನಿ ಎತ್ತಲಿಲ್ಲ. ವಾಲ್ಮೀಕಿ ಸಮುದಾಯಕ್ಕೆ ಅನ್ಯಾಯವಾದರೂ ಸಚಿವರು ಮಾತನಾಡು ವುದಿಲ್ಲ ಎಂದರು.

ಸತೀಶ ಜಾರಕಿಹೊಳಿ ಒಬ್ಬ ಸೀಜನ್ ಪಾಲಿಟಿಕ್ಸ್, ಗಿಮಿಕ್‌ದಿಂದ ಚುನಾವಣೆಯನ್ನು ಗೆಲ್ಲಲು ಹೊರಟ್ಟಿದ್ದಾರೆ. ಆದರೆ, ಸಮುದಾಯದವರಿಗೆ ಒಳಮೀಸಲಾತಿಯಲ್ಲಿ ಕಡಿಮೆಯಾದರೂ ತುಟಿಬಿಡಲಿಲ್ಲ, ತಮ್ಮ ಸ್ವಾರ್ಥಕ್ಕೆ ಪ್ರಚಾರ ನಡೆಸುತ್ತಿದ್ದಾರೆ. ಸಮುದಾಯಕ್ಕೆ ಮಾತ್ರ ನ್ಯಾಯ ಕೊಡಿಸುವ ಕೆಲಸ ಮಾಡಲಿಲ್ಲ ಎಂದರು.

ಎಸ್ಸಿ ಪಟ್ಟಿಯಲ್ಲಿ ಇರಲಿ

ಲಂಬಾಣಿ,ಕೊರಮ, ಕೊರಚ, ಭೋವಿ ಸೇರಿದಂತೆ ಇನ್ನಿತರ ಸಣ್ಣ ಸಮುದಾಯವನ್ನು ಎಸ್ಸಿ ಪಟ್ಟಿಯಿಂದ ತೆಗೆಯಬಾರದು ಮತ್ತು 101 ಜಾತಿಗಳು ಕೂಡ ಎಸ್ಸಿ ಪಟ್ಟಿಯಲ್ಲಿ ಇರಬೇಕು ಎಂದು ಕೇಂದ್ರಕ್ಕೆ ಶಿಫಾರಸು ಮಾಡಿ ಕಳುಹಿಸಿದ್ದು ಬಿಜೆಪಿ ಸರ್ಕಾರದಲ್ಲಿದ್ದಾಗ, ಸುಪ್ರೀಂಕೋರ್ಟ್ ಕೂಡ ನಾವು ಕಳುಹಿಸಿದ್ದ ಶಿಫಾರಸು ಎತ್ತಿ ಹಿಡಿದಿದೆ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಹೇಳಿದರು.

ಕೇಂದ್ರ ವಿರುದ್ಧ ಟೀಕೆ ಸಲ್ಲದು: ಬಿವೈವಿ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವು ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದರಲ್ಲೇ 3 ವರ್ಷಗಳ ಕಾಲಹರಣ ಮಾಡಿದೆ. ಆದರೆ, ಮೋದಿ ಅವರ ಜನಪರ ಕಾಳಜಿ ಏನೆಂಬುದನ್ನು ರಾಜ್ಯದ ಮುಖ್ಯಮಂತ್ರಿ, ಅವರ ಸಚಿವಸಂಪುಟದ ಸದಸ್ಯರು ಅರ್ಥ ಮಾಡಿಕೊಳ್ಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.



ಮಾಧ್ಯಮ ಪ್ರತಿನಿಧಿಗಳ ಜತೆ ಶುಕ್ರವಾರ ಮಾತನಾಡಿ, ಪ್ರಧಾನಿಯವರು ತಮ್ಮ ನಿರ್ಧಾರದಿಂದ ದೇಶದಲ್ಲಿ ಪೆಟ್ರೋಲ್-ಡೀಸೆಲ್ ಮೇಲೆ ಅಬಕಾರಿ ಸುಂಕ 10 ರೂ. ಕಡಿಮೆ ಮಾಡಿದ್ದಾರೆ. ಜನರ ಮೇಲೆ ಬೀಳುವ ಹೊರೆಯನ್ನು ಕೇಂದ್ರ ಸರ್ಕಾರವೇ ಜವಾಬ್ದಾರಿ ತೆಗೆದುಕೊಳ್ಳುವ ಮೂಲಕ ದೇಶದ ಸಾಮಾನ್ಯ ಜನರ ಪರವಾಗಿ ದೃಢನಿರ್ಧಾರ ತೆಗೆದು ಕೊಂಡಿದ್ದಾರೆ. ಯುದ್ಧದ ಈ ಸಂದರ್ಭದಲ್ಲಿ ರಾಜ್ಯ- ದೇಶದ ಜನತೆ ಪರವಾಗಿ ಹೆಮ್ಮೆಯ ಪ್ರಧಾನಮಂತ್ರಿ ಮೋದಿ ಅವರಿಗೆ ಹಾಗೂ ಪೆಟ್ರೋಲಿಯಂ ಸಚಿವರಿಗೆ ಅಭಿನಂದನೆಗಳನ್ನು ತಿಳಿಸಲು ಬಯಸುವುದಾಗಿ ಹೇಳಿದರು.

ಅಮೆರಿಕ, ಆಸ್ಟ್ರೇಲಿಯ ಮೊದಲಾದ ಕಡೆ ಜನರ ಮೇಲೆ ಶೇ. 25, ಶೇ. 30ರಷ್ಟು ಹೊರೆ ಬೀಳುವಂತಾಗಿದೆ. ಆದರೆ, ಅಬಕಾರಿ ಸುಂಕ ಕಡಿಮೆ ಮಾಡುವ ಕೇಂದ್ರ ಸರ್ಕಾರದ ದೃಢನಿರ್ಧಾರದಿಂದ ಜನರಿಗೆ ಅನುಕೂಲ ಆಗುತ್ತಿದೆ. ಇದು ಸ್ವಾಗತಾರ್ಹ ಎಂದು ತಿಳಿಸಿದರು.

ತಮ್ಮ ವೈಫಲ್ಯಗಳನ್ನು ಮುಚ್ಚಿ ಹಾಕುವ ಸಲುವಾಗಿ ಬೇರೆಯವರ ಮೇಲೆ ಗೂಬೆ ಕೂರಿಸುವ ಚಾಳಿ, ಚಟ ಕಾಂಗ್ರೆಸ್ಸಿನವರಿಗೆ ಮುಂಚಿನಿಂದಲೂ ಬಂದಿದೆ. ಕೇಂದ್ರವನ್ನು ದೂರುತ್ತಲೇ ಮುಖ್ಯಮಂತ್ರಿಗಳು 3 ವರ್ಷಗಳ ಅವಧಿ ಪೂರೈಸಿದ್ದಾರೆ. ಅದು ಬಿಟ್ಟು ಬೇರೆ ಏನು ಸಾಧನೆ ಮಾಡಿದ್ದಾರೆ? ಕಳೆದ 3 ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನೆ ಏನು? ಜನರೂ ಇದನ್ನು ಪ್ರಶ್ನಿಸುತ್ತಿದ್ದಾರೆ ಎಂದರು.

ಐಪಿಎಲ್ ಟಿಕೆಟ್ ಹೇಳಿಕೆಗಿಲ್ಲ ಸಮ್ಮತಿ

ಶಾಸಕರಿಗೆ ಐಪಿಎಲ್ ಟಿಕೆಟ್ ವಿಚಾರದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಗುರುವಾರ ಆಡಳಿತ ಪಕ್ಷ, ಪ್ರತಿಪಕ್ಷಗಳ ಶಾಸಕರ ಹೇಳಿಕೆ ಗಮನಿಸಿದ್ದೇನೆ. ವೈಯಕ್ತಿಕವಾಗಿ ಅವರ ಹೇಳಿಕೆಗಳನ್ನು ಒಪ್ಪುವುದಿಲ್ಲ. ರಾಜಕಾರಣಿಗಳೆಂದರೆ, ಜನಸಾಮಾನ್ಯರು ನಮ್ಮನ್ನು ಯಾವ ರೀತಿ ನೋಡುತ್ತಾರೆ ಎಂಬುದನ್ನು ಪತ್ರಿಕೆಗಳು, ಟಿ.ವಿ.ಗಳಲ್ಲಿ ನೋಡುತ್ತಿದ್ದೇವೆ. ಕಳೆದ ಬಾರಿ ಇದೇ ಐಪಿಎಲ್ ಮ್ಯಾಚ್ ಸಂದರ್ಭದಲ್ಲಿ ಆಡಳಿತ ಪಕ್ಷದ ಮೂರ್ಖತನದಿಂದ 11 ಜನ ಮುಗ್ಧರು ಪ್ರಾಣ ಕಳೆದುಕೊಂಡರು. ಅದನ್ನು ರಾಜ್ಯದ, ದೇಶದ ಜನರು ಮರೆತಿಲ್ಲ. ಇಂಥ ಸಂದರ್ಭದಲ್ಲಿ ಇಂಥ ಹೇಳಿಕೆಗಳ ಅವಶ್ಯಕತೆ ಇತ್ತೇ ಎಂಬುದು ನನಗಂತೂ ಅರ್ಥವಾಗುವುದಿಲ್ಲ. ನಾನಿದರ ಪರವಾಗಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ಒಬ್ಬ ಶಾಸಕ, ಜನಪ್ರತಿನಿಧಿ ಆಗಿರುವವರು ಜನಸಾಮಾನ್ಯರಿಗಿಂತ ವಿಭಿನ್ನ, ವಿಐಪಿ ಎಂಬುದು ಖಂಡಿತವಾಗಿ ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಪ್ರತಿಕ್ರಿಯೆ ನೀಡಿದರು. ಇದಕ್ಕೆ ನನ್ನ ಬೆಂಬಲ ಇಲ್ಲ ಎಂದು ಹೇಳಿದರು.

ಕಡ್ಡಾಯವಾಗಿ ವೇತನಸಹಿತ ರಜೆ

ಬೆಂಗಳೂರು: ರಾಜ್ಯದ 2 ವಿಧಾನ ಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪ ಚುನಾವಣೆಯ ಹಿನ್ನೆಲೆಯಲ್ಲಿ, ಮತದಾನದ ದಿನದಂದು ಅರ್ಹ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ವೇತನ ಸಹಿತ ರಜೆ ಘೋಷಿಸಿ ಕಾರ್ಮಿಕ ಇಲಾಖೆ ಆದೇಶ ಹೊರಡಿಸಿದೆ.

ಚುನಾವಣಾ ಕ್ಷೇತ್ರಗಳಾದ 24-ಬಾಗಲಕೋಟೆ ಹಾಗೂ 107-ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಏ.9ರಂದು ಚುನಾವಣೆ ನಡೆಯಲಿದೆ. ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾರರಾಗಿ ನೋಂದಾಯಿತರಾಗಿರುವ ಎಲ್ಲಾ ಅರ್ಹ ಕಾರ್ಮಿಕರಿಗೆ ಈ ರಜೆ ಅನ್ವಯವಾಗಲಿದೆ. 1963ರ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಹಾಗೂ ಹಬ್ಬದ ರಜಾದಿನಗಳು) ಕಾಯ್ದೆಯ ಕಲಂ 3-ಎ ಪ್ರಕಾರ ಈ ರಜೆಯನ್ನು ನೀಡಲಾಗುತ್ತಿದೆ.

ಇದಕ್ಕೆ ಸಂಬಂಧಪಟ್ಟ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಉದ್ದಿಮೆಗಳು ತಮ್ಮಲ್ಲಿ ಕೆಲಸ ಮಾಡುವ ಅರ್ಹ ಕಾರ್ಮಿಕರಿಗೆ ಅಂದು ಕಡ್ಡಾಯವಾಗಿ ವೇತನ ಸಹಿತ ರಜೆ ನೀಡಬೇಕು. ಕಾರ್ಮಿಕರು ತಮ್ಮ ಸಾಂವಿಧಾನಿಕ ಹಕ್ಕಾದ ಮತದಾನವನ್ನು ಚಲಾಯಿಸಲು ಮಾಲೀಕರು ಪೂರಕ ವಾತಾವರಣ ಕಲ್ಪಿಸಿಕೊಡಬೇಕು ಎಂದು ಕಾರ್ಮಿಕ ಆಯುಕ್ತರು ತಿಳಿಸಿದ್ದಾರೆ.

ಧಾರವಾಡದಂತೆ ಅಕ್ಸಾ ಸಂಘಟನೆಯಿಂದ ಕಲಬುರಗಿಯಲ್ಲಿ ಬೃಹತ್ ಪ್ರತಿಭಟನೆ

ಸರ್ಕಾರ ಕೂಡಲೇ ನೇಮಕಾತಿ ಪ್ರಕ್ರಿಯೆ ಮಾಡಲಿ

ಕಲಬುರಗಿ: ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಾಂತಕುಮಾರ್ ನೇತೃತ್ವದಲ್ಲಿ ಧಾರವಾಡ ಮಾದರಿಯಂತೆ ಕಲಬುರಗಿ ನಗರದಲ್ಲಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಮಾಡಬೇಕೆಂದು ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಜಗತ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿದ ಪ್ರತಿಭಟನಾಕಾರರು, ವಿವಿಧ ಬೇಡಿಕೆಗಳ ಬ್ಯಾನರ್ ಹಿಡಿದು ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತ ಪಡಿಸಿ, ರಾಜ್ಯದಲ್ಲಿನ ವಿವಿಧ ಇಲಾಖೆಗಳಲ್ಲಿನ 56,432 ಖಾಲಿ ಹುದ್ದೆಗಳ ನೇಮಕಾತಿಗೆ ತಕ್ಷಣ ಅಧಿಸೂಚನೆ ಹೊರಡಿಸಬೇಕು ಹಾಗೂ 8 ತಿಂಗಳೊಳಗಾಗಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.



ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಾಂತಕುಮಾರ್, ಕಳೆದ 3 ವರ್ಷಗಳಿಂದ ಯಾವುದೇ ರೀತಿಯ ಹುದ್ದೆಗಳ ನೇಮಕಾತಿ ರಾಜ್ಯ ಸರ್ಕಾರ ಮಾಡಿಕೊಂಡಿಲ್ಲ. ಇದರಿಂದ ಉದ್ಯೋಗಾವಕಾಶಗಳ ಕೊರತೆಯಿಂದ ಯುವಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದಲ್ಲದೆ, ಕೆಪಿಎಸ್ಸಿಯಲ್ಲಿ ನಡೆದಿರುವ ಕೆಎಎಸ್, ಸಿಟಿಐ, ಪಿಡಿಒ ಸೇರಿದಂತೆ ವಿವಿಧ ನೇಮಕಾತಿಗಳಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಹಿನ್ನೆಲೆ ಈ ಎಲ್ಲಾ ಪ್ರಕರಣಗಳನ್ನು ಕೇಂದ್ರ ತನಿಖಾ ಸಂಸ್ಥೆಯಾದ ಸಿಬಿಐಗೆ ಒಪ್ಪಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.


ಬಿಟ್ಟಿ ಭಾಗ್ಯ ಬೇಡ, ನಮಗೆ ಉದ್ಯೋಗ ಬೇಕು. ಸರ್ಕಾರ ತಕ್ಷಣ ಎಚ್ಚೆತ್ತು ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ರಾಜ್ಯಾದ್ಯಂತ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿ ಯುವಕರ ಶಕ್ತಿ ಏನೆಂಬುದು ಸರ್ಕಾರಕ್ಕೆ ತೋರಿಸಬೇಕಾಗುತ್ತದೆ.
■ **ಕಾಂತಕುಮಾರ್,** ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ

ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ಶಿವಸೇನಾ ಪಕ್ಷದ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ, ಕನ್ನಡ ಪರ ಸಂಘಟನೆಯ ರವಿ ದೇಗಾಂವ್, ಸಚಿನ ಕಡಗಂಚಿ, ಶಿವ ಅಷ್ಟಗಿ, ಹಿಂದೂ ಮುಖಂಡರಾದ ಸಿದ್ರಾಮಯ್ಯ ಹಿರೇಮಠ, ಗುರುಶಾಂತ ಟೆಂಗಳಿ ಸೇರಿದಂತೆ ಹಲವು ಸಂಘಟನೆಗಳ ಪ್ರಮುಖರು ಭಾಗವಹಿಸಿದ್ದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಲಿಖಿತ ಸೂಚನೆ

ಅರಣ್ಯಭೂಮಿ ಮರು ವಶಕ್ಕೆ ಕ್ರಮ

ಬೆಂಗಳೂರು: ಬೆಂಗಳೂರು ಉತ್ತರ ತಾಲೂಕು ಜಾರಕಬಂಡೆ ಶ್ರೀಗಂಧದ ಕಾವಲ್‌ನಲ್ಲಿ ವಾಯುಪಡೆಯ ವಶದಲ್ಲಿರುವ 444 ಎಕರೆ ಅರಣ್ಯಭೂಮಿಯ ಮರು ವಶಕ್ಕೆ ಕೂಡಲೇ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64 ಎ ಅಡಿ ಪ್ರಕ್ರಿಯೆ ಆರಂಭಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಲಿಖಿತ ಸೂಚನೆ ನೀಡಿದ್ದಾರೆ.



ಈ ಸಂಬಂಧ ಅಪರ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಿಗೆ 2 ಪ್ರತ್ಯೇಕ ಸೂಚನೆ ನೀಡಿರುವ ಅವರು, ಜಾರಕ ಬಂಡೆ ಕಾವಲ್ ಅರಣ್ಯ ಪ್ರದೇಶದಲ್ಲಿ ವಾಯುಪಡೆಗೆ ನೀಡಲಾಗಿದ್ದ 452 ಎಕರೆ 4 ಗುಂಟೆ ಭೂ ಮಂಜೂರಾತಿ ಯನ್ನು ರಾಜ್ಯ ಸರ್ಕಾರ 2017ರ ಅಕ್ಟೋಬರ್ 9ರಂದು ರದ್ದುಗೊಳಿಸಿದೆ. ಇದನ್ನು ಅತ್ಯಗತ್ಯವಾದ ಶ್ವಾಸತಾಣವಾಗಿ ಉಳಿಸಲು ತೀರ್ಮಾನಿಸಲಾಗಿದ್ದು, ಕೂಡಲೇ ತೆರವಿಗೆ ಕ್ರಮ ವಹಿಸುವಂತೆ ಸೂಚಿಸಿದ್ದಾರೆ.

ರಾಷ್ಟ್ರೀಯ ಹಿತದ ದೃಷ್ಟಿಯಿಂದ ಭೂಮಂಜೂರಾತಿ ರದ್ದುಪಡಿಸಿದ ಬಳಿಕವೂ ಭಾರತೀಯ ವಾಯುಪಡೆ ಈ ಭೂಮಿ ಯನ್ನು ಬಳಸಲು, ಅರಣ್ಯ (ಸಂರಕ್ಷಣಾ)ಕಾಯ್ದೆ-1980 ರಡಿಯಲ್ಲಿ ನಿಯಮಾನುಸಾರ ಅರ್ಜಿ ಸಲ್ಲಿಸಿ ಪರ್ಯಾಯ ಭೂಮಿ ನೀಡುವಂತೆ ತಿಳಿಸಿದ್ದರೂ ವಾಯುಪಡೆ ನಿಯಮ ಉಲ್ಲಂಘಿಸಿದೆ.

ಉರುಳು ಹಾಕಿದವರ ವಿರುದ್ಧ ಕಾನೂನು ಕ್ರಮ

ಬೆಂಗಳೂರು: ನಾಗರಹೊಳೆ ಕಾಡಿನ ಮೇಟಿಕುಪ್ಪೆ ವಲಯದ ಅರಣ್ಯದ ಗಡಿಯಿಂದ 300 ಮೀಟರ್ ದೂರದ ಜಮೀನಿನಲ್ಲಿ ಅಕ್ರಮವಾಗಿ ಅಳವಡಿಸಿದ್ದ ಉರುಳಿಗೆ 3 ವರ್ಷದ ಹುಲಿ ಬಲಿಯಾಗಿರುವ ಬಗ್ಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ದುಃಖ ವ್ಯಕ್ತಪಡಿಸಿದ್ದಾರೆ. ಈ ದುರ್ಘಟನೆಯ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತಂಡದಿಂದ ತನಿಖೆ ಮಾಡಿಸಿ, ಸಿಬ್ಬಂದಿ ಗಸ್ತು ಕಾರ್ಯದಲ್ಲಿ ಲೋಪ ಎಸಗಿದ್ದಲ್ಲಿ ಕ್ರಮ ಕೈಗೊಳ್ಳಲು ಮತ್ತು ಉರುಳು ಹಾಕಿದವರ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸಲು ಮತ್ತು ಇಂತಹ ಘಟನೆಗಳು ಮರುಕಳಿಸದಂತೆ ಕಾಡಿನಂಚಿನ ಜಮೀನುಗಳಲ್ಲಿ ಉರುಳು ತೆರವಿಗೆ ಕ್ರಮ ವಹಿಸಲು ಸೂಚಿಸಿದ್ದಾರೆ.

ಸಂಪಾದಕೀಯ

ಹೊಣೆಗೇಡಿ ವರ್ತನೆ ಸಲ್ಲದು

ಕೊಲ್ಲಿಯಲ್ಲಿ ಈಗ ನಡೆಯುತ್ತಿರುವುದು ಭಾರತ ಸಾರಿದ ಯುದ್ಧವಲ್ಲ. ಭಾರತವು ಅದರಲ್ಲಿ ಪಾಲ್ಗೊಂಡೂ ಇಲ್ಲ. ಯುದ್ಧನಿರತ ರಾಷ್ಟ್ರಗಳಿಂದ ಸಮಾನ ಅಂತರ ಕಾಯ್ದುಕೊಂಡು ದೇಶದ ಹಿತಾಸಕ್ತಿಯನ್ನಷ್ಟೆ ಗಮನದಲ್ಲಿಟ್ಟುಕೊಂಡು ಭಾರತ ಸರಕಾರವು ವ್ಯವಹರಿಸುತ್ತಿದೆ. ಕೊಲ್ಲಿ ಯುದ್ಧವು ಭಾರತವನ್ನಷ್ಟೇ ಅಲ್ಲದೆ ವಿಶ್ವದ ಎಲ್ಲಾ ರಾಷ್ಟ್ರಗಳನ್ನೂ ಬಾಧಿಸುತ್ತಿದೆ. ಅದಕ್ಕೆ ಕಾರಣ ಪೆಟ್ರೋಲಿಯಂ



ತೈಲ ಪೂರೈಕೆಯ ಕೇಂದ್ರದಲ್ಲೇ ಯುದ್ಧ ನಡೆಯುತ್ತಿರುವುದು. ತೈಲ ಪೂರೈಕೆಯನ್ನು ನಿರಂತರವಾಗಿಡಲು ಭಾರತವು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಕೇವಲ ಒಂದು ರಾಷ್ಟವನ್ನಷ್ಟೇ ಅವಲಂಬಿಸದೆ ಸುಮಾರು 40 ದೇಶಗಳಿಂದ ತನಗೆ ಬೇಕಾದಂತಹ ತೈಲ ಮತ್ತು ಎಲ್‌ಪಿಜಿ ಪಡೆಯುತ್ತಿರುವುದರಿಂದ ಇತರ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಬಿಕ್ಕಟ್ಟು ಇನ್ನೂ ನಿಯಂತ್ರಣದ ಹಂತದಲ್ಲೇ ಇದೆ. ಇಂತಹ ಸಂದರ್ಭದಲ್ಲಿ ಸರಕಾರದ ಪ್ರಯತ್ನಗಳಿಗೆ ಬೆಂಬಲ ನೀಡುವುದು, ಸಹಕಾರ ನೀಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಎಲ್ಲಾ ರಾಜಕೀಯ ಪಕ್ಷಗಳೂ ಈ ಸಂದರ್ಭದಲ್ಲಿ ಸರಕಾರದೊಂದಿಗೆ ಸಹಕರಿಸಬೇಕಾದುದು, ದೇಶದಲ್ಲಿ ಪರಿಸ್ಥಿತಿ ಹದಗೆಡದಂತೆ ಹೊಣೆಗಾರಿಕೆಯಿಂದ ವರ್ತಿಸಬೇಕಾದುದು ಕರ್ತವ್ಯ.

ದುರಂತವೆಂದರೆ, ಬಹುತೇಕ ವಿರೋಧ ಪಕ್ಷಗಳು ಜನರಲ್ಲಿ ಅನವಶ್ಯ ಭಯಭೀತಿ ಸೃಷ್ಟಿಸುತ್ತಾ ಅರಾಜಕತೆ ಸೃಷ್ಟಿಸುವ ಪ್ರಯತ್ನ ಮಾಡುತ್ತಿವೆ. ಅಡುಗೆ ಅನಿಲ, ಪೆಟ್ರೋಲಿಯಂ ಉತ್ಪನ್ನಗಳ ಲಭ್ಯತೆ ಕುರಿತಂತೆ ಸುಳ್ಳು ಸುದ್ದಿ ಹರಡುತ್ತಿವೆ. ಲಾಕ್‌ಡೌನ್ ಹೇರಲು ಸರಕಾರವು ಸಿದ್ಧತೆ ನಡೆಸುತ್ತಿದೆ ಎಂದು ವದಂತಿ ಹರಡುತ್ತಿವೆ. ಸಿಲಿಂಡರ್‌ನಲ್ಲಿ ಗ್ಯಾಸ್ ಪ್ರಮಾಣವೇ ಕಡಿಮೆಯಾಗಿದೆ ಎಂದು ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಆರೋಪಿಸಿ ಬಳಿಕ ಅವರಿಗೆ ಸತ್ಯದರ್ಶನ ಮಾಡಿಸಿದ ಬಳಿಕ ಪೆಚ್ಚಾದರು. ಕಾಂಗ್ರೆಸ್ ಪಕ್ಷವಂತೂ ದೇಶಾದ್ಯಂತ ಅಡುಗೆ ಅನಿಲಕ್ಕೆ ಸಂಬಂಧಿಸಿ ಪ್ರತಿಭಟನೆ ನಡೆಸುತ್ತಿದೆ. ವಿಪರ್ಯಾಸವೆಂದರೆ ಕಾಂಗ್ರೆಸ್ ಮುಖಂಡರ ಮನೆಗಳಲ್ಲೆ ಅಕ್ರಮವಾಗಿ ದಾಸ್ತಾನು ಮಾಡಿದ ಸಿಲಿಂಡರ್‌ಗಳು ಕಾಣಸಿಗುತ್ತಿವೆ. ಇವರೆಲ್ಲರೂ ಭಾರತ ಸರಕಾರವೇ ಯುದ್ಧ ಘೋಷಿಸಿದ್ದು, ಭಾರತ ಸರಕಾರವೇ ಇಲ್ಲಿನ ತೈಲ ಬಿಕ್ಕಟ್ಟಿಗೆ ಕಾರಣ ಎಂಬಂತೆ ಹೇಳಿಕೆ ನೀಡುತ್ತಿರುವುದು ಬೇಜವಾಬ್ದಾರಿತನದ ಪರಮಾವಧಿ. ಕೆಲವು ಎಲ್‌ಪಿಜಿ ಪೂರೈಕೆದಾರರು ಕೂಡಾ ಈ ಸಂದರ್ಭವನ್ನು ಬಳಸಿಕೊಂಡು ಜನರನ್ನು ಶೋಷಿಸುತ್ತಿರುವುದು ದೇಶಹಿತದ ನಡೆಯಲ್ಲ. ಇವೆಲ್ಲ ವದಂತಿಗಳನ್ನು ನಿರಾಕರಿಸುವ ಸಲುವಾಗಿ ಸರಕಾರವು ಇದೀಗ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಇಳಿಸುವ ಮೂಲಕ ಜಾಣ ನಡೆಯಿಟ್ಟಿದೆ.

ಉತ್ತಮರಿಗೆ ವಿರೋಧಿಗಳಿಲ್ಲ

ನ ವೈರಾಣ್ಯಭಿಜಾನಂತಿ ಗುಣಾನ್ ಪಶ್ಯಂತಿ ನಾಗುಣಾನ್ ।
ವಿರೋಧಂ ನಾಗಚ್ಛಂತಿ ಯೇ ತೇ ಉತ್ತಮಪೂರುಷಾಃ ॥ -ಮಹಾಭಾರತ

ವೈರವನ್ನು ಭಾವಿಸದೇ, ದುರ್ಗುಣಗಳನ್ನು ಲೆಕ್ಕಿಸದೇ ಗುಣಗಳನ್ನು ಮಾತ್ರ ನೋಡುವವರು, ಯಾರೊಡನೆಯೂ ವಿರೋಧವನ್ನು ಕಟ್ಟಿಕೊಳ್ಳದೇ ಇರುವವರು ಉತ್ತಮ ಪುರುಷರು –ಎಂಬುದು ಶ್ಲೋಕಾರ್ಥ.

ಜನರನ್ನು ಉತ್ತಮರು, ಮಧ್ಯಮರು ಹಾಗೂ ಕನಿಷ್ಠರು ಎಂದು ವಿಭಾಗಿಸುತ್ತಾರೆ. ಜೀವನವನ್ನು ಪರರ ಹಿತಕ್ಕಾಗಿಯೇ ಮೀಸಲಿರಿಸಿ, ಸ್ವಾರ್ಥದ ಲವಲೇಶವೂ ಇಲ್ಲದವರು ಉತ್ತಮರು. ಸ್ವಾರ್ಥದ ಕೆಲಸವನ್ನು ಯಾರನ್ನೂ ವಂಚಿಸದೇ ನಡೆಸಿಕೊಂಡು ಹೋಗುವುದರ ಜತೆಗೆ ಸಮಯ ಮಾಡಿಕೊಂಡು ಪರೋಪಕಾರವನ್ನು ಕರ್ತವ್ಯಬುದ್ಧಿಯಿಂದ ನಡೆಸುವವರನ್ನು ಮಧ್ಯಮರು ಎಂದು ಗುರುತಿಸುತ್ತಾರೆ. ಸ್ವಾರ್ಥಕ್ಕಾಗಿ ಎಲ್ಲವನ್ನೂ ಬಳಸಿಕೊಳ್ಳುವವರು, ಇತರರಿಗೆ ಕೆಡುಕಾಗುವುದನ್ನು ಲೆಕ್ಕಿಸದೇ ಸ್ವಾರ್ಥಸಾಧನೆಯಲ್ಲಿ

ಶ್ಲೋಕ ಸಾಗರ



• ಡಾ.ಸೋಂದಾ ಭಾಸ್ಕರ ಭಟ್

ತೊಡಗುವವರು ಕನಿಷ್ಠರು. ಇನ್ನೊಬ್ಬರನ್ನು ಹಿಂಸಿಸಿ ಸಂತೋಷ ಪಡುವವರನ್ನು ಅಧಮಾಧಮರು ಎಂದು ನಾಲ್ಕನೇ ಸ್ತರದವರನ್ನಾಗಿ ಗುರುತಿಸುತ್ತಾರೆ.

ಉತ್ತಮರಾಗಿ ಬದುಕುವುದೇ ನಿಜವಾದ ಬದುಕು. ಇದರಲ್ಲಿಯೇ ಮಾನವೀಯ ಮೌಲ್ಯವಿರುವುದು. ಎಲ್ಲರೂ ಬದುಕಬೇಕಾದುದು ಹೀಗೇನೆ. ಭೌತಿಕ ವಿಷಯದತ್ತ ಆಕರ್ಷಿತರಾದ ನಾವು ಈ ಮೌಲ್ಯವನ್ನು ಕಡೆಗಣಿಸುತ್ತಾ ಬಂದಿದ್ದೇವೆ. ಉತ್ತಮರಾಗಲು ಸಾಧ್ಯವಾಗದಿದ್ದರೂ ಮಧ್ಯಮರಾಗಿ ಬದುಕಬಹುದಿತ್ತು ಅದನ್ನೂ ಕಡೆಗಣಿಸಿ ಇಂದಿನ ಮನುಜರು ಇನ್ನೂ ಕೆಳಕ್ಕಿಳಿದಿರುವುದು ಮನುಕುಲದ ದುರಂತ; ಮನುಕುಲಕ್ಕೆ ಮಾಡುವ ಅಪಚಾರ.

ಉತ್ತಮರಾಗಬೇಕೆನಿಸಿದರೆ ಅವರ ಜೀವನಕ್ರಮ ಹೇಗಿರಬೇಕು ಎಂಬುದನ್ನು ಪ್ರಕೃತಕಾರಿಕೆ ನಿರೂಪಿಸುತ್ತದೆ. ಯಾರೊಡನೆಯೂ ವೈರವನ್ನು ಸಾಧಿಸದೇ ಬದುಕನ್ನು ಸಾಗಿಸಬೇಕು. ವೈರದಿಂದ ವೈರವು ಉಪಶಮನಗೊಳ್ಳದು. ಪ್ರೀತಿಯಿಂದಲೇ ವೈರವನ್ನು ಗೆಲ್ಲಬೇಕು. ಇದು ಕಷ್ಟಕರವೆನಿಸಿದರೂ ಅಸಾಧ್ಯವೇನಲ್ಲ. ನಿರಂತರ ಸಾಧನೆ ಬೇಕು.

ಉತ್ತಮರು ಗುಣಗ್ರಾಹಿಗಳೇ ವಿನಾ ದುರ್ಗುಣಗಳನ್ನು ಗ್ರಹಿಸುವವರಲ್ಲ. ಸಾಮಾನ್ಯರಾದ ನಾವು ವ್ಯಕ್ತಿಯಲ್ಲಿರುವ ಗುಣಗಳಿಗಿಂತಲೂ ದೋಷವನ್ನೇ ಹೆಚ್ಚಾಗಿ ಗುರುತಿಸುತ್ತೇವೆ. ದೋಷ ಯಾವುದರಲಿಲ್ಲ? ಯಾರಲ್ಲಿಲ್ಲ? ದೋಷವನ್ನೇ ಹುಡುಕುವ ಸ್ವಭಾವವನ್ನು ಬಿಟ್ಟು ಗುಣಗಳನ್ನು ಗುರುತಿಸಿ, ಮೆಚ್ಚುಗೆ ವ್ಯಕ್ತಪಡಿಸಬೇಕು. ಈ ಕ್ರಿಯೆ ನಿರಂತರತೆಯನ್ನು ಪಡೆದುಕೊಂಡರೆ ಉತ್ತಮರಾಗಲು ಸಾಧ್ಯ. ದೋಷವನ್ನೇ ಗುರುತಿಸಲು ಮುಂದಾದರೆ ವೈಮನಸ್ಯಕ್ಕೆ ಕಾರಣವಾಗುತ್ತದೆ. ಗುಣವನ್ನು ಗುರುತಿಸುತ್ತಾ ಸಾಗಿದರೆ ಸ್ನೇಹ ವೃದ್ಧಿಯಾಗುತ್ತದೆ; ಪರಿವರ್ತನೆಯೂ ಸಾಧ್ಯ. ಇಂತಹ ಸ್ವಭಾವವನ್ನು ಉತ್ತಮರಲ್ಲಿ ಕಾಣಬಹುದು.

ಉತ್ತಮರು ಯಾರೊಡನೆಯೂ ದ್ವೇಷವನ್ನು ಸಾಧಿಸುವುದಿಲ್ಲ ಯಾರ ವಿರೋಧವನ್ನೂ ಕಟ್ಟಿಕೊಳ್ಳುವುದಿಲ್ಲ. ವಿರೋಧಿಗಳನ್ನು ಪ್ರೀತಿ, ಸಜ್ಜನಿಕೆಗಳಿಂದಲೇ ಗೆಲ್ಲುತ್ತಾರೆ. ಸಣ್ಣ ಪುಟ್ಟ ಕಾರಣಗಳಿಗಾಗಿ ವಿರೋಧ ಕಾಣಿಸಿಕೊಳ್ಳುತ್ತದೆ. ಅವುಗಳನ್ನು ಸರಿಪಡಿಸಿಕೊಂಡು, ಹೊಂದಿಸಿಕೊಂಡು ಸಾಗಿಸಿದರೆ ವಿರೋಧವುಂಟಾಗಲಾರದು.

ಅವಿರೋಧದಿಂದ ವಿರೋಧವನ್ನು ಗೆಲ್ಲುವುದೇ ಸನಾತನ ಧರ್ಮದ ಲಕ್ಷಣ. ಇದನ್ನು ಅರಿತರೆ ವಿರೋಧಕ್ಕೂ, ವೈರಕ್ಕೂ ಆಸ್ಪದವಿರಲಾರದು. ಉತ್ತಮರು ಕಡಿಮೆಯಾದಷ್ಟೂ ಸಮಾಜದಲ್ಲಿ ದುಷ್ಟರು ಹೆಚ್ಚುತ್ತಾ ಹೋಗುತ್ತಾರೆ. ಸಮಾಜದ ವ್ಯವಸ್ಥೆ ಕುಸಿಯುತ್ತದೆ. ಆದ್ದರಿಂದ ಉತ್ತಮ ಸಂಸ್ಕಾರ, ಸನ್ನಡತೆ ಸದ್ವಿಚಾರಗಳನ್ನು ಕಲಿಸಿಕೊಟ್ಟು ಉತ್ತಮರನ್ನಾಗಿ ರೂಪಿಸುವ ಪ್ರಯತ್ನವನ್ನು ಮಾಡಬೇಕಾಗಿದೆ.

ವಿಶುದ್ಧ ಚಕ್ರಕ್ಕೆ ನಿತ್ಯಾನುಷ್ಠಾನ

ನೀವು ಏನು ಮಾಡಿದರೂ ಸರಿಹೋಗುತ್ತಿಲ್ಲ ಎಂದಾದರೆ ಭಗವದ್ಗೀತೆಯಲ್ಲಿ ಹೇಳಿದ ಐದು ಸೂತ್ರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಿ.

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ನೀವು ಅದ್ಭುತ ಮಾತುಗಾರರು ಆಗಬೇಕಾ?! ಮೊದಲು ಓದಬೇಕು. ಅಪಾರ ಪ್ರಮಾಣದ ಪುಸ್ತಕಗಳನ್ನು ಓದಬೇಕು. ಉದಾಹರಣೆಗೆ ನೀವು ಯಕ್ಷಗಾನ ಕಲಿಯುತ್ತೀರಿ. ಅಲ್ಲಿ ನಿಮಗೆ ಕುಣಿತವನ್ನು ಹೇಳಿಕೊಡುತ್ತಾರೆ. ಬಳಿಕ ಕತೆಯನ್ನು ಹೇಳುತ್ತಾರೆ. ಹಾಗೂ ಅದಕ್ಕೆ ತಕ್ಕಂತಹಾ ಸಂಭಾಷಣೆಗಳನ್ನು ಹೇಳಿಕೊಡುತ್ತಾರೆ. ಪ್ರಸಾಧನ ಮಾಡಿಕೊಳ್ಳುವುದನ್ನು, ವೇಷಭೂಷಣ ಹಾಕಿಕೊಳ್ಳುವುದನ್ನು, ಧ್ವನಿಯ ಏರಿಳಿತಗಳು ಹೇಗಿರಬೇಕು ಎನ್ನುವುದನ್ನು, ಪಾತ್ರದ ಪರಿಚಯವನ್ನು, ಪದ್ಯಗಳನ್ನು ಹೀಗೆ ಒಂದು ಪ್ರಸಂಗಕ್ಕೆ ಅನಿವಾರ್ಯವಾಗಿ ಮತ್ತು ಅಗತ್ಯವಾಗಿ ಬೇಕಾಗುವ ಎಲ್ಲಾ ಸಂಗತಿಗಳನ್ನು ಹೇಳಿಕೊಡುತ್ತಾರೆ. ನೀವು ಅವುಗಳನ್ನು ಕಲಿಯುತ್ತೀರಿ ಹಾಗೂ ನೀವು ಆ ಪ್ರಸಂಗದಲ್ಲಿ ಪಾತ್ರಧಾರಿಗಳಾಗುತ್ತೀರಿ.

ನೀವು ಕಲಿತಿರುವುದಷ್ಟನ್ನೇ ಅಲ್ಲಿ ಪ್ರದರ್ಶನ ಮಾಡಿದರೆ ಅದು ಒಂದು ಸಾಮಾನ್ಯ ಸಂಗತಿಯಾಗುತ್ತದೆ. ಅದೇ ನೀವು ಕಲಿತಿರುವುದಕ್ಕೆ ಪೂರಕವಾಗಿ ಇನ್ನಷ್ಟು ಜೋಡಿಸಿದರೆ ಅದು ಸಾಮಾನ್ಯಕ್ಕಿಂತ ಸ್ವಲ್ಪ ಹೆಚ್ಚು ಕಲಿತಂತೆ ಮತ್ತು ಪ್ರದರ್ಶನ ಮಾಡಿದಂತೆ ಆಗುತ್ತದೆ. ಹಾಗೆ ನೀವು ಮಾಡಲು ಅದೇ ಪ್ರಸಂಗವನ್ನು ಯಾರ್‍ಯಾರು ಹೇಗೆಲ್ಲಾ ಮಾಡಿದರು, ಹೇಗೆಲ್ಲಾ ಕುಣಿತ, ಮಾತುಗಳನ್ನು ಆಡಿದರು ಎಂಬುದನ್ನು ನೋಡಿದರೆ ಸಾಕು. ಆದರೆ ಅದನ್ನು ಅನುಕರಣೆ ಎನ್ನುತ್ತೇವೆ. ಪ್ರಾರಂಭದಲ್ಲಿ ಅನುಕರಣೆ ಸಹಜ. ಬಳಿಕ ಅದು ಜನಕ್ಕೆ ಸಹ್ಯವಾಗುವುದಿಲ್ಲ. ಆಗ ನೀವು ಹೊಸತನ್ನು ನೀಡಲೇ ಬೇಕಾಗುತ್ತದೆ. ಅದಕ್ಕೆ ನಿಮ್ಮದೇ ಆದ ಓದು ಬೇಕು. ಜ್ಞಾನ ಬೇಕು. ಅರಿವು ಬೇಕು. ತಜ್ಞರೊಂದಿಗೆ ಸಂವಾದ ಮಾಡಬೇಕು ಹೀಗೆ ಏನೆಲ್ಲಾ ಮಾಡಿದಾಗ ನಿಮ್ಮ ಪಾತ್ರ ವಿಭಿನ್ನವಾಗುತ್ತಾ ಹೋಗುತ್ತದೆ. ಅನನ್ಯವಾಗುತ್ತಾ ಹೋಗುತ್ತದೆ. ಅದ್ವಿತೀಯವಾಗುತ್ತಾ ಹೋಗುತ್ತದೆ. ನಿಮಗೆ ನೀವೇ ಸರಿಸಾಟಿಯಾಗುತ್ತೀರಿ. ಇದಕ್ಕೆ ನಿಮ್ಮ ಕುಣಿತ ಮಾತ್ರ ಕಾರಣವಲ್ಲ, ಮಾತೂ ಸಹಾ ಕಾರಣವಾಗಿರುತ್ತದೆ. ನೀವು ಕುಣಿಯುವ ಹೆಜ್ಜೆಗಳು ಅವೇ ಆಗಿರುತ್ತವೆ, ಆದರೆ ಭಂಗಿ ಬೇರೆಯಾಗಿರುತ್ತವೆ. ಆಡುವ ಮಾತುಗಳು ದಿನೇ ದಿನೇ ತಜ್ಞತೆಯನ್ನು ಪಡೆಯುತ್ತಾ ಹೋಗುತ್ತವೆ. ನಿಮಗೊಂದು ಸ್ಥಾನವನ್ನು ಕಲ್ಪಿಸುತ್ತದೆ. ನಿಮ್ಮನ್ನು ಎತ್ತರೆತ್ತರಕ್ಕೆ ಏರಿಸುತ್ತದೆ. ಅದಕ್ಕೆ ನಿಮಗೆ ಓದಿನ ಸಂಸ್ಕೃತಿ ಇರಲೇಬೇಕಾಗುತ್ತದೆ. ಓದಿದ್ದನ್ನು ಚರ್ಚೆಗೆ ಒಳಪಡಿಸಿ ಸರಿಯಾದದ್ದನ್ನು ಗ್ರಹಿಸುವ ಮನಸ್ಥಿತಿ ಇರಬೇಕಾಗುತ್ತದೆ. ಹಾಗೂ ಅವುಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ಪ್ರಸ್ತುತ ಪಡಿಸುವ ಜಾಣ್ಮೆ ಇರಬೇಕಾಗುತ್ತದೆ. ಅದಕ್ಕೆ ವಿಶುದ್ಧ ಚಕ್ರದ ನಿತ್ಯಾನುಷ್ಠಾನ ಬೇಕಾಗುತ್ತದೆ.

ಅದು ಗಮಕ ಕಲೆ ಇರಬಹುದು, ಸಂಗೀತ ಇರಬಹುದು, ಭಾಷಣ ಕಲೆ ಇರಬಹುದು, ಮಂತ್ರ ಪಠಣ ಇರಬಹುದು, ಸಂದರ್ಶನ ಕಲೆ ಇರಬಹುದು, ಚರ್ಚಾಸ್ಪರ್ಧೆ ಇರಬಹುದು, ಈವೆಂಟ್ ಮ್ಯಾನೇಜ್ಮೆಂಟ್ ಇರಬಹುದು, ನಿರೂಪಣೆ ಇರಬಹುದು... ಹೀಗೆ ಮಾತಿಗೆ ಸಂಬಂಧಿಸಿದ ಸಂಗತಿಗಳಿಗೆಲ್ಲಾ ವಿಶುದ್ಧ ಚಕ್ರದ ಸಹಾಯ ಅಗತ್ಯ. ಮತ್ತು ವಿಶುದ್ಧ ಚಕ್ರ ಸಮತೋಲನದಲ್ಲಿ ಇದ್ದಾಗ ಮಾತ್ರ ನೀವು ಒಂದರ ಹಿಂದೊಂದು ಯಶಸ್ಸನ್ನು ಸಾಧಿಸುತ್ತಾ ಬರುತ್ತೀರಿ. ಹಾಗೂ ನೀವು ನಿಮ್ಮ ವಿಶುದ್ಧ ಚಕ್ರವನ್ನು ಪಾಲೀಶ್ ಮಾಡುತ್ತಿದ್ದರೆ ಮಾತ್ರ ನಿಮ್ಮ ಯಶಸ್ಸು ನಿರಂತರವಾಗಿ ಇರುತ್ತದೆ.

ನಿರಂತರತೆ

ದಿನಾಲೂ ದೊಡ್ಡದಾಗಿ ಮಂತ್ರೋಚ್ಚಾರಣೆಯನ್ನು ಮಾಡಿ. ದೊಡ್ಡದಾಗಿ ಮಾತನಾಡಿ, ದೊಡ್ಡದಾಗಿ ಹಾಡನ್ನು ಹೇಳಿ, ದೊಡ್ಡದಾಗಿ ಶ್ಲೋಕಗಳನ್ನು ಹೇಳಿ, ದೊಡ್ಡದಾಗಿ ಭಜನೆ ಮಾಡಿ. ಸೂತ್ರಗಳನ್ನು, ಬೀಜಾಕ್ಷರಗಳನ್ನು, ಬೀಜ ಮಂತ್ರಗಳನ್ನು, ಸಹಸ್ರ ನಾಮಗಳನ್ನು ಬಾಯಿಪಾಠ ಮಾಡಿ. ಎಲ್ಲವನ್ನೂ ನಿತ್ಯವೂ ಅನುಷ್ಠಾನ ಮಾಡಬೇಕು. ನಿತ್ಯವೂ ಬಿಡದೇ ಹೇಳಲೇಬೇಕು. ಅದೂ ಸ್ನಾನ ಮಾಡಿ, ಮಡಿ ಉಟ್ಟು, ದೇವರಿಗೆ ದೀಪ ಹಚ್ಚಿ, ಅಲ್ಲಿಯೇ ಮಣೆ ಹಾಕಿಕೊಂಡು ಕುಳಿತು, ಭಕ್ತಿಯಿಂದ ಕೈಮುಗಿದು ಅಥವಾ ದೀಪವನ್ನು ನೋಡುತ್ತಾ ಇವೆಲ್ಲವನ್ನೂ ಅಥವಾ ಇವುಗಳಲ್ಲಿ ಯಾವುದಾದರೂ ಒಂದನ್ನು ಮಾಡಬೇಕು. ಕೇವಲ ವಿಟ್ಠಲ, ವಿಟ್ಠಲ, ವಿಟ್ಠಲ, ವಿಟ್ಠಲ ಎನ್ನುವ ಸ್ಮರಣೆ ಮಾತ್ರದಿಂದ ನಿಮ್ಮ ಉಸಿರಾಟ ಕ್ರಿಯೆ ಸರಾಗವಾಗುತ್ತದೆ ಎಂದಾದರೆ, ಹೃದಯಾಘಾತದಿಂದ ನೀವು ಪಾರಾಗುತ್ತೀರಿ ಎಂದಾದರೆ ವಿವಿಧ ಬೀಜ ಮಂತ್ರಗಳ ಶಕ್ತಿಯನ್ನು ಊಹಿಸಲೂ ಆಗದು.

ಅಭಿವ್ಯಕ್ತಿಶೀಲ ಬರವಣಿಗೆ

ನೀವು ನಿತ್ಯವೂ ಡೈರಿಯನ್ನು ಬರೆಯುತ್ತೀರಾ?! ಹಾಗಿದ್ದರೆ ನಿಮ್ಮಲ್ಲಿ ಒಂದು ಶಿಸ್ತು ಇದ್ದೇ ಇರುತ್ತದೆ. ನಿತ್ಯವೂ ಯಾವುದೇ ಕೆಲಸವನ್ನು ಎಚ್ಚರಿಕೆಯಿಂದ ಮಾಡುವುದು ಒಂದು ಶಿಸ್ತು. ನೀವು ಎಚ್ಚರಿಕೆಯಿಂದ ಇದ್ದಾಗ ಅಂತಹಾ ಕೆಲಸಗಳನ್ನು ಮಾಡುವಾಗ ತರ್ಕ ಮಾಡಿಯೇ ಮಾಡುತ್ತೀರಿ. ತರ್ಕ ಮಾಡಿದಾಗ ವಿಷಯದ ವಿವಿಧ ಮುಖಗಳ ಅನಾವರಣವಾಗುತ್ತದೆ. ಆಗ ಅವುಗಳಲ್ಲಿ ನಿಮಗೆ ಯಾವುದು ಸೂಕ್ತ ಎನ್ನುವುದು ಗೊತ್ತಾಗುತ್ತದೆ. ಹೀಗೆ ನೀವು ಸರಿಯಾದುದನ್ನೇ ಮಾಡುತ್ತೀರಿ. ಮತ್ತು ಹಾಗೆ ಮಾಡಿದ್ದನ್ನು ಬರೆಯುತ್ತೀರಿ. ಇವೆಲ್ಲಾ ನಿಯಮಿತವಾದ ಹಂತಗಳು. ಒಮ್ಮೆ ನಿಮಗೆ ಹಂತಗಳಲ್ಲಿ ಕೆಲಸ ಮಾಡುವುದು ಅಭ್ಯಾಸವಾದರೆ, ನೀವು ಯಾವುದನ್ನೂ ಗಾಬರಿಯಿಂದ, ಆತುರದಿಂದ ಮಾಡದೇ ಕ್ರಮಬದ್ಧವಾಗಿ ಮಾಡುತ್ತೀರಿ. ಆಗ ನಿಮಗೆ ಸೋಲು ಎದುರಾಗುವುದೇ ಇಲ್ಲ.

ಒಮ್ಮೆ ನಿಮಗೆ ಮುಂದೇನು ಮಾಡಬೇಕೆಂದು ತಿಳಿಯುವುದಿಲ್ಲ ಎಂದಿಟ್ಟುಕೊಳ್ಳೋಣ ಅಥವಾ ಏನು ಮಾಡಿದರೂ ಸರಿಹೋಗುತ್ತಿಲ್ಲ ಎಂದಾದರೆ ಆಗ ಭಗವದ್ಗೀತೆಯಲ್ಲಿ ಹೇಳಿದ ಐದು ಸೂತ್ರಗಳು ನೆನಪಿನಲ್ಲಿ ಇದ್ದರೆ ಸಾಕು:

1. ಸುಮ್ಮನಿದ್ದು ಬಿಡಿ: ವಿಷಯವನ್ನು ವಿರೋಧಿಸಲೂ ಹೋಗಬೇಡಿ. ಪರವಾಗಿ ಮಾತನಾಡಲೂ ಹೋಗಬೇಡಿರಿ. ನಿಮ್ಮ ಪರವಾದ ಸಾಕ್ಷಿಗಳನ್ನು ಮೌನವಾಗಿ ಯಾರಿಗೂ ಗೊತ್ತಾಗದಂತೆ ಸಂಗ್ರಹಿಸಿಟ್ಟುಕೊಳ್ಳಿ. ನೀವು ಸುಮ್ಮನಿರುವುದು, ತಡ ಮಾಡುತ್ತಿರುವುದರ ಅರ್ಥ ನೀವು ಅದನ್ನು ಒಪ್ಪಿಕೊಂಡಿಲ್ಲ ಎಂದಲ್ಲಾ ಅಥವಾ ತಿರಸ್ಕರಿಸಿದಿರೀ ಎಂದೂ ಅಲ್ಲ!! ನಿಮ್ಮ ಮಾರ್ಗವನ್ನು ಪುನರ್ ಪರಿಶೀಲನೆ ಮಾಡಿಕೊಳ್ಳುತ್ತಿದ್ದೀರಿ ಅಷ್ಟೆ. ಎಲ್ಲೂ ಕೀಳರಿಮೆಗೆ ಒಳಗಾಗಬೇಡಿ, ಎಲ್ಲೂ ಸೋಲಿನ ಭಯಕ್ಕೆ ಒಳಗಾಗಬೇಡಿ, ಎಲ್ಲೂ ಹತಾಶೆಗೆ ಒಳಗಾಗಬೇಡಿ. ತಣ್ಣಗೆ ಇರಿ ಮತ್ತು ಸ್ಪಷ್ಟತೆಗಾಗಿ ಕಾಯುತ್ತಿರಿ. ನಿಮ್ಮ ತಟಸ್ಥತೆಯಲ್ಲಿ ನಿಮಗೆ ಎಲ್ಲವೂ ಸ್ಪಷ್ಟವಾಗುತ್ತಾ ಪರಿಹಾರ ಹೊಳೆಯುತ್ತದೆ.

2. ಫಲಿತಾಂಶದಿಂದ ಕಳಚಿಕೊಳ್ಳಿ: ಅಂದರೆ ಎಲ್ಲರೂ ಮತ್ತು ನೀವು ಫಲಿತಾಂಶಕ್ಕೆ ಅಂಟಿಕೊಂಡಿರುತ್ತೀರಿ. ಯಾವುದೋ ಒಂದು ಫಲಿತಾಂಶಕ್ಕಾಗಿ ಸದಾ ನಿರೀಕ್ಷೆ ಇದ್ದೇ ಇರುತ್ತದೆ. ಫಲಿತಾಂಶ ನಿಮಗೆ ಬೇಕಾದಂತೆ ಇರುವುದಿಲ್ಲ ಎಂದಾದರೆ ನೀವೇಕೆ ಆ ಕೆಲಸವನ್ನು ಮಾಡಬೇಕು ಎನ್ನುವ ಪ್ರಶ್ನೆ ನಿಮ್ಮನ್ನು ಕಾಡತೊಡಗುತ್ತದೆ. ನೀವು ಹೀಗೆ ಯೋಚಿಸುತ್ತಾ ಸಾಮಾನ್ಯರಾಗಿ ಬಿಡುತ್ತೀರಿ. ಬದಲಿಗೆ ನಿಮ್ಮ ಕರ್ತವ್ಯವನ್ನು ಯಾವುದೇ ಹೆಚ್ಚಿನ ನಿರೀಕ್ಷೆಗಳಿಲ್ಲದೇ ಮಾಡುತ್ತಿರಿ. ನಿಮ್ಮ ಪರಿಶ್ರಮಕ್ಕೆ ಒಳ್ಳೆಯ ಫಲಿತಾಂಶ ತಡವಾದರೂ ಸಿಕ್ಕಿಯೇ ಸಿಗುತ್ತದೆ. ಅಲ್ಲಿಯವರೆಗೆ ನೀವು ಕಾಯಬೇಕು. ಆಗ ನಿಮ್ಮೊಳಗೆ ಸೇರಿಕೊಳ್ಳುತ್ತಾ ಬಂದ ತಾಳ್ಮೆಯೇ ನಿಮ್ಮ ದೊಡ್ಡ ಶಕ್ತಿಯಾಗಿ ಮಾರ್ಪಾಡಾಗುತ್ತದೆ. ಶಾಂತಿ ನಿಮ್ಮೊಳಗೆ ವ್ಯಾಪಿಸುತ್ತಾ ಬರುತ್ತದೆ. ನೀವು ಎಲ್ಲಾ ಕಾಲದಲ್ಲೂ ಶಾಂತಿಯಿಂದ ಇದ್ದೀರಿ ಎಂದಾದರೆ ನಿಮ್ಮ ಆರೋಗ್ಯ ಎಂದಿಗೂ ಹಾಳಾಗುವುದಿಲ್ಲ. ಸಮಸ್ಯೆಗಳು ನಿಮ್ಮನ್ನು ಕಾಡುವುದಿಲ್ಲ. ತೊಡಕುಗಳು ನಿಮ್ಮನ್ನು ಬಾಧಿಸುವುದಿಲ್ಲ.

3. ಹೋರಾಟ ನಿಮ್ಮನ್ನು ಗಟ್ಟಿಯಾಗಿಸುತ್ತದೆ: ಕಷ್ಟ ಕಾಲಗಳು ಎಲ್ಲರಿಗೂ ಎದುರಾಗುತ್ತವೆ. ಅವುಗಳನ್ನು ಎದುರಿಸುವುದನ್ನು ಕಲಿತರೆ ನೀವು ಗಟ್ಟಿಯಾಗುತ್ತಾ ಹೋಗುತ್ತೀರಿ. ಒಂದೊಂದೇ ಕಷ್ಟಗಳನ್ನು ಎದುರಿಸಿದಂತೆ ನಿಮಗೆ ಜೀವನದ ಅನುಭವ ಹೆಚ್ಚುತ್ತಾ ಹೋಗುತ್ತದೆ. ಆರ್ಥಿಕ ಸಂಕಷ್ಟ, ಸಾಮಾಜಿಕ ಸ್ಥಾನಮಾನ, ಸಾಂಸ್ಕೃತಿಕ ಅಭಿವ್ಯಕ್ತಿ, ಶಿಕ್ಷಣ ಹೀಗೆ ಒಂದೊಂದೂ ಒಂದೊಂದು ಕಾಲಮಾನದಲ್ಲಿ ನಿಮ್ಮನ್ನು ಬಂದು ಆವರಿಸಿಕೊಳ್ಳುತ್ತವೆ. ನೀವು ಅವುಗಳನ್ನು ನಿಭಾಯಿಸುತ್ತಾ ಬರಲೇಬೇಕು.

ಅದಕ್ಕೆ ಪೂರ್ವ ತಯಾರಿ ಎನ್ನುವುದು ಏನೂ ಇರುವುದಿಲ್ಲ. ಬಂದಿದ್ದನ್ನು ಎದುರಿಸುವುದು ಅಷ್ಟೇ. ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕವಾದ ಪರಿಹಾರ ಇರುವುದೇ ಹೊರತು ಹಿಂದಿನದೇ ದಾರಿಯಲ್ಲ!! ಹೀಗೆ ನೀವು ಹಳೆಯ ಅನುಭವದಿಂದ ಹೊಸತನ್ನು ಎದುರಿಸುವುದನ್ನು ಕಲಿಯುತ್ತೇನೆ ಎಂದಾದರೆ ಅದು ಅಸಾಧ್ಯ. ಹಾಗಂತಾ ಪ್ರತಿ ಹೋರಾಟವೂ ನಿಮಗೆ ಒಂದೊಂದು ಡಿಗ್ರಿಯನ್ನು ಕೊಡುತ್ತದೆ.

4. ನಿಮ್ಮ ಮನಸ್ಸನ್ನು ಹರಿತಗೊಳಿಸಿ: ನೀವು ಸತತವಾಗಿ ಕೆಲಸ ಮಾಡುತ್ತಲೇ ಇದ್ದೀರಾ? ನೀವು ಯಾವಾಗಲೂ ಏನಾದರೊಂದು ಸಂಗತಿಯ ಕುರಿತು ಚಿಂತಿಸುತ್ತಲೇ ಇದ್ದೀರಾ? ನೀವು ಸದಾ ಸಮಸ್ಯೆಗಳನ್ನು ಎದುರಿಸುತ್ತಲೇ ಇದ್ದೀರಾ? ಹಾಗಿದ್ದರೆ ನೀವು ಎಂದಿಗೂ ಸುಖವಾಗಿ ಇರಲು ಸಾಧ್ಯವೇ ಇಲ್ಲ. ನೆಮ್ಮದಿಯಂತೂ ನಿಮ್ಮಿಂದ ಮೈಲು ದೂರದಲ್ಲಿ ಇರುತ್ತದೆ. ನೀವು ಎಲ್ಲವನ್ನೂ ಮರೆತು ಆರಾಮಾಗಿ, ಶೂನ್ಯರಾಗಿ, ಮನಸ್ಸಿನಲ್ಲಿ ಇರುವುದನ್ನೆಲ್ಲಾ ಖಾಲಿ ಮಾಡಿ. ಆಗ ಪರಿಹಾರ ಗೋಚರಿಸಲು ಶುರುವಾಗುತ್ತದೆ.

5. ನಿಮ್ಮ ಪ್ಲಾನ್‌ನ್ನು ನೀವು ಮೊದಲು ನಂಬಿ: ನಿಮ್ಮನ್ನು ಬಿಟ್ಟು ಏನೆಲ್ಲಾ ಹೊರಟು ಹೋಯಿತೋ ಅವೆಲ್ಲಾ ನಿಮಗೆ ನಷ್ಟವಲ್ಲ. ಬಿಟ್ಟು ಹೋಗಿದ್ದಕ್ಕಿಂತಲೂ ಸುಂದರವಾದ, ಲಾಭದಾಯಕ, ಗೆಲುವು ನೀಡುವ ಮತ್ಯಾವುದೋ ಒಂದು ಸಂಗತಿ ನಿಮಗಾಗಿ ಕಾಯುತ್ತಿರಬಹುದು. ಅಥವಾ ಬಂದು ಸೇರಬಹುದು. ಅದಕ್ಕಾಗಿಯೇ ಈ ಸಂಗತಿ ನಿಮ್ಮನ್ನು ಬಿಟ್ಟ ಹೋಯಿತು ಎಂದುಕೊಳ್ಳಿ. ಹೊಸ ಪ್ಲಾನ್ ಮಾಡಿ.

ಬಯಲು ಆಲಯದೊಳಗೋ ಆಲಯವು ಬಯಲೊಳಗೋ?

ಆಧ್ಯಾತ್ಮಿಕ ಶಕ್ತಿಯೇ ಹಿಂದು ಸಮಾಜದ ಹಾಗೂ ಭಾರತದ ಜೀವಾಳವಾಗಿದೆ.

ಒಳನೋಟ

• ಹೆ.ಬಾ. ಮಲ್ಯ



ಇದೇನು, ಇರಾನ್ ಯುದ್ಧ, ಜಾಗತಿಕ ಇಂಧನ ಸಮಸ್ಯೆ, ಟ್ರಂಪ್, ಮೋದಿ ಬಗ್ಗೆ, ಎಲ್‌ಪಿಜಿ ಸಿಲಿಂಡರ್ ಬಗ್ಗೆ ಬರೆಯುವುದನ್ನು ಬಿಟ್ಟು ಇದ್ದಕ್ಕಿದ್ದ ಹಾಗೆ ಅಧ್ಯಾತ್ಮದ ಬಗ್ಗೆ ಬರೆಯುತ್ತಿದ್ದೇನೆ ಎಂದು ಕೆಲವರಿಗೆ ವಿಚಿತ್ರ ಎನಿಸಬಹುದು. ಮಾನವನಿಗೆ, ವಿಶೇಷವಾಗಿ ಭಾರತದಲ್ಲಿ ಹುಟ್ಟಿ ಬೆಳೆದವನಿಗೆ ಅರಿವು ಮೂಡುತ್ತಾ ಹೋದಂತೆ, ಅನುಭಗಳಾಗುತ್ತಾ ಹೋದಂತೆ, ನಮ್ಮ ಜೀವನದಲ್ಲಿ ಹಾಗೂ ಜಗತ್ತಿನಲ್ಲಿ ನಡೆಯುವ ಅನೇಕ ಸಂಗತಿಗಳು ತನ್ನ ಕೈಯಲ್ಲಿಲ್ಲ, ಯಾವುದೋ ಅಜ್ಞಾತ ಶಕ್ತಿ ನಮ್ಮ ಜೀವನವನ್ನು, ಜಗತ್ತಿನ ವ್ಯವಹಾರಗಳನ್ನು ನಿಯಂತ್ರಿಸುತ್ತಿದೆ ಎಂಬುದು ಗೋಚರವಾಗುತ್ತಾ ಹೋಗುತ್ತದೆ. ಇಲ್ಲೇ ಅಧ್ಯಾತ್ಮ ಪ್ರಾರಂಭವಾಗುವುದು, ವೈರಾಗ್ಯ ಮೂಡುವುದು. ಒಂದೇ ವಾರದೊಳಗೆ ಇರಾನನ್ನು ಮುಗಿಸಿಬಿಡಬಹುದು ಎಂದು ಟ್ರಂಪ್ ಭಾವಿಸಿದ್ದರು. ಆದರೆ ಈಗ ಯುದ್ಧ ಅವರಿಗೇ ತಿರುಗುಬಾಣವಾಗುತ್ತಿದೆಯೋ ಎನಿಸುತ್ತಿದೆ. ತಿಂಗಳು ಕಳೆಯುತ್ತಾ ಬಂದರೂ ಇರಾನ್ ಮಂಡಿಯೂರಿಲ್ಲ. ಕ್ಷಿಪಣಿಗಳನ್ನು ಎಸೆಯುತ್ತಲೇ ಇದೆ. ಮೂರು ವರ್ಷಗಳ ಹಿಂದೆ ರಷ್ಯಾದ ಪುಟಿನ್ ಪುಟ್ಟ ದೇಶವಾದ ಉಕ್ರೇನನ್ನು ಕೆಲವೇ ದಿವಸಗಳಲ್ಲಿ ಮಣಿಸಬಹುದು ಎಂದು ಭಾವಿಸಿದ್ದರು. ಆದರೆ ಇಂದಿಗೂ ಉಕ್ರೇನ್ ಯುದ್ಧ ನಡೆಯುತ್ತಲೇ ಇದೆ. ಭಾರತದಲ್ಲಿ ಮೋದಿಯನ್ನು ಹೇಗಾದರೂ ಮಾಡಿ ಅಧಿಕಾರದಿಂದಿಳಿಸಿ ತಾನು ಪ್ರಧಾನಿಯಾಗಬೇಕೆಂದು ರಾಹುಲ್ ಗಾಂಧಿ ಇನ್ನಿಲ್ಲದ ಪ್ರಯತ್ನ ಮಾಡಿದರು. ಅಮೆರಿಕದ ಸಿ.ಐ.ಎ., ಜಾರ್ಜ್ ಸೊರೋಸ್ ಗ್ಯಾಂಗ್ ಮುಂತಾದವರು ಮೋದಿಯನ್ನು ಹಣಿಯಲು ಇನ್ನಿಲ್ಲದ ಪ್ರಯತ್ನ ನಡೆಸಿದರು. ಆದರೆ ಮೋದಿ ಇನ್ನೂ ಅಧಿಕಾರದಲ್ಲಿ ಭದ್ರವಾಗಿದ್ದಾರೆ. ಹಾಗಾದರೆ ಟ್ರಂಪ್, ಪುಟಿನ್ ಅವರುಗಳ ಯೋಜನೆ ಏಕೆ ಸಾಕಾರವಾಗಲಿಲ್ಲ. ಮೋದಿಯವರು ತಮ್ಮನ್ನು ಹಣಿಯುವ ರಹಸ್ಯ ಪ್ರಯತ್ನಗಳಿಂದ ಹೇಗೆ ಬದುಕುಳಿದರು, ಹೇಗೆ ಇನ್ನೂ ಅಧಿಕಾರದಲ್ಲಿದ್ದಾರೆ, ಅದಾವ ಶಕ್ತಿ ಈ ಎಲ್ಲ ಘಟನಾವಳಿಗಳ ಹಿಂದೆ ಕೆಲಸ ಮಾಡುತ್ತಿದೆ ಎಂಬ ಪ್ರಶ್ನೆ ಮೂಡುತ್ತದೆ. ಅದಕ್ಕೇ ಹೇಳಿದ್ದು ಅನೇಕ ಸಂಗತಿಗಳು ನಾವಂದುಕೊಂಡಂತೆ ನಡೆಯುವುದಿಲ್ಲ ಎಂದು. ಇಲ್ಲಿ ಅಧ್ಯಾತ್ಮದ ಬೀಜ ಮೊಳಕೆಯೊಡೆದು ಬೆಳೆಯಲಾರಂಭಿಸುವುದು.


ಎಲ್ಲವೂ ವಿಧಿಯಾಟ ಎಂದು ಭಾರತದ ಸಾಮಾನ್ಯ ಜನರು ಹೇಳುವುದನ್ನು ಮೂಢನಂಬಿಕೆ ಎನ್ನಲಾಗುವುದಿಲ್ಲ. ಅದೇನು ಆಗಬೇಕೆಂದಿದೆಯೋ ತನ್ನ ಪಾಡಿಗೆ ಆಗಿಯೇ ಆಗುತ್ತದೆ. ಇದು ಪ್ರತ್ಯಕ್ಷ ಅನುಭವ. ಆದರೆ ಈ ಅಧ್ಯಾತ್ಮ ಚಿಂತನೆ ಭಾರತದ್ದೇ ವಿಶೇಷತೆ. ಇತರ ಪಾಶ್ಚಾತ್ಯ ಕ್ರೈಸ್ತ ದೇಶಗಳಲ್ಲಾಗಲೀ, ಇಸ್ಲಾಮಿಕ್ ದೇಶಗಳಲ್ಲಾಗಲಿ ಆಧ್ಯಾತ್ಮಿಕತೆ ಎಂಬುದು ಕಾಣುವುದಿಲ್ಲ. ಅಲ್ಲಿನ 'ನಾನು' ಎಂಬ ದುರಹಂಕಾರ ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಗೊಂದಲ, ಸಮಸ್ಯೆಗಳಿಗೆ ಕಾರಣ. ಭಾರತದಲ್ಲಿ ಹಿಂದೆ ಚಿಕ್ಕಂದಿನಲ್ಲೇ ಆಧ್ಯಾತ್ಮಿಕತೆ ಶಿಕ್ಷಣ, ಕಥೆಗಳ ರೂಪದಲ್ಲಿ ಸಿಗುತ್ತಿತ್ತು. ಈಗ ಕಡಿಮೆಯಾಗುತ್ತಿದೆ. ಕನಕದಾಸರ ಗುರುಗಳು "ನಮ್ಮಲ್ಲಿ ಸ್ವರ್ಗಕ್ಕೆ ಯಾರು ಹೋಗಬಹುದು" ಎಂದು ಕೇಳಿದಾಗ ಎಲ್ಲಾ ಶಿಷ್ಯರೂ ಮೌನವಾದರು. ಕನಕದಾಸರು "ನಾನು ಹೋದರೆ ಹೋಗಬಹುದು" ಎಂದರು. ಮಿಕ್ಕ ಶಿಷ್ಯರಿಗೆ ಮನಸ್ಸಿನೊಳಗೇ ಕೋಪ ಬಂತು. ಆಗ ಗುರುಗಳು ನಕ್ಕು ಅದರ ಅರ್ಥ ಹೇಳಿದರು– "ನಾನು" ಎಂಬ ದುರಹಂಕಾರ ನಾಶವಾದರೆ ನಾನು ಹೋಗಬಹುದು ಎಂದು. ಆದರೆ ಅದು ಅಷ್ಟು ಸುಲಭವಲ್ಲ. ಹಾಗೆಯೇ ಇನ್ನೊಮ್ಮೆ ಗುರುಗಳು ಎಲ್ಲಾ ಶಿಷ್ಯರಿಗೂ ಒಂದೊಂದು ಬಾಳೆಹಣ್ಣನ್ನು ಕೊಟ್ಟು "ಯಾರೂ ಇಲ್ಲದ ಹಾಗೂ ಯಾರೂ ನೋಡದ ಜಾಗದಲ್ಲಿ ಈ ಹಣ್ಣನ್ನು ತಿಂದು ಬರಬೇಕು" ಎಂದು ಹಣ್ಣುಗಳನ್ನು ಕೊಟ್ಟರು. ಮಿಕ್ಕೆಲ್ಲರೂ ಎಲ್ಲೆಲ್ಲೋ ಅಡಗಿ ಕುಳಿತು ಹಣ್ಣು ತಿಂದು ಬಂದರು. ಕನಕದಾಸರು ಬಾಳೆಹಣ್ಣು ತಿನ್ನದೇ ಹಾಗೆ ಬಂದರು. ಯಾಕೆ ತಿನ್ನಲಿಲ್ಲ ಎಂದು ಕೇಳಿದಾಗ "ದೇವರು ಎಲ್ಲೆಡೆ ಇರುವನಲ್ಲವೇ? ಹಾಗಾಗಿ ತಿನ್ನಲಾಗಲಿಲ್ಲ" ಎಂದರು. ಇವು ಸಾಮಾನ್ಯ ಮಕ್ಕಳ ಕಥೆಗಳು ಎನ್ನಿಸಿದರೂ ಇವುಗಳಲ್ಲಿ ಅಡಗಿರುವ ಆಧ್ಯಾತ್ಮಿಕ ತತ್ವ ಬಹಳ ಗಹನವಾದದ್ದು. ನಿಗೂಢವಾದದ್ದು. ಸಹಸ್ರಾರು ವರ್ಷಗಳಿಂದ ಭಾರತದಲ್ಲಿ ಜನರು ತಮ್ಮ ಜೀವನದಲ್ಲಿ ಎದುರಾಗುವ ಕಷ್ಟಗಳಿಂದ, ಸೋಲುಗಳಿಂದ ಕಂಗೆಡದೆ ಅವುಗಳನ್ನು ಧೈರ್ಯವಾಗಿ ಎದುರಿಸಿ, " ಇದೆಲ್ಲ ವಿಧಿಯಾಟ. ತಾತ್ಕಾಲಿಕ ಸಮಸ್ಯೆ, ಕಾಲ ಹೋದಂತೆ ಈ ಕಷ್ಟ, ದುಃಖಗಳೆಲ್ಲ ಮುಗಿದು ಒಳ್ಳೆಯ ದಿನಗಳು ಬಂದೇ ಬರುತ್ತವೆ" ಎಂಬ ಆಶಾವಾದವನ್ನು ಬೆಳೆಸಿಕೊಳ್ಳುತ್ತಾ ಬಂದಿದ್ದರು. ಆತ್ಮಹತ್ಯೆಗೆ ಶರಣಾಗುತ್ತಿರಲಿಲ್ಲ. ವಿಧಿಯಾಟವೆಂದರೆ ಪಲಾಯನವಾದ ಅಲ್ಲ. ಮತ್ತೆ ಪ್ರಯತ್ನದಲ್ಲಿ ತೊಡಗುತ್ತಾರೆ. ಈ ಆಧ್ಯಾತ್ಮಿಕ ಶಕ್ತಿಯೇ ಹಿಂದು ಸಮಾಜದ ಜೀವಾಳ. ಭಾರತದ ಮೇಲೆ ಎಷ್ಟೊಂದು ಕಷ್ಟ ಪರಂಪರೆಗಳೆರಗಿ ಬಂದರೂ ಸಂಘರ್ಷ ನಿಲ್ಲಲಿಲ್ಲ. ನಾವು ಹಿಂದೆ ಏನೋ ತಪ್ಪು ಮಾಡಿರಬೇಕು, ಮುಂದೆ ಸರಿಯಾಗಿ ನಡೆದುಕೊಳ್ಳೋಣ. ಈಗ ನಮಗೆ ಕಷ್ಟ ಕೊಡುವವರೂ ಶಾಶ್ವತರೇನೂ ಅಲ್ಲ, ಅವರೂ ತಕ್ಕ ಪ್ರತಿಫಲ ಅನುಭವಿಸುತ್ತಾರೆ ಎಂಬ ಕರ್ಮಸಿದ್ಧಾಂತದ ಮೇಲೆ ನಂಬಿಕೆ. ಇವುಗಳೇ ಹಿಂದು ಸಮಾಜವನ್ನು ಇಂದಿಗೂ ಉಳಿಸಿಕೊಂಡು ಬಂದಿವೆ.

ಮಿಕ್ಕ ವಿದೇಶಿ ಜನಾಂಗಗಳಲ್ಲಿ ಇಂಥ ಶ್ರೇಷ್ಠ ಆಧ್ಯಾತ್ಮಿಕ ಮೌಲ್ಯಗಳು, ನಂಬಿಕೆಗಳು, ಧರ್ಮ ಇಲ್ಲದ್ದರಿಂದ ಅಲ್ಲಿನ ಗ್ರೀಕ್, ರೋಂ, ಈಜಿಪ್ಟ್, ಬೆಬಿಲೋನಿಯಾ, ಅಸ್ಸೀರಿಯಾ ಮುಂತಾದ ಶ್ರೇಷ್ಠ ಹಾಗೂ ಬಲಿಷ್ಠ ಸಂಸ್ಕೃತಿಗಳು, ಒಂದೊಮ್ಮೆ ಎಷ್ಟೋ ಉಚ್ಛ್ರಾಯ ಸ್ಥಿತಿಯಲ್ಲಿದ್ದಂಥವುಗಳು ಹೇಳ ಹೆಸರಿಲ್ಲದಂತೆ ನಾಶವಾಗಿ ಹೋದುವು. ಅದೇ ಪ್ರಾಚೀನ ಭಾರತ ಇಂದಿಗೂ ಉಸಿರಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ, ಸಹಸ್ರಾರು ವರ್ಷ ನಮ್ಮನ್ನು ಕಾಯ್ದುಕೊಂಡು ಬಂದ ಈ ಆಧ್ಯಾತ್ಮಿಕ ಮೌಲ್ಯಗಳು ಮಸುಕಾಗುತ್ತಿವೆ. ಅದರಿಂದಾಗಿ ಸಮಸ್ಯೆಗಳು. ಮತ್ತೆ ಅವುಗಳನ್ನು ಪುನರುಜ್ಜೀವನಗೊಳಿಸುವ ಅಗತ್ಯವಿದೆ. ಮಾತ್ರವಲ್ಲ ಜಗತ್ತಿಗೆ ನೀಡಬೇಕಾಗಿದೆ. ಆಗಲೇ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ. ಭಾರತ ಈ ಉದ್ದೇಶದಿಂದಲೇ ಇನ್ನೂ ಬದುಕಿದೆ. ಭಾರತ ಬದುಕಿದರೆ ಜಗತ್ತು ಬದುಕುತ್ತದೆ.

ಭಾರತದಲ್ಲಿ ಮಧ್ಯಯುಗೀನ ಕಾಲಖಂಡದಲ್ಲಿ ಮುಸ್ಲಿಂ ಆಕ್ರಮಣ, ದೌರ್ಜನ್ಯಗಳಿಂದ ಎಲ್ಲೆಡೆ ಕತ್ತಲು ಆವರಿಸಿದಂತಿತ್ತು. ಆಗ ದಾಸವರೇಣ್ಯರು, ಕೀರ್ತನಕಾರರು ಭಜನೆಗಳ ಮೂಲಕ, ಭಕ್ತಿ ಮಾರ್ಗದ ಮೂಲಕ ಗಹನವಾದ ಆಧ್ಯಾತ್ಮಿಕ ತತ್ವಗಳನ್ನು, ಮೌಲ್ಯಗಳನ್ನು ಸಾಮಾನ್ಯ ಜನರಲ್ಲಿ ಹರಡಿದರು. ಅದು ಆ ಕರಾಳ ಕಾಲಖಂಡದ ಅನಿವಾರ್ಯತೆಯಾಗಿತ್ತು. ಕನಕದಾಸರ "ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ" ಎಂಬ ಕೀರ್ತನೆಯಲ್ಲಿ ಗಹನವಾದ ಆಧ್ಯಾತ್ಮಿಕ ತತ್ವ ಅಡಗಿದೆ. ದೇವರು ಎಲ್ಲೆಡೆಯಲ್ಲೂ ಇದ್ದಾನೆ, ಅವನಿಲ್ಲದ ಜಾಗವೇ ಇಲ್ಲ ಎಂಬುದನ್ನು ದಾಸರ ಮೂಲಕ ಸಾಮಾನ್ಯ ಜನರೂ ಅರಿತುಕೊಂಡರು. ನಮ್ಮೊಳಗೂ ದೇವನಿದ್ದಾನೆ ಎಂಬುದು ಹಿಂದುಗಳ ನಂಬಿಕೆ. ಶಂಕರಾಚಾರ್ಯರು "ಅಹಂ ಬ್ರಹ್ಮಾಸ್ಮಿ ತತ್ವಮಸಿ" ಎಂದು ಹೇಳಿದ್ದು ಇದನ್ನೇ. "ನೀ ದೇಹದೊಳಗೋ ನಿನ್ನೊಳು ದೇಹವೋ" ಎಂದು ದಾಸರು ಭಗವಂತ ಹಾಗೂ ಮಾನವನನ್ನು ಪ್ರಶ್ನಿಸುತ್ತಾರೆ. ಇಲ್ಲಿ ದೇವರು ಎಂದಾಗ ಮೂರ್ತಿಗಳು, ಚಿತ್ರಗಳು ಆಗಿರದೆ ಪರಮಾತ್ಮ ಎಂಬ ಆ ಅನಂತಶಕ್ತಿ ಸಾಗರ ಎಂದು ಅರ್ಥ ಮಾಡಿಕೊಳ್ಳಬೇಕು. ದೇಹವನ್ನು ಒಂದು ಮಡಕೆಗೆ ಹೋಲಿಸಿದ್ದಾರೆ. ಆ ಅನಂತಶಕ್ತಿ ಸಾಗರವನ್ನು ಒಂದು ಮಹಾಜಲಸಾಗರ ಎಂದಿಟ್ಟುಕೊಳ್ಳೋಣ. ಅದರೊಳಗೆ ಓರ್ವ ಮುಳುಗುತಜ್ಞ ಆಕ್ಸಿಜನ್ ಮಾಸ್ಕ್ ಧರಿಸಿ ಮುಳುಗಿದಾಗ ಅದರೊಳಗೆ ಅವನಿಗೆ ಒಂದು ಲೋಕವೇ ಕಾಣುತ್ತದೆ. ಅದು ಜಗತ್ತು. ಅವನು ಒಂದು ಮಡಕೆಯನ್ನು ತೆಗೆದುಕೊಂಡು ಹೋದನೆಂದುಕೊಳ್ಳೋಣ. ಆ ಮಡಕೆ ಒಡೆದರೆ ಅದರೊಳಗಿನ ನೀರು ಸಾಗರದಲ್ಲಿ ಕರಗಿ ಹೋಗುತ್ತದೆ. ಶರೀರ ಎಂದರೆ ಮಡಕೆ, ಪಂಚಕೋಶಗಳಿಂದಾವೃತವಾದ ದೇಹ– ಅನ್ನಮಯ, ಪ್ರಾಣಮಯ, ಮನೋಮಯ, ಜ್ಞಾನಮಯ,ಆನಂದಮಯ. ಅದರೊಳಗೂ ಪರಮಾತ್ಮ ಶಕ್ತಿ ಇದೆ. ಈ ಕೋಶಗಳು ಹರಿದಾಗ ಒಳಗೂ ಪರಮಾತ್ಮನಿದ್ದಾನೆ ಎಂಬ ಸತ್ಯದ ಅರಿವಾಗುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ದಾಸರು ಹೇಳುತ್ತಾರೆ – "ಬಯಲು ಆಲಯದೊಳಗೋ ಆಲವು ಬಯಲೊಳಗೋ" ಎಂದು. ದೇವರೊಳಗೆ ಅಂದರೆ ಆ ಶಕ್ತಿ ಸಾಗರದೊಳಗೆ ನಾವಿದ್ದೇವೆ. ಆತ ಎಲ್ಲಾ ಠಾವಿನಲ್ಲಿದ್ದಾನೆ ಎಂದ ಮೇಲೆ ನಮ್ಮೊಳಗೂ ಇದ್ದಾನೆ. ಮಡಕೆ ಸಾಗರದೊಳಗೆ ಇದೆ. ಅದೇ ಸಾಗರ ಸಣ್ಣರೂಪದಲ್ಲಿ ಅಂದರೆ ಮಡಕೆಯ ಆಯಕ್ಕನುಗುಣವಾಗಿ ಮಡಕೆಯೊಳಗೂ ಇದೆ. ಪರಮಾತ್ಮನನ್ನು ಕುರಿತು ಹೇಳುವುದಾದರೆ ಬಯಲು ಎಂದರೆ ಬ್ರಹ್ಮಾಂಡ–ಜಗತ್ತು ಆತನದೇ ಸೃಷ್ಟಿಯಾದ್ದರಿಂದ ಆತನೊಳಗೇ ಇದೆ. ಹಾಗೇ ಬ್ರಹ್ಮಾಂಡ ಅಂದರೆ ಜಗತ್ತಿನೊಳಗೆ ಎಲ್ಲೆಡೆ ಅವನೇ ವ್ಯಾಪಿಸಿದ್ದಾನೆ. ಅವನಿಲ್ಲದ ಜಾಗವೇ ಇಲ್ಲ. ವ್ಯಕ್ತಿಯನ್ನು ಕುರಿತು ಹೇಳುವುದಾದರೆ ಈ ದೇಹವೇ ಆಲಯ, ಒಳಗಿರುವುದು ಬಯಲು, ಅಂದರೆ ಜಗತ್ತು. "ಬಯಲು –ಆಲಯವೆರಡು ಮನಸ್ಸಿನೊಳಗೋ?" ಎಂಬುದು ಮುಂದಿನ ಪ್ರಶ್ನೆ. ಇಂಥ ಗಹನವಾದ, ನಿಗೂಢವಾದ ಸೃಷ್ಟಿ–ಚೈತನ್ಯಗಳ ಅರ್ಥವನ್ನು ದಾಸರು ಸರಳ ಭಾಷೆಯಲ್ಲಿ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಹೇಳಿದ್ದಾರೆ. ಎಲ್ಲ ಹಿಂದುಗಳೂ ಮತ್ತೆ ತಮ್ಮ ಮೂಲ ಧರ್ಮ–ಚಿಂತನೆಗಳತ್ತ ಮರಳಬೇಕಾದ ಅಗತ್ಯವಿದೆ. ಆಗಲೇ ಭಾರತಕ್ಕೆ ಶಾಶ್ವತ ಭವಿಷ್ಯವಿದೆ ಎನ್ನಬಹುದು.

ಐವತ್ತು ವರ್ಷಗಳ ಸ್ಮೃತಿಪಥ: ಸಾಧನೆಗಳ ಸುಗಂಧಪಥ

• ಭಾನುಪ್ರಕಾಶ್. ಎಲ್



ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕೈಗಾರಿಕೆ ಮತ್ತು ಹಣಕಾಸಿನ ವಲಯದಲ್ಲಿ ಆಧುನಿಕ ನಿರ್ವಹಣಾ ಕೌಶಲ್ಯದಿಂದ ನಿಭಾಯಿಸುವ ಹೊಣೆಗಾರಿಕೆಯು ಹೆಚ್ಚಾಗತೊಡಗಿತ್ತು. ದೇಶದ ಬೆಳವಣಿಗೆಯಲ್ಲಿ ತಾಂತ್ರಿಕ ಕೌಶಲ್ಯದ ಜೊತೆಗೆ ನಿಪುಣ ವ್ಯವಸ್ಥಾಪಕರ ಅಗತ್ಯ ಸ್ಪಷ್ಟವಾಗಿ ಕಾಣಿಸಿತ್ತು. ದ್ವಿತೀಯ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳು ಭಾರತದಲ್ಲಿ ಭಾರೀ ಕೈಗಾರಿಕೆಗಳು ಮತ್ತು ಸಾರ್ವಜನಿಕ ಕ್ಷೇತ್ರದ ವಿಸ್ತರಣೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲು ಸಿದ್ಧವಾಗಿದ್ದವು. 'ಲೈಸನ್ಸರಾಜ್' ದಂತಹ ಜಟಿಲ ವ್ಯವಸ್ಥೆಯನ್ನು ನಿಭಾಯಿಸಲು ಸಮರ್ಥ ವ್ಯವಸ್ಥಾಪಕರು ಅತ್ಯಗತ್ಯವಾದರು. ಆದ್ದರಿಂದ ನಿರ್ವಹಣಾ ಶಿಕ್ಷಣದ ಹೊಸ ಶಕೆ ಭಾರತದಂತಹ ದೇಶದಲ್ಲಿ, ಅಭಿವೃದ್ಧಿಗೆ ಪೂರಕವಾದ ಪ್ರಮುಖ ಆದ್ಯತೆಯಾಯಿತು.

ಈ ಕ್ಷಿಪ್ರ ಪ್ರಗತಿ ಮತ್ತು ಅಗತ್ಯತೆಯನ್ನು ಮನಗಂಡು 1961ರಲ್ಲಿ ದೇಶದ ಮೊಟ್ಟ ಮೊದಲ ಐಐಎಂ (Indian Institute of Management) ಅಂದಿನ ಕಲ್ಕತಾದಲ್ಲಿ ಪ್ರಾರಂಭವಾಯಿತು. ಅದೇ ವರ್ಷ ಅಹಮದಾಬಾದ್‌ನಲ್ಲೂ ಸಹ ಐಐಎಂ ಪ್ರಾರಂಭವಾಯಿತು. ಈ ಶಿಕ್ಷಣಸಂಸ್ಥೆಗಳು 1970ರ ವೇಳೆಗೆ ಕೈಗಾರಿಕಾ ವಲಯದ ಮೇಲೆ ಪರಿಣಾಮ ಬೀರಲು ಆರಂಭಿಸಿದ್ದವು. ಈ ಮಹತ್ವದ ಕಾಲಘಟ್ಟದಲ್ಲಿ 1973ರಲ್ಲಿ ಬೆಂಗಳೂರಿನಲ್ಲಿ ದೇಶದ 3ನೇ ಐಐಎಂ ಜನ್ಮ ತಾಳಿತು.

1916 ರಲ್ಲಿ ಕರ್ನಾಟಕ ಸಾಂಸ್ಕೃತಿಕ ರಾಜಧಾನಿಯಲ್ಲಿ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾನಿಲಯವು ಭಾರತದ ನಿರ್ವಹಣಾ ಶಿಕ್ಷಣದ ಈ ಹೊಸಯುಗವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅಂದಿನ ಉಪಕುಲಪತಿಗಳಾಗಿದ್ದ ದಿ. ಪ್ರೊ. ದೇ. ಜವರೇಗೌಡ (ದೇಜಗೌ) ಮತ್ತು ವಾಣಿಜ್ಯ ವಿಭಾಗ ಅಂದಿನ ಮುಖ್ಯಸ್ಥರಾಗಿದ್ದ ದಿ. ಡಾ. ಜೆ.ಕೆ.ಇರಾನಿ ಇವರ ಚುರುಕು ನಾಯಕತ್ವದಲ್ಲಿ 1974 ರಲ್ಲಿ ವ್ಯವಹಾರ ನಿರ್ವಹಣೆಯ ಅಧ್ಯಯನ ವಿಭಾಗವು ಪ್ರಾರಂಭವಾಯಿತು. ಮೊದಲು ಈ ವಿಭಾಗದ ಪಾಠಪ್ರವಚನಗಳು ವಾಣಿಜ್ಯ ವಿಭಾಗದ ಆವರಣದಲ್ಲೇ ಪ್ರಾರಂಭಗೊಂಡು, ವಿಶ್ವವಿದ್ಯಾನಿಲಯದ ಗಣಿತ ಶಾಸ್ತ್ರ, ಮನೋವಿಜ್ಞಾನ, ಸಂಖ್ಯಾ ಶಾಸ್ತ್ರ, ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರುಗಳ ಸಮೂಹವು ವಿಭಾಗದ ಬೆಂಬಲಕ್ಕೆ ನಿಂತದ್ದು ಅವಿಸ್ಮರಣೀಯ. ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಆರಂಭಗೊಂಡ ಈ ವಿಭಾಗವು, ನಂತರದ ಸ್ವಲ್ಪ ಅವಧಿಯನ್ನು ಇಂದಿನ ಎನ್‌ಎಸ್‌ಸಿ ಕಟ್ಟಡದಲ್ಲಿ ಮುಂದುವರೆದ ಮೆಲುಕುಗಳು ಹಿರಿಯ ವಿದ್ಯಾರ್ಥಿಗಳ ಸ್ಮೃತಿಪುಟಗಳಲ್ಲಿ ದಾಖಲಾಗಿದೆ.

ಡಾ.ಜೆ.ಕೆ.ಇರಾನಿಯವರ ನಂತರ, ಪ್ರೊ. ಮುನಿರಾಮಪ್ಪ ಈ ವಿಭಾಗವನ್ನು ಮುನ್ನಡೆಸಿದ್ದರು.

ಅದೇ ಸಮಯದಲ್ಲಿ ಅಮೇರಿಕಾದಲ್ಲಿ ಅಧ್ಯಯನ ಮಾಡಿ, ಕೆಲಕಾಲ ಧಾರವಾಡ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದ ಪ್ರೊ. ಎಂ. ವೆಂಕಟೇಶ್ 1983–84ರಲ್ಲಿ ಈ ವಿಭಾಗಕ್ಕೆ ಸೇರ್ಪಡೆಗೊಂಡರು. ಅವರ ಅವಿರತ ಶ್ರಮದ ಫಲವಾಗಿ ಎಂಬಿಎ ವಿಭಾಗಕ್ಕೆ ಸಂಖ್ಯಾಶಾಸ್ತ್ರ ವಿಭಾಗ ಮೊದಲ ಮಹಡಿಯನ್ನು ವಿಶ್ವವಿದ್ಯಾನಿಲಯವು ನಿಯುಕ್ತಿಗೊಳಿಸಿತು. 1984–86ರ ಸಮಯದಲ್ಲಿ ಸಂಸ್ಥೆಗೆ ಪ್ರೊ. ಎಂ. ವೆಂಕಟೇಶ್ ಜೊತೆಗೆ ಶ್ರಮಿಸಿದವರಲ್ಲಿ ಪ್ರೊ. ಫ್ರಾನ್ಸಿಸ್ ಚೆಲುನಿಲಂ ಸಹಪ್ರಮುಖರು. ಪ್ರೊ. ಸಿ. ಎ. ಫ್ರಾನ್ಸಿಸ್‌ರವರ ರಚಿಸಿರುವ Business Environment ಹಾಗೂ Business and Government ಮುಂತಾದ ಪುಸ್ತಕಗಳು ಇಂದಿಗೂ ವ್ಯವಹಾರ ಶಾಸ್ತ್ರವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ. ಜೊತೆಗೆ ಇವರ ಪುಸಕ್ತಗಳು ದೇಶ ಹಾಗೂ ವಿದೇಶಗಳಲ್ಲಿ ಮನ್ನಣೆ ಪಡೆದಿದೆ. 1974 ರಲ್ಲಿ ಕೇವಲ 30 ವಿದ್ಯಾರ್ಥಿಗಳ ಪ್ರವೇಶ ಅವಕಾಶದಿಂದ ಪ್ರಾರಂಭಿಸಲ್ಪಟ್ಟ ಈ ವಿಭಾಗವು, 1999ರಲ್ಲಿ ಹೆಚ್ಚಾದ ಬೇಡಿಕೆ ಮತ್ತು ನಿರ್ವಹಣಾ ಶಾಸ್ತ್ರವನ್ನು ಹೆಚ್ಚು ಪ್ರಸರಿಸುವ ದೃಷ್ಟಿಯಿಂದ partially self-finance ಯೋಜನೆಯಡಿಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು 60ಕ್ಕೆ ಏರಿಸಲಾಯಿತ್ತು. ನಂತರ 2004ರಲ್ಲಿ ಈ ಸಂಖ್ಯೆ120ಕ್ಕೆ ಏರಿಕೆಯಾಗಿ, ಪ್ರಸುತ್ತ ಈ ಸಂಖ್ಯೆಯು 180ಕ್ಕೆ ತಲುಪಿದೆ. ಪ್ರತಿವರ್ಷ 25ಕ್ಕೂ ಹೆಚ್ಚು ವಿದೇಶಿ ವಿದ್ಯಾರ್ಥಿಗಳು ನಿರ್ವಹಣಾ ಶಾಸ್ತ್ರವನ್ನು ಅಭ್ಯಾಸಿಸುತ್ತಿರುವುದು ವಿಶೇಷ. ಈ ವಿಭಾಗವು ಪ್ರಾರಂಭವಾದ ವರ್ಷದಿಂದ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆ ಮತ್ತು ಸಂದರ್ಶನ ಮೂಲಕ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿದ್ದು, ಇದು ಪ್ರಸುತ್ತ ವ್ಯವಸ್ಥೆಯಲ್ಲಿನ ಪಾರದರ್ಶಕತೆಯ ಕೈಗನ್ನಡಿಯಾಗಿದೆ.

2002 ರಲ್ಲಿ ಅಂದಿನ ಉಪಕುಲಪತಿಗಳಾಗಿದ್ದ ಪ್ರೊ. ಎಸ್. ಎನ್.ಹೆಗ್ಗಡೆಯವರ ಸಂಪರ್ಕ ಮತ್ತು ಶ್ರಮದಿಂದ ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ವಿಭಾಗದ ಶ್ರೇಷ್ಠ ಹಳೆಯ ವಿದ್ಯಾರ್ಥಿಗಳಲ್ಲಿ ಒಬ್ಬರಾದ, ದೂರದ ಅಮೇರಿಕಾದ ಮಿಶಿಗನ್‌ನಲ್ಲಿ ನೆಲೆಗೊಂಡು ಅತ್ಯಂತ ಯಶ್ವಸಿ ಉದ್ಯಮಿಯಾಗಿರುವ ಡಾ. ಬಿ.ಎನ್. ಬಹದ್ದೂರ್ ರವರ ಉದಾರಕೊಡುಗೆಯಿಂದ ಮೈಸೂರಿನ ಉತ್ತರದ ಅಂಚಿನಲ್ಲಿ ಡಾ. ಬಿ.ಎನ್. ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ಸ್ ಎಂಬ ನಾಮಕರಣದೊಂದಿಗೆ ಎಂಬಿಎ ವಿಭಾಗವು ಸುಸಜ್ಜಿತವಾಗಿದೆ ತನ್ನ ಮರು ಹುಟ್ಟನ್ನು ಪಡೆದುಕೊಂಡಿತು. ಈ ಸಂಸ್ಥೆಯಲ್ಲಿ ಪ್ರೊ. ಆಯೇಷಾ ಶರೀಫ್, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ.ಹೆಚ್. ಎನ್. ರಮೇಶ್ ಮತ್ತು ಹಲವಾರು ಅತಿಥಿ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಜ್ಞಾನದ ಬುತ್ತಿಯನ್ನು ಹೆಚ್ಚಿಸಿದನ್ನು ಮರೆಯಲು ಸಾಧ್ಯವಿಲ್ಲ.

1995 ರಿಂದ ಈ ವಿಭಾಗದ ವಿದ್ಯಾರ್ಥಿಗಳ ಸಮೂಹವು ರಾಜ್ಯಮಟ್ಟದ ಸಾಹಿತ್ಯ, ನಿರ್ವಹಣಾ ಕೌಶಲ್ಯ ಹಾಗೂ ಸಾಂಸ್ಕೃತಿಕ ಉತ್ಸವವನ್ನು 'ಮಂತ್ರ' MANTRA (Management The Rewarding Attitude)) ಆಯೋಜಿಸಲಾಗುತ್ತಿದ್ದು, ಈ ಕಾರ್ಯಕ್ರಮವು ಹೆಚ್ಚು ಪ್ರಶಂಸೆಯನ್ನುಪಡೆದಿದೆ. ಈ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಪ್ರಸುತ್ತ ದೇಶವಿದೇಶಗಳ ಹಲವು ಕಂಪನಿಗಳಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ತಮ್ಮ ಯಶಸ್ಸಿನಿಂದ ಈ ಶಿಕ್ಷಣ ಸಂಸ್ಥೆಯ ರಾಯಭಾರಿಗಳಾಗಿ, ಉದ್ಯಮಿಗಳಾಗಿ ದೇಶದ ಪ್ರಗತಿಗೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಬೆನ್ನೆಲುಬಾಗಿದ್ದಾರೆ.

ಇದೇ ಶನಿವಾರ 28 ರಂದು ಈ ವಿಭಾಗವು ಸುವರ್ಣ ಮಹೋತ್ಸವದ ಸಂಭ್ರಮದ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಆಯೋಜಿಸಿದೆ. ಕಾರ್ಯಕ್ರಮವನ್ನು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟನೆ ಮಾಡಲ್ಲಿದ್ದು, ಇದೇ ವಿಭಾಗದ ಪ್ರಥಮ ಬ್ಯಾಚ್‌ನ ವಿದ್ಯಾರ್ಥಿಯಾದ ಬ್ರಿಗೇಡ್ ಗ್ರೂಪ್ ಕಾರ್ಯನಿರ್ವಾಹಕ ಅಧ್ಯಕರಾದ ಎಂ.ಆರ್. ಜೈಶಂಕರ್ ಸಮಾರೋಪ ಭಾಷಣ ಮಾಡಲಿದ್ದಾರೆ.

ಕಿರುಸುದ್ದಿ

ಕ್ರೇನ್ ಡಿಕ್ಕಿಯಾಗಿ ರಸ್ತೆ ದಾಟಲು ನಿಂತಿದ್ದ ಮಹಿಳೆ ಸಾವು

ಉಡುಪಿ: ಕ್ರೇನ್ ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟಲು ನಿಂತಿದ್ದ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಉದ್ಯಾವರ ಗ್ರಾಮದ ಹೋಟೆಲ್ ಲಲಿತ್ ಎದುರು ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಗುರುವಾರ ನಡೆದಿದೆ. ಮೃತರನ್ನು ಕಾರವಾರ ಮೂಲದ ಸುನೀಲ್ ರಾಮಚಂದ್ರ ರಾಯ್ಕರ್ ಅವರ ಪತ್ನಿ ದಿವ್ಯ ಎಸ್. ರಾಯ್ಕರ್ (45) ಎಂದು ಗುರುತಿಸಲಾಗಿದೆ.

ಇವರು ಚಾಲಕ ಹಾಗೂ ತಮ್ಮ ಮಗಳ ಜೊತೆ ಕಾರಿನಲ್ಲಿ ಮಂಗಳೂರಿನ ಆಸ್ಪತ್ರೆಯಿಂದ ಹೊರಟಿದ್ದು, ದಾರಿ ಮಧ್ಯೆ ಉದ್ಯಾವರದಲ್ಲಿ ಹೋಟೆಲ್ ಎದುರು ಕಾರು ನಿಲ್ಲಿಸಿದ್ದರು. ಅಲ್ಲಿ ಮಗನಿಗೆ ಬ್ಯಾಟ್ ಖರೀದಿಸಲು ಹೆದ್ದಾರಿಯ ಇನ್ನೊಂದು ಬದಿಯಲ್ಲಿ ಬ್ಯಾಟ್ ಮಾರಾಟ ಮಾಡುತ್ತಿದ್ದ ವ್ಯಾಪಾರಸ್ಥರ ಬಳಿ ಹೋಗಿದ್ದು, ರಸ್ತೆ ದಾಟಲು ನಿಂತಿದ್ದ ದಿವ್ಯ ಅವರಿಗೆ ಅದೇ ರಸ್ತೆಯ ಉಡುಪಿ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಕ್ರೇನ್ ಢಿಕ್ಕಿ ಹೊಡೆಯಿತ್ತೆನ್ನಲಾಗಿದೆ. ಇದರಿಂದ ದಿವ್ಯ ಅವರು ಕ್ರೇನ್‌ನ ಮುಂದಿನ ಚಕ್ರಕ್ಕೆ ಸಿಲುಕಿ ಗಂಭೀರವಾಗಿ ಗಾಯಗೊಂಡರು. ತಕ್ಷಣ ಅವರನ್ನು ಉಡುಪಿಯ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಗಂಭೀರ ಸ್ಥಿತಿಯಲ್ಲಿದ್ದ ಅವರು ದಾರಿ ಮಧ್ಯೆ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಈ ಬಗ್ಗೆ ಕಾಪು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಳದಿ ಕಾಮಲೆಗೆ ಬಲಿ

ಕಾಸರಗೋಡು: ವಿದ್ಯಾನಗರ ನೆಲ್ಕಳ ಸೆಕೆಂಡ್ ಕ್ರಾಸ್ ರಸ್ತೆ ನಿವಾಸಿ ಕೆ.ಜಿ.ಪ್ರಸಾದ್ ಕುಮಾರ್ (52) ನಿಧನ ಹೊಂದಿದ್ದಾರೆ. ಹಳದಿ ಕಾಮಾಲೆ ಹಿನ್ನೆಲೆಯಲ್ಲಿ ಕಳೆದ ಒಂದು ವಾರದಿಂದ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದರು. ಗುರುವಾರ ಸಂಜೆ ಸಾವು ಸಂಭವಿಸಿತು. ದಿ.ಗೋಪಾಲಕೃಷ್ಣನ್ ಮತ್ತು ಸಬಿತಾ ದಂಪತಿಯ ಪುತ್ರನಾದ ಮೃತರು ತಾಯಿ, ಸಹೋದರರಾದ ಜೋಗೀಂದ್ರನಾಥ್, ಹೇಮಚಂದ್ರನ್, ಶಿವಪ್ರಕಾಶ್, ಸಹೋದರಿ ಜಯಶ್ರೀ ಅವರನ್ನು ಅಗಲಿದ್ದಾರೆ.

ಕಾರಿನಲ್ಲಿ ಸಾಗಿಸುತ್ತಿದ್ದ 285.12 ಲೀಟರ್ ಮದ್ಯ ವಶ: ಕಾರು ಚಾಲಕ ಪರಾರಿ

ಕಾಸರಗೋಡು: ಮಂಗಳೂರಿನಿಂದ ಕಾಸರಗೋಡು ಭಾಗಕ್ಕೆ ಕಾರಿನಲ್ಲಿ ಸಾಗಿಸುತ್ತಿದ್ದ 285.12 ಲೀಟರ್ ಮದ್ಯವನ್ನು ಕಾಸರಗೋಡು ಸ್ಪೆಷಲ್ ಅಬಕಾರಿ ವಿಶೇಷ ದಳ ವಶಪಡಿಸಿಕೊಂಡಿದೆ. ಗುರುವಾರ ಮೊಗ್ರಾಲ್‌ಪುತ್ತೂರಿನಲ್ಲಿ ತಪಾಸಣೆ ನಡೆಸುತ್ತಿದ್ದ ವೇಳೆ ಕಾರಿನಲ್ಲಿ ಕರ್ನಾಟಕ ನಿರ್ಮಿತ ವಿದೇಶಿ ಮದ್ಯ ಪತ್ತೆಯಾಗಿದೆ. ಈ ವೇಳೆ ಕಾರು ಚಾಲಕ ಪರಾರಿಯಾಗಿದ್ದು, ಕಾರಿನ ಆರ್‌ಸಿ ಮಾಲೀಕರ ವಿರುದ್ಧ ಅಬಕಾರಿ ಇಲಾಖೆ ತನಿಖೆ ಆರಂಭಿಸಿದೆ. ಕಾರು ಚಾಲಕನಿಗಾಗಿ ಶೋಧ ಚುರುಕುಗೊಳಿಸಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಚೇತನ್ ಶೆಟ್ಟಿ, ಬೊಳ್ಳೆಚ್ಚಾರು ಮನೆ, ಕುಡ್ತ ಮುಗೇರ್ ವಯಾ ಸಾಲೆತ್ತೂರು, ಬಂಟ್ವಾಳ (ತಾ).
2. ಬಿ. ನಾರಾಯಣ, ದೋಟ ಮನೆ, 'ಶ್ರೀ ದೇವಿ ಕೃಪಾ', ಕುಂಜತ್ತಬೈಲ್, ಕಾವೂರು.
3. ರಾಮಚಂದ್ರ ಭಟ್, 'ಗಣೇಶ್ ಪ್ರಸಾದ್', ಪಾವಂಜೆ, ಹಳೆಯಂಗಡಿ.
4. ಪ್ರಥಮ್ ಜಿ. ರೈ, 'ಶ್ರೀ ದೇವಿ ಕೃಪಾ', ತುಂಗೆರೆ ಕೋಡಿ, ಕಾಗೆಕಾನ, ಬರಿಮಾರ್, ಬಂಟ್ವಾಳ (ತಾ).
5. ಬಿ. ಪದ್ಮಯ ಗೌಡ ಮತ್ತು ಹತ್ತು ಸಮಸ್ತರು, ಪರಣೆ ಮನೆ, ತುಳಸೀ ಪುರಂ, ಸವಣೂರು.
6. ಜಪ್ಪುಗುಡ್ಡೆಗುತ್ತು ದಿ| ರಘುರಾಮ ಶೆಟ್ರ ಸ್ಮರಣಾರ್ಥ ಮಕ್ಕಳು, 'ರಾಜ್ ಟೈಲ್ಸ್', ಗುರುಪುರ.
7. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ, ತಾರಿಕಂಬಳ, ಬಜಪೆ.

ಶ್ರೀ ಧರ್ಮಸ್ಥಳ ಮೇಳ
ವಿಟ್ಲದಲ್ಲಿ
ಶ್ರೀ ಸಂಕಪ್ಪ ಪೂಜಾರಿ ಮತ್ತು ಮಕ್ಕಳು, ಕಡುಂಬು, ಕುರ್ನಿಯಾ, ವಿಟ್ಲಪಡ್ನೂರು

ಶ್ರೀ ಸಾಲಿಗ್ರಾಮ ಮೇಳ
ಮಂಕಿ ದೇವಿಕಾನದಲ್ಲಿ ಬಯಲಾಟ
ಪಾಂಡವಾಶ್ವಮೇಧ

ಶ್ರೀ ಪೆರ್ಡೂರು ಮೇಳ
ಕೆದಿಂಜೆ ಮಂಜರಪಲ್ಕೆಯಲ್ಲಿ
ಚಂದ್ರಹಾಸ, ರತ್ನಾವತಿ ಕಲ್ಯಾಣ

ಶ್ರೀ ಹನುಮಗಿರಿ ಮೇಳ
ಮೂಡುಬಿದಿರೆಯಲ್ಲಿ

ಶ್ರೀ ಪಾವಂಜೆ ಮೇಳ
ತಲಪಾಡಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ
ಶ್ರೀ ತುಳಸಿ



ಚುನಾವಣಾ ಪ್ರಚಾರಕ್ಕಾಗಿ ಮಂಜೇಶ್ವರಕ್ಕೆ ಆಗಮಿಸಿದ ವೇಳೆ, ಇಕ್ಕೇರಿ ಅರಸರ ಕಾಲದಲ್ಲಿ ಕುಂಬಳೆಯ ಸಮೀಪ ಸ್ಥಾಪಿತವಾದ, ಹವ್ಯಕ ಬ್ರಾಹ್ಮಣರ ಮೂಲ ಆರಾಧನಾ ಕ್ಷೇತ್ರವಾದ ಕಾನ ಮಠಕ್ಕೆ ಭೇಟಿ ನೀಡಿದ ಮಂಗಳೂರು ಉತ್ತರ ಶಾಸಕ ಡಾ.ಭರತ್ ಶೆಟ್ಟಿ ಅವರು ಶ್ರೀ ಶಂಕರನಾರಾಯಣ ದೇವರಿಗೆ, ಕ್ಷೇತ್ರದ ಅನುವಂಶಿಕ ಅರ್ಚಕ ಕೇಶವ ಪ್ರಸಾದ ನಾಣಿತ್ತಿಲು ಅವರ ಮೂಲಕ ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು. ಬಿಜೆಪಿ ಮುಖಂಡರಾದ ವಿಜಯ್ ರೈ, ಪ್ರಶಾಂತ್ ಕುಂಬಳೆ, ಯನ್. ಗೋಪಾಲಕೃಷ್ಣ ಭಟ್ ದೈಗೋಳಿ ಜೊತೆಯಲ್ಲಿ ಇದ್ದರು.

ಮಾ. 28, 29: ಒಡ್ಡೂರು ಫಾರ್ಮ್ಸ್‌ನಲ್ಲಿ ಐಎಂಎಸ್‌ಸಿ ಅಫ್-ರೋಡ್ ಟ್ರೋಫಿ

ಮಂಗಳೂರು: ಐಎಂಎಸ್‌ಸಿ ಮೋಟಾರ್ ಸ್ಪೋರ್ಟ್ಸ್‌ನ 25ನೇ ವರ್ಷದ ಸಂಭ್ರಮದ ಅಂಗವಾಗಿ 400ನೇ ಸ್ಪರ್ಧೆಯಾಗಿ ಪ್ರತಿಷ್ಠಿತ ಐಎಂಎಸ್‌ಸಿ ಅಫ್-ರೋಡ್ ಟ್ರೋಫಿ-2026 ಮಾ.28 ಹಾಗೂ 29ರಂದು ಮಂಗಳೂರು ಸಮೀಪದ ಒಡ್ಡೂರು ಫಾರ್ಮ್ಸ್‌ನಲ್ಲಿ ಆಯೋಜಿಸಲಾಗಿದೆ.

ಪ್ರಕೃತಿಸೌಂದರ್ಯದಮಧ್ಯೆ ಗರ್ಜಿಸುವ ಎಂಜಿನ್‌ಗಳು, ಕಠಿಣ ಪಥಗಳು ಮತ್ತು ಸಾಹಸಮಯ ಸ್ಪರ್ಧೆಗಳು ಕ್ರೀಡಾಭಿಮಾನಿಗಳನ್ನು ರಂಜಿಸಲಿವೆ. ಈ ವಿಶೇಷ ಆವೃತ್ತಿಗೆ ದೇಶದ ವಿವಿಧ ಭಾಗಗಳಿಂದ ಭಾರಿ ಸ್ಪಂದನೆ ವ್ಯಕ್ತವಾಗಿದ್ದು, 11 ವಿಭಾಗಗಳಲ್ಲಿ 141ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸುತ್ತಿದ್ದಾರೆ. ಸುಮಾರು 3,000ಕ್ಕೂ ಹೆಚ್ಚು ಪ್ರೇಕ್ಷಕರು ಆಗಮಿಸುವ ನಿರೀಕ್ಷೆಯಿದೆ. ವಿಜೇತರಿಗೆ ಒಟ್ಟು 15 ಲಕ್ಷ ರೂ. ಮೌಲ್ಯದ ನಗದು ಬಹುಮಾನ, ಟ್ರೋಫಿ ಮತ್ತು ಗಿಫ್ಟ್ ನೀಡಲಾಗುತ್ತಿದೆ ಎಂದು ಐಎಂಎಸ್‌ಸಿ ಕಾರ್ಯದರ್ಶಿ ಅಶ್ವಿನ್ ನ್ಯಾಕ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಾ.28ರಂದು ಬೆಳಗ್ಗೆ 8.30ಕ್ಕೆ ಐಎಂಎಸ್ಸಿ ಆಫ್-ರೋಡ್ ಟ್ರೋಫಿ 2026 ಚಾಂಪಿಯನ್‌ಶಿಪ್ ಉದ್ಘಾಟನೆಗೊಳ್ಳಲಿದ್ದು, ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್, ಸಂಸದ ಬ್ರಿಜೇಶ್ ಚೌಟ, ಶಾಸಕರಾದ ರಾಜೇಶ್ ನ್ಯಾಕ್ ಉಳಿಪಾಡಿಗುತ್ತು, ಡಾ.ವೈ.ಭರತ್ ಶೆಟ್ಟಿ, ಉಮಾನಾಥ ಕೋಟ್ಯಾನ್, ವೇದವ್ಯಾಸ ಕಾಮತ್, ಮಂಗಳೂರು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ, ವಿವೇಕ್ ಡಿ. ಭಾಗವಹಿಸಲಿದ್ದಾರೆ ಎಂದರು.

ಮಾ.29ರಂದು ಸಂಜೆ 6ಕ್ಕೆ ಸಮಾರೋಪ ಹಾಗೂ ಬಹುಮಾನ ವಿತರಣೆ ನಡೆಯಲಿದೆ. ಶಾಸಕರಾದ ರಾಜೇಶ್ ನ್ಯಾಕ್ ಉಳಿಪಾಡಿಗುತ್ತು, ಡಾ.ವೈ.ಭರತ್ ಶೆಟ್ಟಿ, ಮಾಜಿ ಸಂಸದ ನಳಿನ್‌ಕುಮಾರ್ ಕಟೀಲು, ಪ್ರಮುಖರಾದ ಯು.ಟಿ. ಇಫ್ತಿಕಾರ್ ಅಲಿ, ಎಚ್.ಎಸ್. ಬಾಲಕೃಷ್ಣ ರಾಜೀವಿ ನಾಯಕ್ ಪಾಲ್ಗೊಳ್ಳಲಿದ್ದಾರೆ. ಆಸಕ್ತರಿಗೆ ಗಂಜಿಮಠ ಬಸ್ ನಿಲ್ದಾಣದಿಂದ ಒಡ್ಡೂರ್ ಫಾರ್ಮ್‌ಗೆ ಉಚಿತ ಬಸ್ ಸೌಲಭ್ಯವಿದೆ ಎಂದರು.

ಪ್ರಮುಖರಾದ ಕುಮಾರ್ ಆಳ್ವ, ಮೂಸಾ ಶರೀಫ್, ರೊನಾಲ್ಡ್ ಫೆರ್ನಾಂಡಿಸ್ ಉಪಸ್ಥಿತರಿದ್ದರು.

ರಾಜ್ಯ ಸಾರಿಗೆ ಸಚಿವರಿಗೆ ವಿಧಾನಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಮನವಿ

ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಸುವ್ಯವಸ್ಥೆ

ಪುತ್ತೂರು: ರಾಜ್ಯದ ಬಸ್ ನಿಲ್ದಾಣಗಳನ್ನು ಪ್ರಯಾಣಿಕರ ಸ್ನೇಹಿಯಾಗಿಸುವಂತೆ ಮತ್ತು ಗ್ರಾಮ ಆಡಳಿತ ಅಧಿಕಾರಿಗಳಿಗೆ ಮೂಲ ಸೌಲಭ್ಯ ಒದಗಿಸುವಂತೆ ಶಾಸಕ ಕಿಶೋರ್ ಕುಮಾರ್ ಪುತ್ತೂರು ಸರಕಾರವನ್ನು ಆಗ್ರಹಿಸಿದ್ದಾರೆ.

ಬಸ್ ನಿಲ್ದಾಣಗಳು

ರಾಜ್ಯದ ಹಲವಾರು ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಶೌಚಾಲಯ, ಕುಡಿಯುವ ನೀರು, ವಿಶ್ರಾಂತಿ ಕೊಠಡಿ, ವಿಕಲಚೇತನರಿಗೆ ರಾಂಪ್, ಸಿಸಿ ಟಿ.ವಿ., ಪೊಲೀಸ್ ಚೌಕಿ, ಅಗ್ನಿ ಶಾಮಕ ವ್ಯವಸ್ಥೆ ಸೇರಿದಂತೆ ಇನ್ನಿತರ ಮೂಲಭೂತ ಸೌಲಭ್ಯಗಳ ಕುರಿತು ಕಿಶೋರ್ ಕುಮಾರ್ ಪುತ್ತೂರು ಅವರು ಸಾರಿಗೆ ಸಚಿವರಿಗೆ ಕೇಳಲಾದ ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಕೇಳಿದ್ದರು. ಇದಕ್ಕೆ ಉತ್ತರಿಸಿರುವ ಸಾರಿಗೆ ಸಚಿವರು, ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಿವೆ. ಅವುಗಳ ವ್ಯಾಪ್ತಿಯಲ್ಲಿ ಒಟ್ಟು 565 ಬಸ್ ನಿಲ್ದಾಣಗಳಿವೆ. ಅವುಗಳಲ್ಲಿ ಜಿಲ್ಲಾ ಕೇಂದ್ರ-90 ತಾಲೂಕು ಕೇಂದ್ರ-186, ಹೋಬಳಿ ಕೇಂದ್ರ-284 ಮತ್ತು ಇತರ ಸ್ಥಳಗಳಲ್ಲಿ 5 ಬಸ್ ನಿಲ್ದಾಣಗಳೆಂದು ವರ್ಗೀಕರಿಸಲಾಗಿದೆ ಎಂದು ತಿಳಿಸಿದರು.

ಇವುಗಳ ಪೈಕಿ ಕೇವಲ 142 ಬಸ್ ನಿಲ್ದಾಣಗಳಲ್ಲಿ ಸಿಸಿ ಟಿ.ವಿ. ವ್ಯವಸ್ಥೆ, 61 ಬಸ್ ನಿಲ್ದಾಣದಲ್ಲಿ ಮಾತ್ರ ಪೊಲೀಸ್ ಚೌಕಿಗಳನ್ನು ಸ್ಥಾಪಿಸಲಾಗಿದೆ, 198 ಬಸ್ ನಿಲ್ದಾಣದಲ್ಲಿ ಅಗ್ನಿಶಾಮಕ ವ್ಯವಸ್ಥೆ ಇರುತ್ತದೆ. ಸದರಿ ಸಾರಿಗೆ ನಿಗಮಗಳ ಬಸ್ ನಿಲ್ದಾಣಗಳ ಅಭಿವೃದ್ಧಿ, ದುರಸ್ತಿ ಮತ್ತು ನಿರ್ವಹಣೆಗೆ 2023-24ನೇ ಸಾಲಿನಲ್ಲಿ ಕೇವಲ ರೂ.4.17 ಕೋಟಿ 2024-25ನೇ ಸಾಲಿನಲ್ಲಿ ರೂ.19.25 ಕೋಟಿ ಮಾತ್ರ ಬಿಡುಗಡೆ ಮಾಡಲಾಗಿದೆ ಮತ್ತು ಮಹಿಳೆಯರ ಸುರಕ್ಷತೆ ದೃಷ್ಟಿಯಿಂದ ಪೊಲೀಸ್ ಚೌಕಿ ಅಥವಾ ಭದ್ರತಾ ಸಿಬ್ಬಂದಿ ನಿಯೋಜನೆ ಕುರಿತು ನಿರ್ದಿಷ್ಟ ಮಾರ್ಗಸೂಚಿ ಇರುವುದಿಲ್ಲ.

ಗ್ರಾಮ ಆಡಳಿತ ಅಧಿಕಾರಿಗಳಿಗೆ ಮೂಲ ಸೌಲಭ್ಯದ ಕೊರತೆ

ರಾಜ್ಯದ ಕಂದಾಯ ಇಲಾಖೆಯಡಿ ಗ್ರಾಮಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಆಡಳಿತ ಅಧಿಕಾರಿಗಳಿಗೆ ಮೂಲ ಸೌಲಭ್ಯದ ಕುರಿತು ಅಧಿವೇಶನದಲ್ಲಿ ಕಿಶೋರ್ ಕುಮಾರ್ ಕೇಳಿದ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿರುವ ಕಂದಾಯ ಸಚಿವರು, ರಾಜ್ಯದಲ್ಲಿ ಒಟ್ಟು 29,326 ಕಂದಾಯ ಗ್ರಾಮಗಳಿದ್ದು ಸದರಿ ಗ್ರಾಮಗಳಿಗೆ 9842 ಗ್ರಾಮ ಆಡಳಿತ ಅಧಿಕಾರಿ ಹುದ್ದೆ ಮಂಜೂರಾಗಿದೆ. ಅವುಗಳ ಪೈಕಿ 1,115 ಹುದ್ದೆಗಳು ಖಾಲಿ ಇದೆ. (ದ.ಕ. ಜಿಲ್ಲೆಯಲ್ಲಿ 46 ಮತ್ತು ಉಡುಪಿಯಲ್ಲಿ 22) 378 ಗ್ರಾಮ ಆಡಳಿತ ಅಧಿಕಾರಿ ಕಚೇರಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತದೆ (ದ.ಕ. ಜಿಲ್ಲೆಯಲ್ಲಿ 10) ಕಚೇರಿಗೆ ಅಂತರ್ಜಾಲ ಸಂಪರ್ಕ ಒದಗಿಸಿರುವುದಿಲ್ಲ ಮತ್ತು ವಿದ್ಯುತ್ ಬಿಲ್ ಹಾಗೂ ಅಂತರ್ಜಾಲ ಸಂಪರ್ಕ ವೆಚ್ಚಕ್ಕಾಗಿ ಯಾವುದೇ ಅನುದಾನವು ಪ್ರತ್ಯೇಕವಾಗಿ ಬಿಡುಗಡೆಯಾಗುವುದಿಲ್ಲ. ರಾಜ್ಯದಾದ್ಯಂತ ರಾಜ್ಯದ 550 ಗ್ರಾಮಗಳಲ್ಲಿ ಗ್ರಾಮ ಆಡಳಿತ ಅಧಿಕಾರಿಗಳ ಕಚೇರಿ ನಿರ್ಮಿಸಲು ನಿವೇಶನ ಕಾಯ್ದಿರಿಸಿದ್ದು ಸದರಿ ಕಚೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಯಾವುದೇ ಯೋಜನೆ ಸರ್ಕಾರದ ಮುಂದಿರುವುದಿಲ್ಲ ಎಂದು ತಿಳಿಸಿದ್ದಾರೆ.

ಗ್ರಾಮ ಆಡಳಿತ ಅಧಿಕಾರಿಗಳ ಖಾಲಿ ಹುದ್ದೆಗಳನ್ನು ಭರ್ತಿಗೊಳಿಸುವಂತೆ, ಸದರಿ ಅಧಿಕಾರಿಗಳು ಸರ್ಕಾರದ ಹೆಚ್ಚಿನ ಕೆಲಸಗಳನ್ನು ಆನ್‌ಲೈನ್‌ನಲ್ಲಿ ನಿರ್ವಹಿಸಬೇಕಾಗಿರುವುದರಿಂದ ಎಲ್ಲಾ ಕಛೇರಿಗಳಿಗೆ ಅಂತರ್ಜಾಲ ಸಂಪರ್ಕ ಕಲ್ಪಿಸಲು ಸೂಕ್ತ ಕ್ರಮ ವಹಿಸುವಂತೆ ಮತ್ತು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಚೇರಿಗಳಿಗೆ ಸ್ವಂತ ಕಟ್ಟಡ ನಿರ್ಮಿಸುವಂತೆ ಕಿಶೋರ್ ಕುಮಾರ್ ಒತ್ತಾಯಿಸಿದ್ದಾರೆ.

ನಿರ್ವಹಣೆ ಕೊರತೆ



ರಾಜ್ಯದ ಹೆಚ್ಚಿನ ಸರ್ಕಾರಿ ಬಸ್ ನಿಲ್ದಾಣದಲ್ಲಿ ಶೌಚಾಲಯಗಳು ಸರಿಯಾಗಿ ನಿರ್ವಹಣೆಯಾಗದೆ ಮೂಗು ಮುಚ್ಚಿಕೊಳ್ಳುವ ಪರಿಸ್ಥಿತಿಯಿದೆ. ಮಹಿಳೆಯರು ಮತ್ತು ಹಿರಿಯ ನಾಗರಿಕರ ಸುರಕ್ಷತೆ ದೃಷ್ಟಿಯಿಂದ ಎಲ್ಲಾ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವ ಅಗತ್ಯವಿದೆ. ಬಸ್ ನಿಲ್ದಾಣಗಳಲ್ಲಿ ರಾತ್ರಿ ಸಮಯದಲ್ಲಿ ಪೊಲೀಸ್ ಭದ್ರತೆ ಕೊರತೆಯಿಂದ ಕಳ್ಳತನ ಮತ್ತು ಕಿರುಕುಳದ ಘಟನೆಗಳು ನಡೆಯುತ್ತಿದ್ದು, ಈ ಬಗ್ಗೆ ಗೃಹ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಶಾಶ್ವತ ಪೊಲೀಸ್ ಭದ್ರತೆ ನೀಡಲು ಕ್ರಮ ಕೈಗೊಳ್ಳಬೇಕು, ಗ್ರಾಮೀಣ ಪ್ರದೇಶಗಳ ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರು, ಬೆಳಕಿನ ವ್ಯವಸ್ಥೆ ಮತ್ತು ಶೌಚಾಲಯಗಳಂತಹ ಮೂಲಭೂತ ಸೌಲಭ್ಯಗಳೇ ಇಲ್ಲದಿರುವುದು ಗಮನಕ್ಕೆ ಬಂದಿದೆ. ಇಂತಹ ನಿಲ್ದಾಣಗಳನ್ನು ಗುರುತಿಸಿ ಅವುಗಳನ್ನು ಸುಧಾರಿಸಲು ವಿಶೇಷ ಅನುದಾನ ನೀಡಬೇಕು. ರಾಜ್ಯದ ಎಲ್ಲಾ ಬಸ್ ನಿಲ್ದಾಣಗಳ ಮೂಲಭೂತ ಸೌಲಭ್ಯಗಳ ಬಗ್ಗೆ ಸಮಗ್ರ ಸಮೀಕ್ಷೆ ನಡೆಸಿ ಮಾದರಿ ಬಸ್ ನಿಲ್ದಾಣಗಳಾಗಿ ಅಭಿವೃದ್ಧಿಪಡಿಸುವ ಪ್ರಾಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ರೂಪಿಸಬೇಕು. ದ.ಕ. ಜಿಲ್ಲೆಯ ಕಡಬ, ಮೂಡಬಿದ್ರೆ, ಮತ್ತು ಮುಲ್ಕಿ ಪಟ್ಟಣವು ತಾಲೂಕು ಕೇಂದ್ರಗಳಾಗಿದ್ದು ಇಲ್ಲಿ ಹೊಸ ಬಸ್ ನಿಲ್ದಾಣವನ್ನು ಕೂಡಲೇ ನಿರ್ಮಿಸಬೇಕು. ಪುತ್ತೂರು ವಿಭಾಗದ ವ್ಯಾಪ್ತಿಯಲ್ಲಿ ಹೆಚ್ಚಿನವು ಗ್ರಾಮೀಣ ಪ್ರದೇಶವಿದ್ದು ವಿದ್ಯಾರ್ಥಿಗಳಿಗೆ ಬೆಳಗ್ಗೆ ಮತ್ತು ಸಂಜೆ ಸೂಕ್ತ ಬಸ್ಸಿನ ವ್ಯವಸ್ಥೆ ಇಲ್ಲದ ಕಾರಣ ಪ್ರಸ್ತುತವಿರುವ ಬಸ್ ರೂಟ್ ವ್ಯವಸ್ಥೆಯನ್ನು ವಿದ್ಯಾರ್ಥಿಗಳ ಬೇಡಿಕೆಯಂತೆ ಪರಿಷ್ಕರಿಸ ಬೇಕು ಎಂದು ಕಿಶೋರ್ ಕುಮಾರ್ ಸರಕಾರವನ್ನು ಆಗ್ರಹಿಸಿದ್ದಾರೆ.

ಸರಕಾರ ಕೃಷಿಕರಿಗೆ ಆಧಾರವಾಗಿ ನಿಲ್ಲಬೇಕಾಗಿದೆ: ಡಾ.ಪ್ರಭಾಕರ ಭಟ್



ವಿಟ್ಲ: ಕೈಗಾರಿಕೆಗೆ ಸರ್ಕಾರ ಹೆಚ್ಚಿನ ಒತ್ತು ನೀಡಿದ್ದರಿಂದ ಕೃಷಿಕ ಮೂಲೆ ಪಾಲಾಗಿದ್ದು, ಕೃಷಿಕರ ಸಮಸ್ಯೆ ನಿರಂತರವಾಗಿ ಮುಂದುವರಿಯುತ್ತಿದೆ. ಕೃಷಿಕ ವಾತಾವರಣದ ಮೇಲೆ ನಿಂತಿದ್ದು, ಅವರಿಗೆ ಆಧಾರವಾಗಿ ಸರ್ಕಾರ ನಿಲ್ಲಬೇಕಾಗಿದೆ. ಅಡಿಕೆ ಇಳುವರಿ ಅಧಿಕವಾಗಿರುವ ಸಂದರ್ಭ ಬೆಲೆ ಕಡಿಮೆಯಾಗಿ, ಬೆಲೆ ಹೆಚ್ಚಳವಾದ ಸಂದರ್ಭ ಬೆಳೆ ಇಲ್ಲದ ಸ್ಥಿತಿಯಿದೆ ಎಂದು ವಿವೇಕಾನಂದ ವಿದ್ಯಾವರ್ಧಕ ಸಂಘ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಹೇಳಿದರು.

ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಕ್ಯಾಂಪ್ಕೋ ವಿಟ್ಲ ಶಾಖೆಯ ನೂತನ ಕಟ್ಟಡ ನಿರ್ಮಾಣದ ಶಂಕು ಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಪುರೋಹಿತ ಉದಯ ಕೆದಿಲಾಯ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಅಧ್ಯಕ್ಷತೆಯನ್ನು ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ವಹಿಸಿದ್ದರು.

ಶಾಸಕ ಅಶೋಕ್ ಕುಮಾರ್ ರೈ, ಮಾಜಿ ಅಧ್ಯಕ್ಷರಾದ ಕೊಂಕೋಡಿ ಪದ್ಮನಾಭ, ಎ. ಕಿಶೋರ್ ಕುಮಾರ್ ಕೊಡ್ಗಿ, ಪಟ್ಟಣ ಪಂಚಾಯತ್ ಅಧ್ಯಕ್ಷ ಕರುಣಾಕರ ನಾಯ್ತೊಟ್ಟು, ವ್ಯವಸ್ಥಾಪಕ ನಿರ್ದೇಶಕ ಡಾ.ಬಿ.ವಿ. ಸತ್ಯನಾರಾಯಣ, ನಿರ್ದೇಶಕರಾದ ದಯಾನಂದ ಹೆಗ್ಡೆ, ಎಂ. ಮಹೇಶ್ ಚೌಟ, ರಾಧಾಕೃಷ್ಣನ್ ಕೆ., ಸತ್ಯನಾರಾಯಣ ಪ್ರಸಾದ್, ರಾಘವೇಂದ್ರ ಎಚ್.ಎಂ., ಸತೀಶ್ಚಂದ್ರ ಭಂಡಾರಿ ಕೆ., ತೀರ್ಥರಾಮ ಎ.ವಿ., ಪುರುಷೋತ್ತಮ ಭಟ್ ಎಂ., ವೆಂಕಟ್ರಮಣ ಭಟ್ ವೈ., ವಿವೇಕಾನಂದ ಗೌಡ ಪಿ., ಸದಾನಂದ ಶೆಟ್ಟಿ ಕೆ., ಗಣೇಶ್ ಪಾರಕಟ್ಟೆ, ಮಾಲಿನಿ ಪ್ರಸಾದ್, ಸೌಮ್ಯ ಪ್ರಕಾಶ್, ವಿಶ್ವನಾಥ ಈಶ್ವರ ಹೆಗ್ಡೆ, ಗಣೇಶ್ ಉಪಸ್ಥಿತರಿದ್ದರು.

ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ ಸ್ವಾಗತಿಸಿ, ಸದಸ್ಯ ಮುರಳಿ ಕೃಷ್ಣ ವಂದಿಸಿದರು. ಚೀಫ್ ಮ್ಯಾನೇಜರ್ ಜಯ ಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು.

- ಕೃಷಿಕ ವಾತಾವರಣದ ಮೇಲೆ ನಿಂತಿದ್ದು, ಅವರಿಗೆ ಆಧಾರವಾಗಿ ಸರ್ಕಾರ ನಿಲ್ಲಬೇಕಾಗಿದೆ.
- ಬೆಲೆ ಹೆಚ್ಚಳವಾದ ಸಂದರ್ಭ ಬೆಳೆ ಇಲ್ಲದ ಸ್ಥಿತಿಯಿದೆ

ಮಡಿಕೇರಿಯ ಸರ್ಕಾರಿ ಶುಶ್ರೂಷಾ ಕಾಲೇಜಿನಲ್ಲಿ ನರ್ಸಿಂಗ್ ವಿದ್ಯಾರ್ಥಿಗಳ ದೀಪ ಪ್ರಜ್ವಲನ ಸಂಭ್ರಮ

ಮಡಿಕೇರಿ: ಇಲ್ಲಿನ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸರ್ಕಾರಿ ಶುಶ್ರೂಷಾ ಕಾಲೇಜಿನಲ್ಲಿ 6ನೇ ಬ್ಯಾಚ್ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ದೀಪ ಪ್ರಜ್ವಲನ ಹಾಗೂ ಪ್ರತಿಜ್ಞಾ ವಿಧಿ ಸ್ವೀಕಾರ ಕಾರ್ಯಕ್ರಮ ಸಂಭ್ರಮದಿಂದ ನೆರವೇರಿತು.

ಕಾರ್ಯಕ್ರಮವನ್ನು ನಾಲ್ಕನೇ ವರ್ಷದ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿನಿ ಆಶಿತಾ ಅವರ ಪ್ರಾರ್ಥನೆಯೊಂದಿಗೆ ಆರಂಭಿಸಲಾಯಿತು. ನಂತರ ಗಣ್ಯ ಅತಿಥಿಗಳ ಸಾನಿಧ್ಯದಲ್ಲಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು.

ಡೀನ್ ಹಾಗೂ ನಿರ್ದೇಶಕ ಡಾ. ಲೋಕೇಶ್ ಎ.ಜೆ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಜರುಗಿತು.

ಸರ್ಕಾರಿ ಶುಶ್ರೂಷಾ ಕಾಲೇಜಿನ ಪ್ರಾಂಶುಪಾಲೆ ಮಂಜುಳಾ ಎ.ಕೆ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ದೀಪ ಬೆಳಗುವಿಕೆ ಹಾಗೂ ಪ್ರತಿಜ್ಞಾ ವಿಧಿ ನರ್ಸಿಂಗ್ ವೃತ್ತಿಯ ಪವಿತ್ರ ಸಾಂಪ್ರದಾಯಿಕ ಆಚರಣೆ ಎಂದು ವಿವರಿಸಿದರಲ್ಲದೆ, ವಿದ್ಯಾರ್ಥಿಗಳು ಸೇವಾಭಾವನೆ ಮತ್ತು ಶಿಸ್ತಿನಿಂದ ವೃತ್ತಿಯನ್ನು ನಿರ್ವಹಿಸಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳು ದೀಪ ಹಚ್ಚಿಸಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಸಹ ಪ್ರಾಧ್ಯಾಪಕ ಗುರುಪಾದ ಕೆ.ಪಿ ಅವರು ಕಾಲೇಜಿನ ಸಾಧನೆಗಳನ್ನು ಉಲ್ಲೇಖಿಸಿ, ಸಂಸ್ಥೆಯಿಂದ ವರ್ಷಂಪ್ರತಿ 100 ವಿದ್ಯಾರ್ಥಿಗಳು ನರ್ಸಿಂಗ್ ಕ್ಷೇತ್ರದಲ್ಲಿ ಪದವೀಧರರಾಗುತ್ತಿದ್ದು, ದೇಶ-ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ಕಾಲೇಜಿನ ಹೆಮ್ಮೆಯ ವಿಷಯ ಎಂದರು.



ಮತ್ತೋರ್ವ ಸಹ ಪ್ರಾಧ್ಯಾಪಕ ಮಾರ್ಟಿನ್ ಲೂಥರ್ ಕಿಂಗ್ ಅವರು, ಆಸ್ಪತ್ರೆಗಳಲ್ಲಿ ನರ್ಸಿಂಗ್ ವಿದ್ಯಾರ್ಥಿಗಳ ಪಾತ್ರ, ನಡವಳಿಕೆ ಮತ್ತು ರೋಗಿಗಳೊಂದಿಗೆ ಮಾನವೀಯತೆಯಿಂದ ವರ್ತಿಸುವ ಅಗತ್ಯವನ್ನು ವಿವರಿಸಿದರು.

ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ರೋಹಿಣಿ ಕೆ.ಎಂ ಅವರು ವಿದ್ಯಾರ್ಥಿಗಳೇ ಸಂಸ್ಥೆಯ ಬಲ ಎಂದು ತಿಳಿಸಿ, ಅವರ ಸಮರ್ಪಣೆ ಮತ್ತು ಶ್ರಮದಿಂದ ಸಂಸ್ಥೆ ಮತ್ತಷ್ಟು ಬೆಳೆದು ನಿಲ್ಲುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪಾಂಶುಪಾಲ ಡಾ. ವಿಶಾಲ್ ಕುಮಾರ್ ಅವರು ಅಧ್ಯಕ್ಷತೆ ವಹಿಸಿ ನರ್ಸಿಂಗ್ ವೃತ್ತಿಯ ಜವಾಬ್ದಾರಿಗಳು, ಆಸ್ಪತ್ರೆಗಳಲ್ಲಿ ಕಾರ್ಯವೈಖರಿ ಹಾಗೂ ನೈತಿಕ ಮೌಲ್ಯಗಳ ಮಹತ್ವವನ್ನು ವಿವರಿಸಿದರು

ಸರ್ಕಾರಿ ಶುಶ್ರೂಷ ಕಾಲೇಜಿನ ಪ್ರಾಧ್ಯಾಪಕರಾದ ದೀಪರಾಜ್ ಸಿ.ಎಂ, ಸಹಾಯಕ ಪ್ರಾಧ್ಯಾಪಕರಾದ ಅಶ್ವಿನಿ ಕೆ.ಎನ್, ರಂಜಿನಿ ಎಸ್.ಎನ್., ಗೀತಾ ಕೆ.ಬಿ, ಕ್ರಿಯಾ ಶಾಸ್ತ್ರ ವಿಭಾಗದ ಡಾ. ಸುಹಾಸ್, ಸಮುದಾಯ ಆರೋಗ್ಯ ವಿಭಾಗದ ಡಾ. ಮಹೇಶ್, ಡಾ. ಶರವಣ, ಡಾ. ಕೃತ್ತಿಕಾ, ಗ್ರಂಥಪಾಲಕ ಡಾ. ಸ್ವಾಮಿ ನಾಯಕ್ ಸೇರಿದಂತೆ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

ನಾಲ್ಕನೇ ವರ್ಷದ ವಿದ್ಯಾರ್ಥಿಗಳಾದ ಚಂದನಾ ಹಾಗೂ ವೇದಾ ಕಾರ್ಯಕ್ರಮ ನಿರ್ವಹಿಸಿದರು. ನಾಲ್ಕನೇ ವರ್ಷದ ಬಿ ಎಸ್ಸಿ ನರ್ಸಿಂಗ್ ವಿದ್ಯಾರ್ಥಿ ಜೀವಿತಾ ಸ್ವಾಗತಿಸಿ, ಕೃತಿಕಾ ವಂದಿಸಿದರು.

ರೂ.50 ಸಾವಿರಕ್ಕಿಂತ ಹೆಚ್ಚಿನ ಮೌಲ್ಯದ ಖರೀದಿಗೆ ಸಿಗಲಿದೆ ಇಲ್ಲಿ ಗ್ಯಾರಂಟಿ ಗಿಫ್ಟ್

'ಮುಳಿಯ'ದಲ್ಲಿ 'ಡೈಮಂಡ್ ಫೆಸ್ಟ್' ಆರಂಭ

ಪುತ್ತೂರು: ಪ್ರಸಿದ್ಧ ಆಭರಣ ಸಂಸ್ಥೆಯಾದ ಮುಳಿಯ ಗೋಲ್ಡ್ ಎಂಡ್ ಡೈಮಂಡ್ಸ್ ತನ್ನ ಗ್ರಾಹಕರಿಗಾಗಿ 'ಡೈಮಂಡ್ ಫೆಸ್ಟ್' ವಿಶೇಷ ಉತ್ಸವವನ್ನು ಆರಂಭಿಸುತ್ತಿದೆ.

'ವೈಡೆಸ್ಟ್ ರೇಂಜ್, ಎಂಡ್‌ಲೆಸ್ ವಾವ್ಸ್!' ಎಂಬ ಘೋಷಣೆಯೊಂದಿಗೆ ನಡೆಯುತ್ತಿರುವ ಈ ಉತ್ಸವವು ವಜ್ರಾಭರಣ ಪ್ರಿಯರನ್ನು ಕೈ ಬೀಸಿ ಕರೆಯುತ್ತಿದೆ. ಫೆಸ್ಟ್‌ನ ಅಂಗವಾಗಿ ಗ್ರಾಹಕರು ರೂ.50 ಸಾವಿರಕ್ಕಿಂತ ಹೆಚ್ಚಿನ ಖರೀದಿಗೆ ಖಚಿತ ಉಡುಗೊರೆಯನ್ನು ಪಡೆಯಬಹುದಾಗಿದೆ. ಜೊತೆಗೆ, ಲಕ್ಕಿ ಡ್ರಾ ಮೂಲಕ ಬಂಪರ್ ಬಹುಮಾನವಾಗಿ ಎಲೆಕ್ಟ್ರಿಕ್ ಸ್ಕೂಟರ್ ಗೆಲ್ಲುವ ಅವಕಾಶವೂ ಇದೆ. ಈ ಉತ್ಸವದ ಸಂದರ್ಭದಲ್ಲಿ ಹೆಚ್ಚಿನ ವೆರೈಟಿಯ ವಜ್ರಾಭರಣಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲಾಗಿದೆ. ವಜ್ರದ ಆಭರಣಗಳ ಮೇಲೆ ಶೇ.95 ಎಕ್ಸ್‌ಚೇಂಜ್ ಮತ್ತು ಶೇ.90 ಬೈಬ್ಯಾಕ್ ಸೌಲಭ್ಯವನ್ನು ಸಂಸ್ಥೆ ನೀಡುತ್ತಿದ್ದು, ಹಳೆಯ ಆಭರಣಗಳನ್ನು ಹೊಸದಾಗಿ ಪರಿವರ್ತಿಸಿಕೊಳ್ಳಲು ಇದು ಒಳ್ಳೆಯ ಅವಕಾಶ ಎಂದು ಸಂಸ್ಥೆ ತಿಳಿಸಿದೆ.



ಮದುವೆ ಹಾಗೂ ಹಬ್ಬಗಳ ಸೀಸನ್‌ಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ವಿನ್ಯಾಸಗಳ ಹಾರಗಳು, ಕಿವಿಯೋಲೆಗಳು, ಉಂಗುರಗಳು ಸೇರಿದಂತೆ ಹಲವಾರು ನವನವೀನ ಆಭರಣಗಳು ಈ ಉತ್ಸವದಲ್ಲಿ ಜನಾಕರ್ಷಣೆಯಾಗಿದೆ. ಅಮೂಲ್ಯ ಡೈಮಂಡ್ಸ್ ಮತ್ತು ಕಿಸ್ನ ಡೈಮಂಡ್ ಎಂಡ್ ಗೋಲ್ಡ್ ಜ್ಯುವೆಲ್ಲರಿ ಬ್ರ್ಯಾಂಡ್‌ಗಳು ಜೊತೆಯಾಗಿ ನಡೆಸುತ್ತಿರುವ ಈ ಉತ್ಸವ ಗುಣಮಟ್ಟ ಮತ್ತು ವೈವಿಧ್ಯತೆಯಲ್ಲಿಯೂ ಗಮನ ಸೆಳೆಯುತ್ತಿದೆ.

ಗ್ರಾಹಕರು ಸಮೀಪದ ಮುಳಿಯ ಶೋರೂಮ್‌ಗಳಿಗೆ ಭೇಟಿ ನೀಡಿ ಈ ವಿಶೇಷ ಆಫರ್‌ಗಳನ್ನು ತಮ್ಮದಾಗಿಸಿಕೊಳ್ಳಬಹುದು. ಪುತ್ತೂರು, ಬೆಳ್ತಂಗಡಿ, ಮಡಿಕೇರಿ ಹಾಗೂ ಗೋಣಿಕೊಪ್ಪ ಈ ನಾಲ್ಕು ಶಾಖೆಗಳಲ್ಲಿ ಡೈಮಂಡ್ ಫೆಸ್ಟ್ ನಡೆಯುತ್ತಿದೆ.

ಸ್ಪರ್ಧಾತ್ಮಕ ಬೆಲೆ

ಉತ್ಸವದ ಕುರಿತು ಪ್ರತಿಕ್ರಿಯಿಸಿದ ಸಂಸ್ಥೆಯ ಆಡಳಿತ ನಿರ್ದೇಶಕ ಕೃಷ್ಣನಾರಾಯಣ ಮುಳಿಯ, ಗ್ರಾಹಕರಿಗೆ ಅತ್ಯುತ್ತಮ ಗುಣಮಟ್ಟದ ಆಭರಣಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲೇ ಒದಗಿಸುವುದು ನಮ್ಮ ಉದ್ದೇಶ. ಈ ಡೈಮಂಡ್ ಫೆಸ್ಟ್ ಮೂಲಕ ಹೆಚ್ಚಿನ ಜನರಿಗೆ ವಿಶೇಷ ಅನುಭವ ನೀಡಲು ನಾವು ಸಜ್ಜಾಗಿದ್ದೇವೆ ಎಂದು ತಿಳಿಸಿದ್ದಾರೆ.

ಮಾ.31: ಬೆಳ್ಳಾರೆಯಲ್ಲಿ ಕೆದಂಬಾಡಿ ರಾಮಯ್ಯ ಗೌಡರ ಸಂಸ್ಮರಣೆ

ಸುಳ್ಯ: ಕೆದಂಬಾಡಿ ರಾಮಯ್ಯ ಗೌಡರ ಸಂಸ್ಮರಣೆ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ವತಿಯಿಂದ ಮಾ.31ರಂದು ಬೆಳ್ಳಾರೆ ಬಂಗ್ಲೆಗುಡ್ಡೆ ಸಮರ ವೀರ ಕೆದಂಬಾಡಿ ರಾಮಯ್ಯ ಗೌಡರ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಕೆದಂಬಾಡಿ ರಾಮಯ್ಯ ಗೌಡರ ನೇತೃತ್ವದ ತಂಡ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಸಂದರ್ಭದಲ್ಲಿ 1937ರ ಮಾ.31ರಂದು ಸಂಗ್ರಾಮಕ್ಕೆ ಹೊರಟು ಬೆಳ್ಳಾರೆಯಲ್ಲಿದ್ದ ಬ್ರಿಟಿಷರ ಖಜಾನೆಯನ್ನು ವಶಪಡಿಸಿಕೊಂಡು ನಂತರದಲ್ಲಿ ಮಂಗಳೂರಿನತ್ತ ಸಾಗಿತ್ತು. ಇದರ ಸ್ಮರಣಾರ್ಥ ಅಕಾಡೆಮಿಯು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಉದ್ಘಾಟಿಸಲಿದ್ದಾರೆ. ಶಾರದಾ ಪದವಿ ಪೂರ್ವ ಕಾಲೇಜಿನ ಪ್ರಾಧ್ಯಾಪಕ ಪ್ರಸನ್ನ ನಿಡ್ಯಮಲೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಲಿದ್ದಾರೆ. ಅತಿಥಿಗಳಾಗಿ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಾಹೀದ್ ತೆಕ್ಕಿಲ್, ಸುಳ್ಯ ತಹಶೀಲ್ದಾರ್ ಮಂಜುಳಾ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ರಾಜಣ್ಣ, ಸಹಾಯಕ ಕಾರ್ಯಪಾಲಕ ಅಭಿಯಂತರರು ಪಂಚಾಯತ್‌ರಾಜ್ ಹಾಗೂ ಬೆಳ್ಳಾರೆ ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ಎಂ.ಎಂ. ಪಯಾಜ್ ಅಹ್ಮದ್, ಬೆಳ್ಳಾರೆ ಠಾಣೆ ಉಪನಿರೀಕ್ಷ ಈರಯ್ಯ ದೂಂತೂರು, ಅಮರ ಸುಳ್ಯ ಸಮರ 1837 ಸುಳ್ಯ ತಾಲೂಕು ಸಮಿತಿಯ ಅಧ್ಯಕ್ಷ ಚಂದ್ರಾ ಕೋಲ್ಚಾರ್, ಸುಬ್ರಹ್ಮಣ್ಯ ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷೆ ರಾಜೀವಿ ಆರ್. ರೈ, ಮಂಗಳೂರು ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕ ಎಸ್.ಎನ್. ಮನ್ಮಥ, ಬೆಳ್ಳಾರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಾಮಕೃಷ್ಣ ಭಟ್ ಕುರುಂಬುಡೇಲು, ಅರೆಭಾಷೆ ಅಕಾಡೆಮಿ ಮಾಜಿ ಸದಸ್ಯ ಮಾಧವ ಗೌಡ ಕಾಮಧೇನು, ಬೆಳ್ಳಾರೆಯ ಕಾಮಧೇನು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೂಸಪ್ಪ ಗೌಡ ಮುಗುಪ್ಪು, ಬೆಳ್ಳಾರೆ ಗ್ರಾಮಗೌಡ ಸಮಿತಿ ಅಧ್ಯಕ್ಷ ಐತ್ತಪ್ಪ ಗೌಡ, ಸುಳ್ಯ ತಾಲೂಕು ಮಾಜಿ ಸೈನಿಕರ ಸಂಘದ ಅಧ್ಯಕ್ಷ ಗೌ.ಕ್ಯಾಪ್ಟನ್ ಜಯಕರ ಮಡ್ತಿಲ ಭಾಗವಹಿಸಲಿದ್ದಾರೆ.



ಕಾರ್ಯಕ್ರಮವು ಬೆಳಗ್ಗೆ 9 ಗಂಟೆಗೆ ಆರಂಭಗೊಳ್ಳಲಿದ್ದು ಬೆಳ್ಳಾರೆ ಪೊಲೀಸ್ ಠಾಣೆಯ ಸಮೀಪದಿಂದ ಬಂಗ್ಲೆಗುಡ್ಡೆ ತನಕ ಮೆರವಣಿಗೆ ಸಾಗಿ, ಕೆದಂಬಾಡಿ ರಾಮಯ್ಯ ಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ನಂತರ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪ ನಿರ್ದೇಶಕರರವರ ಕಛೇರಿ,
ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು.

ಸಂಖ್ಯೆ: ಎಂವೈಜೆಡ್/ಟೆಂಡರ್/2025–26 ದಿ.24.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

ಈ ಕಛೇರಿ ಟೆಂಡರ್ ಹರಾಜು ಪ್ರಕಟಣೆ 1) Indent No.ZAK/2025-26/AUCTION33 Dt.24.03.2026ರ ಅನ್ವಯ (FDR) Fixed Deposit Receipt ಅನ್ನು ರಾಷ್ಟ್ರೀಕೃತ ಬಾಂಕ್‌ನಿಂದ ಬಡ್ಡಿ ದರವನ್ನು ಪಡೆದು ಸ್ಥಿರ ಠೇವಣಿಗಳಲ್ಲಿ ಇರಿಸಲು ಕರೆಯುವ ಇ–ಹರಾಜು ಟೆಂಡರ್‌ರನ್ವಯ ಸಲ್ಲಿಸುವ ದಿನಾಂಕವನ್ನು ಹಾಗೂ ಇತರೆ ವಿವರಗಳನ್ನು ಇ–ಪೋರ್ಟಲ್ (https://kppp. karnataka.gov.in) ನಲ್ಲಿ ಪಡೆಯಬಹುದು.

ಸಹಿ/– ಉಪ ನಿರ್ದೇಶಕರು, ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು

DIPR/DDMYS/1887/KSMCA/1071/2025-26

ಕರ್ನಾಟಕ ಸರ್ಕಾರ
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಂಟಿ ನಿರ್ದೇಶಕರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ,
ಶಿರವಾಡ, ಕಾರವಾರ–581306. ಜಿಲ್ಲೆ: ಉತ್ತರ ಕನ್ನಡ
ದೂ: 08382–282302
E-Mail: jd-karwar@karnatakaindustry.gov.in, dic.ukd123@gmail.com

ಸಂಖ್ಯೆ: ಜಿಕೈಕೇ:ಉಕ:ವಾಹನ:ಟೆಂಡರ್:/2025–26 ದಿನಾಂಕ: 25.03.2026

ಗುತ್ತಿಗೆ ಆಧಾರದ ಮೇಲೆ ವಾಹನ ಬೇಕಾಗಿದೆ

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಶಿರವಾಡ, ಕಾರವಾರ ಕಛೇರಿಯ ಕೆಲಸಕ್ಕೆ ವಾಹನದ ಅವಶ್ಯಕತೆ ಇದ್ದು, ವಾಹನ ಪೂರೈಸುವ ಏಜೆನ್ಸಿ ಅಥವಾ ಮಾಲಕರಿಂದ ಮೊಹರ ಬಂದ ಲಕೋಟೆಗಳಲ್ಲಿ ಟೆಂಡರನ್ನು ಆಹ್ವಾನಿಸಲಾಗಿದ್ದು, ವಾಹನದ ಮೊಡೆಲ್ 2022 ಅಥವಾ ಅದರ ನಂತರದ ಅರ್ಟಿಗಾ/ಇನೋವಾ ಆಗಿರಬೇಕು, ವಾಹನವು ಬಿಳಿ ಬಣ್ಣದ್ದಾಗಿದ್ದು, ವಾಹನದ ಇಂಧನದ ವೆಚ್ಚ ಹಾಗೂ ಇನ್ನಿತರ ವೆಚ್ಚಗಳು ಒಳಗೊಂಡಂತೆ ಚಾಲಕ ಸಹಿತ ಟೆಂಡರ್ ದರಗಳನ್ನು ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳನ್ನು ಹಾಗೂ ಷರತ್ತುಗಳನ್ನು ಈ ಕಛೇರಿಯ ಕೆಲಸದ ದಿವಸಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.03.2026, ಸಮಯ: ಮ. 2.00 ಗಂಟೆಯ ಒಳಗೆ ಆಗಿರುತ್ತದೆ.

ಸಹಿ/–, ಜಂಟಿ ನಿರ್ದೇಶಕರು,
ಜಿಲ್ಲಾ ಕೈಗಾರಿಕಾ ಕೇಂದ್ರ, ಕಾರವಾರ

DIPR/KWR/KSMCA/1255/25-26 Dt.26.03.26

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ
Pho: 08194-234488 Email:-eerdwsd.chd@gmail.com

ನಂ.ಗ್ರಾ.ನೀ.ಸ.&ನೈ./ವಿ/ಚಿ/ಕಾಇಂ/ಬಿ4/ಟೆಂಡರ್/2025–26/1855
ದಿನಾಂಕ: 27.03.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು–03 ನಿಭಂದನೆಗೊಳಪಟ್ಟಂತೆ, ಲೋಕೋಪಯೋಗಿ ಇಲಾಖೆ ಇವರಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ನೋಂದಣಿ ಮಾಡಿಸಿದ ಗುತ್ತಿಗೆದಾರರಿಂದ ಇ–ಪ್ರಾಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಜೆ.ಜೆ.ಎಂ ಯೋಜನೆಯಡಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ವ್ಯಾಪ್ತಿಯಡಿ 01 ಕಾಮಗಾರಿಗಳಿಗೆ ರೂ. 63.76 ಲಕ್ಷಗಳಿಗೆ ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 13.04.2026 ಸಂಜೆ 4–00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15.04.2026 ರ ಸಂಜೆ 4–30 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.04.2026 ಬೆಳಗ್ಗೆ 11–00 ಗಂಟೆಗೆ ಕಾಮಗಾರಿಗಳ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ. ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

DIPR/CTA/KSMCA/805/2025-26

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರು–3, #17/1, 4ನೇ ಮುಖ್ಯ ರಸ್ತೆ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ರಾಜಾಜಿನಗರ, ಬೆಂಗಳೂರು–560044.

ಸಂ: ಇಇ–3/ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಟಿಎನ್‌ಡಿ/ಮೈನಾರಿಟಿ/2025–26/319
ದಿನಾಂಕ: 27.03.2026

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಬಿಬಿಎಂಪಿ ವಿಭಾಗ–3, ಇವರು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (ಕೆಪಿಪಿಪಿ) ಮೂಲಕ ಟೆಂಡರ್ ಉಲ್ಲೇಖ ಸಂಖ್ಯೆ **ಕೆಆರ್‌ಐಡಿಎಲ್/2025–26/ಆರ್‌ಡಿ/ವರ್ಕ್–ಇಂಡೆಂಟ್24** ಮತ್ತು **ಕೆಆರ್‌ಐಡಿಎಲ್/2025–26/ಆರ್‌ಡಿ/ವರ್ಕ್–ಇಂಡೆಂಟ್47** ರಲ್ಲಿರುವ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಪ್ರತೀ ಕಾಮಗಾರಿಯ ಅಂದಾಜು ಯೋಜನಾ ವೆಚ್ಚ **ರೂ.995.00 ಲಕ್ಷ**ಗಳು ಮತ್ತು ಇಎಂಡಿ ಮೊತ್ತ **ರೂ.11.50 ಲಕ್ಷ**ಗಳು ಆಗಿರುತ್ತದೆ.

ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಗುತ್ತಿಗೆದಾರರು/ಸಂಸ್ಥೆಗಳು ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ಮೂಲಕ ಮಾತ್ರ ವೀಕ್ಷಿಸಬಹುದು, ಡೌನ್‌ಲೋಡ್ ಮಾಡಬಹುದು ಮತ್ತು ಅರ್ಜಿ ಸಲ್ಲಿಸಬಹುದು.

ಟೆಂಡರ್ ವೇಳಾಪಟ್ಟಿಯು ಕೆಳಕಂಡಂತಿರುವುದು:

> ಆನ್‌ಲೈನ್ ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ: **02.04.2026, 16.00** ಗಂಟೆವರೆಗೆ.
> ಪ್ರೀ–ಬಿಡ್ ಸಭೆ ದಿನಾಂಕ: **06.04.2026, 11.00** ಗಂಟೆವರೆಗೆ.
> ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **15.04.2026, 16.00** ಗಂಟೆವರೆಗೆ.
> ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17.04.2026, 11.00** ಗಂಟೆಗೆ.
> ಹಣಕಾಸು ಬಿಡ್ ತೆರೆಯುವ ದಿನಾಂಕ: **21.04.2026, 11.00** ಗಂಟೆಗೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: **https://kppp.karnataka.gov.in**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೆಆರ್‌ಐಡಿಎಲ್, ಬಿಬಿಎಂಪಿ ವಿಭಾಗ–3, ಬೆಂಗಳೂರು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕ.ನೀ.ನಿ.ನಿ.,
ಮ.ಬ.ದ.ಕಾ.ನಿ. ವಿಭಾಗ ನಂ. 1, ನರಗುಂದ ಜಿಲ್ಲೆ : ಗದಗ
Tel : 08377-244236 e-mail : knnlestablishment@gmail.com

ಸಂ:ಕನೀನಿನಿ/ಮಬದಕಾನಿವಿ–1/ಪಿಬಿ/ಟೆಂಡರ/2025–26/1857 ದಿ : 23.03.2026

ಅಲ್ಪಾವಧಿ ಟೆಂಡರ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ವಿಭಾಗದಡಿ ಬರುವ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ 4ನೇ ದರ್ಜೆ ಮೇಲ್ಪಟ್ಟ ಮತ್ತು CEIG Class-I & above Electrical Contractor with Labour License Form-C ನೋಂದಾಯಿತರಾಗಿರುವ ಗುತ್ತಿಗೆದಾರರಿಂದ ಶೇಕಡಾವಾರು (KW-1&KW-2) ಟೆಂಡರನ್ನು ಏಕಲಕೋಟೆ ಪದ್ಧತಿಯಲ್ಲಿ ಈ ಕೆಳಗಿನಂತೆ ಆಹ್ವಾನಿಸಲಾಗಿದೆ.

(1) ಒಟ್ಟು ಕಾಮಗಾರಿಗಳ ಸಂಖ್ಯೆ : **11** ಕಾಮಗಾರಿಗಳು (2) ಟೆಂಡರಗಿಟ್ಟ ಪ್ರತಿ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ (ಜಿ.ಎಸ್.ಟಿ ಸೇರಿಸಿ) ರೂ. **5.00** ಲಕ್ಷಗಳಿಂದ ರೂ. **35.00** ಲಕ್ಷಗಳವರೆಗೆ ಮತ್ತು ಇ.ಎಂ.ಡಿ ಮೊತ್ತ ರೂ. **5300.00** ರಿಂದ ರೂ. **53000.00** ವರೆಗೆ (3) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **13–04–2026** ರಂದು ಸಂಜೆ 4.00 ಗಂಟೆಯವರೆಗೆ. (4) ಟೆಂಡರ ತೆರೆಯುವ ದಿನಾಂಕ : **15–04–2026** ರಂದು ಬೆಳಿಗ್ಗೆ 11.00 ಗಂಟೆ

ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಮುಖೇನ KPPP.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ : **08377–244236** ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕನೀನಿನಿ ಮಬದಕಾನಿ ವಿಭಾಗ ನಂ.1 ನರಗುಂದ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/732/2025–26

ನಗರಸಭಾ ಕಾರ್ಯಾಲಯ, ಹೂಟಗಳ್ಳಿ
ರೋಟರಿ ಶಾಲೆ ಹತ್ತಿರ, ಕೆ.ಹೆಚ್.ಬಿ.ಕಾಲೋನಿ, ಹೂಟಗಳ್ಳಿ, ಮೈಸೂರು ಜಿಲ್ಲೆ–570018
ಸಹಾಯವಾಣಿ ಸಂಖ್ಯೆ : 0821–2001737, E-Mail: ka.hootagalli.cmc@gmail.com

ಸಂಖ್ಯೆ: ನಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್–04/2025–26 ದಿನಾಂಕ: 27.03.2026

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2025–26ನೇ ಸಾಲಿನ ನಗರಸಭಾ ನಿಧಿಯಡಿ ಅಭಿವೃದ್ಧಿ ಕಾಮಗಾರಿಗಳ ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ KW–02 Standard Bid Documents ನಿಯಮದಂತೆ KPP ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು. ಲೋಕೋಪಯೋಗಿ ಇಲಾಖೆಯ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ಗಳನ್ನು https://kppp.karnataka.gov.in ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:13.04.2026 ಸಂಜೆ 5.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ:15.04.2026 ಬೆಳಗ್ಗೆ 11.00 ಗಂಟೆಗೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ ಹಾಗೂ ಜಿ.ಎಸ್.ಟಿ.ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಕ್ರ ಸಂ	ಕಾಮಗಾರಿಗಳ ಇಂಡೆಂಟ್ ವಿವರಗಳು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)	ನಿಗಧಿಗೊಂಡ ಮೀಸಲಾತಿ
1	DMA/2025-26/OW/WORK_INDENT56229	50.00	85,000.00	OTHERS

ಸಹಿ/– ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಾಸಾಸಂಇ/ಮೈಸೂರು/ಶಿರಡಿಸಾಯಿ/1900/2025–26

ಪಟ್ಟಣ ಪಂಚಾಯತು ಕಾರ್ಯಾಲಯ, ಬೆಳ್ತಂಗಡಿ–574214,
ದಕ್ಷಿಣ ಕನ್ನಡ ಜಿಲ್ಲೆ
ವೆಬ್‌ಸೈಟ್: www.belthangaditown.gov.in ಇ–ಮೇಲ್: co.belthangadi@gmail.com

1 ಸಿಆರ್;ಜೆಇ:ಪು.ರ/2026–27 ದಿನಾಂಕ: 26/03/2026

ಅಲ್ಪಾವಧಿ–ಟೆಂಡರು ಪ್ರಕಟಣೆ

ಬೆಳ್ತಂಗಡಿ ಪಟ್ಟಣ ಪಂಚಾಯತ್ ವ್ಯಾಪ್ತಿಯ 2026–27 ನೇ ಸಾಲಿನ ಪುರಸಭಾ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಯ ಟೆಂಡರನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಾವು ನಮೂದಿಸಿದ ಟೆಂಡರ್ ದರಗಳನ್ನು ಸೀಲ್ಡ್ ಮಾಡಿದ ಲಕೋಟೆಯಲ್ಲಿ ಕೆಲಸದ ಹೆಸರನ್ನು ಬರೆದು ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಬೆಳ್ತಂಗಡಿ ಇವರಿಗೆ ದಿನಾಂಕ: 10/04/2026ರ ಸಾಯಂಕಾಲ 4.00 ಗಂಟೆಯೊಳಗೆ ಸಲ್ಲಿಸಬಹುದಾಗಿದೆ.

(1) ಟೆಂಡರು ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ಮತ್ತು ವೇಳೆ: 27/03/2026 ರಿಂದ 10/04/2026 ರ ಅಪರಾಹ್ನ 3.00 ಗಂಟೆವರೆಗೆ (2) ಟೆಂಡರು ಶೆಡ್ಯೂಲ್ ನೀಡುವ ದಿನಾಂಕ: 27/03/2026 ರಿಂದ 10/04/2026 ರ ಅಪರಾಹ್ನ 3.30 ರವರೆಗೆ (3) ಭರ್ತಿ ಮಾಡಿದ ಟೆಂಡರು ಸಲ್ಲಿಸುವ ಕೊನೆಯ ದಿನಾಂಕ: 10/04/2026 ಸಾಯಂಕಾಲ 4.00 ಗಂಟೆಯ ತನಕ (4) ಟೆಂಡರು ತೆರೆಯುವ ದಿನಾಂಕ ಮತ್ತು ವೇಳೆ: 10/04/2026 ಸಯಾಂಕಾಲ 4.30ಕ್ಕೆ ಪ.ಪಂ ಕಛೇರಿ ಸಭಾಂಗಣದಲ್ಲಿ.

ಕಾಮಗಾರಿ ಹೆಸರು: (1) ಬೆಳ್ತಂಗಡಿ ಪಟ್ಟಣ ಪಂಚಾಯತ್ ವ್ಯಾಪ್ತಿಯ 8ನೇ ವಾರ್ಡ ಸುಧೆಮುಗೇರು–ಮಟ್ಲದಲ್ಲಿ ಕೊರೆದಿರುವ ಕೊಳವೆ ಬಾವಿಯನ್ನು ಸ್ವಚ್ಛಗೊಳಿಸಿ ಅಳ ಮಾಡುವುದು. ಅಂದಾಜು ಮೊತ್ತ: 1,90,000.00. ಟೆಂಡರಿಗಿಟ್ಟ ಮೊತ್ತ: 1,60,426.00, ಇ.ಎಂ.ಡಿ: ರೂ. 4,011.00, ಗುತ್ತಿಗೆದಾರರ ದರ್ಜೆ: 4 ನೇ ದರ್ಜೆ ಮತ್ತು ಮೇಲ್ಪಟ್ಟು, ಅರ್ಜಿ ಫಾರಂ ಶುಲ್ಕ (ರೂ ಗಳಲ್ಲಿ): 1000/–+GST 18%=1180, ಕೆಲಸ ಮುಗಿಸಲು ಕಾಲಾವಧಿ: 15ದಿನಗಳಲ್ಲಿ

ಶರ್ತಗಳು: (1) ಗುತ್ತಿಗೆದಾರರು ಖಾಲಿ ಟೆಂಡರು ಫಾರಂಗೆ ಅರ್ಜಿ ಸಲ್ಲಿಸುವಾಗ 2025–26 ನೇ ಸಾಲಿನ ನವೀಕರಿಸಲಾದ ಲೋಕೋಪಯೋಗಿ ಇಲಾಖೆ ಲೈಸೆನ್ಸ್ ಪತ್ರಿಯನ್ನು ಅರ್ಜಿಯೊಂದಿಗೆ ಲಗತ್ತಿಸಬೋಕು. ಹಾಗೂ ಅರ್ಜಿ ಫಾರಂ ಬೆಲೆಯೊಂದಿಗೆ ಇ.ಎಂ.ಡಿ.ಯ ಮೊತ್ತವನ್ನು ಡಿ.ಡಿ ಅಥವಾ ನಗದು ರೂಪದಲ್ಲಿ ಪಾವತಿಸಬೇಕು ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಗುತ್ತಿಗೆದಾರರು ನವೀಕರಿಸಿದ ಆದಾಯ ತೆರಿಗೆ ಮತ್ತು ಮಾರಟ ತೆರಿಗೆ ತಿರುವಳಿ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು. (2) 2025–26 ನೇ ಸಾಲಿನ ಆದಾಯ ತೆರಿಗೆ ಮತ್ತು ಮಾರಟ ತೆರಿಗೆ ಪಾವತಿಯ Clearance certificate ಇರಬೇಕು ಹಾಗೂ ಟಿನ್ ನಂ, ಪಾನ್ ನಂ ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪೃಥ್ವಿ ಸಾನಿಕಂ,
ಆಡಾಳಿತಾಧಿಕಾರಿ
ಪಟ್ಟಣ ಪಂಚಾಯತ್ ಬೆಳ್ತಂಗಡಿ

ಸಹಿ/– ರಾಜೇಶ್ ಕೆ
ಮುಖ್ಯಾಧಿಕಾರಿ,
ಪಟ್ಟಣ ಪಂಚಾಯತ್ ಬೆಳ್ತಂಗಡಿ

DIPR/DK/KSMCA/1825/25-26 dt. 27.03.2026

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಕುಂದಾಪುರ ಉಪವಿಭಾಗ, ಕುಂದಾಪುರ–576201

No.ACF/CR- 168/E-TENDER/OUTSOURCE/2025-26 ದಿನಾಂಕ: 24–03–2026

ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿನಲ್ಲಿ ಕುಂದಾಪುರ ಉಪ ವಿಭಾಗ ವ್ಯಾಪ್ತಿಗೊಳಪಡುವ ವಿಭಾಗ ಕಛೇರಿ, ಉಪ ವಿಭಾಗ ಕಛೇರಿ, ವಲಯ ಕಛೇರಿ ಹಾಗೂ ಡಿಪೋಗಳಿಗೆ ಅಗತ್ಯವಿರುವ ಗಣಕಯಂತ್ರ ನಿರ್ವಾಹಕರು / ಲಿಪಿಕ ಸಹಾಯಕರು / ವಾಹನ ಚಾಲಕರು ಮತ್ತು ಇತರ 'ಡಿ' ಗ್ರೂಪ್ ನೌಕರರ ಸೇವೆಯನ್ನು ಸೇವಾ ಸಂಸ್ಥೆ (Outsourcing) ಮೂಲಕ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ–ಟೆಂಡರನ್ನು ಅಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದು ಇ–ಟೆಂಡರ್ ಸಲ್ಲಿಸಲು ಕೊನೆಯ ದಿ. 08–04–2026 ರಂದು ಅಪರಾಹ್ನ 4.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ಸಮಯ: ದಿ. 09–04–2026 ಅಪರಾಹ್ನ 4.30 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ಸಮಯ: ದಿ. 10–04–2026 ರಂದು ಅಪರಾಹ್ನ 4.35 ಗಂಟೆಗೆ, ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ
ಉ.ಅ.ಸಂರವರ ತಾಂತ್ರಿಕ ಸಹಾಯಕರು
ಕುಂದಾಪುರ ವಿಭಾಗ, ಕುಂದಾಪುರ

ವಾಸಾಇ/ಸನಿಉ/ಕೆಎಸ್‌ಎಂಸಿಎ/822/25–26 ದಿ: 27–03.2026

ಕರ್ಣಾಟಕ ಬ್ಯಾಂಕ್ ಲಿ.

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ
3ನೇ ಮಹಡಿ, ಕರ್ಣಾಟಕ ಬ್ಯಾಂಕ್ ಬಿಲ್ಡಿಂಗ್,
ಕೊಡಿಯಾಲ್‌ಬೈಲ್, ಮಂಗಳೂರು–575003.

ದೂರವಾಣಿ : 0824-2422811(Gen)/2427811 (CM)
ಇ–ಮೇಲ್ : mlr.arm@ktkbank.com
Website : https://www.karnatakabank.bank.in
CIN : L85110KA1924PLC001128

ಸ್ವಾಧೀನತೆಯ ನೋಟೀಸು (ಸ್ಥಿರಾಸ್ತಿಗೆ ಸಂಬಂಧಿಸಿದಂತೇ)

ಕರ್ಣಾಟಕ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002 ರನ್ವಯ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002 ರ ಪರಿಚ್ಛೇದ 13 (12) ನಿಯಮ 3 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿಕೊಂಡು ದಿನಾಂಕ **31.12.2025** ರಂದು **ತಗಾದೆ** ನೋಟೀಸನ್ನು ಸಾಲಗಾರರು/ಅಡಮಾನದಾರರು/ಸಹ–ಬಾಧ್ಯತೆದಾರರು/ಜಾಮೀನುದಾರರು: **1) ಶ್ರೀ ಮೊಹಮ್ಮದ್ ಬಿ.ಎಚ್., ಶ್ರೀ ಹಸನಬ್ಬ ರವರ ಮಗ, 2) ಶ್ರೀಮತಿ ರಜಿಯಾ,** ಶ್ರೀ ಮೊಹಮ್ಮದ್ ಬಿ. ಎಚ್. ರವರ ಪತ್ನಿ, ನಂ. 1 & 2 ಇವರುಗಳ ವಿಳಾಸ: ನಂ. 1–67/1, ಕೈರಂಗಳ ಗ್ರಾಮ & ಅಂಚೆ, ಬಂಟ್ವಾಳ ತಾಲೂಕು, ದ.ಕ.ಜಿಲ್ಲೆ – 574 153, ಇವರಿಗೆ ಸದ್ರಿ ಸಾಲದ ಬಾಬ್ತು ನೋಟೀಸಿನಲ್ಲಿ ಕಾಣಿಸಿದ **ಟಿಎಲ್ ಖಾತೆ ಸಂಖ್ಯೆ 4187001600037401** ರಲ್ಲಿ ರೂ. **21,99,555.81 (ರೂಪಾಯಿ ಇಪ್ಪತ್ತೊಂದು ಲಕ್ಷದ ತೊಂಭತ್ತೊಂಭತ್ತು ಸಾವಿರದ ಐನೂರ ಐವತ್ತೈದು ಮತ್ತು ಪೈಸೆ ಎಂಭತ್ತೊಂದು ಮಾತ್ರ)** ಮತ್ತು ದಿನಾಂಕ **22.12.2025** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳನ್ನು, ಈ ನೋಟೀಸು ಪಡೆದ ದಿನಾಂಕದಿಂದ 60 ದಿನಗಳೊಳಗೆ ಪಾವತಿಸುವಂತೇ ಸೂಚಿಸಲಾಗಿರುತ್ತದೆ.

ಸಾಲಗಾರರು/ಅಡಮಾನದಾರರು/ಸಹ–ಬಾಧ್ಯತೆದಾರರು/ಜಾಮೀನುದಾರರು ಬಾಕಿ ಹಣವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ **ಅಧಿಕೃತ ಅಧಿಕಾರಿಯವರು ಮೇಲೆ ಹೇಳಿದ ಕಾಯಿದೆಯ ಪರಿಚ್ಛೇದ 13(4) ರ ನಿಯಮ 8 ರಲ್ಲಿ ದತ್ತವಾದ ಅಧಿಕಾರದಂತೆ ಕೆಳಗೆ ವಿವರಣೆ ನೀಡಿದ ಆಸ್ತಿಯನ್ನು 27.03.2026 ರಂದು ಸ್ವಾಧೀನಪಡಿಸಿಕೊಳ್ಳಲಾಗಿದೆ** ಎಂದು ಸಾಲಗಾರರಿಗೆ / ಅಡಮಾನದಾರರಿಗೆ/ಸಹ–ಬಾಧ್ಯತೆದಾರರಿಗೆ/ಜಾಮೀನುದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಸಾಲಗಾರರು / ಅಡಮಾನದಾರರು / ಸಹ–ಬಾಧ್ಯತೆದಾರರು / ಜಾಮೀನುದಾರರು ಮತ್ತು ಸಾರ್ವಜನಿಕರು ಈ ಸ್ಥಿರಾಸ್ತಿಯ ಬಗ್ಗೆ ಯಾವುದೇ ವ್ಯವಹಾರ ಮಾಡಬಾರದಾಗಿ ಈ ಮೂಲಕ ಎಚ್ಚರಿಸಲಾಗಿದೆ. ಆದಾಗ್ಯೂ ಈ ಸ್ಥಿರಾಸ್ತಿ ಬಗ್ಗೆ ವ್ಯವಹಾರ ನಡೆಸಿದಲ್ಲಿ **ಕರ್ಣಾಟಕ ಬ್ಯಾಂಕ್ ಲಿ., ಕುರ್ನಾಡ್–ಮುಡಿಪು ಶಾಖೆಗೆ ಸಲ್ಲತಕ್ಕ ಟಿಎಲ್ ಖಾತೆ ಸಂಖ್ಯೆ 4187001600037401** ರಲ್ಲಿ ರೂ. **21,76,609.81 (ರೂಪಾಯಿ ಇಪ್ಪತ್ತೊಂದು ಲಕ್ಷದ ಎಪ್ಪತ್ತಾರು ಸಾವಿರದ ಆರ್ನೂರ ಒಂಭತ್ತು ಮತ್ತು ಪೈಸೆ ಎಂಭತ್ತೊಂದು ಮಾತ್ರ)** ಮತ್ತು ದಿನಾಂಕ **22.03.2026** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳ ಪಾವತಿಗೆ ಬಾಧ್ಯಸ್ಥರಾಗಿರುತ್ತಾರೆ.

(ಭದ್ರತೆಯ ಸ್ವತ್ತುಗಳನ್ನು ಹಿಂದೆ ಪಡೆಯುವ ಬಗ್ಗೆ ಕಾಯಿದೆಯ ಸೆಕ್ಷನ್ 13 ಉಪನಿಯಮ (8) ರಲ್ಲಿ ಲಭ್ಯವಾಗುವ ಕಾಲಾವಕಾಶದ ಬಗ್ಗೆ ಸಾಲಗಾರರ, ಅಡಮಾನದಾರರ, ಸಹ–ಬಾಧ್ಯತೆದಾರರ & ಜಾಮೀನುದಾರರ ಗಮನವನ್ನು ಸೆಳೆಯಲಾಗಿದೆ).

ಸ್ಥಿರಾಸ್ತಿಯ ವಿವರಗಳು

ಶ್ರೀ ಮೊಹಮ್ಮದ್ ಬಿ.ಎಚ್. ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಕೃಷಿಯೇತರ ಭೂಮಿಯ ಸರ್ವೆ ನಂಬ್ರ **128/3ಎಫ್** ರಲ್ಲಿ ವಿಸ್ತೀರ್ಣ **5 ಸೆಂಟ್ಸ್** ಮತ್ತು ಸರ್ವೆ ನಂಬ್ರ **131/2ಎ**ಯಲ್ಲಿ **13 ಸೆಂಟ್ಸ್**, ಒಟ್ಟು ವಿಸ್ತೀರ್ಣ **18 ಸೆಂಟ್ಸ್**. ಆಸ್ತಿ ಐಡಿ ನಂಬ್ರ **151100200700221232** ಮತ್ತು **151100200700200080**. ಅದರೊಂದಿಗೆ ಅಲ್ಲಿರುವ ಮನೆ ಕಟ್ಟಡ ಒಳಗೊಂಡಿದೆ. ಈ ಸ್ಥಿರಾಸ್ತಿಯು ಕೈರಂಗಳ ಗ್ರಾಮ, ಬಂಟ್ವಾಳ ತಾಲೂಕಿನಲ್ಲಿದೆ.

ಗಡಿರೇಖೆಗಳು: ದಾಖಲೆಗಳ ಪ್ರಕಾರ & ವಾಸ್ತವ:

	ದಾಖಲೆಗಳ ಪ್ರಕಾರ	ವಾಸ್ತವ ಗಡಿರೇಖೆ
ಉತ್ತರ	: ಆಸ್ತಿಯ ಸರ್ವೆ ನಂಬ್ರ 128/3ಬಿ	ಆಸ್ತಿಯ ಸರ್ವೆ ನಂಬ್ರ 128/3ಬಿ
ಪೂರ್ವ	: ಅದೇ ಸಬ್‌ಡಿವಿಜನಿನ ಭಾಗ	ಅದೇ ಸಬ್‌ಡಿವಿಜನಿನ ಭಾಗ
ಪಶ್ಚಿಮ	: ಆಸ್ತಿಯ ಸರ್ವೆ ನಂಬ್ರ 131/2ಎ	ಆಸ್ತಿಯ ಸರ್ವೆ ನಂಬ್ರ 131/2ಎ
ದಕ್ಷಿಣ	: ಆಸ್ತಿಯ ಸರ್ವೆ ನಂಬ್ರ 131/2ಎ	ಆಸ್ತಿಯ ಸರ್ವೆ ನಂಬ್ರ 131/2ಎ

ದಿನಾಂಕ : 27.03.2026
ಸ್ಥಳ : ಕೈರಂಗಳ ಗ್ರಾಮ, ಬಂಟ್ವಾಳ ತಾಲೂಕು.

ಸಹಿ/–, ಮುಖ್ಯ ಪ್ರಬಂಧಕರು ಮತ್ತು ಅಧಿಕೃತ ಅಧಿಕಾರಿ
ಕರ್ಣಾಟಕ ಬ್ಯಾಂಕ್ ಲಿ.,

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ,
ಲೋ.ಇ. ಉಡುಪಿ ವಿಭಾಗ - ಉಡುಪಿ - 576101
ದೂರವಾಣಿ & ಫ್ಯಾಕ್ಸ್: (0820) 2531802

ನಂ. ಪಿಡಬ್ಲ್ಯೂಡಿ:ಯುಡಿಎನ್:ಎನ್‌ಐಟಿ: 57:2025–26: ಎಇ–2 ದಿನಾಂಕ: 27.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

2025–26ನೇ ಸಾಲಿನ ರೂ. 112.51 ಲಕ್ಷದಿಂದ 132.75 ಲಕ್ಷದವರೆಗಿನ (ಜಿ.ಎಸ್.ಟಿ. ಹೊರತುಪಡಿಸಿ), 5054–80–190–0–01–132 – ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಯೋಜನೆಯಡಿಯ 2 ಬೃಹತ್ ಸೇತುವೆಗಳ Retrofitting/ದುರಸ್ತಿ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ "ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್" "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ – 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ–ಪ್ರೋಕ್ಯೂರ್ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:08.04.2026 ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)
ಇ–ಮೇಲ್: midhly@yahoo.co.in ಫೋ.ನಂ: 08284–220113

ಸಂ: ಕಾನಿಅ/ಸನೀವಿಹ/ತಾವಿ/ಟೆಂಡರ್/4702/2025–26/2715 ದಿನಾಂಕ: 26/03/2026

ಅಲ್ಪಾವಧಿ ಟೆಂಡರ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ಕೆ.ಡಬ್ಲ್ಯೂ–3&4 ಕರ್ನಾಟಕ ಲೋಕೋಪಯೊಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ KW-3&4 (ದ್ವಿ–ಲಕೋಟೆ) ಪದ್ಧತಿಯಲ್ಲಿ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ" ಮುಖಾಂತರ ಟೆಂಡರ ಕರೆಯಲಾಗಿದೆ.

(1) ಇಂಟೆಂಡ್ ನಂ: 10155 (2ನೇ ಕರೆ) (2) ಇಂಟೆಂಡ್ ನಂ: 10554 (2ನೇ ಕರೆ) (3) ಇಂಟೆಂಡ್ ನಂ: 10594 (2ನೇ ಕರೆ) (4) ಇಂಟೆಂಡ್ ನಂ: 11529 (5) ಇಂಟೆಂಡ್ ನಂ: 11560 (6) ಇಂಟೆಂಡ್ ನಂ: 11562 (7) ಇಂಟೆಂಡ್ ನಂ: 11555 (8) ಇಂಟೆಂಡ್ ನಂ: 11563 (9) ಇಂಟೆಂಡ್ ನಂ: 11565 (10) ಇಂಟೆಂಡ್ ನಂ: 11520 (11) ಇಂಟೆಂಡ್ ನಂ: 11521 (12) ಇಂಟೆಂಡ್ ನಂ: 11527 (13) ಇಂಟೆಂಡ್ ನಂ: 11531

ಖಾಲಿ ಟೆಂಡರ ಫಾರಂಗಳನ್ನು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ವೆಬಸೈಟ್ ವಿಳಾಸ: "https://kppp.karnataka.gov.in" ದಲ್ಲಿ ದಿನಾಂಕ: 31–03–2026 ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: 09–04–2026 ರೊಳಗಾಗಿ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕಚೇರಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ: 10–04–2026 ರ ಸಾಯಂಕಾಲ 05.15 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 13–04–2026 ಮುಂಜಾನೆ 11.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ನ ಅನುಮೋದನೆ ನಂತರ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಕೆ.ಡಬ್ಲ್ಯೂ–3&4 ಬಿಡ್ ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–, (ಎಂ. ನಾಗರಾಜ)
ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಹಳಿಯಾಳ ವಿಭಾಗ (ಉ.ಕ)

DIPR/KWR/KSMCA/1260/25-26 Dt.27.03.2026

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)
ನೊಂದಣಿಕಛೇರಿ, ಗುವಿಸಕಂನಿ, ಮುಖ್ಯರಸ್ತೆ, ಕಲಬುರಗಿ 585102. ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ., ಕೊಪ್ಪಳ.
ದೂರವಾಣಿ ಸಂಖ್ಯೆ: (08539) 200033/23. CIN: U4010KA2002SGC030436 Email: seemrbgescom@gmail.com Website:gescom.in

ಸಂಖ್ಯೆ: ಅಇಂ(ವಿ)/ಕಾನಿಅ(ವಿ)/ಸಕಾನಿಅ(ತಾ)–2/ಕೊ/ಕ–68/2025–26/7576 ದಿನಾಂಕ:26.03.2026

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)
ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

1. ಲಿಂಕ್ ಲೈನ್ ಕಾಮಗಾರಿ:

Indent No:1.GESCOM/2025-26/EL/WORK_INDENT291 Dtd:20.03.2026

ಅಧೀಕ್ಷಕಅಭಿಯಂತರರು (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಜೆಸ್ಕಾಂ, ಕೊಪ್ಪಳ ಕಛೇರಿಯಿಂದ ಈ ಕೆಳಗಿನ ಲಿಂಕ್ ಲೈನ್ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಾರ್ಶಿಯಲ್ ಟರ್ನ್‌ಕೀ ಆಧಾರದ ಮೇಲೆ ಅರ್ಹಗುತ್ತಿಗೆದಾರರಿಂದ ಬಿಡ್‌ನ್ನು ಆಹ್ವಾನಿಸಲಾಗಿದೆ (ವಿದ್ಯುತ್ ಕಂಬಗಳು, ರ್‍ಯಾಬಿಟ್ ಕಂಡಕ್ಟರ್ ಗು.ವಿ.ಸ.ಕಂ.ನಿ ಇಲಾಖೆಯಿಂದ ಸರಬರಾಜು ಮಾಡಲಾಗುವುದು).

ಗಂಗಾವತಿ ವಿಭಾಗದ ವ್ಯಾಪ್ತಿಗೆ ಒಳಪಡುವ ಗಂಗಾವತಿ ಉಪ–ವಿಭಾಗದ ಕನಕಗಿರಿ ಶಾಖೆಯ 110/33/11 ಕೆ.ವಿ ಕನಕಗಿರಿ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜಾಗುವ 11 ಕೆವಿ ಎಫ್–4 ಹುಲಿಹೈದರ ಐ.ಪಿ ಫೀಡರ್‌ನ ಅಧೀಕ ಭಾರವಿರುವ ಲೋಡನ್ನು ವಿಭಜಿಸಿ 110/11 ಕೆ.ವಿ ಕನಕಗಿರಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹೊಸದಾಗಿ 08.3 ಕಿ.ಮೀ. ನಷ್ಟು ಹೊಸ 11ಕೆ.ವಿ. (ಐ.ಪಿ ಫೀಡರ್‌ನ್ನು) ನಿರ್ಮಿಸುವ ಲಿಂಕ್ ಲೈನ್‌ಕಾಮಗಾರಿಗೆ ಗುತ್ತಿಗೆ ಆಧಾರದ ಮೇಲೆ ಇ–ಪ್ರಕ್ಯೂರಮೆಂಟ್ ಮುಖಾಂತರ ಟೆಂಡರನ್ನು ಅರ್ಹ ಗುತ್ತಿಗೆದಾರರಿಂದ ಬಿಡ್‌ಗಳನ್ನು ಅಹ್ವಾನಿಸಲಾಗಿದೆ.

ಟೆಂಡರ್ ಮೊತ್ತ=14.95 ಲಕ್ಷಗಳಲ್ಲಿ ಮತ್ತು ಇ.ಎಮ್.ಡಿ ಮೊತ್ತ=18695.00

2. ಗೃಹ ರಕ್ಷಕರು:

1. **ವಿಭಾಗ:** ಕೊಪ್ಪಳ **ಕೆಲಸದ ವಿವರ:** ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಕೊಪ್ಪಳ ವೃತ್ತ ಕಛೇರಿಗೆ ಒಳಪಡುವ ಕೊಪ್ಪಳ ವಿಭಾಗ ಕಛೇರಿ, ಕೊಪ್ಪಳ/ಮುನಿರಾಬಾದ್/ ಯಲಬುರ್ಗಾ ಉಪ–ವಿಭಾಗ ಹಾಗೂ ಕುಕನೂರು ಶಾಖಾ ಕಛೇರಿಗಳಿಗೆ ಬೇಕಾಗಿರುವ ಗೃಹ ರಕ್ಷಕರು ಪ್ರತಿ ದಿನದ ಕಛೇರಿ ಕೆಲಸಕ್ಕಾಗಿ ಹೊರಗಿನ ಅರ್ಹ ಏಜೆನ್ಸಿಗಳಿಂದ ಸೇವೆಯನ್ನು ಪಡೆಯಲು ಈ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ. **ಗೃಹ ರಕ್ಷಕರ ಒಟ್ಟು ಸಂಖ್ಯೆ:** 15 **ಟೆಂಡರ್ ಮೊತ್ತ ಪ್ರತಿ ವಿದ್ಯುತ್ ವಿರತಣ ಕೇಂದ್ರಕ್ಕೆ (ಲಕ್ಷಗಳಲ್ಲಿ):** 40.42 **ಒಂದು ವಿದ್ಯುತ್ ವಿತರಣ ಕೇಂದ್ರಕ್ಕೆ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 40425.00

2 **ವಿಭಾಗ:** ಗಂಗಾವತಿ **ಕೆಲಸದ ವಿವರ:** ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಕೊಪ್ಪಳ ವೃತ್ತ ಕಛೇರಿಗೆ ಒಳಪಡುವ ಗಂಗಾವತಿ ವಿಭಾಗ ಕಛೇರಿ, ಗಂಗಾವತಿ/ಕಾರಟಗಿ/ಕುಷ್ಟಗಿ ಉಪ–ವಿಭಾಗ ಹಾಗೂ ಹನುಮಸಾರಗ ಶಾಖಾ ಕಛೇರಿಗಳಿಗೆ ಬೇಕಾಗಿರುವ ಗೃಹ ರಕ್ಷಕರು ಪ್ರತಿ ದಿನದ ಕಛೇರಿ ಕೆಲಸಕ್ಕಾಗಿ ಹೊರಗಿನ ಅರ್ಹ ಏಜೆನ್ಸಿಗಳಿಂದ ಸೇವೆಯನ್ನು ಪಡೆಯಲು ಈ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ **ಗೃಹ ರಕ್ಷಕರ ಒಟ್ಟು ಸಂಖ್ಯೆ:** 18 **ಟೆಂಡರ್ ಮೊತ್ತ ಪ್ರತಿ ವಿದ್ಯುತ್ ವಿರತಣ ಕೇಂದ್ರಕ್ಕೆ (ಲಕ್ಷಗಳಲ್ಲಿ):** 49.14 **ಒಂದು ವಿದ್ಯುತ್ ವಿತರಣ ಕೇಂದ್ರಕ್ಕೆ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 49150.00

3. ಹೊರಗುತ್ತಿಗೆ ಆಧಾರದ ಮೇಲೆ ಗಣಕಯಂತ್ರ ಪರಿಚಾರಕರು, ಕಛೇರಿ ಪರಿಚಾರಕರು, ಅರೆಕಾಲಿಕ ಶುಚಿಗಾರರು ಮತ್ತು ಉಗ್ರಾಣ ಸಹಾಯಕರು :

1. **ಲಾಟ್ ಸಂಖ್ಯೆ:** LOT-1 **ಕೆಲಸದ ವಿವರ:** ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಕೊಪ್ಪಳ ವೃತ್ತಕ ಛೇರಿಗೆ ಒಳಪಡುವ ಕೊಪ್ಪಳ ಕಾರ್ಯ ಮತ್ತು ಪಾಲನಾ ವಿಭಾಗ, ನಿರ್ಮಾಣ ಮತ್ತು ನಿರ್ವಹಣೆ ವಿಭಾಗ ಕೊಪ್ಪಳ, ಕಾರ್ಯ ಮತ್ತು ಪಾಲನಾ ಉಪ–ವಿಭಾಗಕೊಪ್ಪಳ/ಮುನಿರಾಬಾದ್/ ಯಲಬುರ್ಗಾ ಹಾಗೂ ಕುಕನೂರು ಕಛೇರಿಗಳಿಗೆ ಬೇಕಾಗಿರುವ ಡಾಟಾ ಎಂಟ್ರಿ ಆಪರೇಟರ್ಸ್, ಆಫೀಸ್ ಬಾಯ್ಸ್, ಸ್ವೀಪರ್‌ಗಳು ಮತ್ತು ಸ್ಟೋರ್ ಹೆಲ್ಪರ್‌ಗಳನ್ನು ಹೊರಗಿನ ಅರ್ಹ ಏಜೆನ್ಸಿಗಳಿಂದ ಸೇವೆಯನ್ನು ಪಡೆಯಲು ಈ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ **ಗೃಹ ರಕ್ಷಕರ ಒಟ್ಟು ಸಂಖ್ಯೆ:** 28 **ಟೆಂಡರ್ ಮೊತ್ತ ಪ್ರತಿ ವಿದ್ಯುತ್ ವಿರತಣ ಕೇಂದ್ರಕ್ಕೆ (ಲಕ್ಷಗಳಲ್ಲಿ):** 82.34 **ಒಂದು ವಿದ್ಯುತ್ ವಿತರಣ ಕೇಂದ್ರಕ್ಕೆ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 82345.00

2. **ಲಾಟ್ ಸಂಖ್ಯೆ:** LOT-2 **ಕೆಲಸದ ವಿವರ:** ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಕೊಪ್ಪಳ ವೃತ್ತ ಕಛೇರಿಗೆ ಒಳಪಡುವ ಗಂಗಾವತಿ ಕಾರ್ಯ ಮತ್ತು ಪಾಲನಾ ವಿಭಾಗ ಕಛೇರಿಗೆ ಬೇಕಾಗಿರುವ ಡಾಟಾ ಎಂಟ್ರಿ ಆಪರೇಟರ್ಸ್, ಆಫೀಸ್ ಬಾಯ್ಸ್, ಸ್ವೀಪರ್‌ಗಳು ಮತ್ತು ಸ್ಟೋರ್ ಹೆಲ್ಪರ್‌ಗಳನ್ನು ಹೊರಗಿನ ಅರ್ಹ ಏಜೆನ್ಸಿಗಳಿಂದ ಸೇವೆಯನ್ನು ಪಡೆಯಲು ಈ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ **ಗೃಹ ರಕ್ಷಕರ ಒಟ್ಟು ಸಂಖ್ಯೆ:** 13 **ಟೆಂಡರ್ ಮೊತ್ತ ಪ್ರತಿ ವಿದ್ಯುತ್ ವಿರತಣ ಕೇಂದ್ರಕ್ಕೆ (ಲಕ್ಷಗಳಲ್ಲಿ):** 38.17 **ಒಂದು ವಿದ್ಯುತ್ ವಿತರಣ ಕೇಂದ್ರಕ್ಕೆ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 38180.00

3 **ಲಾಟ್ ಸಂಖ್ಯೆ:** LOT-3 **ಕೆಲಸದ ವಿವರ:** ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಕೊಪ್ಪಳ ವೃತ್ತ ಕಛೇರಿಗೆ ಒಳಪಡುವ ಕೊಪ್ಪಳ ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ ಮತ್ತು ಆರ್.ಟಿ ಉಪ ವಿಭಾಗ, ಕೊಪ್ಪಳಕ್ಕೆ ಬೇಕಾಗಿರುವ ಡಾಟಾ ಎಂಟ್ರಿ ಆಪರೇಟರ್ಸ್, ಆಫೀಸ್ ಬಾಯ್ಸ್ ಮತ್ತು ಸ್ವೀಪರ್‌ಗಳನ್ನು ಹೊರಗಿನ ಅರ್ಹ ಏಜೆನ್ಸಿಗಳಿಂದ ಸೇವೆಯನ್ನು ಪಡೆಯಲು ಈ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ **ಗೃಹ ರಕ್ಷಕರ ಒಟ್ಟು ಸಂಖ್ಯೆ:** 09 **ಟೆಂಡರ್ ಮೊತ್ತ ಪ್ರತಿ ವಿದ್ಯುತ್ ವಿರತಣ ಕೇಂದ್ರಕ್ಕೆ (ಲಕ್ಷಗಳಲ್ಲಿ):** 26.37 **ಒಂದು ವಿದ್ಯುತ್ ವಿತರಣ ಕೇಂದ್ರಕ್ಕೆ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 26375.00

ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ: **31.03.2026** ರಂದು ಅಥವಾ ನಂತರ ದಿನಗಳಲ್ಲಿ ಟೆಂಡರ್ ವಿವರ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **15.04.2026**, ಸಮಯ:05:00PM.

ಹೆಚ್ಚಿನ ಮಾಹಿತಿಗಾಗಿ ಅಧೀಕ್ಷಕ ಅಭಿಯಂತರರು(ವಿ)., ಕಾರ್ಯ ಮತ್ತು ಪಾಲನೆ ವೃತ್ತ ಕಚೇರಿ, ಜೆಸ್ಕಾಂ ಕೊಪ್ಪಳ ರವರ ಕಛೇರಿ ದೂರವಾಣಿ ಸಂಖ್ಯೆ: 08539–200023 ಅಥವಾ 9483043703 &9483043701 ಕ್ಕೆ ದೂರವಾಣಿ ಮುಖಾಂತರ ಕಛೇರಿ ಅವಧಿಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು. ಈ ಪ್ರೊಕ್ಯೂರ್‌ಮೆಂಟ್ ಸಹಾಯಕ್ಕಾಗಿ ದೂರವಾಣಿ ಸಂಖ್ಯೆ: 080–22371090/080–22340948.

ಸಹಿ/–ಅಧೀಕ್ಷಕ ಅಭಿಯಂತರರು, (ವಿ)
ಕಾ &ಪಾ ವೃತ್ತ, ಜೆಸ್ಕಾಂ, ಕೊಪ್ಪಳ

ಡಿಐಪಿಆರ್/ಕೊಪ್ಪಳ/776/ಕೆಎಸ್‌ಎಂಸಿಎ/2025–26

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-46) ಡ್ರಾ ಮಾರ್ಚ್ 27ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RO 369057 (PATHANAMTHITTA)

Consolation Prize Rs.5,000/-
RN 369057 RP 369057 RR 369057 RS 369057
RT 369057 RU 369057 RV 369057 RW 369057
RX 369057 RY 369057 RZ 369057

2nd Prize Rs.30,00,000/- [30 Lakhs]
RR 419443 (KOTTAYAM)

3rd Prize Rs.5,00,000/- [5 Lakhs]
RZ 843990 (ERNAKULAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
1149 1627 1802 2209 2428 2725 3097 3632 3967 4605
4981 5796 7436 8092 8370 8515 8949 9544 9807

5th Prize Rs.2,000/-
2191 3212 5390 5852 8762 9023

6th Prize Rs.1,000/-
0037 0165 0381 1058 1500 2069 2088 2122 2791 4561
4730 4736 4968 5288 5294 5686 5822 5846 7043 7366
7842 7899 8309 9328 9381

7th Prize Rs.500/-
0043 0724 0995 1080 1139 1308 1386 1530 1563 1856
1977 2158 2190 2197 2396 2426 2555 2715 2808 2980
3078 3137 3150 3243 3250 3296 3592 3759 3812 4027
4031 4129 4238 4348 4360 4499 4613 4719 4770 4902
5039 5077 5216 5258 5394 5579 5625 5639 5862 6116
6388 6465 6487 6495 6631 6811 7082 7123 7178 7291
8077 8283 8335 8734 9053 9150 9379 9387 9486 9550
9610 9713 9765 9791 9843 9913

8th Prize Rs.200/-
0030 0283 0291 0337 0616 0677 0796 0925 0931 0972
1125 1262 1318 1570 1761 1797 1853 1878 2344 2411
2514 2587 2600 2892 3094 3102 3114 3209 3358 3388
3522 3566 3580 3640 3696 3728 3825 4009 4036 4113
4251 4310 4335 4449 4612 4652 4655 4721 4884 5140
5185 5311 5397 5409 5699 5726 6061 6502 6593 6596
6695 6761 6815 6844 6903 6989 7021 7344 7396 7399
7424 7744 7922 7931 8033 8043 8083 8123 8340 8356
8425 8437 8511 8633 8775 8824 8837 9215 9488 9803
9867 9870

9th Prize Rs.100/-
0120 0190 0205 0221 0288 0296 0509 0613 0687 0910
1081 1089 1142 1152 1461 1480 1503 1642 1663 1725
1732 1825 1852 1857 1866 1874 1896 1911 2056 2065
2104 2121 2296 2303 2306 2348 2465 2489 2540 2552
2590 2645 2784 2816 2878 2890 2894 3070 3133 3250
3305 3490 3621 3691 3697 3917 3996 4024 4106 4208
4225 4240 4338 4446 4551 4614 4763 4813 4942 5012
5132 5164 5187 5190 5198 5231 5548 5685 5732 5740
5767 5809 5832 6129 6240 6250 6271 6328 6344 6398
6408 6422 6468 6589 6607 6628 6725 6816 6846 6853
6996 7044 7132 7191 7252 7356 7361 7369 7665 7696
7805 7867 7947 8034 8099 8135 8180 8278 8336 8553
8608 8622 8798 8811 8812 8827 8834 8892 8940 8952
9005 9131 9218 9278 9394 9403 9421 9533 9568 9594
9634 9639 9819 9988

ತೈಲ ಅಬಕಾರಿ ಶುಲ್ಕ ಇಳಿಕೆಗೆ ಸ್ವಾಗತ

ಮಂಗಳೂರು: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಕಾರಣದಿಂದಾಗಿ ಇಂಧನ ದರ ಏರಿಕೆಯ ಆತಂಕ ಸೃಷ್ಟಿಯಾಗಿರುವುದರ ಬೆನ್ನಲ್ಲೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದೇಶದ ಜನರಿಗೆ ಶುಭ ಸುದ್ದಿ ನೀಡಿದ್ದು ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಕ್ರಮವಾಗಿ 3 ರೂ. ಹಾಗೂ ಶೂನ್ಯಕ್ಕೆ ಇಳಿಸಿರುವುದು ಜನಪರ ಕಾಳಜಿಯ ನಿರ್ಧಾರವಾಗಿದೆ ಎಂದು ಶಾಸಕ ವೇದವ್ಯಾಸ ಕಾಮತ್ ಹೇಳಿದ್ದಾರೆ.



ಯುದ್ಧ ಸಂಘರ್ಷದಿಂದಾಗಿ ಕಚ್ಚಾ ತೈಲದ ಬೆಲೆಗಳು ಗಗನಕ್ಕೇರಿರುವ ಸಂದರ್ಭದಲ್ಲಿ ವಿಶ್ವದ ಇತರೆ ದೇಶಗಳಂತೆ ನಾಗರಿಕರ ಮೇಲೆ ಬೆಲೆ ಏರಿಕೆ ಹೊರೆ ಹಾಕುವ ಬದಲು ಅಬಕಾರಿ ಸುಂಕವನ್ನೇ ಕಡಿತಗೊಳಿಸಲಾಗಿದೆ. ಆ ಮೂಲಕ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಜನಪರ ಕಾಳಜಿಯನ್ನು ಪ್ರದರ್ಶಿಸಿ, ಕೋಟ್ಯಂತರ ಜನರಿಗೆ ನಿರಾಳತೆ ಒದಗಿಸಿದೆ. ತನ್ನ ಬೊಕ್ಕಸಕ್ಕೆ ಆಗುವ ನಷ್ಟವನ್ನು ಲೆಕ್ಕಿಸದೇ ಸಾರ್ವಜನಿಕ ಹಿತದೃಷ್ಟಿಯಿಂದ ದಿಟ್ಟ ನಿರ್ಧಾರ ತೆಗೆದುಕೊಂಡ ಕಾರಣಕ್ಕೆ ಪ್ರಧಾನಿ ಅವರಿಗೆ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಹಾಗೂ ಪೆಟ್ರೋಲಿಯಂ-ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಸಮಸ್ತ ದೇಶವಾಸಿಗಳ ಪರವಾಗಿ ಧನ್ಯವಾದಗಳು ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರದಂತೆ ರಾಜ್ಯ ಕಾಂಗ್ರೆಸ್ ಸರ್ಕಾರವೂ ಸಹ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸುವ ವ್ಯಾಟ್ ಅಥವಾ ಮಾರಾಟ ತೆರಿಗೆಯನ್ನು ಕಡಿತಗೊಳಿಸಬೇಕು. ಅದು ಬಿಟ್ಟು ಕೇಂದ್ರದ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸುವುದು ಎಷ್ಟು ಸರಿ, ಜನಸಾಮಾನ್ಯರಿಗೆ ಉಪಯೋಗವಾದರೆ ಕಾಂಗ್ರೆಸ್ಸಿಗೆ ಯಾಕೆ ಸಿಟ್ಟು ಎಂದು ಪ್ರಶ್ನಿಸಿದ ಕಾಮತ್, ಈ ಮೂಲಕ ಕಾಂಗ್ರೆಸ್ ಎಂದಿಗೂ ತನ್ನದು ಜನ ವಿರೋಧಿ ನೀತಿ ಎಂಬುದನ್ನು ಮತ್ತೆ ಮತ್ತೆ ಸಾಬೀತು ಪಡಿಸುತ್ತಿದೆ ಎಂದರು.

ಕೇಂದ್ರ ಸರ್ಕಾರದ ಜನಹಿತ ನಡೆ

ಮಂಗಳೂರು: ಇರಾನ್ ಮತ್ತು ಅಮೇರಿಕಾ, ಇಸ್ರೇಲ್ ಯುದ್ಧದ ಪರಿಣಾಮವಾಗಿ ಜಾಗತಿಕವಾಗಿ ಆರ್ಥಿಕ ಪರಿಸ್ಥಿತಿ ಏರುಪೇರಾಗುತ್ತಿರುವ ಸಂದರ್ಭದಲ್ಲಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪೆಟ್ರೋಲ್ ಮೇಲಿನ ಅಬಕಾರಿ ಶುಲ್ಕವನ್ನು 3 ರೂಪಾಯಿ ಮತ್ತು ಡೀಸೆಲ್ ಶುಲ್ಕವನ್ನು ಶೂನ್ಯಕ್ಕೆ ಇಳಿಕೆ ಮಾಡಿರುವುದು ಜನಹಿತದ ನಡೆಯಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಭಾರತೀಯ ಜನತಾ ಪಾರ್ಟಿ ಅಧ್ಯಕ್ಷ ಸತೀಶ್ ಕುಂಪಲ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ದೇಶದ ಆರ್ಥಿಕ ಶಕ್ತಿಗೆ ಕುಂದು ಬಾರದಂತೆ ಮತ್ತು ಜನರ ಹಿತವನ್ನು ಸದಾ ಚಿಂತನೆಯನ್ನು ನಡೆಸುವ ಸರ್ಕಾರ ದೇಶದಲ್ಲಿರುವುದು ನಮ್ಮ ಸೌಭಾಗ್ಯವಾಗಿದೆ. ದೇಶದ ಭದ್ರತೆಗೆ ದಕ್ಕೆ ಬಂದಾಗ ಸರ್ಜಿಕಲ್ ಸ್ಟ್ರೈಕ್, ಆಪರೇಷನ್ ಸಿಂದೂರ, ಕರೋನಾ ಸಮಯದಲ್ಲಿ ಉಚಿತ ಲಸಿಕೆ, ಉಚಿತ ಅಕ್ಕಿ, ಧಾನ್ಯ, ಪ್ರಸ್ತುತ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದ ದೇಶದ ಜನರಿಗೆ ಭಾದೆ ಬಾರದಿರಲು ತೈಲ ಶುಲ್ಕದಲ್ಲಿ ಕಡಿತ ಮಾಡಿರುವುದು ಪ್ರಾಮಾಣಿಕತೆ ಮತ್ತು ಬದ್ಧತೆ ಇರುವ ಸರ್ಕಾರ ದಿಂದ ಮಾತ್ರ ಸಾಧ್ಯ ಎನ್ನುವುದನ್ನು ಕೇಂದ್ರ ಸರ್ಕಾರ ಮತ್ತೆ ಮತ್ತೆ ನಿರೂಪಿಸುತ್ತಿದೆ ಎಂದು ಕುಂಪಲ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಶೀರೂರು ಮೂಲ ಮಠದಲ್ಲಿ ಶ್ರೀರಾಮ ನವಮಿ ಉತ್ಸವ



ಉಡುಪಿ: ಹಿರಿಯಡ್ಕ ಸಮೀಪದ ಶೀರೂರು ಮೂಲ ಮಠದಲ್ಲಿ ಶ್ರೀರಾಮ ನವಮಿ ಉತ್ಸವವನ್ನು ಅತ್ಯಂತ ಭಕ್ತಿ ಮತ್ತು ವೈಭವದಿಂದ ಆಚರಿಸಲಾಯಿತು. ಮಠದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಉತ್ಸವದ ವಿಶೇಷವಾಗಿ ಕಾಣಿಯೂರು ಮಠದ ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀಪಾದರು ಶೀರೂರು ಮಠದ ಸಂಸ್ಥಾನ ಪೂಜೆಯನ್ನು ನೆರವೇರಿಸಿದರು. ವಿಷ್ಣುಸಹಸ್ರನಾಮ ಪಾರಾಯಣ ನಡೆಯಿತು. ಆಂಜನೇಯ ದೇವರಿಗೆ ವಿಶೇಷಪೂಜೆ ಮತ್ತು ಅಲಂಕಾರಗಳನ್ನು ಮಾಡಲಾಯಿತು. ಧಾರ್ಮಿಕ ವಿಧಿಗಳ ನಂತರ ಪಲ್ಲಪೂಜೆಯನ್ನು ನೆರವೇರಿಸಲಾಯಿತು. ಬಳಿಕ ಮಠಕ್ಕೆ ಆಗಮಿಸಿದ ನೂರಾರು ಭಕ್ತಾದಿಗಳಿಗೆ 'ಅನ್ನಸಂತರ್ಪಣೆ'ಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಶೀರೂರು ಮಠದ ದಿವಾನರಾದ ಡಾ. ಉದಯಕುಮಾರ ಸರಳತ್ತಾಯ ಅವರು ಉಪಸ್ಥಿತರಿದ್ದರು.

ಹಕ್ಕುಚ್ಯುತಿ ಮಂಡನೆಯಿಂದ ನೋವು: ರೈ

ಮಂಗಳೂರು: ವಿಧಾನಸಭೆಯಲ್ಲಿ ಬಂಟ್ವಾಳ ಶಾಸಕರು ಮಂಡಿಸಿರುವ ಹಕ್ಕುಚ್ಯುತಿಯಿಂದ ನೋವಾಗಿದೆ ಎಂದು ಮಾಜಿ ಸಚಿವ ರಮಾನಾಥ ರೈ ಹೇಳಿದ್ದಾರೆ.



ದ.ಕ. ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಯಾ ಕ್ಷೇತ್ರದ ಜನರ ಬೇಡಿಕೆಗೆ ಅನುಗುಣವಾಗಿ ಸರ್ಕಾರದಿಂದ ಅನುದಾನ ಒದಗಿಸಲಾಗುತ್ತದೆ. ಪರಿಶಿಷ್ಟ ಕಾಲನಿಗಳಿಗೆ ಅನುದಾನ ತರಿಸಿರುವುದನ್ನೇ ಮುಂದಿಟ್ಟುಕೊಂಡು ಸದನದಲ್ಲಿ ಗಲಾಟೆ ಮಾಡಿ ಹಕ್ಕುಚ್ಯುತಿ ಮಂಡಿಸಿರುವುದು ಸಂಕುಚಿತ ಮನೋಭಾವವಾಗಿದೆ ಎಂದರು.

ಹಿಂದೆ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಡಿ ಹಣ ಮಂಜೂರಾಗುತ್ತಿರಲಿಲ್ಲ. ಈಗ ತಲಾ 10 ಕೋಟಿ ರೂ. ಶಾಸಕರಿಗೆ ಮಂಜೂರಾಗುತ್ತಿದೆ. ಶಾಸಕರು ತಮ್ಮ ವಿವೇಚನೆ ಮೇರೆಗೆ ಈ ಅನುದಾನದಲ್ಲಿ ಕಾಮಗಾರಿ ನಡೆಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಶಶಿಧರ ಹೆಗ್ಡೆ, ಶುಭೋದಯ ಆಳ್ವ, ಅಪ್ಪಿ, ದಿನೇಶ್ ಕುಮಾರ್, ಸುಹಾನ್ ಆಳ್ವ, ರಮಾನಂದ ಪೂಜಾರಿ, ಫಾಯಾರುಝ್, ಅಶೋಕ್ ಡಿ.ಕೆ., ಪ್ರೇಮಾನಂದ ಬಳ್ಳಾಲ್‌ಬಾಗ್, ವಿಕಾಸ್ ಶೆಟ್ಟಿ ಉಪಸ್ಥಿತರಿದ್ದರು.

ಇಂದು ಐಕ್ಯರಂಗದ ಚುನಾವಣಾ ಪ್ರಚಾರ

ಕಾಸರಗೋಡು: ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಇಂದು ಕಾಸರಗೋಡು ನಗರಸಭೆ ಹಾಗೂ ಮೊಗ್ರಾಲ್ ಪುತ್ತೂರು ಗ್ರಾ. ಪಂ. ವ್ಯಾಪ್ತಿಯಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ವಿರೋಧ ಪಕ್ಷದ ಮಾಜಿ ನಾಯಕ ರಮೇಶ್ ಚೆನ್ನಿತ್ತಲ ಕೂಡಾ ವಿವಿಧೆಡೆ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

27-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	260 - 475
ಚೋಲ್ ಅಡಿಕೆ	:	520 - 545
ಡಬಲ್ ಚೋಲ್	:	520 - 545
ಹೊಸ ಪಟೋರ	:	340 - 390
ಹಳೆ ಪಟೋರ	:	375 - 405
ಹೊಸ ಉಳ್ಳಿ	:	115 - 285
ಹಳೆ ಉಳ್ಳಿ	:	105 - 285
ಹೊಸ ಕೋಕಾ	:	315 - 335
ಹಳೆ ಕೋಕಾ	:	315 - 335
ಹೊಸ ಕರಿಗೋಟು	:	230 - 260
ಹಳೆ ಕರಿಗೋಟು	:	230 - 260
ಹಸಿ ಕೊಕ್ಕೋ	:	70 - 100
ಒಣ ಕೊಕ್ಕೋ	:	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು	:	465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	214.50
ಆರ್‌ಎಸ್‌ಎಸ್ 2	-	197.00
ಸ್ಕ್ರಾಪ್ 1	-	128.50
ಸ್ಕ್ರಾಪ್ 2	-	110.00





ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ಅವರ ಪರವಾಗಿ ಕರ್ನಾಟಕದ ಬಿಜೆಪಿ ಮುಖಂಡರು, ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಮಂಜೇಶ್ವರ ಮಂಡಲದ ವಿವಿಧೆಡೆ ಮತಯಾಚನೆ ನಡೆಸಿದರು.

ಕಿರುಸುದ್ದಿ

ಸಂಸ್ಕೃತ ಒಲಂಪಿಯಾಡ್‌ನಲ್ಲಿ ಮೌಲ್ಯ ನಾಯಕ್‌ಗೆ ಸ್ವರ್ಣ ಪದಕ



ಬೆಳ್ತಂಗಡಿ: ದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಇಂಡಿಯನ್ ನಾಲೆಡ್ಜ್ ಸಿಸ್ಟಮ್ ಅವರು 2025ರಲ್ಲಿ ನಡೆಸಿದ ಸಂಸ್ಕೃತ ಒಲಂಪಿಯಾಡ್‌ನಲ್ಲಿ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯಾಗಿದ್ದ ಮೌಲ್ಯ ನಾಯಕ್ ಸ್ವರ್ಣ ಪದಕ ಬಹುಮಾನ ಪಡೆದಿದ್ದಾರೆ. ಇವರು ಬೆಳ್ತಂಗಡಿ ತಾಲೂಕಿನ ಕಡಿರುದ್ಯಾವರ ಗ್ರಾಮದ ಬಾಲಚಂದ್ರ ನಾಯಕ್ ಹಾಗೂ ಲಲಿತಾ ನಾಯಕ್ ದಂಪತಿ ಪುತ್ರಿ. ಇವರನ್ನು ಆಡಳಿತ ಮಂಡಳಿ, ಪ್ರಾಚಾರ್ಯ ಪ್ರಮೋದ್ ಕುಮಾರ್ ಬಿ. ಹಾಗೂ ಸಂಸ್ಕೃತ ಭಾಷಾ ವಿಭಾಗದ ಮುಖ್ಯಸ್ಥ ಡಾ. ಪ್ರಸನ್ನಕುಮಾರ ಐತಾಳ್ ಇವರು ಅಭಿನಂದಿಸಿದ್ದಾರೆ.

ಸಂಜೂಪ್ ಕೆ.ಪಿ.ಗೆ ಪಿಎಚ್‌ಡಿ ಪದವಿ



ಮಂಗಳೂರು: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಲ್ಯಾಂಗ್ವೇಜಸ್ ಎಂಡ್ ಕಲ್ಚರಲ್ ಸ್ಟಡೀಸ್‌ನ ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಸಂಜೂಪ್ ಕೆ. ಪಿ. ಅವರ ಕಂಟೆಂಪರರಿ ಕೇರಳ ಆ್ಯಂಡ್ ದ ಪ್ರೊಡಕ್ಷನ್ ಆಫ್ ಹೆಜಿಮೋನಿಕ್ ಮ್ಯಾಸ್ಕ್ಯುಲಿನಿಟಿ' ವಿಷಯದ ಕುರಿತ ಮಹಾಪ್ರಬಂಧಕ್ಕಾಗಿ ಮಂಗಳೂರು ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ. ಅವರು ಮಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಪ್ರೊಫೆಸರ್ ಡಾ.ಪರಿಣಿತ ಅವರ ಮಾರ್ಗದರ್ಶನದಲ್ಲಿ ತಮ್ಮ ಸಂಶೋಧನೆಯನ್ನು ನಡೆಸಿದ್ದರು.

ಸುಚಿತ್ರಗೆ ಡಾಕ್ಟರೇಟ್



ಕೊಣಾಜೆ: 'ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು' ಎಂಬ ವಿಷಯದಲ್ಲಿ ಸುಚಿತ್ರ ಕೆ.ಎಲ್. ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಸಹಪ್ರಾಧ್ಯಾಪಕ ಡಾ.ಧನಂಜಯ ಕುಂಬ್ಳೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಪಿಎಚ್‌ಡಿ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿ ನೀಡಿದೆ. ಇವರು ಮೂಲತ: ಸೋಮವಾರ ಪೇಟೆ ತಾಲೂಕಿನ ಖ್ಯಾತೆಗ್ರಾಮದವರು. ಲೋಕೇಶ್ , ಲೀಲಾವತಿ ದಂಪತಿ ಪುತ್ರಿಯಾಗಿರುವ ಇವರು ಸಚಿನ್ ಕುಮಾರ್ ಬಿ.ಕೆ ಇವರ ಪತ್ನಿ. ಪ್ರಸ್ತುತ ಕುಶಾಲನಗರ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಏ.4ರಿಂದ 12ರವರೆಗೆ ಮಂಗಳೂರು ಉತ್ಸವ

ಮಂಗಳೂರು: ಬೋಯ್‌ಝೋನ್ ಡ್ಯಾನ್ಸ್ ಅಕಾಡೆಮಿ ವತಿಯಿಂದ ಏ.4ರಿಂದ 12ರವರೆಗೆ ಮಂಗಳೂರು ಉತ್ಸವ ಎಂಬ ಮನರಂಜನಾ ಕಾರ್ಯಕ್ರಮ ಕರಾವಳಿ ಉತ್ಸವ ಮೈದಾನದಲ್ಲಿ ಆಯೋಜಿಸಲಾಗಿದೆ. ನೃತ್ಯ ಉತ್ಸವದ ಜತೆಗೆ ರಾಜ್ಯ ಮಟ್ಟದ ಸಮೂಹ ನೃತ್ಯ ಸ್ಪರ್ಧೆ ಹಾಗೂ ಗಾಯನ ಸ್ಪರ್ಧೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಫುಡ್ ಫೆಸ್ಟಿವಲ್, ಸೆಲೆಬ್ರಿಟಿಗಳಿಂದ ಪ್ರದರ್ಶನ, ಐಸ್‌ಕ್ರೀಂ ಫೆಸ್ಟಿವಲ್, ಆಟೋ ಕಾನಿವಲ್, ಅಮ್ಯೂಸ್‌ಮೆಂಟ್ ಪಾರ್ಕ್ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಅಕಾಡೆಮಿಯ ಮಂಜು ಸುವರ್ಣ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಳೆದ 25 ವರ್ಷಗಳಿಂದ ನೃತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸಂಸ್ಥೆಯಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಹುಮಾನ ಪಡೆದಿದ್ದಾರೆ ಎಂದರು. ಪ್ರಮುಖರಾದ ಜಗದೀಶ್ ಕದ್ರಿ, ಪ್ರತೀಶ್ ಗೌರೀಶ್, ಕಿಶೋರ್ ಕುಮಾರ್, ಚಾರ್ವಿ ಉಪಸ್ಥಿತರಿದ್ದರು.

ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆ

ಮಂಗಳೂರು : ಪ್ರಧಾನಿ ನರೇಂದ್ರ ಮೋದಿ ಅವರು ಸಂಕಲ್ಪಿಸಿರುವ ಭಾರತ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಸಂಸ್ಕೃತಿ ಮಂತ್ರಾಲಯದ ಅಧೀನವಾದ ಜ್ಞಾನ ಭಾರತಂ ಮಿಶನ್ ನಮ್ಮ ದೇಶದ ಅತ್ಯಂತ ಪ್ರಾಚೀನವಾದ ಹಸ್ತಪ್ರತಿಗಳ ಸಂರಕ್ಷಣೆಯನ್ನು ಸಂಕಲ್ಪಿಸಿದೆ. ದೇಶದಾದ್ಯಂತ ಇರುವ ಹಸ್ತಪ್ರತಿಗಳ ಸರ್ವೇ ಕಾರ್ಯವನ್ನು ನಡೆಸಿ ಆಗ ಗ್ರಂಥಗಳ ಡಿಜಿಟಲ್ ಮೂಲಕ ತಥಾಪ್ರತಿಯನ್ನು ಸಂರಕ್ಷಿಸುವ ಬಹು ವೆಚ್ಚದ ಕಾರ್ಯವನ್ನು ಪ್ರಾರಂಭಿಸಿದೆ.

ನಿಮ್ಮ ಮನೆಗಳಲ್ಲಿ ಹಸ್ತಪ್ರತಿಗಳು ಇದ್ದರೆ ಅವುಗಳ ಮಾಹಿತಿಯನ್ನು ನಮಗೆ ಕಳುಹಿಸಿದರೆ ನಾವು ಉಚಿತವಾಗಿ ಸಂರಕ್ಷಣೆಯ ಕಾರ್ಯವನ್ನು ಮಾಡಿ ಕೊಡುತ್ತೇವೆ. ನಿಮ್ಮ ಗ್ರಂಥಗಳು ಹೊಸ ರೂಪದೊಂದಿಗೆ ನಿಮ್ಮ ಮನೆಯಲ್ಲಿ ಕಂಗೊಳಿಸುತ್ತದೆ. ಈಗಾಗಲೇ ಕರ್ನಾಟಕದಾದ್ಯಂತ ಸರ್ವೇ ಕಾರ್ಯಕ್ರಮ ಪ್ರಾರಂಭಗೊಂಡಿದೆ. ಸಂಪರ್ಕಕ್ಕಾಗಿ ಡಾ. ಬಿ. ಗೋಪಾಲಾಚಾರ್ ಉಡುಪಿ 7892991690 ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಕಾಸರಗೋಡು ಜಿಲ್ಲೆಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ

ಎಲ್ಲಾ ಕ್ಷೇತ್ರಗಳಿಗೆ ಚುನಾವಣಾ ತಂಡ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಕಾಸರಗೋಡು ಜಿಲ್ಲೆಯ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯನ್ನು ಕಲೆಕ್ಟರೇಟ್‌ನಲ್ಲಿ ಶುಕ್ರವಾರ ನಡೆಸಲಾಯಿತು. ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆ ವಹಿಸಿ ಸಮಗ್ರ ಮಾಹಿತಿ ನೀಡಿದರು.

ಚುನಾವಣಾ ಸಾಮಾನ್ಯ ವೀಕ್ಷಕ ವಿಜಯ್ ಬಾಲಕೃಷ್ಣ ವಾಘ್ಮೋರೆ, ಕಾಸರಗೋಡು, ಮಂಜೇಶ್ವರ ಮತ್ತು ಉದುಮ ಕ್ಷೇತ್ರಗಳ ವೆಚ್ಚ ವೀಕ್ಷಕ ನಿಶಾಂತ್ ಅಗರ್ವಾಲ್, ಕಾಞಂಗಾಡು ಮತ್ತು ತೃಕ್ಕರೀಪ್ಪುರ ಕ್ಷೇತ್ರಗಳ ವೆಚ್ಚ ವೀಕ್ಷಕ ಅಜಯ್ ಕುಮಾರ್ ಥಾಡಿಯಾ ಮುಂತಾದವರು ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿದರು.



ಚುನಾವಣಾ ಅಧಿಕಾರಿಗಳು ಆಯ್ದ ಮತದಾರರ ಮನೆಗಳಿಗೆ ಭೇಟಿ ನೀಡಿ ಮತಗಳನ್ನು ನೋಂದಾಯಿಸುವ ಸಲುವಾಗಿ ಮನೆಯಲ್ಲೇ ಮತ ಚಲಾಯಿಸಿ ಸೇವೆಯ ಮೂಲಕ ಜಿಲ್ಲೆಯ 6,810 ಮಂದಿಗೆ ಮನೆಯಿಂದಲೇ ಮತ ಚಲಾಯಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ. ದಿವ್ಯಾಂಗರು ಮತ್ತು 85 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮನೆಯಿಂದಲೇ ಮತ ಚಲಾಯಿಸುವ ಅವಕಾಶವನ್ನು ಒದಗಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಒಟ್ಟು 10,075 ಮಂದಿಗೆ 12ಡಿ ಫಾರ್ಮ್‌ಗಳನ್ನು ನೀಡಲಾಗಿದೆ. 7,222 ಜನರು ಮನೆಯಿಂದಲೇ ಮತದಾನ ಮಾಡಲು ಆಸಕ್ತಿ ವ್ಯಕ್ತಪಡಿಸಿ ಫಾರ್ಮ್‌ಗಳನ್ನು ಭರ್ತಿ ಮಾಡಿ ಹಿಂತಿರುಗಿಸಿದ್ದಾರೆ. ಈ ಪೈಕಿ ಚುನಾವಣಾಧಿಕಾರಿಗಳು 6,810 ಮಂದಿಯ ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಅನುಮೋದಿಸಿದ್ದಾರೆ. 85 ವರ್ಷಕ್ಕಿಂತ ಮೇಲ್ಪಟ್ಟ 3,281 ಜನರು ಮತ್ತು ದಿವ್ಯಾಂಗ ವಲಯದ 3,529 ಮಂದಿಗೆ ಮನೆಯಿಂದಲೇ ಮತದಾನ ಮಾಡಲು ಅವಕಾಶ ಒದಗಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಜಿಲ್ಲೆಯಲ್ಲಿ ಅತಿ ಹೆಚ್ಚು ಜನರು ಮನೆಯಿಂದಲೇ ಮತ ಚಲಾಯಿಸುತ್ತಿರುವುದು ಕಾಞಂಗಾಡು ಕ್ಷೇತ್ರದಲ್ಲಾಗಿದ್ದು, ಇಲ್ಲಿ 1675 ಅರ್ಜಿಗಳನ್ನು ಅನುಮೋದಿಸಲಾಗಿದೆ. ತೃಕ್ಕರೀಪ್ಪುರ ಕ್ಷೇತ್ರದಲ್ಲಿ 1673, ಉದುಮದಲ್ಲಿ 1559, ಮಂಜೇಶ್ವರದಲ್ಲಿ 1004 ಮತ್ತು ಕಾಸರಗೋಡಿನಲ್ಲಿ 899 ಅರ್ಜಿಗಳನ್ನು ಮನೆಯಿಂದಲೇ ಮತ ಚಲಾಯಿಸುವುದಕ್ಕಾಗಿ ವಿತರಿಸಲಾಗಿದೆ. ಇಬ್ಬರು ಮತಗಟ್ಟೆ ಅಧಿಕಾರಿಗಳು, ಒಬ್ಬ ಮೈಕ್ರೋ ವೀಕ್ಷಕ, ಒಬ್ಬ ವಿಡಿಯೋಗ್ರಾಫರ್, ಒಬ್ಬ ಪೊಲೀಸ್ ಅಧಿಕಾರಿ ಮತ್ತು ಒಬ್ಬ ಬೂತ್ ಮಟ್ಟದ ಅಧಿಕಾರಿಯನ್ನು ಒಳಗೊಂಡ ತಂಡ ಇರುತ್ತದೆ ಎಂದು ವಿರವಣೆ ನೀಡಲಾಯಿತು.

ರ್‍ಯಾಂಡಮೈಸೇಷನ್ ಮೂಲಕ ಮತಗಟ್ಟೆ ಅಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಇದೇ ವೇಳೆ ಮನೆಯಿಂದ ಮತದಾನ ಮಾಡಲು ಮಾರ್ಗ ನಕ್ಷೆಯನ್ನು ಸಿದ್ಧಪಡಿಸಿ, ಸಂಬಂಧಿತ ಅಭ್ಯರ್ಥಿಗಳು ಮತ್ತು ಅವರ ಬೂತ್ ಹೆಡ್ ಏಜೆಂಟ್‌ಗಳಿಗೆ ಭೇಟಿಯ ಬಗ್ಗೆ ತಿಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ. ಇದಕ್ಕಾಗಿ ಕಾಞಂಗಾಡು ಮತ್ತು ತೃಕ್ಕರೀಪ್ಪುರಕ್ಕೆ ತಲಾ 30, ಉದುಮಕ್ಕೆ 25 ಮತ್ತು ಕಾಸರಗೋಡು ಹಾಗೂ ಮಂಜೇಶ್ವರ ಕ್ಷೇತ್ರಗಳಿಗೆ ತಲಾ 17 ಮಂದಿಯ ಚುನಾವಣಾ ತಂಡಗಳನ್ನು ನಿಯೋಜಿಸಲಾಗಿದೆ.

ಮತದಾನ ಯಂತ್ರಗಳನ್ನು ವಿವಿಧ ಕ್ಷೇತ್ರಗಳ ಸ್ಟ್ರಾಂಗ್ ರೂಮ್‌ಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು. ಈಗ ಕಾರ್ಯಾರಂಭ ಮಾಡುವ ಮೊದಲು ಎರಡನೇ ಹಂತದ ರ್‍ಯಾಂಡಮೈಸೇಷನ್ ನಡೆಸಲಾಗುವುದು. ಮತಗಟ್ಟೆ ಅಧಿಕಾರಿಗಳ ಮೊದಲ ಹಂತದ ರ್‍ಯಾಂಡಮೈಸೇಷನ್ ಈಗಾಗಲೇ ಪೂರ್ಣಗೊಳಿಸಲಾಗಿದೆ. ಅಲ್ಲದೆ ಚುನಾವಣಾ ಅಧಿಕಾರಿಗಳಿಗೆ ತರಬೇತಿ ನಡೆಯುತ್ತಿದೆ. ಐದು ಹೆಚ್ಚುವರಿ ಸಹಾಯಕ ಬೂತ್‌ಗಳನ್ನು ಒದಗಿಸಲಾಗಿದೆ. ಇದರೊಂದಿಗೆ ಜಿಲ್ಲೆಯಲ್ಲಿ 1146 ಮತಗಟ್ಟೆಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾ ಕಲೆಕ್ಟರ್ ತಿಳಿಸಿದರು.

ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಜರಗಿದ ಈ ಸಭೆಯಲ್ಲಿ ಚುನಾವಣಾ ಇಲಾಖೆಯ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್, ಮಂಜೇಶ್ವರ ಕ್ಷೇತ್ರದ ಚುನಾವಣಾಧಿಕಾರಿ, ಎಲ್.ಆರ್.ಉಪ ಕಲೆಕ್ಟರ್ ವಿ.ಪಿ.ರಘುಮಣಿ, ಕಾಸರಗೋಡು ಕ್ಷೇತ್ರದ ಚುನಾವಣಾಧಿಕಾರಿ ಬಿನು ಜೋಸೆಫ್, ಕಾಸರಗೋಡು ಆರ್‌ಡಿಒ, ಚುನಾವಣಾ ನೋಡಲ್ ಅಧಿಕಾರಿಗಳಾದ ವಿ.ಚಂದ್ರನ್, ಅಧಿಕಾರಿ ಟಿ.ಟಿ.ಸುರೇಂದ್ರನ್, ಎಲ್‌ಎ (ಎನ್‌ಎಚ್) ವಿಶೇಷ ತಹಶೀಲ್ದಾರ್ ಪಿ.ಉದಯಕುಮಾರ್, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಹ್ಯಾರಿಸ್ ಚೂರಿ, ಎಂ.ಕುಂಞಂಬು ನಾಯರ್, ವಿ.ರಾಜನ್, ಕೆ.ಎ.ಎಂ.ಹನೀಫ್, ಪಿ.ರಮೇಶ್ ಕಾಸರಗೋಡು ಮುಂತಾದವರು ಉಪಸ್ಥಿತರಿದ್ದರು.



ಎನ್‌ಡಿಎ ಅಭ್ಯರ್ಥಿ ಸುರೇಂದ್ರನ್ ಪರ ಕರ್ನಾಟಕದ ಬಿಜೆಪಿ ಮುಖಂಡರಿಂದ ಪ್ರಚಾರ

ಉಪ್ಪಳ: ವಿಧಾನಸಭಾ ಕ್ಷೇತ್ರದ ಚುನಾವಣೆ ಕಾವು ಬಿರುಸುಗೊಂಡಿರುವಂತೆ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಚುನಾವಣೆಯಪ್ರಚಾರಾರ್ಥವಾಗಿ ಕರ್ನಾಟಕದ ಬಿಜೆಪಿ ಮುಖಂಡರು ಮಂಜೇಶ್ವರ ಮಂಡಲದಲ್ಲಿ ಗುರುವಾರ ವಿವಿಧೆಡೆ ಮತಯಾಚನೆ ನಡೆಸಿದರು.

ಮಂಗಲ್ಪಾಡಿ ಪಂಚಾಯತ್‌ನ ಹೇರೂರಿನಲ್ಲಿ, ಪೈವಳಿಕೆ ಪಂಚಾಯತ್‌ನ ತಾಳಿತ್ತಾಜೆ ಪರಿಶಿಷ್ಟ ವರ್ಗದ ಕಾಲನಿಗೆ ಬಿಜೆಪಿ ಕಾರ್ಯಕರ್ತರ ಜೊತೆ ಕರ್ನಾಟಕ ಮೀನುಗಾರಿಕಾ ಮತ್ತು ಬಂದರು ಖಾತೆ ಮಾಜಿ ಸಚಿವ ಅಂಗಾರ ಅವರು ಭೇಟಿ ನೀಡಿ ಮತ ಯಾಚಿಸಿದರು. ಈ ವೇಳೆ ಪಂಚಾಯತ್ ಸದಸ್ಯ ರಾಮ ಏದಾರ್, ಗಣೇಶ ಚೇರಾಲು, ಕಾರ್ಯಕರ್ತರು ಮೊದಲಾದವರು ಉಪಸ್ಥಿತರಿದ್ದರು.

ಕುಂಬಳೆ ಪಂಚಾಯತ್ ವ್ಯಾಪ್ತಿಯಲ್ಲಿ ಬಿಜೆಪಿ ಮುಖಂಡ ನಳಿನ್‌ಕುಮಾರ್ ಕಟೀಲ್ ಕುಟುಂಬ ಸಭೆಗಳಲ್ಲಿ ಭಾಗವಹಿಸಿದರು. ವರ್ಕಾಡಿಯಲ್ಲಿ ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಮನೆಗಳಿಗೆ ಭೇಟಿ ನೀಡಿ ಮಾತಾಯಾಚನೆ ನಡೆಸಿದರು. ಈ ವೇಳೆ ಬಿಜೆಪಿ ನೇತಾರರು ಕಾರ್ಯಕರ್ತರು ಉಪಸ್ಥಿತರಿದ್ದರು.

ಸಿಎಂ ಸ್ಥಾನಕ್ಕೆ ಚೆನ್ನಿತ್ತಲ ಸೂಕ್ತ ವ್ಯಕ್ತಿ: ಕೆ.ಸುಧಾಕರನ್



ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಯಲ್ಲಿ ಐಕ್ಯರಂಗ (ಯುಡಿಎಫ್) ಒಕ್ಕೂಟವು ಗೆಲುವು ಸಾಧಿಸಿದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ರಮೇಶ್ ಚೆನ್ನಿತ್ತಲ ಸೂಕ್ತ ವ್ಯಕ್ತಿಯಾಗಿದ್ದಾರೆ ಎಂದು ಕಾಂಗ್ರೆಸ್ ಮಾಜಿ ರಾಜ್ಯಾಧ್ಯಕ್ಷ, ಕಣ್ಣೂರು ಸಂಸದ ಕೆ.ಸುಧಾಕರನ್ ಕಣ್ಣೂರಿನಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಅವರ ಹೆಸರು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಆ ಸ್ಥಾನಕ್ಕೆ ರಮೇಶ್ ಚೆನ್ನಿತ್ತಲ ಸೂಕ್ತ ವ್ಯಕ್ತಿಯೆಂದು ಕೆ.ಸುಧಾಕರನ್ ಹೇಳಿರುವುದು ರಾಜ್ಯ ಕಾಂಗ್ರೆಸ್ ವಲಯದಲ್ಲಿ ಭಾರೀ ಸಂಚಲನಕ್ಕೆ ಹಾಗೂ ಗುಂಪು ರಾಜಕೀಯಕ್ಕೆ ದಾರಿಮಾಡಿಕೊಟ್ಟಿದೆ. ಚೆನ್ನಿತ್ತಲ ಮುಖ್ಯಮಂತ್ರಿಯಾಗಬೇಕೆಂಬ ಅಭಿಪ್ರಾಯವನ್ನು ಇನ್ನೋರ್ವ ಹಿರಿಯ ನಾಯಕ ಪಿ.ಜೆ. ಕುರ್ಯನ್ ವ್ಯಕ್ತಪಡಿಸಿದ್ದಾರೆ. ಈ ಮಧ್ಯೆ ಕೇರಳ ರಾಜ್ಯ ರಾಜಕೀಯಕ್ಕೆ ತಾನಿಲ್ಲವೆಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ.

ಇನ್ನೊಂದೆಡೆ ಮುಖ್ಯಮಂತ್ರಿ ಯಾರಾಗ ಬೇಕೆಂದು ತೀರ್ಮಾನಿಸಬೇಕಾದುದು ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ನ ಕೆಲಸವಾಗಿದೆ ಎಂದು ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ತಿರುವನಂತಪುರದಲ್ಲಿ ಹೇಳಿದ್ದಾರೆ.

ಹನುಮಗಿರಿ ಕ್ಷೇತ್ರದಲ್ಲಿ ಏ.8ರಿಂದ ಬ್ರಹ್ಮಕಲಶೋತ್ಸವ

ಅಯೋಧ್ಯೆಯಿಂದ ಹೊರಟಿದೆ ಶ್ರೀರಾಮ ಜ್ಯೋತಿ ರಥಯಾತ್ರೆ



ಪುತ್ತೂರು: ಈಶ್ವರಮಂಗಲ ಹನುಮಗಿರಿ ಶ್ರೀ ಕೋದಂಡರಾಮ ಹಾಗೂ ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ ಏ.9ರಿಂದ 12ರ ತನಕ ನಡೆಯಲಿದ್ದು, ಅಯೋಧ್ಯೆಯಿಂದ ಜ್ಯೋತಿ ಹಾಗೂ ಮೂಲ ಮೃತ್ತಿಕೆಯನ್ನು ತರಲು ಹನುಮಗಿರಿಯಿಂದ ಭಕ್ತರು ರಾಮ ಜನ್ಮಭೂಮಿ ಅಯೋಧ್ಯೆಗೆ ಹೊರಟಿದ್ದು, ಅಯೋಧ್ಯೆ ತಲುಪಿರುವ ರಥಯಾತ್ರೆಗೆ ಸಕಲ ಪೂಜಾ ಕೈಂಕರ್ಯ ನೆರವೇರಿದೆ.

ಅಯೋಧ್ಯೆಯಿಂದ ಹೊರಟ ಜ್ಯೋತಿಯು ಶ್ರೀರಾಮನ ಪರಮ ಭಕ್ತ ಆಂಜನೇಯ ಹುಟ್ಟಿರುವ ಅಂಜನಾದ್ರಿಗೆ ಬಂದು ಅಲ್ಲಿನ ಜ್ಯೋತಿಯನ್ನು ಸ್ಪರ್ಶಿಸಿ ಆಗಮಿಸಲಿದೆ. ರಾಮ ದೀಕ್ಷೆಯನ್ನು ಪಡೆದವರಿಗೆ ಕೋಟಿ ಶ್ರೀರಾಮ ತಾರಕ ಮಹಾಯಜ್ಞಾನದ ಸಂದರ್ಭದಲ್ಲಿ ಅಯೋಧ್ಯೆಯ ಪುಣ್ಯ ಮೃತ್ತಿಕೆ (ಮಣ್ಣು) ಮತ್ತು ಪ್ರಸಾದ ರೂಪದಲ್ಲಿ ಗಂಗಾಜಲವನ್ನು ನೀಡಲಾಗುತ್ತದೆ. ರಥಯಾತ್ರೆ ಅಂಜನಾದ್ರಿ ಮೂಲಕ ಹನುಮಗಿರಿಗೆ ಆಗಮಿಸುತ್ತಿದೆ.

ಅಯೋಧ್ಯೆಯ ಪ್ರಭು ಶ್ರೀರಾಮಚಂದ್ರ ದೇವಾಲಯದ ನಿರ್ಮಾಣದ ಉಸ್ತುವಾರಿ ಗೋಪಾಲ್ ಜಿ. ಅವರ ನೇತೃತ್ವದಲ್ಲಿ ರಥಯಾತ್ರೆಯು ಸಂಚಾಲಕ ಮುರಳಿಕೃಷ್ಣ ಹಸಂತಡ್ಕ, ಬ್ರಹ್ಮಕಲಶ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಸಿ. ನಾರಾಯಣ ರೆಂಜ, ಪ್ರಮುಖರಾದ ಜಗದೀಶ್ ಶೇಣವ, ಶ್ರೀಧರ್ ತೆಂಕಿಲ, ಜಿತೇಶ್ ಬಲ್ನಾಡು, ಜಯಂತ್ ಕುಂಜೂರುಪಂಜ, ಜೀವನ್ ಬಲ್ನಾಡು, ಸಿ. ಗೋವಿಂದರಾಜು ಯಲಹಂಕ, ನಂದನ್ ತಿಂಗಳಾಡಿ ಮತ್ತಿತರರು ಭಾಗವಹಿಸಿದ್ದರು.

ಇಲ್ಲಿ ಸರಕಾರಿ ಬಾವಿ, ಬೋರ್‌ವೆಲ್ ಇಲ್ಲ | ಪ್ರೆಶರ್ ಕೊರತೆ

ಕದ್ರಿ ಪದವು: ನೀರು ಪೂರೈಕೆ ಅಸಮರ್ಪಕ

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಬಾಗ್

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಮನಪಾ ನೀರಿನ ಪೈಪ್ ಲೈನ್‌ನಲ್ಲಿ ಪ್ರೆಶರ್ ಇಲ್ಲ.. ಬೋರ್‌ವೆಲ್, ಬಾವಿಗಳೂ ಇಲ್ಲಿ ಇಲ್ಲ.. ಮನಪಾ ಟ್ಯಾಂಕರ್ ನೀರು ಬರುತ್ತಿಲ್ಲ...

ಇದು ಮಂಗಳೂರು ಮಹಾ ನಗರ ಪಾಲಿಕೆಯ ಕದ್ರಿ ಪದವು ವಾರ್ಡ್‌ನ ಜನರ ದೂರು.

ಅತಿಹೆಚ್ಚು ಜನವಸತಿ ಪ್ರದೇಶಗಳನ್ನು ಒಳಗೊಂಡಿರುವ ವಾರ್ಡ್‌ನ ಹಲವೆಡೆ ನೀರಿನ ಸಮಸ್ಯೆ ಇದೆ. ನಗರದ ಮೇರಿಹಿಲ್, ಕೊಂಚಾಡಿ, ಯೆಯ್ಯಾಡಿ, ಬಾರೆಬೈಲ್, ಉದಯನಗರ, ವ್ಯಾಸನಗರದಿಂದ ಬಿಜೈವರೆಗೂ ವ್ಯಾಪಿಸಿರುವ ಕದ್ರಿ ಪದವು ವಾರ್ಡ್‌ನ ಬಾರೆಬೈಲ್, ಉದಯನಗರ, ಕೊಪ್ಪಲಕಾಡು, ದಂಡೆಕೇರಿ ಪ್ರದೇಶಗಳಲ್ಲಿ ಸಮರ್ಪವಾಗಿ ನೀರು ಪೂರೈಕೆಯಾಗದೇ ಜನತೆ ತೊಂದರೆ ಅನುಭವಿಸುತ್ತಿದ್ದಾರೆ.

ಈ ವಾರ್ಡ್‌ನ ಮೇರಿಹಿಲ್ ಮುಖ್ಯಟ್ಯಾಂಕ್ ನಿಂದ ವಿವಿಧ ಪ್ರದೇಶಗಳಿಗೆ ನೀರು ಪಂಪಿಂಗ್ ಮಾಡಲಾಗುತ್ತಿದೆ. ಗುರುನಗರ, ಕಿಂಗ್ಸ್ ಪಾರ್ಕ್, ಮುಗ್ರೋಡಿ, ಬೊಲ್ಪುಗುಡ್ಡೆ, ಪರ್ಲಗುರಿ, ಶ್ರೀನಿವಾಸ ನಗರ, ಕೊಪ್ಪಲಕಾಡು ಮುಂತಾದ ಸ್ಥಳಗಳಿಗೆ ನೀರು ಪಂಪಿಂಗ್ ಮೂಲಕ ತಲುಪಿಸಲಾಗುತ್ತದೆ. ಬಾಂದೊಟ್ಟು ಸಹಿತ ಹಲವು ಪ್ರದೇಶಗಳಿಗೆ ಗ್ರ್ಯಾವಿಟಿ ಮೂಲಕ ನೀರು ಪೂರೈಕೆಯಾಗುತ್ತಿದೆ.

ಮೇರಿಹಿಲ್ ಟ್ಯಾಂಕ್‌ಗೆ ಬೆಂದೂರುವೆಲ್‌ನಿಂದ ನೀರು ಸರಬರಾಜು ಆಗುತ್ತಿದೆ. ಇಲ್ಲಿಗೆ ಬೆಂದೂರ್ ವೆಲ್‌ನಿಂದ ಬರುವ ನೀರಿನ ಪ್ರಮಾಣವೇ ಕಡಿಮೆ. ಈ ಹಿಂದೆ ಬೆಳಗ್ಗೆ ನಾಲ್ಕು ಗಂಟೆಗೆ ಮೇರಿಹಿಲ್ ಟ್ಯಾಂಕ್ ತುಂಬುತ್ತಿತ್ತು. ಈಗ ಟ್ಯಾಂಕ್ ಭರ್ತಿಯಾಗುವಾಗ ಬೆಳಿಗ್ಗೆ 8 ಗಂಟೆ ಆಗುತ್ತಿದೆ. ಮನೆ ಸಂಪರ್ಕಗಳಿಗೆ ದಿನಕ್ಕೆ 2–3 ಗಂಟೆ ನೀರು ಪೂರೈಕೆ ಮಾಡಲಾಗುತ್ತಿದೆ. ಆದರೆ, ಪ್ರೆಶರ್ ಇಲ್ಲದ ಎತ್ತರದ ಸ್ಥಳಗಳಿಗೆ, ಎಂಡ್ ಪಾಯಿಂಟ್‌ಗಳಿಗೆ ನೀರು ತಲುಪುತ್ತಿಲ್ಲ.

ಪಂಪ್‌ಹೌಸ್‌ನಲ್ಲಿ ನೀರು ಪೂರೈಕೆ ಆರಂಭಗೊಂಡ ಬಳಿಕ ವಿದ್ಯುತ್ ನಿಲುಗಡೆ ಯಾದರೆ ತಗ್ಗುಪ್ರದೇಶಗಳಿಗೆ ಮಾತ್ರ ನೀರು ಪೂರೈಕೆಯಾಗುತ್ತದೆ. ಮತ್ತೆ ಪಂಪಿಂಗ್ ಆರಂಭವಾದಾಗ ಎರಡನೇ ಬಾರಿಯೂ ತಗ್ಗುಪ್ರದೇಶಕ್ಕೇ ನೀರು ಹೋಗುತ್ತದೆ. ಎತ್ತರದ ಪ್ರದೇಶಗಳಿಗೆ ಆ ದಿನ ನೀರು ಪೂರೈಕೆ ಆಗುವುದೇ ಇಲ್ಲ ಎನ್ನುತ್ತಾರೆ ಸ್ಥಳೀಯರು.

ಈ ವಾರ್ಡ್‌ನ ಗುರುನಗರ, ಗಾಂಧೀಜಿ ರಸ್ತೆ ಸಹಿತ ನಾಲ್ಕು ಕಡೆ ಬಾವಿಗಳಿವೆ. ಆದರೆ, ಬಾವಿಯನ್ನು ಶುಚಿಗೊಳಿಸಿ, ಪಂಪ್ ಅಳವಡಿಸಿ ನೀರು ಪೂರೈಸುವ ವ್ಯವಸ್ಥೆ ಆಗಿಲ್ಲ. ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಈ ಕೆಲಸ ಮಾಡಿದರೆ ಸ್ಥಳೀಯರಿಗೆ ಅನುಕೂಲವಾಗುತ್ತದೆ ಎಂಬುದು ಇಲ್ಲಿನ ನಿವಾಸಿಗಳ ವಿನಂತಿ.



ಮೇರಿಹಿಲ್‌ನ ಹಳೆಯ ಟ್ಯಾಂಕ್ ನಾದುರಸ್ತಿಯಲ್ಲಿದೆ



ಕದ್ರಿ ಪದವು ವಾರ್ಡ್‌ನಲ್ಲಿ ಇತ್ತೀಚಿನ ವರ್ಷಗಳಲ್ಲಿ ಮನೆ, ಫ್ಲ್ಯಾಟ್‌ಗಳ ಸಂಖ್ಯೆ ಭಾರಿ ಹೆಚ್ಚಳಗೊಂಡಿದೆ. ಆದರೆ, ನೀರು ಪೂರೈಕೆ ಪ್ರಮಾಣ ಅಧಿಕವಾಗಿಲ್ಲ. ಇದರಿಂದಾಗಿ ವಾರ್ಡ್‌ನ ಹಲವೆಡೆ ನೀರು ಪೂರೈಕೆ ಸಮರ್ಪಕವಾಗಿ ಆಗುತ್ತಿಲ್ಲ. ಮನಪಾ ವತಿಯಿಂದ ಈ ವಾರ್ಡ್‌ಗೆ ಟ್ಯಾಂಕರ್ ನೀರು ಪೂರೈಕೆಯೂ ಅಗತ್ಯ ಇರುವಷ್ಟು ಆಗುತ್ತಿಲ್ಲ. ಕೆಲ ಫ್ಲ್ಯಾಟ್‌ಗಳಿಗೆ ಅಲ್ಲಿನ ನಿವಾಸಿಗಳೇ ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸಿ ಕೊಳ್ಳುತ್ತಿದ್ದಾರೆ. ಕೆಲವೆಡೆಗೆ ನಾನು ಟ್ಯಾಂಕರ್ ಮೂಲಕ ನೀರು ಒದಗಿಸಿಕೊಡುತ್ತಿದ್ದೇನೆ. ಗುರುನಗರ, ಬಾರೆಬೈಲ್, ಉದಯನಗರ, ಕೊಪ್ಪಲಕಾಡು ಪ್ರದೇಶದಲ್ಲಿ ಮನಪಾ ವತಿಯಿಂದ ಕೊಳವೆಬಾವಿ ನಿರ್ಮಿಸಿ ಕೊಡುವಂತೆ ವಿನಂತಿಸಲಾಗಿದ್ದು, ಇದುವರೆಗೆ ಆಗಿಲ್ಲ. ನೀರು ಸಹಿತ ವಾರ್ಡ್‌ನ ಅಗತ್ಯ ಕೆಲಸ ಗಳಿಗೆ ಮನಪಾ ಅಧಿಕಾರಿಗಳು ಸ್ಪಂದಿಸಬೇಕಿದೆ.

■ ಜಯಾನಂದ ಅಂಚನ್, ಕದ್ರಿ ಪದವು ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್



ಕದ್ರಿ ಪದವು ವಾರ್ಡ್‌ನ ಹಲವೆಡೆ ನೀರಿನ ಸಮಸ್ಯೆ ಇದೆ. ಎತ್ತರದ ಸ್ಥಳಗಳಿಗೆ, ಪೈಪ್‌ಲೈನ್‌ನ ಕೊನೆಯ ಸಂಪರ್ಕಗಳಿಗೆ ನೀರು ಪೂರೈಕೆಯಲ್ಲಿ ಭಾರಿ ವ್ಯತ್ಯಯ ಆಗುತ್ತಿದೆ. ಮನಪಾ ಪೈಪ್‌ಲೈನ್‌ನಲ್ಲಿ ಕಡಿಮೆ ಪ್ರಮಾಣದಲ್ಲಿ ನೀರು ಪೂರೈಕೆ ಆಗುತ್ತಿರುವುದೇ ನೀರಿನ ಸಮಸ್ಯೆಗೆ ಪ್ರಮುಖ ಕಾರಣ. ಈ ಬಗ್ಗೆ ಮನಪಾ ಅಧಿಕಾರಿಗಳು ಗಮನಹರಿಸಿ, ಸಮಸ್ಯೆ ಬಗೆಹರಿಸಬೇಕು.

■ ಸಂಜೀತ್ ಶೆಟ್ಟಿ ಗುರುನಗರ, ಕದ್ರಿಪದವು ವಾರ್ಡ್ ನಿವಾಸಿ

ಮೇರಿಹಿಲ್ ಟ್ಯಾಂಕ್‌ನಲ್ಲಿ ನೀರು ಸೋರಿಕೆ

ಕದ್ರಿ ಪದವು ಸಹಿತ ಸುತ್ತಲಿನ ಐದಾರು ವಾರ್ಡ್‌ಗಳಿಗೆ ನೀರು ಪೂರೈಸುವ ಮೇರಿಹಿಲ್‌ನ ಹಳೆಯ ಟ್ಯಾಂಕ್ ತೀರಾ ನಾದುರಸ್ತಿಯಲ್ಲಿದೆ. ಟ್ಯಾಂಕ್ ಹಳೆಯದಾಗಿದ್ದು, ಬಣ್ಣ ಮಾಸಿದೆ. ಅಲ್ಲಲ್ಲಿ ನೀರು ಸೋರಿಕೆ ಉಂಟಾಗುತ್ತಿದೆ. ಸದ್ಯಕ್ಕೆ ಸೋರಿಕೆ ಉಂಟಾಗುತ್ತಿರುವ ಕಡೆ ತೇಪೆಗಾಗಿ ಕಾಮಗಾರಿ ಆರಂಭಗೊಂಡಿದೆ. 30 ವರ್ಷಗಳಷ್ಟು ಹಳೆಯದಾದ ಈ ಟ್ಯಾಂಕ್‌ನ ಸುತ್ತಲೂ ಲೈಟಿಂಗ್‌ನ ವ್ಯವಸ್ಥೆಯೂ ಇಲ್ಲ.

ಜಲಸಿರಿ ಅರೆಬರೆ ಕಾಮಗಾರಿ

ಕದ್ರಿ ಪದವು ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿಗಳು ಕುಂಟುತ್ತಾ ಸಾಗಿವೆ. ವಾರ್ಡ್‌ನ ಬಹುತೇಕ ಕಡೆ ಪೈಪ್‌ಲೈನ್ ಕಾಮಗಾರಿಗಳು ಅರೆಬರೆ ಮಾತ್ರ ಆಗಿದೆ. ಪೈಪ್‌ಲೈನ್‌ಗೆ ರಸ್ತೆ ಅಗೆದು ಸಮರ್ಪಕವಾಗಿ ಸಿಮೆಂಟ್ ಹಾಕಿಲ್ಲ. ಕೆಲವಡೆ ಗುಂಡಿಯನ್ನೂ ಸರಿಯಾಗಿ ಮುಚ್ಚಿಲ್ಲ. ಜಲಸಿರಿ ಯೋಜನೆ ಸರಿಯಾದ ಅನುಷ್ಠಾನವಾಗದೇ ಇಲ್ಲಿನ ಜನತೆ ಕಿರಿಕಿರಿ ಅನುಭವಿಸುತ್ತಿದ್ದಾರೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೇರಿಹಿಲ್‌ನ ಹಳೆಯ ಟ್ಯಾಂಕ್‌ನ ಬಳಿಯೇ ಜಲಸಿರಿ ಯೋಜನೆ ಮೂಲಕ 20 ಲಕ್ಷ ಲೀಟರ್ ಸಾಮರ್ಥ್ಯದ ಹೊಸ ಟ್ಯಾಂಕ್ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿದೆ.

ನಾಳೆ ವಾರ್ಡ್ -23
ದೇರೆಬೈಲು ಪೂರ್ವ ಪರಿಸರದ ಸ್ಥಿತಿಗತಿ

ರೈಲ್ವೆ ಕ್ಯಾಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೊರೇಶನ್ ಲಿಮಿಟೆಡ್ ನೇತೃತ್ವ

ದಿವ್ಯ ದ್ವಾರಕಾ ಸೋಮನಾಥ ಯಾತ್ರೆ

ಮಂಗಳೂರು: ಭಾರತೀಯ ರೈಲ್ವೆ ಕ್ಯಾಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೊರೇಶನ್ ಲಿಮಿಟೆಡ್ (ಐಆರ್‌ಸಿಟಿಸಿ)ನಿಂದ ದಿವ್ಯ ದ್ವಾರಕಾ ಸೋಮನಾಥ ಯಾತ್ರೆ ಎಂಬ ವಿಶೇಷ ಪ್ರವಾಸಿ ರೈಲು ಯಾತ್ರೆ ಹಾಗೂ ಶಿರಡಿಗೆ ವಿಶೇಷ ವಿಮಾನ ಯಾತ್ರೆಯನ್ನು ಆಯೋಜಿಸಲಾಗಿದೆ.

ವಿಶೇಷ ರೈಲು ಯಾತ್ರೆಯು ಮೇ 10ರಂದು ಮಂಗಳೂರು ಮೂಲಕ ಹೊರಡಲಿದೆ. 10 ದಿನಗಳ ತೀರ್ಥ ಯಾತ್ರೆಯಲ್ಲಿ ಗುಜರಾತ್‌ನ ಪ್ರಮುಖ ಆಧ್ಯಾತ್ಮಿಕ ಸ್ಥಳಗಳು ಹಾಗೂ ಗೋವಾದ ಸುಂದರ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಲಾಗುವುದು. ದ್ವಾರಕಾದಲ್ಲಿ ಜ್ಯೋತಿರ್ಲಿಂಗ, ಬೆಟ್ ದ್ವಾರಕಾ, ದ್ವಾರಕಾಧೀಶ ದೇವಾಲಯ ಮತ್ತು ರುಕ್ಮಿಣಿ ದೇವಾಲಯಗಳಿಗೆ ಭೇಟಿ, ಸೋಮನಾಥ ಜ್ಯೋತಿರ್ಲಿಂಗ ಮತ್ತು ಭಲ್ಕಾ ತೀರ್ಥ, ನಿಷ್ಕಳಂಕ ಮಹಾದೇವ ದೇವಾಲಯ ಮತ್ತು ಗಾಂಧಿ ಸ್ಮೃತಿ, ಗೋವಾದಲ್ಲಿ ಐತಿಹಾಸಿಕ ಅಗುವಾಡಾ ಕೋಟೆ, ಬೊಮ್ ಜೀಸಸ್ ಬೆಸಿಲಿಕಾ ಮತ್ತು ಕಲಾಂಗುಟೆ ಮತ್ತು ಕೋಲ್ವಾ ಬೀಚ್‌ಗಳಿಗೆ ಭೇಟಿ ವ್ಯವಸ್ಥೆ ಇದೆ ಎಂದು ಐಆರ್‌ಸಿಟಿಸಿಯ ಜಂಟಿ ಜನರಲ್ ಮ್ಯಾನೇಜರ್ ಸ್ಯಾಮ್ ಜೋಸೆಫ್ ಪಿ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇದೇ ವೇಳೆ ಶಿರಡಿ ವಿಮಾನ ಪ್ಯಾಕೇಜ್‌ನಡಿ ಶನಿ ಶಿಂಗಣಾಪುರ ದೇವಾಲಯ, ಗೃಷ್ಣೇಶ್ವರ ಜ್ಯೋತಿರ್ಲಿಂಗ ದೇವಾಲಯ, ತ್ರ್ಯಂಬಕೇಶ್ವರ ಶಿವ ದೇವಾಲಯ, ಪಂಚವಟಿ ಮತ್ತು ಎಲ್ಲೋರಾ ಗುಹೆಗಳನ್ನು ಒಳಗೊಂಡ ಯಾತ್ರೆ ಇರಲಿದೆ. ಏ. 22ರಿಂದ ಏ. 26ರವರೆಗಿನ ಪ್ಯಾಕೇಜ್ ಬೆಲೆ ತಲಾ ಒಬ್ಬರಿಗೆ 28,050 ರೂ.ಗಳಾಗಿರುತ್ತದೆ. ಪ್ಯಾಕೇಜ್‌ನಲ್ಲಿ ವಿಮಾನ ಟಿಕೆಟ್, ಊಟ ಸಹಿತ ವಸತಿ, ಸ್ಥಳೀಯ ಸಾರಿಗೆ, ಟೂರ್ ಕೋ ಆರ್ಡಿನೇಟರ್ ಸೇವೆ ಮತ್ತು ಪ್ರಯಾಣ ವಿಮೆ ಒಳಗೊಂಡಿರುತ್ತದೆ ಎಂದು ವಿವರಿಸಿದರು.

ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ವಿನೋದ್ ನಾಯರ್ ಉಪಸ್ಥಿತರಿದ್ದರು.

ಪ್ರಯಾಣಿಕರು ಮಂಗಳೂರು ಮತ್ತು ಉಡುಪಿ ಮೂಲಕ ರೈಲಿಗೆ ಏರಬಹುದು. ಬುಕ್ಕಿಂಗಾಗಿ ಐಆರ್‌ಸಿಟಿಸಿ ಯ ಅಧಿಕೃತ ಪೋರ್ಟಲನ್ನು ಸಂಪರ್ಕಿಸಬಹುದು. ಪ್ರಯಾಣಿಕರಿಗೆ ತಲಾ 28,760 ರೂ. ಪ್ಯಾಕೇಜ್ ದರವಿದ್ದು, 3 ಎಸಿ ರೈಲು ಪ್ರಯಾಣ, ಎಸಿ ಹೊಟೇಲ್ ವಸತಿ, ಎಸಿ ರಸ್ತೆ ಸಾರಿಗೆ, ದಿನಕ್ಕೆ ಮೂರು ಸಸ್ಯಾಹಾರಿ ಊಟ, ವೃತ್ತಿಪರ ಟೂರ್ ಎಸ್ಕಾರ್ಟ್‌ಗಳು, ಸುರಕ್ಷತಾ ಸಿಬ್ಬಂದಿ ಹಾಗೂ ಪ್ರಯಾಣ ವಿಮೆ ಒಳಗೊಂಡಿದೆ.

■ ಸ್ಯಾಮ್ ಜೋಸೆಫ್ ಪಿ.

ಬೆಂಗಳೂರಲ್ಲಿಂದು ಉದ್ಘಾಟನಾ ಪಂದ್ಯ | 19ನೇ ಆವೃತ್ತಿಗೆ ಚಾಲನೆ

ಮನರನ್‌ಜನಾ ಹಬ್ಬ ಶುರು



• **ಬೆಂಗಳೂರು:** ಭಾರತ ಕ್ರಿಕೆಟ್ ಅಭಿಮಾನಿಗಳ ನಡುವೆ ಇರುವ ಭಾಯಿಚಾರಾ ಕೆಲವು ದಿನಗಳ ಮಟ್ಟಿಗೆ ನಿಲ್ಲಲಿದೆ. ಸುಮಾರು 2 ತಿಂಗಳ ಮಟ್ಟಿಗೆ ಒಬ್ಬರಿಗೊಬ್ಬರು ಟೀಕಿಸಲು ವಿವಿಧ ತಂಡಗಳ ಅಭಿಮಾನಿಗಳು ಸಿದ್ಧರಾಗಿದ್ದಾರೆ. ತಮ್ಮ ನೆಚ್ಚಿನ ಆಟಗಾರರನ್ನು ಬೆಂಬಲಿಸಲು, ಕ್ರಿಕೆಟ್ ಆನಂದಿಸಲು ಸಮಸ್ತ ಕ್ರೀಡಾಭಿಮಾನಿಗಳು ಅಣಿಯಾಗಿದ್ದಾರೆ. ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದರಾಬಾದ್ ನಡುವಿನ ಪಂದ್ಯದೊಂದಿಗೆ ಐಪಿಎಲ್ ಶುರುವಾಗಲಿದೆ. ಎಲ್ಲಾ ಹತ್ತು ತಂಡಗಳು ಭರ್ಜರಿ ಸಿದ್ಧತೆಗಳೊಂದಿಗೆ ಕಣಕ್ಕಿಳಿಯುತ್ತಿವೆ. ಹಾಲಿ ಚಾಂಪಿಯನ್ ಆರ್‌ಸಿಬಿ ಟ್ರೋಫಿ ಉಳಿಸಿಕೊಳ್ಳಲು ಫೈಟ್ ನಡೆಸಲಿದೆ. 19ನೇ ಆವೃತ್ತಿಯಲ್ಲಿ 84 ಪಂದ್ಯಗಳು ನಡೆಯಲಿವೆ ಎಂದು ಹೇಳಲಾಗಿತ್ತು. ಆದರೆ ಬಿಸಿಸಿಐ 70 ಪಂದ್ಯಗಳ ವೇಳಾಪಟ್ಟಿ ಪ್ರಕಟಿಸಿದೆ. ಇನ್ನೂ 4 ನಾಕೌಟ್ ಪಂದ್ಯಗಳ ವೇಳಾಪಟ್ಟಿ ಪ್ರಕಟಿಸಬೇಕಿದೆ. ಅಂದರೆ ಈ ಬಾರಿ ಕೂಡ 74 ಪಂದ್ಯಗಳು ಮಾತ್ರ ನಡೆಯಲಿವೆ. ಯಥಾಸ್ಥಿತಿ ಲೀಗ್ ಹಂತದ ರೌಂಡ್ ರಾಬಿನ್ ಆಮೇಲೆ ನಾಕೌಟ್ ಮತ್ತು ಫೈನಲ್ ಪಂದ್ಯ ನಡೆಯಲಿವೆ. ವಿಶೇಷವಾಗಿ ಈ ಬಾರಿ ಕೆಲವು ನಿಯಮಗಳನ್ನು ತರಲಾಗಿದೆ. 8 ವಾರದ ಹಿಂದಷ್ಟೇ ಟಿ20 ಮಾದರಿಯಲ್ಲಿ ಭಾರತ ವಿಶ್ವಕಪ್ ಗೆದ್ದಿದೆ. ಎಲ್ಲಾ ಕ್ರಿಕೆಟ್ ಅಭಿಮಾನಿಗಳ ಮನಸ್ಥಿತಿ ಈಗ ಟಿ20ಗೆ ಹೊಂದಿಕೊಂಡಿದೆ.

74	12	14	8	44
ಈ ಬಾರಿಯ ಪಂದ್ಯಗಳು	ನಗರಗಳಲ್ಲಿ ಪಂದ್ಯ	ತಂಡಕ್ಕೆ ಪಂದ್ಯಗಳು	ಡಬಲ್ ಹೆಡರ್‌ಗಳು	ಧೋನಿ ಅತಿ ಹಿರಿಯ ಆಟಗಾರ



ಗಮನಿಸಿ

- ವಾಹನದ ಬದಲು ಮೆಟ್ರೋದಲ್ಲಿ ಪ್ರಯಾಣಿಸಿ, ಟಿಕೆಟ್ ಉಚಿತ
- ಮೈದಾನದ ಸುತ್ತ ಪಾರ್ಕಿಂಗ್ ನಿಷೇಧ, 4 ಸ್ಥಳಗಳಲ್ಲಿ ಪಾರ್ಕಿಂಗ್
- ಪಾರ್ಕಿಂಗ್ ಲಾಟ್‌ನಿಂದ ಮೈದಾನದವರೆಗೆ ಬಸ್ ವ್ಯವಸ್ಥೆ
- ಕ್ವೀನ್ಸ್ ರೋಡ್‌ನಿಂದ ಮೈದಾನ ದೊಳಕ್ಕೆ ಪ್ರವೇಶ ಬಂದ್
- ಟಿಕೆಟ್ ಇಲ್ಲದಿದ್ದರೆ ಮೈದಾನದ ಕಡೆ ನಿಲ್ಲದಿರಿ, ಕಠಿಣ ಕ್ರಮ

ಟ್ರೋಫಿ ವಿಶೇಷತೆ

ಐಪಿಎಲ್‌ನಲ್ಲಿ ಮೊದಲಿಗೆ ಭಾರತ ನಕ್ಷೆ ಇರುವ ಟ್ರೋಫಿಯನ್ನು ನೀಡಲಾಗುತ್ತಿತ್ತು. ನಂತರ ಬದಲಾಯಿಸಿ ಹೊಸ ವಿನ್ಯಾಸದ ಟ್ರೋಫಿ ನೀಡುವ ವಾಡಿಕೆ ಮಾಡಿಕೊಂಡಿತು. ಟ್ರೋಫಿ ಬಂಗಾರದ್ದಾಗಿರುತ್ತದೆ. ಟ್ರೋಫಿ ಮೇಲೆ (where talent meets opportunity) ಎಂದು ಬರೆಯಲಾಗಿದೆ.



ಮೊದಲ ಬಾರಿಯ ಚಾಂಪಿಯನ್
▸ರಾಜಸ್ಥಾನ ರಾಯಲ್ಸ್

ಹಾಲಿ ಚಾಂಪಿಯನ್ಸ್
▸ರಾಯಲ್ ಚಾಲೆಂಜರ್ಸ್ ಬೆಂಗಳೂರು

ಹೆಚ್ಚು ಬಾರಿ ಗೆದ್ದವರು
▸ಮುಂಬೈ ಇಂಡಿಯನ್ಸ್, ಚೆನ್ನೈ ಸೂಪರ್ ಕಿಂಗ್ಸ್(5 ಟ್ರೋಫಿ)

ಅತಿ ಹೆಚ್ಚು ರನ್ ಬಾರಿಸಿದ ಆಟಗಾರ
▸ವಿರಾಟ್ ಕೊಹ್ಲಿ (8661 ರನ್)

ಅತಿ ಹೆಚ್ಚು ವಿಕೆಟ್ ಪಡೆದ ಆಟಗಾರ
▸ಯಜುವೇಂದ್ರ ಚಾಹಲ್ (221 ವಿಕೆಟ್)

ಅತಿ ಹೆಚ್ಚು ವೈಯಕ್ತಿಕ ಸ್ಕೋರ್
▸ಕ್ರಿಸ್ ಗೇಲ್ (175)

ಅತಿ ಹೆಚ್ಚು ರನ್ ಗಳಿಸಿದ ತಂಡ
▸ಸನ್‌ರೈಸರ್ಸ್ ಹೈದರಾಬಾದ್ 287/2

ಬೆಸ್ಟ್ ಬೌಲಿಂಗ್:
▸ಅಲ್ಜಾರಿ ಜೋಸೆಫ್ (12/6)

ಹೆಚ್ಚು ಕ್ಯಾಚ್ ಪಡೆದ ಫೀಲ್ಡರ್
▸ವಿರಾಟ್ ಕೊಹ್ಲಿ (110+)

ಹೆಚ್ಚು ಟ್ರೋಫಿ ಗೆದ್ದ ನಾಯಕ
▸ರೋಹಿತ್ ಶರ್ಮ, ಮಹೇಂದ್ರ ಸಿಂಗ್ ಧೋನಿ(5)

ಬಹುಮಾನ

ಐಪಿಎಲ್ ಗೆದ್ದ ತಂಡಕ್ಕೆ
20 ಕೋಟಿ ರೂ. ನಗದು ಬಹುಮಾನ

ರನ್ನರ್–ಅಪ್ ತಂಡಕ್ಕೆ
13 ಕೋಟಿ ರೂ. ನಗದು ಬಹುಮಾನ







ಐಪಿಎಲ್ ಯಾಕೆ ಭಿನ್ನ ಕ್ರಿಕೆಟ್?

3 ಸೂಪರ್ ಓವರ್

ಪಂದ್ಯಗಳು ಟೈ ಆದರೆ ಐಪಿಎಲ್‌ನಲ್ಲಿ ಮೂರು ಸೂಪರ್ ಓವರ್ ಆಡಿಸಲಾಗುತ್ತದೆ. ಐಸಿಸಿ ಕ್ರಿಕೆಟ್‌ನಲ್ಲಿ ಒಂದು ಅಥವಾ ಎರಡು ಸೂಪರ್ ಓವರ್‌ಗಳ ನಂತರ ಪಂದ್ಯ ನಿರ್ಧರಿಸುವುದಕ್ಕೆ ಬೌಂಡರಿ ಎಣಿಕೆ ಬಳಸುತ್ತಿತ್ತು. ಬಳಿಕ ಫಲಿತಾಂಶ ಬರುವವರೆಗೂ ಸೂಪರ್ ಓವರ್ ಎಂಬ ಘೋಷಣೆ ಮಾಡಿತು. ಐಪಿಎಲ್‌ನಲ್ಲಿ ಮೂರು ಸೂಪರ್ ಓವರ್ ಆಡಿಸಲಾಗುತ್ತದೆ.

ಡಿಆರ್‌ಎಸ್ ಬಳಕೆ ವಿಸ್ತಾರ

ಐಸಿಸಿಯಲ್ಲಿ ಕೆಲವು ನಿರ್ಧಾರಗಳಿಗೆ ಮಾತ್ರ ಡಿಆರ್‌ಎಸ್ ಬಳಸಿಕೊಳ್ಳಬಹುದಾಗಿದೆ. ಆದರೆ ಐಪಿಎಲ್‌ನಲ್ಲಿ ಪ್ರತಿಯೊಂದಕ್ಕೂ ಡಿಆರ್ ಎಸ್ ಬಳಸಿಕೊಳ್ಳುವ ಆಯ್ಕೆ ತಂಡಗಳ ಮುಂದಿರುತ್ತವೆ. ಅಂದರೆ ವೈಡ್, ನೋ ಬಾಲ್, ಓವರ್ ಬೌನ್ಸ್‌ಗೂ ಆಟಗಾರರು ಡಿಆರ್‌ಎಸ್ ತೆಗೆದುಕೊಳ್ಳಬಹುದಾಗಿದೆ.



ಇಂಪ್ಯಾಕ್ಟ್ ಪ್ಲೇಯರ್

- ಪ್ರತಿ ತಂಡವು ಪಂದ್ಯಕ್ಕೆ ಮುನ್ನ 11 ಆಟಗಾರರ ಜೊತೆಗೆ 5 ಸಬ್ಸಟಿಟ್ಯೂಟ್ ಆಟಗಾರರನ್ನು ಘೋಷಿಸುತ್ತದೆ.
- ಈ 5ರಲ್ಲಿ ಒಬ್ಬರನ್ನು ಪಂದ್ಯದ ವೇಳೆ ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಳಸಬಹುದು.

ಯಾವಾಗ ಬಳಸಬಹುದು?

- ಇನಿಂಗ್ಸ್ ಆರಂಭಕ್ಕೂ ಮೊದಲು
- ಓವರ್ ಮುಗಿದ ನಂತರ
- ವಿಕೆಟ್ ಬಿದ್ದ ನಂತರ
- ಬ್ಯಾಟರ್ ನಿವೃತ್ತಿಯಾದಾಗ

ಟಿ20 ಮಾದರಿಯ ವಿಭಿನ್ನ ಕ್ರಿಕೆಟ್ ಐಪಿಎಲ್

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಜನರ ಮನದಲ್ಲಿ ಅಚ್ಚಳಿಯದಂತೆ ಕೂತಿದೆ. 2008ರಲ್ಲಿ ಶುರುವಾದಾಗಿನಿಂದಲೂ ಅತ್ಯಂತ ಜನಪ್ರಿಯ ಆಟ ಅನ್ನಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಇನ್ನೂ ಹೆಚ್ಚು ಪರಿಣಾಮ ಬೀರಿದೆ. ವಿದೇಶಗಳಲ್ಲಿ ನಡೆಸಲಾಗುವ ಟಿ20 ಲೀಗ್‌ಗಿಂತಲೂ ಹೆಚ್ಚು ಪ್ರಸಿದ್ಧತೆ ಪಡೆದು ನಿಂತಿದೆ. ಜಗತ್ತಿನಲ್ಲಿ ಹತ್ತಾರು ಕಡೆ ಹತ್ತಾರು ಹೆಸರುಗಳಲ್ಲಿ ಟಿ20 ಕೂಟಗಳು ನಡೆಯುತ್ತವೆ. ಆದರೆ ಐಪಿಎಲ್‌ಗಿದ್ದಷ್ಟು ಪ್ರಾಮುಖ್ಯತೆ ಮತ್ತು ಕ್ರೇಜ್ ಬೇರ್‍ಯಾವ ಪಂದ್ಯಾವಳಿಗೂ ಇಲ್ಲ.

ವಿಭಿನ್ನ ರೂಲ್ಸ್

ಐಪಿಎಲ್ ಅನ್ನು ವಿಭಿನ್ನ ನಿಯಮಗಳು ವಿಶೇಷಗೊಳಿಸಿದೆ. ಮೊದಲಿನ ಐಪಿಎಲ್ ನಿಂದಲೂ ಐಸಿಸಿ ಟಿ20 ಕ್ರಿಕೆಟ್‌ಗೂ ವಿಭಿನ್ನ ನಿಯಮಗಳನ್ನು ಅನುಸರಿಸುತ್ತಾ ಬಂದಿದೆ. ಹಾಗಿದ್ದರೆ ಹೊಸ ಮತ್ತು ಆಕರ್ಷಕ ನಿಯಮಗಳ್ಯಾವವು?

ಪ್ರಮುಖ ನಿಯಮಗಳು

- ಇಂಪ್ಯಾಕ್ಟ್ ಆಟಗಾರ ಬ್ಯಾಟಿಂಗ್, ಬೌಲಿಂಗ್ ಕೂಡ ಮಾಡಬಹುದು
- ಪೂರ್ಣ 4 ಓವರ್‌ಗಳ ಬೌಲಿಂಗ್ ಮಾಡಲು ಅರ್ಹ
- ಒಬ್ಬ ಆಟಗಾರ ಹೊರಗೆ ಹೋದ ಮೇಲೆ ಮತ್ತೆ ಬರುವುದಿಲ್ಲ
- ಒಂದೇ ತಂಡಕ್ಕೆ ಒಂದೇ ಇಂಪ್ಯಾಕ್ಟ್ ಪ್ಲೇಯರ್ ಅವಕಾಶ

ಟೈಮ್–ಔಟ್

ಪಂದ್ಯದ ನಡುವೆ ನಾಲ್ಕು ಟೈಮ್–ಔಟ್‌ಗಳನ್ನು ತೆಗೆದುಕೊಳ್ಳಲಾಗುತ್ತದೆ. ಒಂದು ಇನ್ನಿಂಗ್ಸ್‌ನಲ್ಲಿ ಒಂದು ಬ್ಯಾಟಿಂಗ್ ಮತ್ತು ಒಂದು ಬೌಲಿಂಗ್ ಟೈಮ್ ಔಟ್ ನೀಡಲಾಗುತ್ತೆ.

ಯಾವಾಗ ತೆಗೆದುಕೊಳ್ಳಬಹುದು?

- ಪವರ್‌ಪ್ಲೇ ಮುಗಿದ ನಂತರ
- 6–9ರ ಓವರ್ ಒಳಗಡೆ ಮೊದಲ ವಿರಾಮ
- 13ರಿಂದ 16ನೇ ಓವರ್ ಒಳಗಡೆ ಎರಡನೇ ವಿರಾಮ

ಗೆಲುವಿನ ಭರವಸೆಯಲ್ಲಿ ಆರ್‌ಸಿಬಿ

"ಹಾಲಿ ಚಾಂಪಿಯನ್ ಆಗಿ ಕಣಕ್ಕಿಳಿಯುತ್ತಿರುವುದು ಆಟಗಾರರಲ್ಲಿ ಉತ್ಸಾಹ ತುಂಬಿದೆ. ವಿರಾಟ್ ಕೊಹ್ಲಿ, ರಜತ್ ಪಾಟಿದಾರ್ ನಾಯಕತ್ವದಲ್ಲಿ ತಂಡ ಸಾಧಿಸ ಬೇಕಾದ್ದನ್ನು ಸಾಧಿಸಿ ತೋರಿಸಿದೆ. ನಾವು ಹೊಸ ಆರಂಭ ಪಡೆಯುವುದಕ್ಕೆ ಸಿದ್ಧ. ಬದಲಾವಣೆಯೊಂದಿಗೆ ಹೊಸ ಸವಾಲುಗಳನ್ನು ಎದುರಿಸಲು ಸಿದ್ಧ.

▸ಆ್ಯಂಡಿ ಫ್ಲವರ್, ಆರ್‌ಸಿಬಿ ಕೋಚ್

ಪಿಚ್: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಸಿದ್ಧಗೊಂಡಿದೆ. ಅಭ್ಯಾಸದಲ್ಲಿ ಕಿಶನ್, ವಿರಾಟ್, ಪಡಿಕ್ಕಲ್, ರಜತ್ ಸೇರಿದಂತೆ ವಿವಿಧ ಬ್ಯಾಟಿಗರು ಗಗನೆತ್ತರದ ಸಿಕ್ಸರ್‌ಗಳನ್ನು ಬಾರಿಸಿ ಮಿಂಚಿದರು. ಪಂದ್ಯದಲ್ಲೂ ಅದೇ ಫಲಿತಾಂಶ ಮೂಡಿ ಬರುವ ಸಾಧ್ಯತೆ ಇದೆ. ಮಳೆ ಸಾಧ್ಯತೆ ಕಮ್ಮಿಯಿದ್ದು, ಸ್ಪಿನ್ನರ್‌ಗಳು ಮುಖ್ಯ ಪಾತ್ರ ವಹಿಸಲು ಸಜ್ಜಾಗಿದ್ದಾರೆ.

ಪಂದ್ಯದ ವಿವರ:
ಯಾವಾಗ: ಶನಿವಾರ
ಎಲ್ಲಿ: ಬೆಂಗಳೂರು
ಸಮಯ: ಸಂಜೆ 7:30
ವೀಕ್ಷಣೆ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

• **ಬೆಂಗಳೂರು:** ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಬಲಿಷ್ಠ ಸನ್‌ರೈಸರ್ಸ್ ಹೈದರಾಬಾದ್ ಶನಿವಾರದಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ 19ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಎದುರಾಗಲಿವೆ.

ಕಳೆದ ಕೂಟದಲ್ಲಿ ಅತ್ಯುತ್ತಮ ಪ್ರದರ್ಶನದೊಂದಿಗೆ ಟ್ರೋಫಿ ಗೆದ್ದುಕೊಂಡಿರುವ ಬೆಂಗಳೂರು ಹಾಗೂ ಲೀಗ್ ಹಂತದಲ್ಲಿ ಎಲ್ಲಿಲ್ಲದ ನಿರಾಸೆ ಅನುಭವಿಸಿರುವ ಹೈದರಾಬಾದ್ ಶುಭಾರಂಭ ಮಾಡುವುದಕ್ಕಾಗಿ ಎದುರು ನೋಡುತ್ತಿವೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಮೊದಲ ಪಂದ್ಯ ಆಯೋಜಿಸಲಿದೆ. ಹೈದರಾಬಾದ್ ಪ್ಯಾಟ್ ಕಮ್ಮಿನ್ಸ್ ಇಲ್ಲದೆ ಕಣಕ್ಕಿಳಿಯುತ್ತಿದೆ. ಇತ್ತ ಬೆಂಗಳೂರು 3 ವೇಗಿಗಳಿಲ್ಲದೆ ಮೈದಾನಕ್ಕಿಳಿಯುತ್ತಿದೆ. ಉಭಯ ತಂಡಗಳು ಬ್ಯಾಟಿಂಗ್ ಪಡೆಗಳನ್ನು ಹೊಂದಿರುವುದು ಕುತೂಹಲ ಮೂಡಿಸಿದೆ.

ಶೀಘ್ರ ಕಣಕ್ಕೆ ಜೋಶ್: ಹ್ಯಾಜೆಲ್ವುಡ್ ಬಗ್ಗೆ ಮಾಹಿತಿ ನೀಡುತ್ತಾ ಆ್ಯಂಡಿ, ಹ್ಯಾಜೆಲ್ವುಡ್ ತಂಡ ಸೇರಿಕೊಂಡಿದ್ದಾರೆ. ಸಂಪೂರ್ಣ ಫಿಟ್ ಆಗಿದ್ದಾರೆ. ಆರಂಭಿಕ ಸಮಯದಲ್ಲೇ ನಮ್ಮ ಕ್ಯಾಂಪ್ ಸೇರಿಕೊಂಡಿರುವುದು ಒಳ್ಳೆಯ ವಿಚಾರ. ಆದರೆ ಅವರು ನಾಳೆಯ ಪಂದ್ಯಕ್ಕೆ ಲಭ್ಯವಿರು ವುದಿಲ್ಲ ಎಂದು ತಿಳಿಸಿದರು.





ಆರ್‌ಸಿಬಿಗೆ ಬೌಲಿಂಗ್ ಪಡೆ ಸವಾಲು

ತಂಡದಲ್ಲಿ ಹೊಸ ಬದಲಾವಣೆಗಳಾದರೂ ಶ್ರೀಲಂಕಾದ ತುಷಾರಾ ಬರದಿರುವುದು ಆರ್‌ಸಿಬಿಗೆ ಆರಂಭಿಕ ಪಂದ್ಯಗಳಲ್ಲಿ ಬಲವಾದ ಪೆಟ್ಟು ನೀಡಿದೆ. ಹ್ಯಾಜೆಲ್ವುಡ್ ಮೊದಲಿನ ಪಂದ್ಯಕ್ಕಿಲ್ಲ. ಯಶ್ ದಯಾಳ್ ಹೊರಬಿದ್ದಿದ್ದಾರೆ. ಈ ನಡುವೆ ತುಷಾರಾ ಕೂಡ ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವಲ್ಲಿ ವಿಫಲರಾಗಿದ್ದಾರೆ. ಈ ಬೆನ್ನಲ್ಲೇ ಬೌಲಿಂಗ್ ವಿಚಾರದಲ್ಲಿ ಬೆಂಗಳೂರು ಹಿನ್ನಡೆ ಅನುಭವಿಸಿದೆ. ತಂಡದಲ್ಲಿ ಜೋಕಬ್ ಡಫಿ, ಶೆಫರ್ಡ್, ಭುವನೇಶ್ವರ್ ಕುಮಾರ್ ಜತೆಗೆ ಮಂಗೇಶ್ ಯಾದವ್, ವೆಂಕಟೇಶ್ ಆಯ್ಯರ್ ಮತ್ತು ವೇಗದ ಬೌಲಿಂಗ್ ಮಾಡುವ ಡೆವಿಡ್ ಇದ್ದಾರೆ. ಸ್ಪಿನ್ ವಿಭಾಗದಲ್ಲಿ ಸುಯಶ್ ಮತ್ತು ಕೃಣಾಳ್ ಮಿಂಚಲು ಸಜ್ಜಾಗಿದ್ದಾರೆ.

ಹೈದರಾಬಾದ್ ತಂಡಕ್ಕೆ ಸವಾಲು

ಹೆಡ್, ಅಭಿಷೇಕ್, ಇಶಾನ್ ಕಿಶನ್, ಕ್ಲಾಸೆನ್ ಅಂತಹ ಆಟಗಾರರನ್ನು ಹೊಂದಿದರೂ ಹೈದರಾಬಾದ್ ಹಿನ್ನಡೆ ಅನುಭವಿಸಿದೆ. ಮುಖ್ಯವಾಗಿ ಈ ಹಿಂದೆ ನಡೆದಿರುವ ವಿಶ್ವಕಪ್ ಪಂದ್ಯಾವಳಿಯಲ್ಲಿ ಕಿಶನ್ ಬಿಟ್ಟರೆ ಇನ್ನುಳಿದ ಸ್ಫೋಟಕ ಬ್ಯಾಟಿಗರು ಅಷ್ಟೊಂದು ಪರಿಣಾಮಕಾ ರಿಯಾಗಿ ಆಡಿಲ್ಲ. ಅದಲ್ಲದೆ, ಬೌಲಿಂಗ್‌ನಲ್ಲಿ ಶಮಿ ಮತ್ತು ಕಮ್ಮಿನ್ಸ್ ಅವರಿಲ್ಲದೆ ಅಲ್ಪ ಸವಾಲು ಎದುರಿಸಲಿದೆ.

ಬಳ್ಳಾರಿಯಲ್ಲಿ ರಾಷ್ಟ್ರೀಯ ಕಬಡ್ಡಿ ಶಿಬಿರ

• **ಬಳ್ಳಾರಿ:** ಅಮೆಚೂರ್ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ, ಮಶಾಲ್ ಸ್ಪೋರ್ಟ್ಸ್‌ನ ಸಹಯೋಗದಲ್ಲಿ, ಬಳ್ಳಾರಿಯ ಇನ್ಸ್‌ಪೈರ್ ಇನ್ ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನಲ್ಲಿ ಹೈ–ಪರ್ಫಾರ್ಮೆನ್ಸ್ ಶಕ್ತಿ ಮತ್ತು ಕಂಡೀಷನಿಂಗ್ ಶಿಬಿರವನ್ನು ಪ್ರಾರಂಭಿಸಿತು. ಶುಕ್ರವಾರವೇ ಶುರುವಾದ ಈ ಶಿಬಿರ ಏಪ್ರಿಲ್ 2ರವರೆಗೆ ನಡೆಯಲಿದೆ. ಶಿಬಿರವು ಭಾರತದ ಕಬಡ್ಡಿ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಪ್ರಮುಖ ಹೆಜ್ಜೆಯಾಗಿದೆ.

ಈ ಉಪಕ್ರಮವು ಮಶಾಲ್ ಸ್ಪೋರ್ಟ್ಸ್ ಮತ್ತು ಕಬಡ್ಡಿ ಆಟಗಾರರ ಸಮಗ್ರ ಅಭಿವೃದ್ಧಿ ಮತ್ತು ಕಲ್ಯಾಣದತ್ತದ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ. ಜೊತೆಗೆ, ಏಷ್ಯನ್ ಗೇಮ್ಸ್ ಸೇರಿದಂತೆ ಪ್ರಮುಖ ಅಂತಾರಾಷ್ಟ್ರೀಯ ಸ್ಪರ್ಧೆಗಳ ಮುನ್ನ ಭಾರತದಿಗಾಗಿ ಬಲಿಷ್ಠ ಪ್ರತಿಭೆಗಳ ಸರಪಳಿಯನ್ನು ನಿರ್ಮಿಸಲು ಸಹಕಾರಿಯಾಗುತ್ತದೆ.

ಅಮೆಚೂರ್ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ ಅಧ್ಯಕ್ಷರಾದ ವಿಭೋರ್ ವಿನೀತ್ ಜೈನ್ ಮಾತನಾಡಿ, ಭಾರತದಲ್ಲಿ ಕಬಡ್ಡಿಯ



ಮಟ್ಟವನ್ನು ಹೆಚ್ಚಿಸುವ ನಮ್ಮ ಪ್ರಯತ್ನಗಳಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. ಮಶಾಲ್ ಸ್ಪೋರ್ಟ್ಸ್‌ನೊಂದಿಗೆ ಸಹಕರಿಸುವ ಮೂಲಕ, ನಮ್ಮ ಆಟಗಾರರಿಗೆ ಆಧುನಿಕ ತರಬೇತಿ ವಿಧಾನಗಳು, ವೈಜ್ಞಾನಿಕ ಬೆಂಬಲ ವ್ಯವಸ್ಥೆಗಳು ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಯಶಸ್ಸು ಸಾಧಿಸಲು ಆಗತ್ಯವಿರುವ ಹೈ–ಪರ್ಫಾರ್ಮೆನ್ಸ್ ವಾತಾವರಣವನ್ನು ಒದಗಿಸುತ್ತಿದ್ದೇವೆ ಎಂದರು.

ಜಾಫರ್ ಇಕ್ಬಾಲ್‌ಗೆ ಹಾಕಿ ಜೀವಮಾನ ಸಾಧನೆ ಪ್ರಶಸ್ತಿ

• **ಹೊಸದಿಲ್ಲಿ:** ಹಾಕಿ ದಿಗ್ಗಜ ಜಾಫರ್ ಇಕ್ಬಾಲ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗಿದೆ. ಮಿಡಲ್ ಫೀಲ್ಡರ್ ಹಾರ್ದಿಕ್ ಸಿಂಗ್ ಮತ್ತು ನವನೀತ್ ಕೌರ್ ಭಾರತದ ವಾರ್ಷಿಕ ಹಾಕಿ ಆಟಗಾರ ಎಂಬ ಪ್ರಶಸ್ತಿ



ಮಾಡಲಾಗಿದೆ. ಶುಕ್ರವಾರದಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ನೇತೃತ್ವದಲ್ಲಿ ಕಾರ್ಯಕ್ರಮವೊಂದು ನಡೆಯಿತು. ವರ್ಷದುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ ಆಟಗಾರರಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಮಹಿಳೆಯರ ತಂಡದ ನವನೀತ್ ಕೌರ್ ಹಾಗೂ ಪುರುಷರ ತಂಡದ ಹಾರ್ದಿಕ್ ಸಿಂಗ್ ಅವರಿಗೆ ವರ್ಷದ ಆಟಗಾರ ಪ್ರಶಸ್ತಿ ನೀಡಲಾಗಿದೆ. ಇದರ ಜೊತೆಗೆ 20 ಲಕ್ಷ ರೂ. ನಗದು ಬಹುಮಾನ ಕೂಡ ನೀಡಲಾಗಿದೆ. 1980ರ ಒಲಿಂಪಿಕ್ಸ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಜಾಫರ್ ಇಕ್ಬಾಲ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನಿಡಲಾಗಿದೆ. ಏಷ್ಯನ್ ಕಪ್‌ಗಳಲ್ಲೂ ಎರಡು ಬೆಳ್ಳಿ ಪದಕಗಳನ್ನು ಗೆದ್ದುಕೊಂಡ ತಂಡದ ಭಾಗವಾಗಿದ್ದ ಅವರನ್ನು ಗುರುತಿಸಿ ಪ್ರಶಸ್ತಿ ನೀಡಲಾಗಿದೆ.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5936

ಎಡದಿಂದ ಬಲಕ್ಕೆ
2.ತನ್ನ ತಾನೇ ಹೊಗಳಿಕೊಳ್ಳುವುದು (5)
5.ಸಂಗೀತಕ್ಕೆ ಮಾರುಹೋಗುವವನು (4)
6.ದೇವ–ದೇವತೆಗಳ ನೂರು ಹೆಸರುಗಳು (4)
7.ಈತ ತಂದೆಯ ತಮ್ಮ (2)
8.ಹಾರುವಿಕೆ–ಜಿಗಿತವಿದು (2)
10.ವಟವೃಕ್ಷವಿಲ್ಲಿ ತಿರುಗಿ ಕಾಣುತ್ತಿದೆ (2)
13.ತಲೆಕೆಳಗಾಗಿ ಇಟ್ಟ ಬಿದಿರಕೋಲು (2)
15.ಅಂಕುಡೊಂಕಾದ ಚಲನೆಯಿದು (4)
17.ಅರ–ಗಜ ಒಳಗೊಂಡ ಹೆಬ್ಬಾವು (4)
18.ಪ್ರಚಾರಕರೊಂದಿಗೆ ಬಂದ ಸೇವಕ (5)

ಮೇಲಿನಿಂದ ಕೆಳಕ್ಕೆ
1.ಮಾರನಿಗೆ ಕಂಡ ಹೂ ಕಟ್ಟಿ ಮಾರುವವ (4)
2.ಹತ್ತಿರದವರೊಂದಿಗೆ ಮಾಡುವ ಪರಾಮರ್ಶೆ (5)
3.ಆಕರ್ಷಣೆಯ ಸಮಾನಪದ (3)
4.ಕಬ್ಬಿನಿಂದ ಬೆಲ್ಲ ತಯಾರಿಸುವ ಸ್ಥಳ (4)
6.ಶಕ ಮೊದಲಿರುವ ವಸ್ತುವಿನ ಒಂದು ತುಂಡು (3)
9.ಆತ್ಮಸ್ನೇಹ ಹೊಂದಿದ ಹೆಣ್ಣು ಸಂಗಾತಿ (3)
11.ಜೀವಿಗಳ ಉಸಿರಾಟಕ್ಕೆ ಅಗತ್ಯ ಅನಿಲ (5)
12.ಒಂಬತ್ತು ದಿನ ಆಚರಿಸುವ ಹಬ್ಬ (4)
14.ಇದು ವೇದನೆಯ ಕೂಗು (4)
16.ವಿಘ್ನ ನಿವಾರಕ–ವಿನಾಯಕ (3)

5935 ಉತ್ತರ

ಎಡದಿಂದ ಬಲಕ್ಕೆ:
3.ಸುಸೀಲ 4.ರಹಿತ
5.ಸಾಗರ 6.ನಸುನಗು
8.ಸಮಾನ 10.ಸಕಲ
11.ವಕಾಲತ್ತು 14.ಕಲಾಪ
16.ಮಿಗಿಲು 17.ಕೌಶಿಕ

ಮೇಲಿನಿಂದ ಕೆಳಕ್ಕೆ:
1.ನಕಾರ 2.ಪತನ
3.ಸುಮನ 4.ರಸಾಯನ
7.ಗುಣಕ 9.ಮಾಧವ
10.ಸವಕಲು 12.ಕಾರಕ
13.ಸಮಿತ್ತು 15.ಪಠಣ

ಕಿರುಸುದ್ದಿ

ಟಿಪ್ಪರ್ ಲಾರಿ ಹಿಂಬದಿಗೆ ಬೈಕ್ ಡಿಕ್ಕಿ: ವ್ಯಕ್ತಿ ಸಾವು

ಮಂಜೇಶ್ವರ: ವಾಹನ ಅಪಘಾತದಲ್ಲಿ ಹೊಸಂಗಡಿಯ ಹೊಟೇಲ್ ನೌಕರ ಮೃತಪಟ್ಟ ಘಟನೆ ಉಪ್ಪಳದಲ್ಲಿ ನಡೆದಿದೆ. ಉಪ್ಪಳ ನಯಾಬಜಾರ್ ಬಳಿಯ ಯು.ಕೆ.ಫ್ಲಾಟ್‌ನಲ್ಲಿ ವಾಸಿಸುವ ಐಮಾನುಲ್ಲ (19) ಮೃತಪಟ್ಟವರು. ಗುರುವಾರ ರಾ.ಹೆದ್ದಾರಿಯ ವಾಮಂಜೂರು ಸೇತುವೆ ಬಳಿ ಸರ್ವೀಸ್ ರಸ್ತೆಯ ದ್ವಾರದಲ್ಲಿ ಅಪಘಾತ ಉಂಟಾಗಿದೆ. ಐಮಾನುಲ್ಲ ಚಲಾಯಿಸುತ್ತಿದ್ದ ಬೈಕ್ ಟಿಪ್ಪರ್ ಲಾರಿಯ ಹಿಂಬದಿಗೆ ಡಿಕ್ಕಿ ಹೊಡೆದು ಅಪಘಾತ ಉಂಟಾಗಿದ್ದು, ಗಂಭೀರ ಗಾಯಗೊಂಡ ಐಮಾನುಲ್ಲ ಅವರನ್ನು ಕೂಡಲೇ ಮಂಗಳೂರಿನ ಆಸ್ಪತ್ರೆಗೆ ಸಾಗಿಸುತ್ತಿದ್ದಂತೆ ಸಾವು ಸಂಭವಿಸಿದೆ. ಮೃತರು ತಂದೆ, ತಾಯಿ, ಸಹೋದರ, ಸಹೋದರಿಯನ್ನು ಅಗಲಿದ್ದಾರೆ.

ಗೋವಾದಲ್ಲಿ ಅಪಘಾತ: ನೀರ್ಚಾಲು ವಿದ್ಯಾರ್ಥಿ ಮೃತ್ಯು

ಬದಿಯಡ್ಕ: ಗೋವಾದಲ್ಲಿ ಸಂಭವಿಸಿದ ಅಪಘಾತದಲ್ಲಿ ನೀರ್ಚಾಲು, ಮಲ್ಲಡ್ಕ ನಿವಾಸಿಯಾದ ಎಂಬಿಎ ವಿದ್ಯಾರ್ಥಿ ಮೃತಪಟ್ಟ ಘಟನೆ ನಡೆದಿದೆ. ಮಲ್ಲಡ್ಕ ನಿವಾಸಿ ನಿವೃತ್ತ ಶಿಕ್ಷಕ ವೀರೇಶ್ವರ ಭಟ್ ಅವರ ಪುತ್ರ ಪ್ರಜ್ವಲ್ ಕರ್ಮಲ್ ಕರ್ (26) ಮೃತಪಟ್ಟ ವಿದ್ಯಾರ್ಥಿ. ಅವರು ಗೋವಾದಲ್ಲಿ ಎಂಬಿಎ ವಿದ್ಯಾರ್ಥಿಯಾಗಿದ್ದರು.



ಸೋಮವಾರ ಅವರು ಚಲಾಯಿಸಿದ ಸ್ಕೂಟರ್ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದ್ದು ಗಂಭೀರ ಗಾಯಗೊಂಡಿದ್ದರು. ಸ್ಥಳೀಯರು ಸೇರಿ ಆಸ್ಪತ್ರೆಗೆ ತಲುಪಿಸಿದರೂ ಪ್ರಾಣ ಉಳಿಸಲಾಗಲಿಲ್ಲ. ಮೃತರು ತಂದೆ, ತಾಯಿ ಅನ್ನಪೂರ್ಣೇಶ್ವರಿ (ಶಿಕ್ಷಕಿ) ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಮಾದಕ ವಸ್ತು ಸೇವನೆ: ಓರ್ವನ ಬಂಧನ

ಬಂಟ್ವಾಳ: ಬಿ.ಸಿ.ರೋಡಿಗೆ ಸಮೀಪದ ತಲಪಾಡಿಯಲ್ಲಿ ಸಾರ್ವಜನಿಕ ಬಸ್ಸು ನಿಲ್ದಾಣದ ಬಳಿ ಮಾದಕ ವಸ್ತುವನ್ನು ಸೇವಿಸಿ ನಶೆಯಿಂದ ಅಸಭ್ಯವಾಗಿ ವರ್ತಿಸುತ್ತಿದ್ದಾತನನ್ನು ಬಂಟ್ವಾಳ ನಗರ ಪೊಲೀಸರು ಬಂಧಿಸಿದ್ದಾರೆ. ರಿಯಾಜ್ (33) ಬಂಧಿತ ಆರೋಪಿಯಾಗಿದ್ದಾನೆ. ಗುರುವಾರ ರಾತ್ರಿ ಖಚಿತ ವರ್ತಮಾನದ ಮೇರೆಗೆ ಬಂಟ್ವಾಳ ನಗರ ಪೊಲೀಸ್ ಠಾಣೆಯ ಉಪನಿರೀಕ್ಷಕರು ಮತ್ತವರ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿದಾಗ ವ್ಯಕ್ತಿಯೋರ್ವ ಸಾರ್ವಜನಿಕ ಬಸ್ಸು ನಿಲ್ದಾಣದ ಬಳಿ ಮಾದಕ ವಸ್ತುವನ್ನು ಸೇವಿಸಿ ನಶೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ವರ್ತಿಸುತ್ತಿದ್ದನೆನ್ನಲಾಗಿದೆ. ಅನುಮಾನಗೊಂಡ ಪೊಲೀಸರು ಈತನನ್ನು ವಿಚಾರಿಸಿದಾಗ ಅವನು ಮಾದಕ ವಸ್ತು ಗಾಂಜಾಸೇವಿಸಿರುವುದನ್ನು ಒಪ್ಪಿಕೊಂಡ. ಬಳಿಕ ಆತನನ್ನು ದೇರಳಕಟ್ಟೆಯ ಆಸ್ಪತ್ರೆಯೊಂದರಲ್ಲಿ ವೈದ್ಯಾಧಿಕಾರಿ ಪರೀಕ್ಷೆಗೊಳಪಡಿಸಿದಾಗ ಮನೋದ್ರೇಕಕಾರಿ ವಸ್ತುವನ್ನು ಸೇವಿಸಿರುವುದು ದೃಢಪಟ್ಟಿದೆ. ಈ ಬಗ್ಗೆ ಬಂಟ್ವಾಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೀನು ಲೋಡಿಂಗ್ ಕಾರ್ಮಿಕನ ಹೆಸರಲ್ಲಿ ಕೋಟ್ಯಂತರ ರೂ. ವಹಿವಾಟು ನಡೆಸಿ ವಂಚನೆ

ಉಡುಪಿ: ಮೀನು ಲೋಡಿಂಗ್ ಕಾರ್ಮಿಕನೊಬ್ಬನನ್ನು ಪುಸಲಾಯಿಸಿ, ಆತನ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಕೋಟ್ಯಂತರ ರೂಪಾಯಿಗಳ ಅಕ್ರಮ ಸೈಬರ್ ವ್ಯವಹಾರ ನಡೆಸಿರುವ ಗಂಭೀರ ಪ್ರಕರಣ ಸಂಬಂಧ ಉಡುಪಿಯ ಸೆನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ವಿಜಯನಗರ ಜಿಲ್ಲೆಯ ಮೂಲದ ರಾಜಾನಾಯ್ಕ (32) ಎಂಬವರು ಮಲ್ಪೆಯ ಐಸ್ ಪ್ಲಾಂಟ್ ಬಳಿ ಬಾಡಿಗೆ ಮನೆಯಲ್ಲಿದ್ದು, ಮೀನು ಲೋಡಿಂಗ್ ಕೆಲಸ ಮಾಡುತ್ತಿದ್ದರು. ಈ ಹಿಂದೆ ಇವರೊಂದಿಗೆ ಕೆಲಸ ಮಾಡುತ್ತಿದ್ದ ಮಲ್ಪೆಯ ಸೂರಜ್ ಸಾಲ್ಯಾನ್ ಎಂಬಾತ, ವ್ಯವಹಾರ ನಡೆಸುವ ಆಮಿಷವೊಡ್ಡಿ ರಾಜಾನಾಯ್ಕ ಹೆಸರಿನಲ್ಲಿ ಮಣಿಪಾಲದ ವಿಳಾಸ ನೀಡಿ ಸಂಸ್ಥೆಯನ್ನು ಆರಂಭಿಸಿದ್ದ. ಸೂರಜ್ ಸಾಲ್ಯಾನ್, ರಾಜಾನಾಯ್ಕ ಅವರ ದಾಖಲೆಗಳನ್ನು ಬಳಸಿಕೊಂಡು ವಿವಿಧ ಬ್ಯಾಂಕ್‌ಗಳಲ್ಲಿ 'ಎಸ್‌ಆರ್ ಫಿಶರೀಸ್' ಹೆಸರಿನಲ್ಲಿ ಖಾತೆಗಳನ್ನು ತೆರೆಸಿದ್ದ. ಈ ಖಾತೆಗಳಿಗೆ ತನ್ನದೇ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಿಸಿದ್ದಲ್ಲದೆ, ಪಾಸ್‌ಪುಸ್ತಕ, ಚೆಕ್ ಬುಕ್ ಮತ್ತು ಎಟಿಎಂ ಕಾರ್ಡ್‌ಗಳನ್ನು ತನ್ನ ವಶದಲ್ಲೇ ಇರಿಸಿಕೊಂಡಿದ್ದ. ತನ್ನ ಹೆಸರಿನ ಖಾತೆಗಳ ಬಗ್ಗೆ ಸಂಶಯಗೊಂಡ ರಾಜಾನಾಯ್ಕ ಅವರು ಬ್ಯಾಂಕಿಗೆ ತೆರಳಿ ಪರಿಶೀಲಿಸಿದಾಗ ಆಘಾತಕಾರಿ ವಿಷಯ ಹೊರಬಿದ್ದಿದೆ. ಈ ಖಾತೆಗಳ ಮೂಲಕ ಕೋಟ್ಯಂತರ ರೂಪಾಯಿ ಹಣ ವರ್ಗಾವಣೆಯಾಗಿರುವುದು ಹಾಗೂ ಈ ಖಾತೆಗಳ ಮೇಲೆ ಈಗಾಗಲೇ ದೇಶದ ವಿವಿಧೆಡೆ ಹಲವಾರು ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿರುವುದು ಕಂಡುಬಂದಿದೆ.

ಅಬ್ಬೆಟ್ಟು-ಪೊಳಲಿ ಜಾತ್ರೆ ಸ್ಪೆಷಲ್ ಬಸ್ ಆರಂಭ



ಮಂಗಳೂರು: ಸಾವಿರ ಸೀಮೆ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಳದ ಜಾತ್ರೆ ವಿಶೇಷ ಅಂಗವಾಗಿ ಮಂಗಳೂರು -ಫರಂಗಿಪೇಟೆ- ಅಬ್ಬೆಟ್ಟು -ಪೊಳಲಿ ಮಾರ್ಗವಾಗಿ ಸರ್ಕಾರಿ ಬಸ್ ಓಡಾಟಕ್ಕೆ ಎಜುಕಾರುಣ್ಯ ಎಜುಕೇಷನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ನೀಡಿದ ಮನವಿಗೆ ಸ್ಪಂದಿಸಿದ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್, ಈ ಮಾರ್ಗಕ್ಕೆ ತಾತ್ಕಾಲಿಕ ಬಸ್ ವ್ಯವಸ್ಥೆ ಮಂಜೂರು ಮಾಡಿದ್ದಾರೆ.

ಎಜುಕಾರುಣ್ಯ ಟ್ರಸ್ಟ್ ವತಿಯಿಂದ ಕಳೆದ ಭಾನುವಾರ ಬಾಕಿಮಾರು ಗದ್ದೆಯಲ್ಲಿ ನಡೆದ ದಿ. ಶರತ್ ಶೆಟ್ಟಿ ಸ್ಮರಣಾರ್ಥ ಕಾರುಣ್ಯ ಟ್ರೋಫಿ ಕ್ರಿಕೆಟ್ ಟೂರ್ನಮೆಂಟ್ ವೇಳೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸ್ಪೀಕರ್ ಖಾದರ್, ಸ್ಥಳೀಯ ಕಾಂಗ್ರೆಸ್ ಮುಖಂಡರಾದ ವೃಂದಾ ಪೂಜಾರಿ, ಅನಿಲ್ ಫೆರ್ನಾಂಡಿಸ್ ಮತ್ತು ಫ್ರಾನ್ಸಿಸ್ ಮೆಂಡೋನ್ಸ ಅವರು ಎಜುಕಾರುಣ್ಯ ಹಾಗೂ ಅಬ್ಬೆಟ್ಟು ನಾಗರಿಕರ ಮನವಿ ಸ್ವೀಕರಿಸಿ ತಕ್ಷಣವೇ ಬಸ್ ಮಂಜೂರು ಮಾಡುವಂತೆ ಕೆಎಸ್ಸಾರ್ಟಿಸಿ ಡಿಸಿ ಅವರಿಗೆ ಸೂಚಿಸಿದರು. ಮರುದಿನವೇ ಡಿಪೋ ಮ್ಯಾನೇಜರ್ ಸ್ಥಳಕಾಗಮಿಸಿ ರೂಟ್ ಸರ್ವೇ ಮಾಡಿದ್ದು ಶುಕ್ರವಾರ ಬಸ್ ಸೇವೆ ಆರಂಭಿಸುವ ಭರವಸೆ ನೀಡಿದ್ದರು.

ಶುಕ್ರವಾರ ಅಪರಾಹ್ನ 11.30ಕ್ಕೆ ಮಂಗಳೂರಿಂದ ಫರಂಗಿಪೇಟೆ -ಅಬ್ಬೆಟ್ಟು ಮಾರ್ಗವಾಗಿ ಶ್ರೀ ಕ್ಷೇತ್ರ ಪೊಳಲಿಗೆ ಮೊದಲ ಟ್ರಿಪ್ ಬಸ್ ಓಡಾಟ ಮಾಡಿದೆ. ಬಸ್ ಗೆ ಜನರಿಂದ ಉತ್ತಮ ಸ್ಪಂದನೆಯೂ ವ್ಯಕ್ತವಾಗಿದೆ. ಸದ್ಯಕ್ಕೆ ಈ ಬಸ್ ದಿನಕ್ಕೆ ಎರಡು ಟ್ರಿಪ್ ಓಡಾಟ ಮಾಡಲಿದ್ದು, ಮುಂದೆ ಜನರ ಸ್ಪಂದನೆ ನೋಡಿ ಟ್ರಿಪ್ ಹೆಚ್ಚಿಸಲಾಗುವುದು ಎಂದು ಕೆಎಸ್ಸಾರ್ಟಿಸಿ ಡಿಪೋ ಮ್ಯಾನೇಜರ್ ತಿಳಿಸಿದ್ದಾರೆ.

ಬಸ್‌ಗೆ ಸ್ವಾಗತ

ಮೇರಮಜಲು, ತೇವುಕಾಡು ಹಾಗೂ ಅಬ್ಬೆಟ್ಟು ಉದಯ ಯುವಕ ಮಂಡಲ ಬಳಿ ಬಸ್‌ಗೆ ಹಾರ ಹಾಕಿ, ಪುಷ್ಪಾರ್ಚನೆ ಮಾಡಿ, ತೆಂಗಿನಕಾಯಿ ಒಡೆದು ಸ್ವಾಗತಿಸಲಾಯಿತು. ಪ್ರಮುಖರಾದ ವೃಂದಾ ಪೂಜಾರಿ, ಫ್ರಾನ್ಸಿಸ್ ಮೆಂಡೋನ್ಸ, ಲೂಯಿಸ್, ಅನಿಲ್ ಫೆರ್ನಾಂಡಿಸ್, ಗಂಗಾಧರ ಪೂಜಾರಿ ಅಬ್ಬೆಟ್ಟು, ರವಿ ತಾರೀಪಾಡಿ, ಮೋಹನದಾಸ್ ಮರಕಡ, ಪ್ರಶಾಂತ್ ಮೇಗಿನಹಿತ್ಲು, ಮನೋಜ್ ಅಬ್ಬೆಟ್ಟು ಮೊದಲಾದವರು ಭಾಗವಹಿಸಿದ್ದರು.

ಇಂದು ಮಂಗಳೂರು ವಿವಿ 44ನೇ ವಾರ್ಷಿಕ ಘಟಿಕೋತ್ಸವ | ಕಲೆ, ಶಿಕ್ಷಣ ಕ್ಷೇತ್ರದ ಸಾಧಕರಿಗೆ ಸಂದಿತು ಗೌರವ

ವಿವಿ ಗೌರವ ಹೆಚ್ಚಿಸಿದ ಗೌರವ ಡಾಕ್ಟರೇಟ್!

ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯದ ಈ ಬಾರಿಯ ಗೌರವ ಡಾಕ್ಟರೇಟ್ ಯಾರಿಗೆ ಎಂಬ ಕುತೂಹಲ ಬಹಳಷ್ಟು ಮಂದಿಗೆ ಇತ್ತು. ಈ ಬಾರಿಯೂ ಡಾಕ್ಟರೇಟ್ ಉದ್ಯಮಿಗಳ ಪಾಲಾಗುವುದೋ ಎಂಬ ಭೀತಿಯೂ ಇತ್ತು. ಆದರೆ ಆ ಎಲ್ಲಾ ಕುತೂಹಲಕ್ಕೆ ತೆರೆಬಿದ್ದಿದ್ದು, ಪಟ್ಟಿಯಲ್ಲಿದ್ದ 16 ಮಂದಿ ಪೈಕಿ ಅರ್ಹ ಮೂರು ಮಂದಿಯನ್ನು ಅಂತಿಮವಾಗಿ ಆಯ್ಕೆ ಮಾಡಲಾಗಿದೆ. ಇಂದು (ಮಾ.28) ಪೂರ್ವಾಹ್ನ 11ಕ್ಕೆ ಮಂಗಳೂರು ವಿವಿಯ ಮಂಗಳಾ ಸಭಾಂಗಣದಲ್ಲಿ ಪದವಿ ಪ್ರದಾನ ಸಮಾರಂಭ ನೆರವೇರಲಿದೆ.

ಮೂವರು ಸಾಧಕರ ಮುಡಿಗೆ ಗರಿ

2004ರಲ್ಲಿ 'ಕಿತ್ತಳೆ ಬುಟ್ಟಿಯಲ್ಲಿ ಅರಳಿದ ಅಕ್ಷರದ ಕನಸು' ಶೀರ್ಷಿಕೆಯೊಂದಿಗೆ 'ಹೊಸ ದಿಗಂತ' ಪತ್ರಿಕೆಯ ಮೂಲಕ ಮೊದಲ ಬಾರಿ ಸಮಾಜಕ್ಕೆ ಪರಿಚಯಗೊಂಡಿದ್ದ ಅಕ್ಷರ ಸಂತ ಹರೇಕಳ ಹಾಜಬ್ಬ, ಯಕ್ಷಗಾನ ಕ್ಷೇತ್ರದ ಹಿರಿಯ ಕಲಾವಿದರಾಗಿದ್ದು, ಇತ್ತೀಚೆಗೆ ಅಗಲಿದ ಸೂರಿಕುಮೇರು ಗೋವಿಂದ ಭಟ್ ಹಾಗೂ ದೈವ ನರ್ತಕ ಡಾ. ರವೀಶ್ ಪಡುಮಲೆ ಅವರನ್ನು ಈ ಬಾರಿ ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಲಾಗಿದೆ.

ಮಹತ್ತರ ಬದಲಾವಣೆ

ಘಟಿಕೋತ್ಸವ ಕುರಿತು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ವಿಶ್ವವಿದ್ಯಾ ನಿಲಯದ ಕುಲಪತಿ ಪ್ರೊ. ಪಿ.ಎಲ್. ಧರ್ಮ, ಸಮಾಜ ಸೇವೆ, ಜನಪದ ಸಂಸ್ಕೃತಿ ಹಾಗೂ ಧಾರ್ಮಿಕ-ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನೀಡಿದ ವಿಶಿಷ್ಟ ಕೊಡುಗೆಗಳನ್ನು ಪರಿಗಣಿಸಿ ಈ ಮೂವರನ್ನು ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಲಾಗಿದೆ. ಮಂಗಳೂರು ವಿವಿಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ದೈವ ನರ್ತಕರೊಬ್ಬರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿರುವುದು ಗಮನಾರ್ಹ ವಿಷಯ ಎಂದರು.





> **ಎಐ ಲ್ಯಾಬ್**
> **ಮಂಗಳೂರು ವಿವಿಗೆ ಕೇಂದ್ರ ಪಿಎಂ ಉಷಾ ಯೋಜನೆಯಡಿ 20 ಕೋ. ರೂ. ಬಿಡುಗಡೆಯಾಗಿದೆ. ಇದನ್ನು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುವುದು. 7 ಕೋ.ರೂ.ಗಳಲ್ಲಿ ಎಐ ಲ್ಯಾಬ್ ಸ್ಥಾಪಿಸಲು ಉದ್ದೇಶಿಸಲಾಗಿದೆ.**
> ■ ಪ್ರೊ.ಪಿ.ಎಲ್. ಧರ್ಮ, ಮಂಗಳೂರು ವಿವಿ ಕುಲಪತಿ

ವಿಶ್ವವಿದ್ಯಾನಿಲಯದ 44ನೆಯ ವಾರ್ಷಿಕ ಘಟಿಕೋತ್ಸವ ಇದಾಗಿದ್ದು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪದವಿ ಪ್ರದಾನ ಮಾಡಲಿದ್ದಾರೆ. ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದರು.

ಘಟಿಕೋತ್ಸವದಲ್ಲಿ ಅಕ್ಷರ ಸಂತ ಹರೇಕಳ ಹಾಜಬ್ಬ, ದೈವನರ್ತಕ ರವೀಶ್ ಪಡುಮಲೆ ಇವರಿಗೆ ರಾಜ್ಯಪಾಲರು ಗೌರವ ಡಾಕ್ಟರೇಟ್ ಪ್ರದಾನಿಸಲಾಗುವುದು. ಅಲ್ಲದೆ ಮರಣೋತ್ತರವಾಗಿ ಇತ್ತೀಚೆಗೆ ಅಗಲಿದ ಯಕ್ಷಗಾನ ರಂಗದ ಹಿರಿಯ ಕಲಾವಿದ ಸೂರಿಕುಮೇರು ಗೋವಿಂದ ಭಟ್ ಅವರಿಗೆ ಏ.13ರಂದು ಬಂಟ್ವಾಳದಲ್ಲಿನ ಅವರ ಮನೆಗೆ ತೆರಳಿ ಪ್ರದಾನಿಸಲಾಗುವುದು. ಅವರ ಪುತ್ರ ಗೌರವ ಸ್ವೀಕರಿಸಲಿದ್ದಾರೆ ಎಂದು ಕುಲಪತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪರೀಕ್ಷಾಂಗ ಕುಲಸಚಿವ ಪ್ರೊ. ದೇವೇಂದ್ರಪ್ಪ ಎಚ್, ಕುಲಸಚಿವ (ಪ್ರಭಾರ) ಪ್ರೊ.ಗಣೇಶ್ ಸಂಜೀವ್, ಹಣಕಾಸು ಅಧಿಕಾರಿ ಪಂಚಲಿಂಗಸ್ವಾಮಿ ಎಸ್., ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ನಾಗಪ್ಪ ಗೌಡ ಉಪಸ್ಥಿತರಿದ್ದರು.

ವಿವಿಯಲ್ಲಿ ಆರ್ಥಿಕ ಶಿಸ್ತು

ವಿವಿಯ ಸಂಪನ್ಮೂಲ ಕ್ರೋಢೀಕರಣ ಹಾಗೂ ಹಂಚಿಕೆಯಲ್ಲಿ ಆರ್ಥಿಕ ಶಿಸ್ತು ತರಲಾಗಿದೆ. ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಲಾಗಿದೆ. ಇದರಿಂದಾಗಿ ಉದ್ಯೋಗಿಗಳಿಗೆ ಸಕಾಲದಲ್ಲಿ ವೇತನ ಪಾವತಿ ಸಾಧ್ಯವಾಗುತ್ತಿದೆ. ಪದವಿ ಅಂಕಪಟ್ಟಿಯನ್ನು ಕೂಡ ವಿವಿ ವತಿಯಿಂದಲೇ ನೀಡಲಾಗುತ್ತಿದೆ ಎಂದು ಪ್ರೊ.ಧರ್ಮ ತಿಳಿಸಿದರು.

162 ಮಂದಿಗೆ ಪಿಎಚ್‌ಡಿ

ಘಟಿಕೋತ್ಸವದಲ್ಲಿ ಒಟ್ಟು 56 ಚಿನ್ನದ ಪದಕ ಮತ್ತು 57 ನಗದು ಬಹುಮಾನಗಳಿದ್ದು, ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಒಟ್ಟು 147 ರ‍್ಯಾಂಕ್‌ಗಳಲ್ಲಿ ಪ್ರಥಮ ರ‍್ಯಾಂಕ್ ಪಡೆದ 69 ವಿದ್ಯಾರ್ಥಿಗಳಿಗೆ ರ‍್ಯಾಂಕ್ ಪ್ರಮಾಣಪತ್ರ ನೀಡಲಾಗುವುದು. ಮಂಗಳೂರು ವಿವಿಯ ಒಟ್ಟು 162 ಮಂದಿ ಪಿಎಚ್‌ಡಿ ಪದವಿ ಪಡೆಯಲಿದ್ದಾರೆ. ತಲಾ 20 ಮಂದಿಯ ಒಂದೊಂದು ಬ್ಯಾಚ್‌ನ್ನು ಪದವಿ ಪ್ರಮಾಣ ಪತ್ರದೊಂದಿಗೆ ವೇದಿಕೆಗೆ ಆಹ್ವಾನಿಸಲಾಗುವುದು ಎಂದು ಪ್ರೊ.ಪಿ.ಎಲ್. ಧರ್ಮ ವಿವರ ನೀಡಿದರು.

ಕೇರಳದಲ್ಲಿ ಬೇಸಿಗೆ ರಜೆ 1 ತಿಂಗಳಿಗೆ ಕಡಿತ ವದಂತಿ

'ಸುಳ್ಳು ರಜೆ' ನೀಡುವವರ ವಿರುದ್ಧ ಶುರುವಾಗಿದೆ ಕ್ರಮ

ತಿರುವನಂತಪುರಂ: ಬೇಸಿಗೆ ರಜೆಯನ್ನು ಕಡಿತಗೊಳಿಸಲಾಗಿದೆ ಎಂಬ ಸುಳ್ಳು ಪ್ರಚಾರ ಹರಡುತ್ತಿದ್ದು, ಇದರ ವಿರುದ್ಧ ಸಾರ್ವಜನಿಕ ಶಿಕ್ಷಣ ಇಲಾಖೆ ಕಾನೂನು ಕ್ರಮ ಕೈಗೊಳ್ಳುತ್ತಿದೆ. ಕೇರಳದ ಶಿಕ್ಷಣ ಸಂಸ್ಥೆಗಳ ಬೇಸಿಗೆಯ ಮಧ್ಯ ರಜೆಯನ್ನು ಒಂದು ತಿಂಗಳಿಗೆ ಇಳಿಸಲು ಆದೇಶ ಹೊರಡಿಸಲಾಗಿದೆ ಎಂಬ ಸಂದೇಶ ಸಾಮಾಜಿಕ ಮಾಧ್ಯಮಗಳಲ್ಲಿ ಹರಡುತ್ತಿದೆ. ಇದು ಸುಳ್ಳು ಎಂದು ಸಾರ್ವಜನಿಕ ಶಿಕ್ಷಣ ಕಾರ್ಯದರ್ಶಿ ತಿಳಿಸಿದ್ದಾರೆ.

ರಜೆ ನಿಗದಿಯಂತೆ ಇದೆ. ಅದರಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ಶಿಕ್ಷಣ ಇಲಾಖೆಯ ಹೆಸರಿನಲ್ಲಿ ದಾಖಲೆಗಳನ್ನು ನಕಲಿ ಮಾಡುವ ಮೂಲಕ ಇಂತಹ ಸುಳ್ಳು ಸಂದೇಶವನ್ನು ಹರಡಿಸಲಾಗುತ್ತಿದೆ.

ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರಲ್ಲಿ ಅನಗತ್ಯ ಭೀತಿ ಸೃಷ್ಟಿಸುವ ಉದ್ದೇಶಪೂರ್ವಕ ಪ್ರಯತ್ನ ಇದು. ಪ್ರಸ್ತುತ ವ್ಯವಸ್ಥೆಗಳನ್ನು ಬದಲಾಯಿಸಲು ಸರಕಾರ ಯಾವುದೇ ಆದೇಶ ಹೊರಡಿಸಿಲ್ಲ. ಸಾಮಾನ್ಯ ಶಿಕ್ಷಣ ಕಾರ್ಯದರ್ಶಿಯವರ ಹೆಸರು ಮತ್ತು ಸ್ಥಾನವನ್ನು ದುರುಪಯೋಗಪಡಿಸಿಕೊಂಡು ದಾಖಲೆಗಳನ್ನು ನಕಲಿ ಮಾಡುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು. ಕಾನೂನುಬಾಹಿರ ಚಟುವಟಿಕೆಯ ತನಿಖೆ ನಡೆಸಿ ಅಪರಾಧಿಗಳನ್ನು ಪತ್ತೆಹಚ್ಚಲು ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ ದೂರು ಸಲ್ಲಿಸಲಾಗಿದೆ ಎಂದು ಸಾಮಾನ್ಯ ಶಿಕ್ಷಣ ಕಾರ್ಯದರ್ಶಿ ಡಾ.ಕೆ.ವಾಸುಕಿ ತಿಳಿಸಿದ್ದಾರೆ.

ಇಂತಹ ಸುಳ್ಳು ಪ್ರಚಾರವನ್ನು ಅಧಿಕೃತ ಮೂಲಗಳಿಂದ ಹೊರತುಪಡಿಸಿ ನಂಬಬಾರದು ಮತ್ತು ಹರಡಬಾರದು ಎಂದು ಸಾಮಾನ್ಯ ಶಿಕ್ಷಣ ಕಾರ್ಯದರ್ಶಿ ತಿಳಿಸಿದ್ದಾರೆ.

> ▸▸ ರಜೆ ನಿಗದಿಯಂತೆ ಇದೆ. ಅದರಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ ಎಂದ ಇಲಾಖೆ
>
> ▸▸ ಇದು ಅನಗತ್ಯ ಭೀತಿ ಸೃಷ್ಟಿಸುವ, ಉದ್ದೇಶಪೂರ್ವಕ ಪ್ರಯತ್ನ

ಕದ್ರಿ ಮೈದಾನದಲ್ಲಿ 25ನೇ ವರ್ಷದ ಶ್ರೀರಾಮೋತ್ಸವದಲ್ಲಿ ವಜ್ರದೇಹಿ ಶ್ರೀ

ಶ್ರೀರಾಮನ ಆದರ್ಶ ಮೈಗೂಡಿಸಿಕೊಳ್ಳಿ



ಮಂಗಳೂರು: ವಿಶ್ವ ಹಿಂದೂ ಪರಿಷತ್ ಮತ್ತು ಶ್ರೀರಾಮೋತ್ಸವ ಸಮಿತಿ ಮಂಗಳೂರು ವತಿಯಿಂದ ನಗರದ ಕದ್ರಿ ಮೈದಾನದಲ್ಲಿ ನಡೆಯುತ್ತಿರುವ 25ನೇ ವರ್ಷದ ಶ್ರೀರಾಮೋತ್ಸವ ಕಾರ್ಯಕ್ರಮದ ಶುಕ್ರವಾರದ ಧಾರ್ಮಿಕ ಸಭೆಯಲ್ಲಿ ಶ್ರೀ ಕ್ಷೇತ್ರ ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು.

ಮಂಗಳೂರಿನಲ್ಲಿ ಕಳೆದ ಹಲವು ವರ್ಷಗಳಿಂದ ವಿಶ್ವಹಿಂದೂ ಪರಿಷತ್ ಮತ್ತು ಶ್ರೀರಾಮೋತ್ಸವ ಸಮಿತಿಯ ಮೂಲಕ ವಿವಿಧ ಕಾರ್ಯಕ್ರಮಗಳ ಆಯೋಜನೆಯೊಂದಿಗೆ ಜನತೆಯಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸುವ ಕಾರ್ಯ ನಡೆಯುತ್ತಾ ಬಂದಿರುವುದು ಶ್ಲಾಘನೀಯ. ಸಮಸ್ತ ಹಿಂದೂ ಸಮಾಜ ಒಗ್ಗಟ್ಟಾಗಿ ಮುನ್ನಡೆಯಬೇಕಿದೆ. ಶ್ರೀರಾಮನ ಆದರ್ಶವನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು ಎಂದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘ ಕರ್ನಾಟಕ ದಕ್ಷಿಣ ಪ್ರಾಂತ ಸಹಕಾರ್ಯವಾಹ ಪಿ.ಎಸ್.ಪ್ರಕಾಶ್ ಮಾತನಾಡಿ, ಸುದೀರ್ಘ ವರ್ಷಗಳ ಹೋರಾಟದ ಪರಿಣಾಮವಾಗಿ ಅಯೋಧ್ಯೆಯ ಹೋರಾಟಕ್ಕೆ ಜಯ ಸಿಕ್ಕಿದೆ. ಇಂದು ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣವಾಗಿದೆ. ನಾವೆಲ್ಲರೂ ಪುಣ್ಯವಂತರು. ಆ ಮಂದಿರವನ್ನು ಕಣ್ತುಂಬಿಕೊಳ್ಳುವ ಸದವಕಾಶ ಲಭಿಸಿದೆ ಎಂದರು.

ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್.ಸತೀಶ್ಚಂದ್ರ ದೀಪಪ್ರಜ್ವಲನೆಗೈದರು. ಶಾರದಾ ವಿದ್ಯಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಪ್ರೊ. ಎಂ.ಬಿ. ಪುರಾಣಿಕ್, ಶಾಸಕ ಡಿ.ವೇದವ್ಯಾಸ ಕಾಮತ್, ಪ್ರಮುಖರಾದ ಶಿವಪ್ಪ ನಂತೂರು, ಜಗದೀಪ್ ಡಿ.ಸುವರ್ಣ, ದಿಲ್‌ರಾಜ್ ಆಳ್ವ, ಡಾ.ಅಪೂರ್ವ ಶ್ರೀ ಜಯದೇವ, ಅಕ್ಷಿತ್ ಸುವರ್ಣ, ದಿವಾಕರ ಪಾಂಡೇಶ್ವರ, ಶ್ರೀಧರ ಶೆಟ್ಟಿ ಪುಳಿಂಚ, ಲೋಕೇಶ್ ಬೋಳಾರ, ಗುರುಪ್ರಸಾದ್, ವಿಹಿಂಪ ದ.ಕ. ಜಿಲ್ಲಾಧ್ಯಕ್ಷ ಎಚ್.ಕೆ. ಪುರುಷೋತ್ತಮ, ರಾಮೋತ್ಸವ ಸಮಿತಿ ಅಧ್ಯಕ್ಷ ಸುನಿಲ್ ಆಚಾರ್, ಕಾರ್ಯಾಧ್ಯಕ್ಷ ಸುದರ್ಶನ ಮೂಡುಬಿದಿರೆ, ಗೌರವ ಸಲಹೆಗಾರ ಮೋನಪ್ಪ ಭಂಡಾರಿ, ಶುಕ್‌ರಾಜ್ ಕೊಟ್ಟಾರಿ ಮತ್ತಿತರರು ಉಪಸ್ಥಿತರಿದ್ದರು.

ನಸುಕಿನಲ್ಲಿ ನಡೆದ ಕೃತ್ಯ | ಇನ್ನೋವಾ ಕಾರಿನಲ್ಲಿ ಬಂದು ಬೈಕ್‌ಗೆ ಡಿಕ್ಕಿಯಾಗಿಸಿ ಮನಸೋ ಇಚ್ಛೆ ಮಚ್ಚು ಬೀಸಿದ ಹಂತಕರು | ದುಷ್ಕರ್ಮಿಗಳಿಗಾಗಿ ಸಿಸಿಬಿ ಬಲೆ

ತೊಕ್ಕೊಟ್ಟು ಮೇಲ್ಸೇತುವೆಯಲ್ಲಿ ಅಡ್ಡಗಟ್ಟಿ ರೌಡಿ ಶೀಟರ್‌ನ ಬರ್ಬರ ಹತ್ಯೆ

ಉಳ್ಳಾಲ: ರೌಡಿಶೀಟರ್ ಓರ್ವನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ತೊಕ್ಕೊಟ್ಟು ಹೆದ್ದಾರಿಯ ಮೇಲ್ಸೇತುವೆಯಲ್ಲಿ ಶುಕ್ರವಾರ ಮುಂಜಾನೆ ನಸುಕಿನ 3.30 ರ ವೇಳೆ ನಡೆದಿದೆ.

ಉಚ್ಚಿಲ ಮುಳ್ಳುಗುಡ್ಡೆ ನಿವಾಸಿ ಆರೀಫ್ ಹುಸೇನ್ (46) ಯಾನೆ ಟ್ಯಾಬ್ಲೆಟ್ ಆರೀಫ್ ಕೊಲೆಯಾದ ವ್ಯಕ್ತಿ.



ಮೃತ ಆರೀಫ್ ಹುಸೇನ್

ಆರೀಫ್ ಮಂಗಳೂರಿನ ಬಂದರು ಮತ್ತು ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ ರೌಡಿ ಶೀಟರ್ ಆಗಿದ್ದ. ಆರೀಫ್ ಧಕ್ಕೆಯಲ್ಲಿ ಮೀನಿನ ವ್ಯಾಪಾರ ನಡೆಸುತ್ತಿದ್ದು ಶುಕ್ರವಾರ ಬೆಳಿಗ್ಗೆ ಬುಲೆಟ್‌ನಲ್ಲಿ ಮಂಗಳೂರಿಗೆ ತೆರಳುತ್ತಿದ್ದ ವೇಳೆ, ಇನೋವ ಕಾರಲ್ಲಿ ಬೆನ್ನತ್ತಿ ಬಂದ ದುಷ್ಕರ್ಮಿಗಳ ತಂಡವೊಂದು ಬುಲೆಟ್‌ಗೆ ಡಿಕ್ಕಿ ಹೊಡೆದಿದೆ. ರಸ್ತೆಗೆ ಎಸೆಯಲ್ಪಟ್ಟ ಆರೀಫ್ ಮೇಲೆ ಸುಮಾರು ಆರು ಮಂದಿ ಮಾರಕಾಸ್ತ್ರಗಳಿಂದ ಮನಸೋ ಇಚ್ಚೆ ದಾಳಿ ನಡೆಸಿದೆ. ದಾಳಿಗೆ ಆರೀಫ್‌ನ ತಲೆ ಮತ್ತು ಮುಖ ಸಂಪೂರ್ಣ ಜರ್ಜರಿತಗೊಂಡು ಸ್ಥಳದಲ್ಲೇ ಆತ ಸಾವನ್ನಪ್ಪಿದ. ಕೂಡಲೇ ಸ್ಥಳಕ್ಕೆ ಧಾವಿಸಿದ ಉಳ್ಳಾಲ ಪೊಲೀಸರು ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಡಿಸಿಪಿ ಮಿಥುನ್ ಎಚ್.ಎನ್, ಎಸಿಪಿ ವಿಜಯಕ್ರಾಂತಿ ಸೇರಿದಂತೆ ಸೋಕೊ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿ ಸಾಕ್ಷಗಳನ್ನು ಕಲೆ ಹಾಕಿದೆ.

2022 ರಲ್ಲಿ ಬದುಕುಳಿದಿದ್ದ ಆರೀಫ್

2022ರ ಮೇ ತಿಂಗಳಲ್ಲಿ ಆರೀಫ್ ಇದೇ ರೀತಿ ಬೆಳಿಗ್ಗೆ ಬೈಕಲ್ಲಿ ಧಕ್ಕೆಗೆ ತೆರಳುತ್ತಿದ್ದ ವೇಳೆ ಬಜಾಲ್‌ನ ಟೊಪ್ಪಿ ನೌಫಾಲ್ ತಂಡವು ಉಚ್ಚಿಲ ಹೆದ್ದಾರಿ ಬಳಿಯಲ್ಲೇ ದಾಳಿ ನಡೆಸಿ ಚೂರಿ ಇರಿದು ಕೊಲೆಗೆ ಯತ್ನಿಸಿತ್ತು. ಆರೀಫ್‌ನನ್ನು ಕೂಡಲೇ ಮಂಗಳೂರಿನ ಆಸ್ಪತ್ರೆಗೆ ಕರೆದೊಯ್ದ ಪರಿಣಾಮ ಪ್ರಾಣಾಪಾಯದಿಂದ ಬದುಕುಳಿದಿದ್ದ. ಪ್ರಕರಣಕ್ಕೆ ಸಂಬಂಧಿಸಿದಂತೆ ಉಳ್ಳಾಲ ಪೊಲೀಸರು ಟೋಪಿ ನೌಫಾಲ್ ಮತ್ತು ಸಹಚರರನ್ನು ಬಂಧಿಸಿದ್ದರು.



ಹಳೆ ದಾಳಿಕೋರನಿಂದಲೇ ಕೊಲೆ ನಡೆಸಿರುವ ಶಂಕೆ!

2022 ರಲ್ಲಿ ಆರೀಫ್ ಮೇಲೆ ದಾಳಿ ನಡೆಸಿದ್ದ ಟೋಪಿ ನೌಫಾಲ್ ಗ್ಯಾಂಗ್‌ನ ಸದಸ್ಯ ಮೊಹಮ್ಮದ್ ರಿಫಾತ್ ಅಲಿ ಮತ್ತು ಆತನ ಸಹಚರರು ಕೊಲೆ ನಡೆಸಿರುವ ಶಂಕೆಯ ಬಗ್ಗೆ ಆರೀಫ್ ಹುಸೈನ್ ಪುತ್ರ ಅಬ್ದುಲ್ ಖಾದರ್ ಅದೀಫ್ ಉಳ್ಳಾಲ ಪೊಲೀಸ್ ಠಾಣೆಗೆ ನೀಡಿದ ದೂರಲ್ಲಿ ಉಲ್ಲೇಖಿಸಿದ್ದು, ಆತನ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಕಟ್ಟು ಮಸ್ತು ದೇಹ, ರಕ್ಷಣೆಗೆ ಚಾಕು ಇರಿಸಿದ್ದರೂ ಬದುಕುಳಿಯಲಿಲ್ಲ

ವಿವಾಹಿತನಾಗಿರುವ ಆರೀಫ್ ಮೂಲತ: ಮಂಗಳೂರಿನ ಬಂದರು ನಿವಾಸಿಯಾಗಿದ್ದು ಕಳೆದ ಆರೇಳು ವರುಷದಿಂದ ಕುಟುಂಬ ಸಮೇತ ಅಜ್ಜಿನಡ್ಕ, ಮಳ್ಳುಗುಡ್ಡೆ ಎಂಬಲ್ಲಿ ಮನೆ ಮಾಡಿ ವಾಸವಿದ್ದ. ಜಿಮ್‌ನಲ್ಲಿ ಕಸರತ್ತು ನಡೆಸುತ್ತಿದ್ದ ಆರೀಫ್ ದೃಢ ಮೈಕಟ್ಟು ಹೊಂದಿದ್ದು ಮಂಗಳೂರಿನ ಮಾಜಿ ಡಾನ್ ಜೊತೆಯಲ್ಲಿ ಸಲುಗೆಯಲ್ಲಿದ್ದು ಬಿಡುವಿನ ವೇಳೆ ಅವರೊಂದಿಗೆ ಬೌನ್ಸರ್ ಆಗಿಯೂ ತೆರಳುತ್ತಿದ್ದನಂತೆ. ತನಗೆ ಪ್ರಾಣ ಭಯ ಇದ್ದುದರಿಂದ ಹೊರಗಡೆ ತೆರಳುತ್ತಿದ್ದ ವೇಳೆ ರಕ್ಷಣೆಗೆ ಆಯುಧವನ್ನು ಇಟ್ಟುಕೊಳ್ಳುತ್ತಿದ್ದು, ಶುಕ್ರವಾರದಂದು ದುಷ್ಕರ್ಮಿಗಳು ದಾಳಿ ನಡೆಸಿದ ಸಂದರ್ಭದಲ್ಲೂ ಆರೀಫ್ ಸೊಂಟದಲ್ಲಿ ಚಾಕು ಇಟ್ಟಿದ್ದ. ಆದರೆ ಕಾರು ಡಿಕ್ಕಿ ಹೊಡೆದ ರಭಸಕ್ಕೆ ರಸ್ತೆಗೆಸೆಯಲ್ಪಟ್ಟ ಆರೀಫ್ ಮತ್ತೆ ಮೇಲೆ ಏಳಲು ಸಾಧ್ಯವಾಗದೆ ದುಷ್ಕರ್ಮಿಗಳ ತಲವಾರು ಏಟಿಗೆ ಹೆಣವಾಗಿದ್ದಾನೆ. ಆರೀಫ್ ಮೃತದೇಹವನ್ನು ಮರಣೋತ್ತರ ಪರೀಕ್ಷೆಯ ಬಳಿಕ ಬಂದರಿನ ಮಸೀದಿಯಲ್ಲಿ ಧಫನ ನಡೆಸಲಾಗಿದೆ. ಆರೀಫ್ ಪತ್ನಿ, ಮೂವರು ಪುತ್ರರು ಹಾಗೂ ಒಬ್ಬಾಕೆ ಪುತ್ರಿಯನ್ನು ಅಗಲಿದ್ದಾನೆ.

ಕೃತ್ಯಕ್ಕೆ ಬಳಸಿದ ಕಾರು ಪತ್ತೆ

ಕೊಲೆ ಕೃತ್ಯಕ್ಕೆ ಬಳಸಲಾಗಿದೆ ಎನ್ನಲಾದ ಕೇರಳ ನೋಂದಣಿಯ ಇನೋವ ಕಾರು ವಿಟ್ಲ ಠಾಣಾ ವ್ಯಾಪ್ತಿಯ ಬುಡೋಳಿ ಎಂಬಲ್ಲಿ ಪತ್ತೆಯಾಗಿದ್ದು ವಿಟ್ಲ ಪೊಲೀಸರು ಕಾರನ್ನು ವಶಕ್ಕೆ ಪಡೆದಿದ್ದಾರೆ. ಕೊಲೆ ಕೃತ್ಯದಲ್ಲಿ ಪಾಲ್ಗೊಂಡವರು ಮಂಗಳೂರಿನವರೇ ಆಗಿದ್ದಾರೆಂದು ತಿಳಿದು ಬಂದಿದ್ದು ವಿಟ್ಲದ ಬುಡೋಳಿಯಿಂದ ಹಂತಕರು ಅಜ್ಞಾತ ಸ್ಥಳಕ್ಕೆ ಎಸ್ಕೇಪ್ ಆಗಿದ್ದಾರೆ. ಮಂಗಳೂರು ಸಿಸಿಬಿ ಪೊಲೀಸರು ಆರೋಪಿಗಳ ಬಂಧನಕ್ಕೆ ಕಾರ್ಯ ತಂತ್ರ ರೂಪಿಸಿದ್ದಾರೆ.

ಕಳೆದ ವರುಷ ಸಾವನ್ನಪ್ಪಿದ್ದ ಟೋಪಿ ನೌಫಾಲ್

ಆರೀಫನ್ನು ನಾಲ್ಕು ವರುಷದ ಹಿಂದೆ ಕೊಲೆ ಮಾಡಲು ಯತ್ನಿಸಿದ್ದ ಬಜಾಲ್ ಫೈಸಲ್ ನಗರದ ನಟೋರಿಯಸ್ ರೌಡಿ ಟೋಪಿ ನೌಫಾಲ್ ಕಳೆದ ವರುಷ ನ.1 ರಂದು ಕಾಸರಗೋಡು ಜಿಲ್ಲೆಯ ಉಪ್ಪಳ ರೈಲ್ವೇ ಗೇಟ್ ಬಳಿ ರಕ್ತಸಿಕ್ತ ಸ್ಥಿತಿಯಲ್ಲಿ ಶವವಾಗಿ ಪತ್ತೆಯಾಗಿದ್ದ. ದೇಹದ ಗಾಯಗಳನ್ನು ಕಂಡು ಆರಂಭದಲ್ಲಿ ಇದೊಂದು ವ್ಯವಸ್ಥಿತ ಕೊಲೆಯೆಂದು ಹೇಳಲಾಗಿತ್ತು. ಕೆಲ ದಿನಗಳ ಬಳಿಕ ದೊರೆತ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ನೌಫಾಲ್ ರೈಲು ಡಿಕ್ಕಿಯಾಗಿ ಸಾವನ್ನಪ್ಪಿರುವ ಬಗ್ಗೆ ಉಲ್ಲೇಖಿಸಲಾಗಿತ್ತು. ಇದೀಗ ನೌಫಾಲ್ ಗ್ಯಾಂಗ್‌ನ ಸಹಚರರು ನಗರದಲ್ಲಿ ಮತ್ತೆ ದುಷ್ಕೃತ್ಯಗಳಲ್ಲಿ ಸಕ್ರಿಯರಾಗಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 24°
ಉಡುಪಿ 32° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 28, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 3
ಬಿ.ಸಿ.ರೋಡ್‌ನಲ್ಲಿ ದ.ಕ.ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆ


ಪುಟ 5
ಬೇಸಿಗೆ ಬಿಸಿಲಿಗೆ ಬಳಲಿ ಬರುವ ಬಾನಾಡಿಗಳಿಗೆ ಎಲ್ಲಾ ಮನೆ ಹಿತ್ತಿಲಿನಲ್ಲಿ ನೀರು

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸುತ್ತಮುತ್ತ

ಬಸ್ ನಿರ್ವಾಹಕರಿಗೆ ಹಲ್ಲೆ ಬೆದರಿಕೆ: ಜಿಲ್ಲಾ ಎಸ್‌ಪಿಗೆ ಯೂನಿಯನ್ ಮನವಿ

ಪುತ್ತೂರು: ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕ–ಚಾಲಕ ಪ್ರಶಾಂತ್ ಎಂಬವರು ಕರ್ತವ್ಯದಲ್ಲಿರುವ ಸಂದರ್ಭ ವಿಟ್ಲ ಸಮೀಪದ ಮುಳಿಯ ಎಂಬಲ್ಲಿ ಅವರ ಮೇಲೆ ಹಲ್ಲೆ ಮಾಡಿದ ಪ್ರಕರಣದ ಆರೋಪಿಗಳು ಮತ್ತು ಕೇಸ್ ವಾಪಸ್ ಪಡೆಯುವಂತೆ ಅವರ ಮೇಲೆ ಬೆದರಿಕೆ ಒಡ್ಡಿದ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪುತ್ತೂರು ವಿಭಾಗದ ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಯೂನಿಯನ್ ಆಗ್ರಹಿಸಿದೆ. ಯೂನಿಯನ್ ಈ ಸಂಬಂಧ ದ.ಕ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ. ಮಾ.24ರಂದು ಬಿ.ಸಿ.ರೋಡ್ ಘಟಕದ ನಿರ್ವಾಹಕ–ಚಾಲಕ ಪ್ರಶಾಂತ್ ಅವರು ವಿಟ್ಲ–ಪಕಳಕುಂಜ ರೂಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಮುಳಿಯ ಎಂಬಲ್ಲಿ ಎದುರಿನಿಂದ ಬಂದ ಟಿಪ್ಪರ್ ಡಿಕ್ಕಿ ಹೊಡೆದು ಬಸ್ ಜಖಂಗೊಂಡಿತ್ತು. ಈ ಬಗ್ಗೆ ವಿಚಾರಿಸಲು ಹೋದ ಪ್ರಶಾಂತ್ ಅವರ ಮೇಲೆ ಟಿಪ್ಪರ್ ಲಾರಿ ಚಾಲಕ ಬಿಲಾಲ್ ಹಲ್ಲೆ ನಡೆಸಿದ್ದಾರೆ. ಹಲ್ಲೆ ಮಾಡುತ್ತಿರುವುದನ್ನು ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡುತ್ತಿದ್ದವರನ್ನು ತಡೆದು ಬೆದರಿಕೆ ಒಡ್ಡಿದ್ದು, ಹಲ್ಲೆಗೆ ಒಳಗಾದ ಪ್ರಶಾಂತ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕರ್ತವ್ಯಕ್ಕೆ ಅಡ್ಡಿಪಡಿಸಿ ಹಲ್ಲೆ ಮಾಡಿದ ಬಗ್ಗೆ ವಿಟ್ಲ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಿರ್ವಾಹಕ ಪ್ರಶಾಂತ್ ಜತೆ ಪೊಲೀಸರು ಸ್ಥಳ ಮಹಜರು ಮಾಡಲು ಹೋಗಿದ್ದ ಸಂದರ್ಭ ಸುಧೀರ್ ಎಂಬಾತ ಪೊಲೀಸರ ಎದುರಲ್ಲೇ ಪ್ರಶಾಂತ್ ಅವರಿಗೆ ಬೆದರಿಕೆ ಒಡ್ಡಿದ್ದು, ಕೇಸು ವಾಪಸ್ ಪಡೆದುಕೊಳ್ಳುವಂತೆ ಒತ್ತಡ ಹೇರಿದ್ದಲ್ಲದೆ ಕೊಲೆ ಬೆದರಿಕೆ ಒಡ್ಡಿದ್ದಾರೆ. ಇಷ್ಟಾದರೂ ವಿಟ್ಲ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಇದನ್ನು ಯೂನಿಯನ್ ಬಲವಾಗಿ ಖಂಡಿಸುತ್ತದೆ. ಈ ಬಗ್ಗೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಎಸ್‌ಪಿ ಅವರಿಗೆ ಕಳುಹಿಸಲಾದ ಮನವಿಯಲ್ಲಿ ಒತ್ತಾಯಿಸಲಾಗಿದೆ ಎಂದು ಪುತ್ತೂರು ವಿಭಾಗದ ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಕೋಚಣ್ಣ ಪೂಜಾರಿ ತಿಳಿಸಿದ್ದಾರೆ.

ತುಳುವಿಗೆ ಮನಪಾ ಅನುದಾನ: ಸ್ವಾಗತ

ಮಂಗಳೂರು: ಪ್ರಸಕ್ತ ಸಾಲಿನ ಮಂಗಳೂರು ಮಹಾನಗರ ಪಾಲಿಕೆಯ ಬಜೆಟ್‌ನಲ್ಲಿ ತುಳು ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಸಲುವಾಗಿ 50 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲು ಕಾದಿರಿಸಿರುವುದನ್ನು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಸ್ವಾಗತಿಸಿದ್ದಾರೆ. ನಗರಪಾಲಿಕೆಯ ಈ ನಿರ್ಧಾರಕ್ಕಾಗಿ ನಗರಪಾಲಿಕೆಯ ಆಡಳಿತಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ದರ್ಶನ್ ಎಚ್. ವಿ. ಅವರನ್ನು ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಅಭಿನಂದಿಸಿದ್ದಾರೆ.

ಮಾ.31: ಕಳವಾರಿನಲ್ಲಿ ಶಿಲುಬೆಯ ಯಾತ್ರೆ

ಮಂಗಳೂರು: ಯೇಸು ಕ್ರಿಸ್ತರ ಬದುಕಿನ ಕೊನೆಯ ದಿನದ ಕಷ್ಟ ಮತ್ತು ಯಾತನೆಯ ಕ್ಷಣಗಳನ್ನು ಸ್ಮರಿಸುವ ಶಿಲುಬೆಯ ಯಾತ್ರೆ ಕಳವಾರು ಪೆಜಾರ್ ಸಂತ ಜೋಸೆಫರ ಚರ್ಚ್‌ನಲ್ಲಿ ಈ ಬಾರಿ ಮಾ. 31ರಂದು ನಡೆಯಲಿದೆ. ಸಂಜೆ 5 ಗಂಟೆಗೆ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 10ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಿರಂತರ ಪ್ರಾರ್ಥನೆ, ಸ್ತುತಿ ಆರಾಧನೆ ಹಾಗೂ ದೇವರ ವಾಕ್ಯದ ಮನನ ಕಾರ್ಯಕ್ರಮ ನಡೆಯಲಿದೆ ಎಂದು ಧರ್ಮಗುರು ರುಡಾಲ್ಫ್ ಡೆಸಾ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮಂಗಳೂರು ಧರ್ಮ ಪ್ರಾಂತ್ಯದ ಕ್ಯಾರಿಸ್ಮಾಟಿಕ್ ಸಂಚಾಲನವು ಈ ಕಾರ್ಯಕ್ರಮ ನಡೆಸಿಕೊಡಲಿದ್ದು, 3 ಗಂಟೆಗೆ ಭಕ್ತಿ ಆಚರಣೆ, 3.30ಕ್ಕೆ ಪವಿತ್ರ ಪ್ರಸಾದದ ಆರಾಧನೆ ನಡೆಲಿದೆ. ಇದನ್ನು ಸಂಚಾಲನದ ನಿರ್ದೇಶಕ ವಂ. ಕ್ಲಿಫರ್ಡ್ ಫರ್ನಾಂಡಿಸ್ ನೆರವೇರಿಸಲಿದ್ದಾರೆ. ಸಂಜೆ 5 ಗಂಟೆಗೆ ಪವಿತ್ರ ಬಲಿಪೂಜೆ ಹಾಗೂ 6 ಗಂಟೆಗೆ ಶಿಲುಬೆಯ ಹಾದಿ ಬಳಿಕ ಮಂಗಳೂರು ಧರ್ಮ ಪ್ರಾಂತ್ಯದ ಧರ್ಮಾಧ್ಯಕ್ಷ ವಂ. ಧರ್ಮಗುರು ಡಾ. ಪೀಟರ್ ಪೌಲ್ ಸಲ್ಡಾನ ಅವರು ಆಶೀರ್ವಚನ ನೀಡಲಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಮಧ್ಯಾಹ್ನ 2.45ಕ್ಕೆ ಬಜಪೆ ಚೆಕ್ ಪೋಸ್ಟ್‌ನಿಂದ ಕಳವಾರು ಚರ್ಚ್‌ಗೆ ಹಾಗೂ ಜೋಕಟ್ಟೆ ಕೆಬಿಎಸ್‌ನಿಂದ ಕಳವಾರು ಚರ್ಚ್‌ಗೆ ಪಾದಯಾತ್ರೆ ನಡೆಯಲಿದೆ ಎಂದು ಕಳವಾರು ಚರ್ಚ್‌ನ ವಂ. ರೊನಾಲ್ಡ್ ಡಿಸೋಜ ಮಾಹಿತಿ ನೀಡಿದರು. ಚರ್ಚ್ ಪಾಲನಾ ಸಮಿತಿಯ ಪದಾಧಿಕಾರಿಗಳಾದ ಕ್ಲಿಂಟನ್ ಡಿಸೋಜ, ಸಿಲ್ವಿಯಾ ಮೇರಿಸ್, ವಾಲ್ಟರ್ ಮೊಂತೆರೊ, ಇಲಿಯಾಸ್ ಫರ್ನಾಂಡಿಸ್ ಉಪಸ್ಥಿತರಿದ್ದರು.

ಶರವೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಬ್ರಹ್ಮಕಲಶೋತ್ಸವದಲ್ಲಿ ಪಂಜ ಭಾಸ್ಕರ ಭಟ್ ಆಶಯ

ಶ್ರೀ ದೇವರ ಪೂಜೆ ಕೈಂಕರ್ಯಗಳಿಂದ ದೇಶಕ್ಕೆ ಒಳಿತಾಗಲಿದೆ

ಆಲಂಕಾರು: ನಮ್ಮ ಧಾರ್ಮಿಕ ಪರಂಪರೆಗೆ ಪರಕೀಯರ ದಾಳಿಯಿಂದ ಹಲವು ಪ್ರಮುಖ ಗ್ರಂಥಗಳು ನಾಶವಾಗಿದೆ. ಆಗಮ ಶಾಸ್ತ್ರದ ಪ್ರಕಾರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ಮಾಡಲಾಗುತ್ತಿದೆ. ಶಾಸ್ತ್ರದ ಪ್ರಕಾರ ವ್ಯವಸ್ಥಿತವಾಗಿ ನಿರ್ಮಿಸಿದ ಶ್ರದ್ಧಾ ಕೇಂದ್ರಗಳಲ್ಲಿ ನಡೆಯುವ ಪೂಜೆ ಕೈಕಂರ್ಯಗಳಿಂದ ಇಡೀ ದೇಶಕ್ಕೆ ಒಳಿತಾಗುತ್ತದೆ ಎಂದು ವಿದ್ವಾನ್ ಪಂಜ ಭಾಸ್ಕರ ಭಟ್ ಹೇಳಿದರು.

ಅವರು ಆಲಂಕಾರು ಗ್ರಾಮದ ಶರವೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಬ್ರಹ್ಮ ಕಲಶೋತ್ಸವದ ಅಂಗವಾಗಿ ಗುರುವಾರ ಸಂಜೆ ನಡೆದ ಧಾರ್ಮಿಕ ಸಭೆಯಲ್ಲಿ ಬ್ರಹ್ಮಕಲಶೋತ್ಸವ ಧಾರ್ಮಿಕ ವಿಧಿ ವಿಧಾನ ಬಗ್ಗೆ ಉಪನ್ಯಾಸ ನೀಡಿದರು.

ಧರ್ಮದ ಮೌಲ್ಯ ಉದ್ದೀಪನಗೊಳ್ಳಲಿ

ಹಿಂದು ಮುಖಂಡ ಅರುಣ್ ಕುಮಾರ್ ಪುತ್ತಿಲ ಸಭಾ ಕಾರ್ಯಕ್ರಮ ಉದ್ಘಾಟಿಸಿ, ನಮ್ಮ ಸಂಪ್ರದಾಯದ ವಿರುದ್ಧ ಎಷ್ಟೇ ಷಡ್ಯಂತರ ನಡೆದರೂ ನಮ್ಮ ಐಕ್ಯತೆ ಏಕತೆಯಿಂದಾಗಿ ಇಂದಿಗೂ ಧಾರ್ಮಿಕ ನಂಬಿಕೆ ಉಳಿದುಕೊಂಡಿದೆ. ಧಾರ್ಮಿಕ ಕಾರ್ಯದಲ್ಲಿ ನಾವೆಲ್ಲರು ಒಟ್ಟಾಗಿ ಧರ್ಮದ ಮೌಲ್ಯವನ್ನು ಉದ್ದೀಪನಗೊಳಿಸಬೇಕು ಎಂದರು.



ಸಮಾಜದ ನ್ಯೂನ್ಯತೆ ಸರಿಪಡಿಸಿ

ಶ್ರೀ ನಾರಾಯಣಗುರು ವಿಚಾರ ವೇದಿಕೆ ರಾಜ್ಯಧ್ಯಕ್ಷ ಸತ್ಯಜೀತ್ ಸುರತ್ಕಲ್ ಮಾತನಾಡಿ, ಮನುಷ್ಯ ಧರ್ಮದ ಹಾದಿಯಲ್ಲಿ ಬದುಕಿದಾಗ ಭಗವಂತನಂತೆ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಾನೆ. ಹಿಂದು ಸಮಾಜದ ನ್ಯೂನತೆಗಳನ್ನು ಸರಿಪಡಿಸಿಕೊಂಡಾಗ ಹಿಂದುಗಳು ಸ್ವಾಭಿಮಾನದಿಂದ ಜೀವಿಸಬಹುದು. ನಮ್ಮಲಿರುವ ಎಲ್ಲಾ ತೊಡಕುಗಳನ್ನು ಸರಿಪಡಿಸಲು ಹಿರಿಯರು ಶ್ರಮಿಸಬೇಕು ಎಂದರು.

ಬ್ರಹ್ಮಕಲಶೋತ್ಸವ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ ಅಧ್ಯಕ್ಷತೆವಹಿಸಿದ್ದರು. ಸುರುಳಿ ಶ್ರೀ ಬಾಲಸುಬ್ರಹ್ಮಣ್ಯ ದೇವಸ್ಥಾನದ ಖಾಯಂ ಟ್ರಸ್ಟಿ ರಾಮಮೋಹನ್ ರೈ, ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ವ್ಯವಸ್ಥಾಪನ ಸಮಿತಿ ಸದಸ್ಯ ಅಜಿತ್ ಪಾಲೇರಿ, ಪ್ರಗತಿಪರ ಕೃಷಿಕ ಬೀರಂತಡ್ಕ ಸುಬ್ರಹ್ಮಣ್ಯ ಭಟ್, ಶರವೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಸದಸ್ಯರಾದ ರೋಹಿಣಿ ಬಿ.ಎನ್. ನಾಡ್ತಿಲ, ಪುಷ್ಪಲತಾ ಹಳೆನೇರಿಂಕಿ, ರಾಧಾಕೃಷ್ಣ ಪರಾರಿಗುತ್ತು, ವಿಠಲ ರೈ ಪೆರಾಬೆ ಪಟ್ಟೆ, ಅಭಿವೃದ್ಧಿ ಸಮಿತಿ ಸದಸ್ಯರಾದ ವಿಜಯ ಕುಮಾರ್ ಕೆದಿಲ, ಗಣೇಶ್ ಹಿರಿಂಜ, ಜನಾರ್ದನ ಕುಂಬಾರ, ವ್ಯವಸ್ಥಾಪನ ಮಾಜಿ ಅಧ್ಯಕ್ಷ ದಾಮೋದರ ಕಕ್ವೆ, ನಿವೃತ್ತ ಯೋಧ ಶೀನಪ್ಪ ಕುಂಬಾರ, ಬುಡೇರಿಯ ಆಡಳಿತ ಪ್ರಮುಖ ಈಶ್ವರ ಗೌಡ ಪಜ್ಜಡ್ಕ, ಪ್ರಮುಖರಾದ ರೇವತಿ ಕಮಲಾಕ್ಷ ರೈ ಪರಾರಿಗುತ್ತು ಉಪಸ್ಥಿತರಿದ್ದರು.

ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಾ. ಹೇಮಂತ್ ರೈ ಮನವಳಿಕೆಗುತ್ತು ಸ್ವಾಗತಿಸಿ, ಮುತ್ತಪ್ಪ ಪೂಜಾರಿ ನೈಯಲ್ಗ ವಂದಿಸಿದರು. ಗಣರಾಜ ಕುಂಬ್ಳೆ ಕಾರ್ಯಕ್ರಮ ನಿರ್ವಹಿಸಿದರು.

ಬೆಳಗ್ಗೆ ಆಲಂಕಾರು ಕಜೆ ಶ್ರೀ ದುರ್ಗಾ ಭಜನಾ ಮಂಡಳಿ, ಏನಾಜೆ ಶ್ರೀ ಕೃಷ್ಣ ಭಜನಾ ಮಂಡಳಿ, ಗಾಣಂತಿ ಶ್ರೀ ಹರಿ ಭಜನಾ ಮಂಡಳಿ ವತಿಯಿಂದ ಭಜನಾ ಸೇವೆ, ಪುತ್ತೂರು ಶ್ರೀ ಚಾಮುಂಡೇಶ್ವರಿ ಕುಣಿತಾ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮ, ವಿವಿಧ ವೈದಿಕ ಕಾರ್ಯಕ್ರಮ ನಡೆಯಿತು. ಕಡಬ ತಾಲೂಕು ಒಕ್ಕಲಿಗ ಸೇವಾ ಸಂಘದ ಅಧ್ಯಕ್ಷ ಸುರೇಶ್ ಬೈಲು ಶುಭ ಹಾರೈಸಿದರು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜೀವನ ಮೌಲ್ಯವಿದೆ

ಬೆಳಗ್ಗೆ ನಡೆದ ಸಭೆಯಲ್ಲಿ ಶ್ರೀ ಆದಿಚುಂಚನ ಗಿರಿ ಮಹಾಸಂಸ್ಥಾನದ ಮಂಗಳೂರು ಶಾಖ ಮಠದ ಸ್ವಾಮಿಜಿ ಡಾ. ಧರ್ಮಪಾಲನಾಥ ಸ್ವಾಮಿಜಿ ಆಶೀರ್ವಚನ ನೀಡಿದರು. ಸನಾತನ ಹಿಂದು ಸಮಾಜದಲ್ಲಿ ಜೀವನ ಮೌಲ್ಯವಿದೆ. ಹಿಂದೂ ದೇವಲಾಯಗಳು ಉಳಿಯಬೇಕಾದರೆ ಕಾಲಕಾಲಕ್ಕೆ ಅವುಗಳ ಜೀರ್ಣೋದ್ಧಾರವಾಗಬೇಕು. ದೇವಾಲಯಗಳ ಪುನರುತ್ಥಾನದಿಂದ ಊರಿಗೆ ಒಳಿತಾಗುತ್ತದೆ ಎಂದರು.

ಕ್ಕೊಲದಲ್ಲಿ ಕೋಳಿ ಸಾಕಾಣಿಕೆ ತರಬೇತಿ | ಡಾ.ಕೆ.ಸಿ. ವೀರಣ್ಣ ಸಲಹೆ

ರೈತರ ಅಭಿವೃದ್ಧಿಗೆ ಕೋಳಿ ಸಾಕಾಣಿಕೆ ಸಹಕಾರಿ

ಕಡಬ: ರೈತರ ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ಸರ್ವತೋಮುಖ ಬೆಳವಣಿಗೆಗಾಗಿ ಸುಧಾರಿತ ತಳಿಯ ಕೋಳಿ ಸಾಕಾಣಿಕೆ ಮಾಡುವುದು ಪೂರಕವಾಗಿದೆ. ರೈತರ ಆದಾಯ ದ್ವಿಗುಣವಾಗಲು ಇದೊಂದು ಒಳ್ಳೆಯ ಉಪ ಕಸುಬು ಎಂದು ಬೀದರ್‌ನ ಕರ್ನಾಟಕ ಪಶು ಹಾಗೂ ಮೀನುಗಾರಿಕೆ ವಿಶ್ವ ವಿದ್ಯಾಲಯದ ಕುಲಪತಿ ಪ್ರೊ.ಕೆ.ಸಿ. ವೀರಣ್ಣ ಹೇಳಿದರು.

ಕ್ಕೊಲ ಪಶು ವೈದ್ಯಕೀಯ ಕಾಲೇಜ್, ಎ.ಐ.ಪಿ.ಆರ್.ಪಿ. ಕುಕ್ಕುಟ ಸಂವರ್ಧನೆ ಹಾಗೂ ಕುಕ್ಕುಟ ವಿಜ್ಞಾನ ವಿಭಾಗ ಪಶು ವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಎಸ್.ಸಿ.ಎಸ್.ಡಿ. ಯೋಜನೆಯಡಿಯಲ್ಲಿ ಸುಧಾರಿತ ಕೋಳಿ ಸಾಕಾಣಿಕೆ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಕೋಳಿ ಉದ್ದಿಮೆ ಬೃಹತ್ ಉದ್ಯಮವಾಗಿ ಬೆಳವಣಿಗೆಯಾಗುತ್ತಿದ್ದು, ಗ್ರಾಮೀಣ ಪ್ರದೇಶದಲ್ಲಿ ಹಿತ್ತಲ ಕೋಳಿ ಸಾಕಾಣಿಕೆಯಿಂದ ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದು ಎಂದು ಅವರು ಹೇಳಿದರು.



ಆಸಕ್ತಿ ಇರುವವರು ಸರಿಯಾದ ತರಬೇತಿಯನ್ನು ಪಡೆದುಕೊಂಡು ವ್ಯವಸ್ಥಿತ ರೀತಿಯಲ್ಲಿ ವೈಜ್ಞಾನಿಕವಾಗಿ ಕೋಳಿ ಸಾಕಾಣಿಕೆಯನ್ನು ಕೈಗೊಂಡಲ್ಲಿ ಉತ್ತಮ ಎಂದು ಅವರು ಸಲಹೆ ನೀಡಿದರು.

ಕ್ಕೊಲ ಪಶು ವೈದ್ಯಕೀಯ ಮಹಾ ವಿದ್ಯಾಲಯದ ಡೀನ್ ಡಾ. ಶಿವಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೋಳಿ ಸಾಕಾಣಿಕೆ ಕಡಿಮೆ ಸಮಯದಲ್ಲಿ ಶ್ರಮದಾಯವಲ್ಲದ ನಿವ್ವಳ ಲಾಭ ಪಡೆಯುವಂತಹ ಕಸುಬಾಗಿದೆ. ರೈತರು ಕೃಷಿಯ ಜೊತೆಗೆ ಕೋಳಿ ಸಾಕಾಣಿಕೆಯನ್ನು ಮಾಡುವುದರಿಂದ ನಿರಂತರ ಆದಾಯ ಪಡೆಯಬಹುದು ಎಂದರು.

ಕಾಲೇಜಿನ ಪ್ರಾಧ್ಯಾಪಕ ಡಾ. ಮಂಜುನಾಥ ಪಾಟೀಲ್, ಸಹ ಪ್ರಾಧ್ಯಾಪಕರಾದ ಡಾ. ಅರುಣ್ ಸೋಮಗೊಂಡ, ಡಾ. ರಶ್ಮಿ ಡಾ. ಹರಿಣಿ, ಡಾ. ಧರಣೇಶ್, ಡಾ. ರಜತ್ ಸಾಗರ್ ಕೋಳಿಗಳ ಬಗೆಗಿನ ವಿವಿಧ ಹಂತದ ತರಬೇತಿ ನೀಡಿದರು. ಡಾ. ತೇಜಸ್ವಿನಿ ಸ್ವಾಗತಿಸಿ, ಡಾ. ಸಾಗರ್ ಆರ್.ಎಸ್. ವಂದಿಸಿದರು.

ಫಲಾನುಭವಿಗಳಿಗೆ ಕೋಳಿ ಮರಿ ವಿತರಣೆ

ಕಡಬ ತಾಲೂಕು ವ್ಯಾಪ್ತಿಯ ಕ್ಕೊಲ, ರಾಮಕುಂಜ, ಹಳೆನೇರೆಂಕಿ ಗ್ರಾಮದ 35 ರೈತರು, ರೈತ ಮಹಿಳೆಯರು ಹಾಗೂ ಗ್ರಾಮೀಣ ಯುವಕರು ತರಬೇತಿ ಪಡೆದರು. ತರಬೇತಿ ಪಡೆದ ಫಲಾನುಭವಿಗಳಿಗೆ ಕೋಳಿ ಮರಿಗಳ ಜೊತೆಗೆ ಅವುಗಳಿಗೆ ಆಹಾರ ನೀಡುವ ಪಾತ್ರೆ, ನೀರುಣಿಕೆ, ಕೋಳಿಗಳ ತಿಂಡಿ ಮಿಶ್ರಣವನ್ನು ವಿತರಿಸಲಾಯಿತು.

ಉರುಂಬಿ ಅಣೆಕಟ್ಟು ಯೋಜನೆಗೆ ತಡೆ; ಎರಡು ದಶಕಗಳ ಹೋರಾಟಕ್ಕೆ ಜಯ

ಏ.6ಕ್ಕೆ ಶ್ರೀಸತ್ಯನಾರಾಯಣ ಪೂಜೆ, ಧಾರ್ಮಿಕ ಸಭೆ

ಕಡಬ: ಪೆರಾಬೆ ಗ್ರಾಮದ ಉರುಂಬಿಯಲ್ಲಿ ಕುಮಾರಧಾರಾ ನದಿಗೆ ನಿರ್ಮಿಸಲು ಉದ್ದೇಶಿಸಿರುವ 24 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಗೆ ಸರಕಾರ ತಡೆ ನೀಡಿರುವುದು ನಮ್ಮ 2 ದಶಕಗಳ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಕುಮಾರಧಾರ ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷ ಎನ್. ಕರುಣಾಕರ ಗೋಗಟೆ ಹರ್ಷ ವ್ಯಕ್ತಪಡಿಸಿದರು.

ಅವರು ಶುಕ್ರವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 20 ವರ್ಷಗಳಿಂದ ನಾವು ಯಾವುದೇ ಒತ್ತಡಕ್ಕೆ, ಆಸೆ, ಆಮಿಷಗಳಿಗೆ ಮಣಿಯದೆ ಪ್ರಾಮಾಣಿಕ ಹೋರಾಟ ಮಾಡಿದುದರ ಪರಿಣಾಮವಾಗಿ ಗೆಲುವು ನಮ್ಮ ಪಾಲಿಗಾಗಿದೆ. ಈ ಸಂಬಂಧ ಏ.6ರಂದು ಉರುಂಬಿಯಲ್ಲಿ ಸತ್ಯನಾರಾಯಣ ಪೂಜೆ, ಧಾರ್ಮಿಕ ಸಭೆ ಆಯೋಜಿಸಲಾಗಿದೆ. ಪ್ರತಿ ವರ್ಷ ಕುಮಾರಧಾರ ನದಿ ತೀರದಲ್ಲಿ ರೈತರು ಸತ್ಯನಾರಾಯಣ ಪೂಜೆ ನಡೆಸುವುದರ ಮೂಲಕ ಆಧ್ಯಾತ್ಮಿಕ ಶಕ್ತಿಯನ್ನೂ ಹೋರಾಟಕ್ಕೆ ಜೋಡಿಸಿಕೊಳ್ಳಲಾಗಿತ್ತು. ಎಂದರು.

ಕಳೆದ ಮೂರು ದಶಕಗಳಿಂದಲೂ ಕುಮಾರಧಾರಾ ನದಿಗೆ ವಿವಿಧ ಜಲ ವಿದ್ಯುತ್ ಯೋಜನೆಗಳು ಅನುಷ್ಠಾವಾಗುವ ಭೀತಿಯನ್ನು ಆ ಭಾಗದ ಜನ ಎದುರಿಸುತ್ತಾ ಬಂದಿದ್ದಾರೆ. 2011ರಲ್ಲಿ ಒಂದು ಖಾಸಗಿ ಸಂಸ್ಥೆ ಉರುಂಬಿಯಲ್ಲಿ ನದಿಗೆ 24 ಮೆಗಾವಾಟ್ ಸಾಮರ್ಥ್ಯದ ಜಲವಿದ್ಯುತ್ ಯೋಜನೆಯನ್ನು ಪ್ರಸ್ತಾಪಿಸಿತ್ತು. ಅದನ್ನು ವಿರೋಧಿಸಿ ಯೋಜನೆಯನ್ನು ವಿರುದ್ಧ ಹೋರಾಟ ಮಾಡುವ ಉದ್ದೇಶದಿಂದ ಕುಮಾರಧಾರ ಸಂರಕ್ಷಣಾ ಸಮಿತಿಯನ್ನು ರಚಿಸಿದ್ದೆವು ಎಂದು ಅವರು ವಿವರಿಸಿದರು.

ಹೋರಾಟಗಾರರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಒತ್ತಡಗಳನ್ನು ಹೇರಿ, ಆಮಿಷಗಳನ್ನು ಒಡ್ಡಿ ಪ್ರತಿಭಟನೆಯನ್ನುಹತ್ತಿಕ್ಕುವ ಷಡ್ಯಂತ್ರಗಳನ್ನು ಮಾಡಲಾಗಿತ್ತು. ಯಾವುದಕ್ಕೂ ಮಣಿಯದೆ ಕೆಚ್ಚೆದೆಯಿಂದ ಮುನ್ನುಗ್ಗಿದ ಪರಿಣಾಮ ನಮಗೆ ಸರಕಾರದ ಕಡೆಯಿಂದ ನ್ಯಾಯ ದೊರಕಿದೆ ಎಂದು ಹೇಳಿದರು.

ಉರುಂಬಿ ಯೋಜನೆಯೊಂದಿಗೆ ಕುಮಾರಧಾರ ನದಿಗೆ ಅಲ್ಲಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಿರು ಜಲವಿದ್ಯುತ್ ಯೋಜನೆಗಳಿಗೆ ಕೂಡಾ ಸರಕಾರ ತಡೆ ನೀಡಿದೆ. ಶಿರಸಿಯ ಹಿರಿಯ ಪರಿಸರ ತಜ್ಞ ಅನಂತ ಹೆಗಡೆ ಆಶೀಸರ ಸಮಿತಿಗೆ ಮಾರ್ಗದರ್ಶಕರಾಗಿ ಹೋರಾಟದ ದಿಕ್ಕು ನಿರ್ಧರಿಸಲು ಸಹಕರಿಸಿದರು. ಕಾನೂನು ಸಲಹೆಗಾರರಾಗಿ ಹಿರಿಯ ನ್ಯಾಯವಾದಿ ಶ್ರೀನಿವಾಸ್ ಸಹಕರಿಸಿದ್ದರು. ಹಿರಿಯ ವಿಜ್ಞಾನಿ ಡಾ.ಟಿ.ವಿ. ರಾಮಚಂದ್ರ ಮತ್ತು ಅವರ ತಂಡ ನೀಡಿದ ವೈಜ್ಞಾನಿಕ ವರದಿ ಕುಮಾರಧಾರಾ ಪ್ರದೇಶವನ್ನು ಜೀವ ವೈವಿಧ್ಯತೆಯ ಹಾಟ್‌ಸ್ಪಾಟ್ ಎಂದು ಗುರುತಿಸಿದ್ದರು. ಇದೆಲ್ಲವೂ ರಾಜ್ಯ ಸರ್ಕಾರವು ಯೋಜನೆಯನ್ನು ರದ್ದುಗೊಳಿಸಲು ಪ್ರಮುಖ ಕಾರಣ ವಾಯಿತು ಎಂದು ಅವರು ವಿವರಿಸಿದರು.

ಏ.6ರಂದು ನಡೆಯುವ ಶ್ರೀ ಸತ್ಯನಾರಾಯಣ ಪೂಜಾ ಸಭಾ ಕಾರ್ಯಕ್ರಮದಲ್ಲಿ ಸುಬ್ರಹ್ಮಣ್ಯ ಮಠಾಧೀಶ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಪಶ್ಚಿಮ ಘಟ್ಟ ಜೀವ ವೈವಿಧ್ಯತಾ ಕಾರ್ಯಪಡೆಯ ಮಾಜಿ ಅಧ್ಯಕ್ಷ ಪರಿಸರ ತಜ್ಞ ಅನಂತ ಹೆಗಡೆ ಆಶೀಸರ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ಟಿ.ವಿ. ರಾಮಚಂದ್ರ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಹೋರಾಟದೊಂದಿಗೆ ಕೈ ಜೋಡಿಸಿದವರನ್ನು ಸಮ್ಮಾನಿಸಿ ಗೌರವಿಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಹೋರಾಟ ಸಮಿತಿ ಉಪಾಧ್ಯಕ್ಷ ಗೋಪಾಲಕೃಷ್ಣ ಇಡ್ಯಡ್ಕ, ಕಾರ್ಯದರ್ಶಿ ಕಿರಣ್ ಗೋಗಟೆ, ಜತೆ ಕಾರ್ಯದರ್ಶಿ ಎಲ್ದಿ ತೋಮಸ್, ಸದಸ್ಯ ಮೋನಪ್ಪ ಗೌಡ ನಾಡೋಳಿ ಉಪಸ್ಥಿತರಿದ್ದರು.

ಮುಲ್ಕಿ ಶ್ರೀ ವೆಂಕಟರಮಣ ದೇಗುಲದಲ್ಲಿ ದೇವರ ರಥೋತ್ಸವ



ಮುಲ್ಕಿ: ವಳಲಂಕೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಶುಕ್ರವಾರ ಶ್ರೀರಾಮನವಮಿಯಂದು ವಾರ್ಷಿಕ ರಥೋತ್ಸವವು ಶ್ರೀಸಂಸ್ಥಾನ ಶ್ರೀಕಾಶಿಮಠಾಧೀಶ ಶ್ರೀಮತ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರ ಶುಭಾಶೀರ್ವಾದಗಳೊಂದಿಗೆ ನಡೆಯಿತು. ದಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಬೆಳಗ್ಗೆ 9ಕ್ಕೆ ಶ್ರೀವೆಂಕಟರಮಣ ದೇವರಿಗೆ ಪಂಚಾಮೃತ ಅಭಿಷೇಕ, ಮಧ್ಯಾಹ್ನ 12ಕ್ಕೆ ಮಹಾ ನೈವೇದ್ಯ, ಮಂಗಳಾರತಿ, ಶ್ರೀದೇವರು ಯಜ್ಞಕ್ಕೆ ಹೊರಡುವ ಕಾರ್ಯಕ್ರಮ ನಡೆಯಿತು ಸಂಜೆ 3.45ಕ್ಕೆ ಯಜ್ಞ ಪೂರ್ಣಾಹುತಿ, 6.30ಕ್ಕೆ ಬ್ರಹ್ಮ ರಥಾರೋಹಣ, ಭೂರಿ ಸಮಾರಾಧನೆ, ರಾತ್ರಿ ಬ್ರಹ್ಮರಥದಲ್ಲಿ ಶ್ರೀ ದೇವರಿಗೆದೀಪ ನಮಸ್ಕಾರ, ಶ್ರೀನರಸಿಂಹ ಸ್ತುತಿ, ರಾತ್ರಿ ಪೂಜೆ, ಬ್ರಹ್ಮರಥೋತ್ಸವ, ವಿಶ್ರಾಂತಿಪೂಜೆ, ದೇವದರ್ಶನ ಸೇವೆ, ಚಂದ್ರ ಮಂಡಲ ಉತ್ಸವ, ವಸಂತ ಪೂಜೆ, ಏಕಾಂತ ಶಯನಪೂಜೆ ನಡೆಯಿತು. ಈ ಸಂದರ್ಭ ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು.

ಇಂದು ಅವಭೃತ ಒಕುಳಿ

ಮಾ.28ರಂದು ಬೆಳಗ್ಗೆ ಗಂಟೆ 10ಕ್ಕೆ ಕವಾಟೋದ್ಘಾಟನೆ, ಸಂಜೆ ಗಂಟೆ 3.30ಕ್ಕೆ ಅವಭೃತ ಒಕುಳಿ ಉತ್ಸವ ನಡೆಯಲಿದೆ.

ಫಲ್ಗುಣಿಗೆ ಕೈಗಾರಿಕೆಗಳ ಸಂಸ್ಕರಿಸದ ತ್ಯಾಜ್ಯ ನೀರು ಸೇರುತ್ತಿಲ್ಲ: ಕೆನರಾ ಕೈಗಾರಿಕಾ ಸಂಘ

ಮಂಗಳೂರು: ಫಲ್ಗುಣಿ ನದಿಗೆ ಕೊಳಚೆ ನೀರು ಹರಿದು ಕಾಲುವೆಗಳ ಮೂಲಕ ಸೇರುತ್ತಿದೆ. ನದಿಗೆ ಕೈಗಾರಿಕೆಗಳ ಸಂಸ್ಕರಿಸದ ತ್ಯಾಜ್ಯ ನೀರು ಸೇರುತ್ತಿಲ್ಲ ಎಂದು ಕೈಗಾರಿಕಾ ಪ್ರತಿನಿಧಿಗಳು ಹೇಳಿದ್ದಾರೆ.

ಫಲ್ಗುಣಿ ನದಿ ನೀರು ಕಲುಷಿತಗೊಳ್ಳಲು ಕೈಗಾರಿಕೆಗಳು ಕಾರಣ ಎನ್ನುವ ಆರೋಪ ಸರಿಯಲ್ಲ, ಕೈಗಾರಿಕ ಪ್ರದೇಶದ ಹಾಗೂ ಪಕ್ಕದ ಪುನರ್ವಸತಿ ಪ್ರದೇಶದಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲದೆ ಕೊಳಚೆ ನದಿ ಸೇರುತ್ತಿದೆ ಎಂದು ಕೆನರಾ ಕೈಗಾರಿಕ ಸಂಘದ ಉಪಾಧ್ಯಕ್ಷ ಬಿ.ಎ. ಇಕ್ಬಾಲ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೈಗಾರಿಕಾ ಪ್ರದೇಶ ರಚನೆ ಮಾಡಿದ ಬಳಿಕ ಒಳಚರಂಡಿ ವ್ಯವಸ್ಥೆ ಅತ್ಯಗತ್ಯವಾಗಿದೆ. ಆದರೆ, ಬೈಕಂಪಾಡಿ ಕೈಗಾರಿಕ ಪ್ರದೇಶದಲ್ಲಿ ಒಳಚರಂಡಿ ಸಮರ್ಪಕವಾಗಿ ಅನುಷ್ಠಾನವಾಗಿಲ್ಲ, ಮಾತ್ರವಲ್ಲದೆ ಅನುಷ್ಠಾನ ಆಗಿರುವಲ್ಲಿಯೂ ಅದರ ನಿರ್ವಹಣೆಯೂ ಸರಿಯಾಗಿ ಆಗುತ್ತಿಲ್ಲ, ಇದರ ಜತೆಗೆ ತೋಕೂರು, ಕುಡುಂಬೂರು, ಅಂಗರಗುಂಡಿ ಮೊದಲಾದ ಪುನರ್ವಸತಿ ಜನವಾಸ ಪ್ರದೇಶದಲ್ಲಿಯೂ ಒಳಚರಂಡಿ ಜಾಲ ಇಲ್ಲ, ಇದರಿಂದಾಗಿ ಕೊಳಚೆ ನೀರು ಹರಿದು ಕಾಲುವೆಗಳ ಮೂಲಕ ನದಿ ಸೇರುತ್ತಿದೆ ಎಂದರು.

ಪ್ರತಿಯೊಂದು ಕೈಗಾಗರಿಕೆಗಳು ತಮ್ಮದೇ ಆದ ತ್ಯಾಜ್ಯ ನೀರು ಸಂಸ್ಕರಣ ಘಟಕ (ಇಟಿಪಿ)ಗಳನ್ನು ಹೊಂದಿದ್ದು, ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನದ ಪ್ರಕಾರ ಇಟಿಪಿಗಳ ಮೂಲಕ ಸಂಸ್ಕರಿಸಿ ಮರುಬಳಕೆ ಮಾಡಲಾಗುತ್ತಿದೆ. ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳೂ ಆಗಿಂದಾಗ್ಗೆ ಇದನ್ನು ಪರಿಶೀಲನೆ ನಡೆಸುತ್ತಾರೆ. ಇದನ್ನು ಯಾರು ಬೇಕಾದರೂ ಪರಿಶೀಲಿಸಲೂ ಅವಕಾಶವಿದೆ ಎಂದರು.

ಕೈಗಾರಿಕಾ ಪ್ರದೇಶದಲ್ಲಿ ಪ್ರಸ್ತುತ ಮಹಾನಗ ನಗರ ಪಾಲಿಕೆಯಿಂದ ಆಸ್ತಿ ತೆರಿಗೆಯನ್ನು ಸಂಗ್ರಹ ಕಾರ್ಯ ನಡೆಯುತ್ತಿದ್ದರೂ, ಕೆಐಎಡಿಬಿ ಅಧೀನದಲ್ಲಿರುವುದರಿಂದ ಪಾಲಿಕೆ ನಿರ್ವಹಣೆ ಮಾಡುತ್ತಿಲ್ಲ, ವಿಶೇಷ ಹೂಡಿಕೆ ಪ್ರದೇಶ ಕಾಯ್ದೆ 2022ರ ಪ್ರಕಾರ ಏವಿಶೇಷ ಹೂಡಿಕೆ ಪ್ರದೇಶಏವನ್ನಾಗಿ ಘೋಷಿಸಿ ನಿರ್ವಹಣೆ ಮಾಡಬೇಕು ಎಂದು ಸರಕಾರಕ್ಕೆ ಆಗ್ರಹಿಸಲಾಗಿದೆ. ಸರಕಾರ ಕೂಡಲೇ ಈ ಬಗ್ಗೆ ಗಮನ ಹರಿಸಿ ಘೋಷಣೆ ಮಾಡಬೇಕು. ಇದರಿಂದ ಕೈಗಾರಿಕಾ ಪ್ರದೇಶದ ಸಮಗ್ರ ನಿರ್ವಹಣೆ ಸಾಧ್ಯವಾಗಲಿದೆ ಎಂದರು.

ಎಂಆರ್‌ಪಿಎಲ್ ಸಂಸ್ಥೆಯ ಪ್ರತಿನಿಧಿ ಸುದರ್ಶನ್, ಬಿಎಎಸ್‌ಎಫ್‌ನ ಸಂತೋಷ್ ಪೈ, ಸೋಲಾರ್ ಸಂಸ್ಥೆಯ ಜಗದೀಶ್, ಅದಾನಿ ವಿಲ್ಮಾರ್‌ನ ಶಾಂತ ಕುಮಾರ್, ಪತಂಜಲಿ ಸಂಸ್ಥೆಯ ಹರೀಶ್ ಇದ್ದರು.

‘ರಂಗಮಂಟಪ’ದಲ್ಲಿ ಕಲೆಯ ವಿಸ್ಮಯ ಜಗತ್ತು: ಡಾ.ಕೆ.ಚಿನ್ನಪ್ಪ ಗೌಡ

ಮಂಗಳೂರು: ಪತ್ರಕರ್ತೆ ಕೋಡಿಬೆಟ್ಟು ರಾಜಲಕ್ಷ್ಮಿ ಬರೆದಿರುವ ಪ್ರಸಿದ್ಧ ನೃತ್ಯ ಕಲಾವಿದರ ಸಂದರ್ಶನಗಳ ‘ಲಲಿತ ಮಂಟಪ’ ಕೃತಿ ಬಿಡುಗಡೆ ಸಮಾರಂಭ ನಗರದ ಸಪ್ನ ಬುಕ್ ಹೌಸ್‌ನಲ್ಲಿ ಬುಧವಾರ ನಡೆಯಿತು.

ಕೃತಿ ಬಿಡುಗಡೆಗೊಳಿಸಿದ ಜನಪದ ವಿದ್ವಾಂಸ ಡಾ.ಕೆ.ಚಿನ್ನಪ್ಪ ಗೌಡ ಮಾತನಾಡಿ, ದೇಶದ ಪ್ರಮುಖ ನೃತ್ಯ ಕಲಾವಿದರ ಸಂದರ್ಶನ ಲೇಖನಗಳು ಲಲಿತ ಮಂಟಪದಲ್ಲಿ ಸುಂದರವಾಗಿ ಮೂಡಿ ಬಂದಿದೆ. ಪ್ರತಿಯೊಬ್ಬರ ಕಲಾವಿದರ ಬದುಕು ಕೂಡಾ ಅದ್ಭುತ. ಅವರ ಬದುಕು ಮತ್ತು ಕಲಾ ಪ್ರಕಾರವನ್ನು ರಾಜಲಕ್ಷ್ಮಿ ಅವರು ಮನೋಜ್ಞವಾಗಿ ತೆರೆದಿಟ್ಟಿದ್ದಾರೆ. ಕಲೆಯ ವಿಸ್ಮಯ ಜಗತ್ತು ತೆರೆದುಕೊಂಡಿದೆ. ಲಲಿತ ಮಂಟಪದಲ್ಲಿ ನಾಟ್ಯ ಪರಂಪರೆ, ಕಲಾವಿದರ ತ್ಯಾಗ, ಸವಾಲುಗಳ ಸಮಗ್ರ ಮಾಹಿತಿ ಇದೆ ಎಂದರು.

ಮಾಜಿ ಶಾಸಕಿ ಶಕುಂತಳಾ ಟಿ.ಶೆಟ್ಟಿ ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಮುಖ್ಯ ಅತಿಥಿಗಳಾಗಿದ್ದರು. ಕೃತಿಕರ್ತೆ ರಾಜಲಕ್ಷ್ಮಿ ಕೋಡಿಬೆಟ್ಟುಸ್ವಾಗತಿಸಿದರು. ಲೇಖಕಿ ದೇವಿಕಾ ನಾಗೇಶ್ ಕಾರ್ಯಕ್ರಮ ನಿರೂಪಿಸಿದರು.



ವಿನೂತನ ರಂಗ ಪ್ರಯೋಗ

ರಂಗ ಮಂಟಪ ಕೃತಿ ಆಧರಿಸಿದ ವಿನೂತನ ರಂಗ ಪ್ರಯೋಗ ಗೆಜ್ಜೆ ಬರೆದ ಅಕ್ಷರವನ್ನು ವಿದುಷಿ ಮಂಜುಳಾ ಸುಬ್ರಹ್ಮಣ್ಯ ಪ್ರಸ್ತುತಪಡಿಸಿದರು. ಪವಿತ್ರಾ ಮಯ್ಯ ಹಾಡುಗಾರಿಕೆಯಲ್ಲಿ ಹಾಗೂ ರಾಕೇಶ್ ಹೊಸಬೆಟ್ಟು ಮೃದಂಗ ಮತ್ತು ತಬ್ಲಾದಲ್ಲಿ ಸಹಕರಿಸಿದರು.

ಶ್ರೀ ಸಹಸ್ರಲಿಂಗೇಶ್ವರ ದೇವಾಲಯದಲ್ಲಿ 2027ರಲ್ಲಿ ನಡೆಯಬೇಕಾಗಿರುವ ಬ್ರಹ್ಮಕಲಶೋತ್ಸವ ಮುಂದೂಡಿಕೆ | ರಾಧಾಕೃಷ್ಣ ನ್ಯಾಕ್ ಮಾಹಿತಿ

ರೂ. 352 ಕೋಟಿ ವೆಚ್ಚದ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನ ಮಾಡಲು ಮೊದಲ ಆದ್ಯತೆ

ಉಪ್ಪಿನಂಗಡಿ: ಇಲ್ಲಿನ ಪುರಾಣ ಪ್ರಸಿದ್ಧ ಶ್ರೀ ಸಹಸ್ರಲಿಂಗೇಶ್ವರ ದೇವಾಲಯದಲ್ಲಿ 2027ರಲ್ಲಿ ನಡೆಯಬೇಕಾಗಿರುವ ಬ್ರಹ್ಮಕಲಶೋತ್ಸವವನ್ನು ಶಾಸಕರ ಪ್ರಯತ್ನದ ಫಲವಾಗಿ ದೊರಕಲಿರುವ ರೂ.352 ಕೋಟಿ ವೆಚ್ಚದ ಅಭಿವೃದ್ಧಿ ಕಾರ್ಯಗಳ ಅನುಷ್ಠಾನದ ಬಳಿಕವೇ ನಡೆಸಲು ಸಂಕಲ್ಪಿಸಲಾಗಿದೆ ಎಂದು ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್ ತಿಳಿಸಿದರು.

ಅವರು ದೇವಳದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿ, ದೇವಾಲಯದಲ್ಲಿನ ನೇತ್ರಾವತಿ ಸಮುದಾಯ ಭವನದ ಮೇಲಿನ ಮಹಡಿಯಲ್ಲಿ ಸಭಾಭವನವನ್ನು ನಿರ್ಮಿಸುವರೇ ರೂ.1.99 ಕೋಟಿ ವೆಚ್ಚದ ಕಾಮಗಾರಿಗೆ ಅನುಮೋದನೆ ದೊರಕಿದ್ದು, ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಇನ್ನುಳಿದಂತೆ ಹಳೇ ಕಟ್ಟಡಗಳನ್ನು ದುರಸ್ತಿ ಕಾಮಗಾರಿ, ಮೂಲಭೂತ ಆವಶ್ಯಕತೆಗಳ ನಿರ್ಮಾಣ, ಕಡೆಗಣಿಸಲ್ಪಟ್ಟಂತೆ ಇದ್ದ ದೈವಗಳ ಗುಡಿ ಪುನರ್ ನಿರ್ಮಾಣ, ದೇವಳದ ಮುಂಭಾಗದಲ್ಲಿನ 32 ಸೆಂಟ್ಸ್ ಭೂಮಿಯನ್ನು ರೂ.1.51 ಕೋಟಿಗೆ ಖರೀದಿಸಿರುವುದು, ದೇವಳದ ಹಕ್ಕಿನ 29 ಸೆಂಟ್ಸ್ ಭೂಮಿಯನ್ನು ಅದರ ಅನುಭೋಗದಾರರು ಸ್ವಯಂ ಪ್ರೇರಣೆಯಿಂದ ದೇವಳಕ್ಕೆ ಹಿಂತಿರುಗಿಸುವಂತೆ ಮಾಡಿರುವುದು, ದೇವಳದ ಸುತ್ತಮುತ್ತಲು ಇಂಟರ್‌ಲಾಕ್ ಅಳವಡಿಸಿರುವುದು, ಮೊದಲಾದ ಕಾರ್ಯಗಳನ್ನು ತಮ್ಮ ಆಡಳಿತಾವಧಿಯಲ್ಲಿ ಮಾಡಲಾಗಿದೆ ಎಂದರು.



ಅಣೆಕಟ್ಟಿನ ಹಿನ್ನೀರಿನಿಂದಾಗಿ ಉದ್ಭವ ಲಿಂಗಕ್ಕೆ ಈ ಬಾರಿಯೂ ಪೂಜೆ ಸಲ್ಲಿಸಲಾಗದಿರುವುದು ಎಲ್ಲಾ ಭಕ್ತಾದಿಗಳಂತೆ ನಮಗೂ ಖೇದವಿದೆ. ಆದರೆ, ಜಿಲ್ಲೆಯ ಜನರ ಕುಡಿಯುವ ನೀರಿನ ಸಂಗ್ರಹಕ್ಕಾಗಿ ಮಾಡಲಾದ ವ್ಯವಸ್ಥೆಯನ್ನು ಗೌರವಿಸಿ ಈ ನ್ಯೂನ್ಯತೆಯನ್ನು ಒಪ್ಪಿಕೊಳ್ಳಲಾಗಿದೆ. ಮುಂದಕ್ಕೆ ನೀರಕಟ್ಟೆ ಅಣೆಕಟ್ಟಿನಲ್ಲಿ ಜಲವಿದ್ಯುತ್ ಸ್ಥಾವರ ಕಾರ್ಯಾರಂಭಗೊಂಡರೆ ಹಾಗೂ ಮುಗೇರಡ್ಕದ ಅಣೆಕಟ್ಟಿನಲ್ಲಿಯೂ ನೀರು ಸಂಗ್ರಹಿಸಲಾದರೆ ಬಿಳಿಯೂರು ಅಣೆಕಟ್ಟಿಗೆ ಜಾತ್ರೆ ಮುಗಿಯುವವರೆಗೆ ಗೇಟು ಅಳವಡಿಸದೆ ಇರುವ ಸಾಧ್ಯತೆಯನ್ನು ಅನುಷ್ಠಾನಿಸುವ ಬಗ್ಗೆ ಸಂಬಂಧಿತ ಇಲಾಖಾಧಿಕಾರಿಗಳೊಂದಿಗೆ ಚರ್ಚಿಸಲಾಗುವುದೆಂದು ತಿಳಿಸಿದರು.

ಈ ಬಾರಿಯ ಜಾತ್ರೆ ಕಾರ್ಯಕ್ರಮ ಚೆನ್ನಾಗಿ ನಡೆದಿದೆ. ಆದರೆ, ಪಂಚಾಯತ್ ಪಿಡಿಒ ಕ್ಷೇತ್ರದ ಶಾಸಕ ಅಶೋತ್ತರದಂತೆ ಅಳವಡಿಸಲಾದ ವಿದ್ಯುತ್ ದೀಪವನ್ನು ಕತ್ತರಿಸಿದ್ದು ಹಾಗೂ ಶಾಸಕರ ಸೂಚನೆಯಂತೆ ನಿರುಪಯುಕ್ತವಾಗಿದ್ದ ಕುಡಿಯುವ ನೀರಿನ ಘಟಕವನ್ನು ದೇಗುಲದ ವೆಚ್ಚದಲ್ಲಿ ತೆರವು ಮಾಡಿರುವುದಕ್ಕೆ ನೋಟಿಸು ಜಾರಿ ಮಾಡಿರುವುದು ಬೇಸರ ತಂದಿದೆ. ಶಾಸಕರ ನಿರ್ದೇಶನವನ್ನು ಧಿಕ್ಕರಿಸುವಂತಹ ವರ್ತನೆ ತೋರಿರುವುದು ಜಾತ್ರೆಯಲ್ಲಿ ಕಪ್ಪು ಚುಕ್ಕೆಯಾಗಿ ಮೂಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ವೆಂಕಪ್ಪ ಪೂಜಾರಿ ಮರುವೇಲು, ಡಾ. ರಮ್ಯ ರಾಜಾರಾಮ್, ಸೋಮನಾಥ, ಗೋಪಾಲಕೃಷ್ಣ ರೈ ಉಪಸ್ಥಿತರಿದ್ದರು.

ನದಿಗೆ ಶೌಚಾಲಯ ನೀರು

ನದಿಯನ್ನು ಜಡವಸ್ತುವನ್ನಾಗಿ ಕಾಣುವ ವಿದೇಶಗಳಲ್ಲಿ ನದಿ ಶುದ್ಧವಾಗಿ ಹರಿಯುತ್ತಿದ್ದು, ನಮ್ಮಲ್ಲಿ ನದಿ ಕಲುಷಿತವಾಗಿ ಹರಿಯುತ್ತಿರುವುದು ವಿಪರ್ಯಾಸವೆನಿಸಿದೆ. ಅದರಲ್ಲೂ ಮುಖ್ಯವಾಗಿ ಕುಡಿಯುವ ನೀರ ನೆಲೆಯಾಗಿರುವ ನದಿಗೆ ಶೌಚಾಲಯದ ತ್ಯಾಜ್ಯವನ್ನು ಹರಿಯಬಿಡುತ್ತಿರುವುದು ಅಮಾನುಷ ನಡೆಯಾಗಿದೆ. ಇದರ ಬಗ್ಗೆ ಸಂಬಂಧಿತ ಅಧಿಕಾರಿಗಳು ಗಮನ ಹರಿಸಬೇಕು.

- ಕೆ. ರಾಧಾಕೃಷ್ಣ ನ್ಯಾಕ್, ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ

ಸುತ್ತಮುತ್ತ

ಬರಯ -ಸೂಳಬೆಟ್ಟು ಶ್ರೀ ದೇವಳ ವರ್ಷಾವಧಿ ಜಾತ್ರೆ

ಬೆಳ್ತಂಗಡಿ: ಪಿಲ್ಯ ಗ್ರಾಮದ ಬರಯ– ಸೂಳಬೆಟ್ಟು ಶ್ರೀ ಗೋಪಾಲಕೃಷ್ಣ ದೇವಸ್ಥಾನದ ವರ್ಷಾವಧಿ ಜಾತ್ರೆ ಮಾ.30 ರಿಂದ ಏ.2 ರವರೆಗೆ ಆನುವಂಶೀಯ ತಂತ್ರಿಗಳಾದ ಕಾಜಿಮುಗೇರು ಸೀತಾರಾಮ ಕೇಳ್ಕರ್ ನೇತೃತ್ವದಲ್ಲಿ ನಡೆಯಲಿದೆ. ಮಾ.30 ರಂದು ಬೆಳಿಗ್ಗೆ ಧ್ವಜಾರೋಹಣ, ಸಂಜೆ ನಾದ ಮಾಧುರ್ಯ ಸೂಳಬೆಟ್ಟು ಇವರಿಂದ ಸಂಗೀತ ಕಾರ್ಯಕ್ರಮ, ಶ್ರೀಕೃಷ್ಣ ಕುಣಿತ ಭಜನಾ ಸಂಘ ಸೂಳಬೆಟ್ಟು ಬರಾಯ ಇವರಿಂದ ಭಜನೆ, ರಾತ್ರಿ ದೇವರ ಉತ್ಸವ ನಡೆಯಲಿದೆ. ಮಾ. 31 ರಂದು ಸಂಜೆ ಲಲಿತಾ ವಿಷ್ಣು ಮಹಿಳಾ ಭಜನಾ ಸಂಘ ಸೂಳಬೆಟ್ಟು–ಫಂಡಿಜೆ ಇವರಿಂದ ಭಜನಾ ಕಾರ್ಯಕ್ರಮ, ಯಕ್ಷಗಾನ ಕಲಾವಿದರಿಂದ ತುಳು ಯಕ್ಷ ತೆಲಿಕೆ, ರಾತ್ರಿ ವಸಂತ ಪೂಜೆ, ದರ್ಶನ ಬಲಿ, ಏ.1 ರಂದು ಬೆಳಿಗ್ಗೆ ಗಣಪತಿ ದೇವರಿಗೆ ಅಥರ್ವಶೀರ್ಷದೊಂದಿಗೆ ಅಭಿಷೇಕ, ರಾತ್ರಿ ವಸಂತ ಪೂಜೆ, ಭೂತಬಲಿ, ಕವಾಟಬಂಧನ, ಏ. 2 ರಂದು ಬೆಳಿಗ್ಗೆ ಕವಾಟೋದ್ಘಾಟನೆ, ಪುರುಷಸೂಕ್ತ ಹವನ, ರಥ ಕಲಶ, ಉತ್ಸವ, ಸಂಜೆ ಸನ್ಮಾನ, ರಾತ್ರಿ ನೃತ್ಯ ವೈವಿಧ್ಯ, ಕಿರು ನಾಟಕ, ಜಾದು ಪ್ರದರ್ಶನ, ನಾಲೆರು ನಾರಾಯಣೆ ತುಳು ನಾಟಕ, ಅಳದಂಗಡಿ ಅರಮನೆ ಡಾ. ಪದ್ಮಪ್ರಸಾದ ಅಜಿಲರ ಉಪಸ್ಥಿತಿಯಲ್ಲಿ ದೇವರ ಉತ್ಸವ, ವಸಂತಕಟ್ಟೆ ಪೂಜೆ, ಕೊಡಮಣಿತ್ತಾಯ ದೈವದ ನೇಮ, ಮಹಾರಥೋತ್ಸವ, ದೈವ–ದೇವರ ಭೇಟಿ, ಏ.3 ರಂದು ಅವಭೃತೋತ್ಸವ ,ಓಕುಳಿ, ಧ್ವಜಾವ ರೋಹಣ, ಕೃಷ್ಣ-ಸತ್ಯಭಾಮಾ ಸಂವಾದ, ಸಂಪ್ರೋಕ್ಷಣೆ ನಡೆಯಲಿದೆ. ಜಾತ್ರಾ ಸಂದರ್ಭ ಪ್ರತಿದಿನ ಮಧ್ಯಾಹ್ನ ಅನ್ನಸಂತರ್ಪಣೆ ಇರಲಿದೆ ಎಂದು ಆಡಳಿತ ಮೊಕ್ತೇಸರ ಸದಾನಂದ ಸಹಸ್ರಬುದ್ಧೆ ಸುಲ್ಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆಯಿಂದ ಕುರಿಯಾಡಿದಾರ್ ಮೂವರ್ ದೈವಂಗಳ ವನದ ಪುನರ್ ಪ್ರತಿಷ್ಠಾ ಬ್ರಹ್ಮಕಲಶ

ಮಂಗಳೂರು: ಇರಾ ಗ್ರಾಮದ ಕೆಂಜಿಲ ಶ್ರೀ ಅರಸು ಕುರಿಯಾಡಿದಾರ್ ಮೂವರ್ ದೈವಂಗಳ ವನದ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಮಾ.29 ಹಾಗೂ ಮಾ.30ರಂದು ನಡೆಯಲಿದೆ. ಮಾ.29ರಂದು ಬೆಳಗ್ಗೆ 9.30ಕ್ಕೆ ಹಸಿರುವಾಣಿ ಹೊರೆಕಾಣಿಕೆ ನಡೆಯಲಿದೆ. ಇರಾ ಶ್ರೀ ಸೋಮನಾಥೇಶ್ವರ ದೇವಸ್ಥಾನದಿಂದ ಹೊರೆಕಾಣಿಕೆಯು ದರ್ಖಾಸು, ಕಲ್ಲಾಡಿ, ಕುರಿಯಾಡಿ, ಕಂಚಿನಡ್ಕ ಪದವು, ಚಟ್ಟೆಕಲ್ಲು ರಸ್ತೆಯಾಗಿ ಕೆಂಜಿಲ ತಲುಪಲಿದೆ. ಸಂಜೆ 5ಕ್ಕೆ ತಂತ್ರಿಗಳ ಆಗಮನ, ಪೂರ್ಣ ಕುಂಭ ಸ್ವಾಗತ, ಪ್ರಾರ್ಥನೆ, ಪುಣ್ಯಾಹ ವಾಚನ, ಸ್ಥಳಶುದ್ಧಿ, ಪ್ರಸಾದ ಶುದ್ಧಿ, ರಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಬಲಿ, ಪ್ರಾಕಾರ ಬಲಿ, ಶ್ರೀ ದೈವಂಗಳ ಪೀಠ ಅಧಿವಾಸ, ಕಲಶಾಧಿವಾಸ ಹೋಮ ನಡೆಯಲಿದೆ.ಮಾ.30ರಂದು ಬೆಳಿಗ್ಗೆ 8ಕ್ಕೆ ಗಣಹೋಮ, ಬೆಳಗ್ಗೆ 10.01ರಿಂದ 11.10ರ ಒಳಗೆ ಒದಗುವ ವೃಷಭ ಲಗ್ನದಲ್ಲಿ ಶ್ರೀ ದೈವಂಗಳ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ, ತಂಬಿಲ ಸೇವೆ ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ನಂತರ ಅನ್ನಸಂತರ್ಪಣೆ ನಡೆಯ ಲಿದೆ. ಸಂಜೆ 6.15ಕ್ಕೆ ಶ್ರೀ ಕಟೀಲು ಮೇಳದ ದೇವರ ಚೌಕಿ ಪೂಜೆ ಆಗಿ ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಬಯಲಾಟ ಪ್ರದರ್ಶನವಾಗಲಿದೆ. ರಾತ್ರಿ 7.30ರಿಂದ ಅನ್ನಸಂತರ್ಪಣೆ ಇರಲಿದೆ ಎಂದು ಕ್ಷೇತ್ರ ಪ್ರಕಟಣೆ ತಿಳಿಸಿದೆ.

ಮಾ.31: ಮಂಗಳೂರು ವಿವಿ ಶೈಕ್ಷಣಿಕ ಮಂಡಳಿ ಸಭೆ

ಮಂಗಳೂರು: ಮಂಗಳೂರು ವಿವಿ ಶೈಕ್ಷಣಿಕ ಮಂಡಳಿ 2025–2026ನೇ ಸಾಲಿನ ಚತುರ್ಥ ಸಾಮಾನ್ಯ ಸಭೆ ಮಾ. 30 ರ ಬದಲಿಗೆ ಮಾ. 31ರಂದು ಬೆಳಿಗ್ಗೆ 11 ಗಂಟೆಗೆ ಮಂಗಳಗಂಗೋತ್ರಿಯ ಆಡಳಿತ ಸೌಧದ ರಾಣಿ ಅಬ್ಬಕ್ಕ ಸಭಾಂಗಣದಲ್ಲಿ ಮರುನಿಗದಿ ಪಡಿಸಲಾಗಿದೆ ಎಂದು ಕುಲಸಚಿವರ ಪ್ರಕಟಣೆ ತಿಳಿಸಿದೆ.

ಮಾ.30: ಭಗವಾನ್ ಮಹಾವೀರ ಜಯಂತಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದಕ್ಷಿಣ ಕನ್ನಡ ಜಿಲ್ಲೆ, ಜೈನ್ ಸೊಸೈಟಿ, ಮಂಗಳೂರು ಇವರ ಸಹಕಾರದೊಂದಿಗೆ ಭಗವಾನ್ ಮಹಾವೀರ ಜಯಂತಿ ಮಾ.30 ರಂದು ಬೆಳಿಗ್ಗೆ 11.30 ಗಂಟೆಗೆ ನಗರದ ಬಜಿಲಕೇರಿ ಶ್ರೀ ಆದೀಶ್ವರ ಸ್ವಾಮಿ ಜೈನ ಬಸದಿಯಲ್ಲಿ ನಡೆಯಲಿದೆ. ವಿಧಾನ ಸಭೆ ಸ್ಪೀಕರ್ ಯು.ಟಿ ಖಾದರ್ ಘನ ಉಪಸ್ಥಿತಿಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಡಿ.ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೂಡಬಿದಿರೆ ಜೈನ್ ಪ.ಪ.ಕಾಲೇಜಿನ ಪ್ರಾಂಶುಪಾಲ ಪ್ರಭಾತ್ ಬಲ್ನಾಡ್ ಜಯಂತಿ ಸಂದೇಶ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ.ಕ.ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆ

ಶಾಲೆಗಳಲ್ಲಿ ಕನ್ನಡ ಭಾಷೆ ಕಲಿಸುವ ಶಿಕ್ಷಕರ ಕೊರತೆ: ಪುನರೂರು ಖೇದ



ಬಂಟ್ವಾಳ: ಶಾಲೆಗಳಲ್ಲಿ ಕನ್ನಡ ಭಾಷೆ ಕಲಿಸುವ ಶಿಕ್ಷಕರ ಕೊರತೆಯಿಂದಾಗಿ ಕನ್ನಡ ಶಾಲೆಗಳು ಮುಚ್ಚುವ ಸ್ಥಿತಿಯಲ್ಲಿದೆ, ಸರಕಾರದ ಈ ಧೋರಣೆ ಯಿಂದ ಕನ್ನಡವನ್ನು ಉಳಿಸಿ,ಬೆಳೆಸಲು ಅಸಾಧ್ಯವಾಗಿದೆ. ಯಾವ ಮಾಧ್ಯಮದಲ್ಲಿ ಮಕ್ಕಳು ಕಲಿತರೂ ಕನ್ನಡ–ತುಳು ಕಲಿಸುವ ಜವಾಬ್ದಾರಿ ಮಕ್ಕಳ ಪೋಷಕರಿಗಿದೆ ಎಂದು ರಾಜ್ಯ ಕಸಾಪ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ಹೇಳಿದ್ದಾರೆ.

ಬಿ.ಸಿ.ರೋಡಿನ ಸ್ಪರ್ಶಾ ಕಲಾಮಂದಿರದ ಪಂಜೆ ಮಂಗೇಶರಾಯ ಸಭಾಂಗಣ, ರಾಣಿ ಅಬ್ಬಕ್ಕ ವೇದಿಕೆಯಲ್ಲಿ ಶುಕ್ರವಾರ ಬೆಳಿಗ್ಗೆ ದ.ಕ. ಜಿಲ್ಲಾ 28 ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ದೀಪಬೆಳಗಿಸಿ,ಹಿಂಗಾರ ಅರಳಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಸಮ್ಮೇಳನದ ನಿ.ಪೂ. ಅಧ್ಯಕ್ಷರಾಗಿದ್ದ ಡಾ.ಪ್ರಭಾಕರ ಶಿಶಿಲ ಸಮ್ಮೇಳನದ ಸರ್ವಾಧ್ಯಕ್ಷ ಹಿರಿಯ ಸಾಹಿತಿ, ಪತ್ರಕರ್ತ ಚಿದಂಬರ್ ಬೈಕಂಪಾಡಿ ಅವರಿಗೆ ಕನ್ನಡದ ಧ್ವಜ ಹಸ್ತಾಂತರಿಸಿ ಮಾತನಾಡಿ, ಮಾನವ ಹಕ್ಕುಗಳನ್ನು ಉಳಿಸುವುದರ ಜೊತೆಗೆ ಸ್ವಸ್ಥ ಸಮಾಜ ಕಟ್ಟುವುದು ಸಾಹಿತ್ಯದ ಉದ್ದೇಶ ವಾಗಿದೆ. ಸಮ್ಮೇಳನದಲ್ಲಿ ಎಷ್ಟು ಪುಸ್ತಕ ಖರ್ಚಾಗಿದೆ ಎನ್ನುವುದು ಸಾಹಿತ್ಯದ ಯಶಸ್ಸಾಗಿದೆ ಎಂದರು.

ಇದೇ ವೇಳೆ ಸಂಸ್ಕಾರ ಭಾರತಿಯ ಉಪಾಧ್ಯಕ್ಷ ಅನಿಲ್ ಪಂಡಿತ್ ಅವರು ಸಾಂಕೇತಿಕವಾಗಿ 'ಸ್ಮರಣ ಸಂಚಿಕೆ' ಬಿಡುಗಡೆಗೊಳಿಸಿ ಮಾತನಾಡಿ, ಪ್ರತಿಯೋರ್ವರಲ್ಲು ಸಾಹಿತ್ಯದ ಒಲವಿದ್ದು,ಇತ್ತೀಚಿಗಿನ ದಿನಗಳಲ್ಲಿ ಸಾಹಿತ್ಯಾಭಿಮಾನಿಗಳು ಹೆಚ್ಚುತ್ತಿರುವುದು ಅಭಿನಂದನೀಯ ಎಂದರು.

ಪುತ್ತೂರು ಮಾಜಿ ಶಾಸಕಿ ಶಕುಂತಳಾ ಶೆಟ್ಟಿ,ಜಿಲ್ಲಾ ಕಸಾಪ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ ಅವರು ಮಾತನಾಡಿ ಶುಭಹಾರೈಸಿದರು. ಬಂಟ್ವಾಳ ತಾಲೂಕು ಕಸಾಪ ಅಧ್ಯಕ್ಷ ವಿಶ್ವನಾಥ ಬಂಟ್ವಾಳ, ಗೇರು ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಡಿ.ಎಸ್.,ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಮಾಲತಿ,ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಾಜೇಶ್, ಜಿಲ್ಲಾ ವಾರ್ತಾಧಿಕಾರಿ ಖಾದರ್ ಷಾ, ಯುಗಪುರುಷ ಕಿನ್ನಿಗೋಳಿಯ ಭುವನಾಭಿರಾಮ ಉಡುಪ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಂಟ್ವಾಳ ತಾಲೂಕು ಯೋಜನಾಧಿಕಾರಿ ಜಯಾನಂದ ಪಿ.,ಜ್ಯೋತಿಷಿ ಚೈತನ್ಯ ಕಲ್ಯಾಣತ್ತಾಯ,ವಿವಿಧ ತಾಲೂಕು ಕಸಾಪ ಅಧ್ಯಕ್ಷರಾದ ಚಂದ್ರಶೇಖರ ಪೇರಾಲು, ಡಿ.ಯದುಪತಿ ಗೌಡ,ಮಂಜುನಾಥ ಎಸ್.ರೇವಣ್ಕರ್, ಕೆ.ಸೇಸಪ್ಪ ರೈ, ಪುತ್ತೂರು ಉಮೇಶ್ ನಾಯ್ಕ್,ಧನಂಜಯ ಕುಂಬ್ಳೆ ಮಿಥುನ್ ಉಡುಪ ಮೂಲ್ಕಿ, ಸಮ್ಮೇಳನ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಪಿಯೂಸ್ ಎಲ್ ರಾಡ್ರಿಗಸ್, ಪ್ರ. ಕಾರ್ಯದರ್ಶಿ ಅಬೂಬಕ್ಕರ್ ಅಮ್ಮುಂಜೆ, ಕಾರ್ಯದರ್ಶಿಗಳಾದ ದೇವಪ್ಪ ಕುಲಾಲ್,ರಾಮದಾಸ್ ಬಂಟ್ವಾಳ, ಕೋಶಾಧಿಕಾರಿ ಸುಭಾಶ್ಚಂದ್ರ ಜೈನ್, ಜಿಲ್ಲಾಕಸಾಪ ಗೌರವ ಕಾರ್ಯದರ್ಶಿ ರಾಜೇಶ್ವರಿ ಎಂ., ನ್ಯಾಯವಾದಿ ವೈ.ಉಮೇಶ್ ಕುಮಾರ್, ಪೂವಪ್ಪ ನೇರಳಕಟ್ಟೆ ವೇದಿಕೆಯಲ್ಲಿದ್ದರು.

ಧ್ವಜಾರೋಹಣ

ಇದಕ್ಕಮುನ್ನ ಬಂಟ್ವಾಳ ತಹಶೀಲ್ದಾರ್ ಜಿ.ಮಂಜುನಾಥ್ ಅವರು ರಾಷ್ಟ್ರಧ್ವಜಾರೋಹಣಗೈದು ಶುಭಹಾರೈಸಿದರು. ಬಂಟ್ವಾಳ ತಾಲೂಕು ಕಸಾಪ ಅಧ್ಯಕ್ಷ ವಿಶ್ವನಾಥ ಬಂಟ್ವಾಳ ಅವರು ಸಮ್ಮೇಳನದ ಧ್ವಜಾರೋಹಣಗೈದರು. ದ.ಕ.ಜಿಲ್ಲಾ ಕಸಾಪ ಅಧ್ಯಕ್ಷ ಡಾ ಎಂ.ಪಿ. ಶ್ರೀನಾಥ್ ಅವರು ಪರಿಷತ್ತಿನ ಧ್ವಜಾರೋಹಣಗೈದು ಆಶಯದ ಮಾತುಗಳನ್ನಾಡಿದರು. ಸ್ವಾಗತ ಸಮಿತಿ ಅಧ್ಯಕ್ಷ ಬಿ. ರಘುನಾಥ ಸೋಮಯಾಜಿ ಎರಕಳ ಸ್ವಾಗತಿಸಿ, ಜಿಲ್ಲಾಕಸಾಪ ಗೌರವ ಕಾರ್ಯದರ್ಶಿ ಎಚ್. ವಿನಯ ಆಚಾರ್ಯ ವಂದಿಸಿದರು. ಉಪನ್ಯಾಸಕ ಡಾ. ಯೋಗೀಶ್ ಕೈರೋಡಿ ನಿರೂಪಿಸಿದರು.

> **ಕನಡಭಾಷೆ ಉಳಿಸಿ, ಬೆಳೆಸುವ ಕಾರ್ಯವಾಗಲಿ**
>
> ಕನ್ನಡವನ್ನು ಉಳಿಸುವ ಜವಾಬ್ದಾರಿ ನಮಗೆಲ್ಲರಿಗೂ ಇದ್ದು ನಾವೇ ಕನ್ನಡ ಕಲಿಸುವ ಮೂಲಕ ಕನ್ನಡಭಾಷೆ ಉಳಿಸಿ, ಬೆಳೆಸುವ ಕಾರ್ಯ ಮಾಡಬೇಕು.
>
> ● ಹರಿಕೃಷ್ಣ ಪುನರೂರು, ಕಸಾಪ ಮಾಜಿ ಅಧ್ಯಕ್ಷ

ಸಂದೇಶ ವಾಚನ

28ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಧರ್ಮಸ್ಥಳದ ಧರ್ಮಾಧಿಕಾರಿ, ರಾಜ್ಯ ಸಭಾ ಸದಸ್ಯ ಡಾ.ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಬೇಕಾಗಿತ್ತು. ಆದರೆ ಅವರು ಕಾರಣಾಂತರದಿಂದ ಅನುಪಸ್ಥಿತರಿದ್ದು ಅವರು ಸಮ್ಮೇಳನಕ್ಕೆ ಶುಭಕೋರಿ ಕಳುಹಿಸಿದ್ದ ಸಂದೇಶವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ದಿನೇಶ್ ಡಿ.ವಾಚಿಸಿದರು. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ವಿದ್ಯಾರ್ಥಿಗಳು ವಂದೇಮಾತರಂ,ನಾಡಗೀತೆ, ರೈತಗೀತೆಯನ್ನು ಹಾಡಿದರು.

ಈ ಸಂದರ್ಭದಲ್ಲಿ ಪುಸ್ತಕ ಮತ್ತು ಇತರೆ ಮಳಿಗೆಯನ್ನು ಹಾಗೂ ವಸ್ತು ಪ್ರದರ್ಶನವನ್ನು ಉದ್ಘಾಟಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ಸಮ್ಮೇಳನ ಉದ್ಘಾಟನೆಗೆ ಮುನ್ನ ಬೆಳಿಗ್ಗೆ ರಾಜೇಶ್ ಪೊಳಲಿ ಮತ್ತವರ ತಂಡದಿಮನದ ವಾದ್ಯ ಸಂಗೀತ ಮಧ್ಯಾಹ್ನ ಬೆಂಜನಪದವು ಕೆನರಾ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳ 'ಸಾಂಸ್ಕೃತಿಕ ವೈಭವ' ಸಾಹಿತಿಗಳ ಮತ್ತು ಸಾಹಿತ್ಯಾಸಕ್ತರ ವಿಶೇಷ ಗಮನಸೆಳೆಯಿತು.

ಹರಟೆಕಟ್ಟೆ

ಸಮ್ಮೇಳನ ವೇದಿಕೆಯ ಪಕ್ಕದಲ್ಲಿ ಯುವ ಸಾಹಿತಿಗಳು,ಕಲಾವಿದರು ಸಹಿತ ಸಾಹಿತ್ಯಾಭಿಮಾನಿಗಳಿಗೆ ಹರಟೆಕಟ್ಟೆ ಹೆಸರಿನಲ್ಲಿ ವಿಶೇಷವಾದ ವೇದಿಕೆ ಕಲ್ಪಿಸಲಾಯಿತು. ಹಿರಿಯ ಯಕ್ಷಗಾನ ಕಲಾವಿದ ಸರಪಾಡಿ ಅಶೋಕ್ ಶೆಟ್ಟಿ ಅವರು ಹರಟೆಕಟ್ಟೆಯನ್ನು ಉದ್ಘಾಟಿಸಿ ಮಾತನಾಡಿ, ಯುವ ಪ್ರತಿಭೆ,ಸಾಹಿತಿಗಳು,ಕಲಾವಿದರಿಗೆ ಭವಿಷ್ಯದಲ್ಲಿ ಉತ್ತಮ ಸಾಧಕರನ್ನಾಗಿಸುವ ನಿಟ್ಟಿನಲ್ಲಿ ಈ ವೇದಿಕೆ ಕಲ್ಪಿಸಲಾಗಿದೆ ಎಂದರು.

ಸಿದ್ದಕಟ್ಟೆ ಸಿ.ಎ.ಬ್ಯಾಂಕ್ ಅಧ್ಯಕ್ಷ ಪ್ರಭಾಕರ ಪ್ರಭು, ಮುಲ್ಕಿ ಕಸಾಪ ಅಧ್ಯಕ್ಷ ಮಿಥುನ್ ಉಡುಪ, ಸಮ್ಮೇಳನ ಸ್ವಾಗತ ಸಮಿತಿ ಪ್ರ.ಕಾರ್ಯದರ್ಶಿ ಅಬೂಬಕ್ಕರ್ ಅಮ್ಮುಂಜೆ, ಬಿ.ಎಸ್. ಹಸನಬ್ಬ ಅಮ್ಮೆಂಬಳ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳೇ ಸ್ವಯಂಸೇವಕರು

ಸಮ್ಮೇಳನದಲ್ಲಿ ಬಂಟ್ವಾಳ ಜಿಪಿಟಿ (ಕರ್ನಾಟಕ ಪೊಲಿಟೆಕ್ನಿಕ್ ಬಂಟ್ವಾಳ)ಯ ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿ ಗಮನಸೆಳೆದರು. ಊಟ ಬಡಿಸುವುದು ಸಹಿತ ವಿವಿಧ ಉಪಚಾರಗಳಲ್ಲಿ ಶಿಸ್ತುಬದ್ಧವಾಗಿ ಕಾರ್ಯನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಸ್ಥಳೀಯ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಾಹಿತ್ಯ ಭಾಷೆಗಷ್ಟೇ ಸೀಮಿತವಾಗಬಾರದು: ಚಿದಂಬರ



ಬಂಟ್ವಾಳ: ಸಾಹಿತ್ಯ ನಿಂತ ನೀರಾಗಬಾರದು, ಚಲನೆ ಶೀಲತೆಯನ್ನು ಮೈಗೂಡಿಸಿಕೊಂಡು ಬೆಳೆಯಬೇಕು. ಸಾಹಿತ್ಯ ಜಾತಿ, ಮತ, ಧರ್ಮವನ್ನು ಮೀರಿದ್ದು, ಸಾಹಿತ್ಯ ಭಾಷೆಗಷ್ಟೇ ಸೀಮಿತವಾಗಬಾರದು, ಅದು ಬದುಕನ್ನು ರೂಪಿಸುವ, ಚಲನ ಶೀಲತೆಯನ್ನು ಮೈಗೂಡಿಸಿಕೊಂಡು ಸಮಾಜವನ್ನು ಕಟ್ಟುವ ಕೆಲಸವನ್ನು ಮಾಡಬೇಕು. ಸಾಹಿತ್ಯದಿಂದ ಜಾತಿ, ಭಾಷೆ, ಧರ್ಮವನ್ನು ಮೀರಿದ ಹೊಸ ಲೋಕದ ಸೃಷ್ಟಿಯಾಗಬೇಕು ಎಂದು ಹಿರಿಯ ಪತ್ರಕರ್ತ, 24ನೇ ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಚಿದಂಬರ ಬೈಕಂಪಾಡಿ ಹೇಳಿದ್ದಾರೆ.

ಬಿ.ಸಿ.ರೋಡಿನ ಸ್ಪರ್ಶಾ ಕಲಾಮಂದಿರದ ಪಂಜೆ ಮಂಗೇಶ 'ರಾಯ ಸಭಾಂಗಣ, ರಾಣಿ ಅಬ್ಬಕ್ಕ ವೇದಿಕೆಯಲ್ಲಿ ಶುಕ್ರವಾರ ಬೆಳಿಗ್ಗೆ ಆರಂಭಗೊಂಡ 24ನೇ ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಮ್ಮ ಮಾತೃಭಾಷೆ ತುಳು. ತುಳು ಭಾಷೆಯ ಮೇಲೆ ಕನ್ನಡವನ್ನು ಹೇರಿಕೆ ಮಾಡಲಾಗುತ್ತಿದೆ ಎನ್ನುವ ವಾದವನ್ನು ಒಪ್ಪಲು ಸಾಧ್ಯವಿಲ್ಲ, ತುಳು, ಕೊಂಕಣಿ, ಬ್ಯಾರಿ, ಅರೆಕನ್ನಡ ಭಾಷೆಗಳೊಂದಿಗೆ ಕನ್ನಡವನ್ನೂ ನಾವು ಅಪಾರವಾಗಿ ಪ್ರೀತಿಸುತ್ತೇವೆ. ತುಳುವರಾಗಿ ಸ್ವಚ್ಛಂಧವಾಗಿ ಕನ್ನಡವನ್ನೂ ಆಡುತ್ತೇವೆ ಎಂದು ತಿಳಿಸಿದರು.

ಸಾಹಿತ್ಯ ಜನಪರ, ಸಮಾಜಮುಖಿ, ಸಮುದಾಯದ ಶಾಂತಿ, ಸಹಿಷ್ಣತೆ,ಸಾಮರಸ್ಯವನ್ನು ಜೋಡಿಸುವ ಹಾಗೂ ಮತ್ತಷ್ಟು ಬೆಳೆಸುವಂತಿರಬೇಕು ಎಂದ ಅವರು ಆಧುನಿಕ ಕಾಲದಲ್ಲಿ ತಂತ್ರಜ್ಞಾನದೊಂದಿಗೆ ಸಾಹಿತ್ಯವನ್ನು ಒಳಪಡಿಸುವ ನಿಟ್ಟಿನಲ್ಲಿ ಚಿಂತಿಸಬೇಕಾಗಿದೆ ಎಂದರು.

ಸಾಹಿತ್ಯ ಸಮ್ಮೇಳನಗಳಿಗೆ ಒತ್ತಾಯಪೂರ್ವಕವಾಗಿ ಶಿಕ್ಷಕರು, ವಿದ್ಯಾರ್ಥಿಗಳನ್ನು ಕರತರುವುದನ್ನು ನಿಲ್ಲಿಸಬೇಕು,ಅವರೇ ಸ್ವಯಂಪ್ರೇರಿತವಾಗಿ ಭಾಗವಹಿಸುವ ನಿಟ್ಟಿನಲ್ಲಿ ಚಿಂತಿಸುವ ಅಗತ್ಯವಿದೆ ಎಂದರು.

ತಂತ್ರಜ್ಞಾನ, ಸಾಹಿತ್ಯ, ಸಹಬಾಳ್ವೆ ಸಮ್ಮೇಳನದ ಆಶಯವಾಗಿರುವುದು ಅಭಿನಂದನೀಯವಾಗಿದೆ. ಆಧುನಿಕ ಕಾಲದಲ್ಲಿ ತಂತ್ರಜ್ಞಾನವಿಲ್ಲದ ಬದುಕು ಅಸಾಧ್ಯೆಂಬಷ್ಟರಮಟ್ಟಿಗೆ ಮುಂದುವರಿದಿದ್ದು,ಈ ವ್ಯವಸ್ಥೆಯೊಂದಿಗೆ ಸಾಹಿತ್ಯವನ್ನು ಉಳಿಸುವ ಮತ್ತು ಬೆಳೆಸುವ ಕೆಲಸ ಆಗಬೇಕಾಗಿದೆ ಎಂದರು.

ಪೀಠ ಸ್ಥಾಪನೆಯಾಗಲಿ

ಸ್ವಾತಂತ್ರ್ಯ ಹೋರಾಟಗಾರ ಅಮ್ಮೆಂಬಳ ಬಾಳಪ್ಪರ ಹೆಸರು ಚಿರಸ್ಥಾಯಿಯಾಗಿಸುವ ಕೆಲಸ ಆಗಬೇಕು, ಬಂಟ್ವಾಳದಲ್ಲಿ ಸರ್ವಜ್ಞ ಪೀಠ ಸ್ಥಾಪಿಸುವ ಬಗ್ಗೆಯೂ ಪ್ರಯತ್ನ ನಡೆಯಬೇಕು ಎಂದು ಅವರು ಈ ಸಂದರ್ಭ ಆಗ್ರಹಿಸಿದರು.

ಪತ್ರಕರ್ತ ಸಂದೀಪ್ ಸಾಲಿಯಾನ್ ಸಮ್ಮೇಳನಾಧ್ಯಕ್ಷ ಚಿದಂಬರ ಬೈಕಂಪಾಡಿಯವರನ್ನು ಸಭೆಗೆ ಪರಿಚಯಿಸಿದರು.

ಗೈರು...

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಬೇಕಾಗಿದ್ದ ಎಲ್ಲಾ ಜನಪ್ರತಿನಿಧಿಗಳು ಗೈರು ಹಾಜರಾಗಿದ್ದರು. ಸ್ಮರಣಸಂಚಿಕೆ ಬಿಡುಗಡೆಗೊಳಿಸಬೇಕಾದ ಕರ್ನಾಟಕ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಬೇಕಾಗಿದ್ದ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ವಸ್ತು ಪ್ರದರ್ಶನ, ಪುಸ್ತಕ ಮಳಿಗೆ ಉದ್ಘಾಟಿಸಬೇಕಾಗಿದ್ದ ಕ್ರಮವಾಗಿ ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕ ರಾಜೇಶ್ ನ್ಯಾಕ್ ಹಾಗೂ ಗೌರವ ಉಪಸ್ಥಿತರಿರಬೇಕಾದ ಮಾಜಿ ಸಚಿವ ರಮಾನಾಥ ರೈ, ಜಿಲ್ಲಾಧಿಕಾರಿ ದರ್ಶನ್ ವಿ.ಎಚ್.,ಜಿ.ಪಂ.ಸಿಇಒ ನರ್ವಡೆ ವಿನಾಯಕ್ ಕೂರ್ಬಾರಿ ಅವರು ಸಮ್ಮೇಳನದಲ್ಲಿ ಗೈರು ಹಾಜರಾಗಿದ್ದರು.

ದ.ಕ.ಜಿಲ್ಲೆಯ ಭಾಷಾ ಸಾಮರಸ್ಯ

ಉದ್ಘಾಟನಾ ಸಮಾರಂಭದ ಬಳಿಕ ಮೊದಲ ಗೋಷ್ಠಿ ದ.ಕ. ಜಿಲ್ಲೆಯ ಭಾಷಾ ಸಾಮರಸ್ಯ ಎಂಬ ವಿಷಯದ ಬಗ್ಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರನಾಥ ಗಟ್ಟಿ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರಿಸ್,ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯ ಉಮ್ಮರ್ ಯು.ಎಚ್ ,ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತಸಾಹಿತ್ಯ ಅಕಾಡೆಮಿ ಸದಸ್ಯ ಚಂದ್ರಹಾಸ್ ಅವರು ವಿಚಾರ ಮಂಡಿಸಿದರು.ಸಮ್ಮೇಳನಾಧ್ಯಕ್ಷ ಚಿದಂಬರ ಬೈಕಂಪಾಡಿ ಅಧ್ಯಕ್ಷತೆ ವಹಿಸಿದ್ದರು.ದ.ಕ.ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಶ್ರೀನಾಥ್ ಎಂ.ಇ.ಅವರು ಸಮನ್ವಯಕಾರರಾಗಿ ಮಾತನಾಡಿದರು. ಕಾವೂರು ವ್ಯ.ಸೇ.ಸ.ಬ್ಯಾಂಕ್ ಅಧ್ಯಕ್ಷ ಲೋಕೇಶ್ ಭಂಡಾರಿ ಅಮ್ಮುಂಜೆಗುತ್ತು, ಪುತ್ತೂರು ತಾಲೂಕು ಕಸಾಪ ಧ್ಯಕ್ಷ ಪುತ್ತೂರು ಉಮೇಶ್ ನಾಯಕ್,ಸಮ್ಮೇಳನ ಸ್ವಾಗತ ಸಮಿತಿ ಕೋಶಾಧಿಕಾರಿ ಸುಭಾಶ್ಚಂದ್ರ ಜೈನ್ ಉಪಸ್ಥಿತರಿದ್ದರು. ಬಂಟ್ವಾಳ ಕಸಾಪ ಗೌರವ ಕಾರ್ಯದರ್ಶಿ ರಮಾನಂದ ನೂಜಿಪ್ಪಾಡಿ ನಿರೂಪಿಸಿದರು.

> **ಸನ್ಮಾನಕ್ಕೆ ಅರ್ಜಿ ಹಾಕುವುದು ನಾಚಿಕೆಗೇಡಿತನ**
>
> ಪ್ರಶಸ್ತಿ, ಸನ್ಮಾನಕ್ಕಾಗಿ ಅರ್ಜಿ ಹಾಕುವುದು, ಶಿಫಾರಸ್ಸು ಮಾಡುವುದು ನಾಚಿಕೆಗೇಡಿನ ವಿಚಾರ.ಈ ಬೆಳವಣಿಗೆಗೆ ಇತ್ತೀಚಿಗಿನ ದಿನಗಳಲ್ಲಿ ಅತೀಯಾಗಿ ಕಂಡುಬರುತ್ತಿದೆ. ಯಾವುದೇ ಶಿಫಾರಸ್ಸು, ಅರ್ಜಿ ಇಲ್ಲದೆ ಪ್ರಶಸ್ತಿ ಸನ್ಮಾನದಂತಹ ಗೌರವ ಸಿಕ್ಕರೆ ಪ್ರಶಸ್ತಿಯ ತೂಕ ಹೆಚ್ಚುತ್ತದೆ, ಗೌರವವೂ ಮೂಡುತ್ತದೆ ಈ ದೆಸೆಯಲ್ಲಿ ಸರಕಾರವು ಗಂಭೀರ ಚಿಂತನೆ ನಡೆಸಬೇಕು, ಜಿಲ್ಲಾಮಟ್ಟದಲ್ಲು ಇದು ಅನ್ವಯವಾಗಬೇಕು.
>
> ● ಚಿದಂಬರ್ ಬೈಕಂಪಾಡಿ , ಸಮ್ಮೇಳನಾಧ್ಯಕ್ಷ

ಕನ್ನಡ ಪುಸ್ತಕಗಳು ಯಾವತ್ತಿಗೂ ಪ್ರಸ್ತುತ: ವಿಶ್ರಾಂತ ಕುಲಪತಿ ಡಾ.ಚಿನ್ನಪ್ಪ ಗೌಡ

ಬಂಟ್ವಾಳ: ಲೇಖಕರಿಗೆ ತಮ್ಮ ಕೃತಿ ಪ್ರಕಟವಾದಾಗ ಆತ್ಮಸಂತೃಪ್ತಿ ಸಿಗುತ್ತದೆ. ಪುಸ್ತಕ ಬದುಕಿಗೆ ಕಾರಣಕರ್ತರಾದ ಲೇಖಕರು, ಪ್ರಕಾಶಕರು, ಓದುಗರು ಮುಖ್ಯವಾಗಿದ್ದು ಕನ್ನಡ ಪುಸ್ತಕಗಳು ಯಾವತ್ತಿಗೂ ಪ್ರಸ್ತುತವೇ ಆಗಿರುತ್ತವೆ ಎಂದು ವಿಶ್ರಾಂತ ಕುಲಪತಿ ಪ್ರೊ. ಕೆ. ಚಿನ್ನಪ್ಪ ಗೌಡ ಹೇಳಿದ್ದಾರೆ.

ಬಿ.ಸಿ.ರೋಡಿನ ಸ್ಪರ್ಶಾ ಕಲಾ ಮಂದಿರದಲ್ಲಿ ಶುಕ್ರವಾರ ಮೊದಲ ದಿನ ದ.ಕ. ಜಿಲ್ಲಾ 28ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನೂತನ ಕೃತಿಗಳ ಲೋಕಾರ್ಪಣೆಗೈದು ಅವರು ಮಾತನಾಡಿದರು.

ಸಮ್ಮೇಳನಾಧ್ಯಕ್ಷ ಚಿದಂಬರ ಬೈಕಂಪಾಡಿ , ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಡಾ. ಎಂ. ಪಿ. ಶ್ರೀನಾಥ್, ವಿಜಯಲಕ್ಷ್ಮೀ ಶೆಟ್ಟಿ ಕಲ್ಲೂರು ನಾಗೇಶ್ ಮಂಗಳೂರು, ಡಾ.ಧನಂಜಯ ಕುಂಬ್ಳೆ ಉಳ್ಳಾಲ ಮೊದಲಾದವರು ಉಪಸ್ಥಿತರಿದ್ದರು.

ವಿಧಾನ ಪರಿಷತ್ ಸದಸ್ಯ ಪ್ರತಾಪ್‌ಸಿಂಹ ನಾಯಕಭ ಭಾಗವಹಿಸಿ ಶುಭಹಾರೈಸಿದರು. ಗೀತಾ ಕೊಂಕೋಡಿ, ರಜನಿ ಚಿಕ್ಕಯ್ಯಮಠ ನಿರೂಪಿಸಿ,ವಂದಿಸಿದರು.

ಡಿ.ವಿ.ಜಿ. ಯವರ ಕಗ್ಗ ರಸಧಾರೆ

ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ಪ್ರದೀಪ್ ಆಟಿಕುಕ್ಕೆ ನಾವೂರು ಅವರು ಡಿವಿಜಿಯವರ ಮಂಕುತಿಮ್ಮನ ಕಗ್ಗದ ಕಗ್ಗಗಳನ್ನು ಉದಾಹರಿಸಿ ಹಲವು ರಸವತ್ತಾದ ಭಾಗಗಳನ್ನು ವಿಮರ್ಶಿಸಿದರು. ಸರಪಾಡಿ ಅಶೋಕ ಶೆಟ್ಟಿ ತುಳಸಿ ಪುರಂದರ ಇರಾ ಉಪಸ್ಥಿತರಿದ್ದರು. ಅಬ್ದುಲ್ ಮಜೀದ್ ಎಸ್ ನಿರೂಪಿಸಿದರು.



ದ.ಕ. ಜಿಲ್ಲೆಯ ಸಾಹಿತ್ಯ ಸಂಸ್ಕೃತಿ

ದ.ಕ. ಜಿಲ್ಲೆಯ ಸಾಹಿತ್ಯ ಸ್ಥಿತ್ಯಂತರಗಳು ಕುರಿತು ಸುಳ್ಯ ನೆಹರು ಮೆಮೋರಿಯಲ್ ಕಾಲೇಜಿನ ಪ್ರಾಧ್ಯಾಪಕಿ ಡಾ. ಅನುರಾಧ ಕುರುಂಜಿ ಮತ್ತು ಮೊಯ್ಲಾಂಜಿ ಪತ್ರಿಕೆ ಪ್ರಧಾನ ಸಂಪಾದಕ ಕೆ.ಎಮ್ ಅಬೂಬಕ್ಕರ್ ಸಿದ್ದೀಕ್ ಮೊಂಟುಗೋಳಿ ಮಾತನಾಡಿದರು.

ಉಮೇಶ್ ಸಾಲ್ಯಾನ್ ಬೆಂಜನಪದಚವು , ಆನಂದ ಭಂಡಾರಿ ಹೊಸಬೆಟ್ಟು, ಡಿ. ಯದುಪತಿ ಗೌಡ ಬೆಳ್ತಂಗಡಿ ಉಪಸ್ಥಿತರಿದ್ದರು. ಜನಾರ್ದನ ಅಮ್ಮುಂಜೆ ಕಾರ್ಯಕ್ರಮ ನಿರೂಪಿಸಿದರು.

ಕವನವಾಚನ - ಗಾಯನ ಕುಂಚ

ರಾಜೇಶ್ರೀ ರೈ ಪೆರ್ಲ, ಡಾ. ಗೀತಾ ಎನ್. ನರಿಕೊಂಬು, ಕಿಶೋರ್ ಕುಮಾರ್ ರಾಮಕುಂಜ, ಮಮತಾ ರವೀಶ್ ಪಡ್ಡಂಬೈಲು ,ಅನಿತಾ ಶೆಟ್ಟಿ, ಸುಮಾ ಉಜಿರೆ, ಸೌದಾಮಿನಿ ಶೆಟ್ಟಿ ಎಳತ್ತೂರು, ಶ್ರೀಶ ವಾಸವಿ, ರವಿರಾಜ ಎಸ್. ಮಂಗಳೂರು, ಸ್ವರಚಿತ ಕವನ ವಾಚಿಸಿದರು.

ಕೆ.ಆರ್. ಗೋಪಾಲಕೃಷ್ಣ ಸುಳ್ಯ, ಭಾಗ್ಯಶ್ರೀ ಕಾಂಚನ, ಸ್ವರಸಂಯೋಜನೆ ಮಾಡಿ ಹಾಡಿದರು.

ಡಾ. ಜಯಪ್ರಕಾಶ್ ಮಂಗಳೂರು, ಭಾಸ್ಕರ ನೆಲ್ಯಾಡಿ ಮೂಡಬಿದಿರೆ, ಜಯಶ್ರೀ ಶರ್ಮ ಮಂಗಳೂರು, ಕುಂಚ ಹಿಡಿದು ಚಿತ್ರ ಬಿಡಿಸಿದರು. ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷ ಚಿದಂಬರ ಬೈಕಂಪಾಡಿ ಉಪಸ್ಥಿತರಿದ್ದು, ಎಚ್.ಕೆ ನಯನಾಡು ಕಾರ್ಯಕ್ರಮ ನಿರೂಪಿಸಿದರು.

ನುಡಿನಮನ

ಅಗಲಿದ ಗಣ್ಯರಿಗೆ ನಿವೃತ್ತ ಮುಖ್ಯೋಪಾಧ್ಯಾಯ ಮಹಾಬಲೇಶ್ವರ ಹೆಬ್ಬಾರ್ ನುಡಿನಮನ ಸಲ್ಲಿಸಿದರು. ಅಬ್ದುಲ್ ರಹಿಮಾನ್ ಡಿ.ಬಿ. ನಿರೂಪಿಸಿದರು.

> **12 ಕೃತಿಗಳ ಕೃತಿ ಬಿಡುಗಡೆ**
>
> ಸುಲೋಚನ ಪುತ್ತೂರು ಅವರ 'ಸಖಿ ವಚನ', ಉಮಾಶಂಕರಿ ಮರಿಕೆಯವರ 'ಅವಳ ಅಂತರಂಗ', ಜಯಪ್ರಕಾಶ್ ಪುತ್ತೂರುರವರ 'ವ್ಯಕಿತ್ವ ವಿಕಸನ ವಿಚಾರಧಾರೆ', ವಿಮಲಾರುಣ ಪಡ್ಡಂಬೈಲು ಅವರ 'ಗಿರಿಕರ್ಣಿಕೆ', ಎಂ. ಆಶೀರುದ್ದೀನ್ ಸಾರ್ತಬೈಲ್ ಅವರ 'ಪಾಸ', ನಾರಾಯಣ ನೀರಬಿದಿರೆ ಸುಳ್ಯ ಅವರ 'ಮೂರ್ನಾಟಕಗಳು ಮತ್ತು ಪ್ರಶ್ನೋತ್ತರಗಳು', ಅಕ್ಷತಾ ನೀರಬಿದ್ರೆಯವರ 'ಸಂಭಾಷಣೆ', ಆಕೃತಿ ಐ.ಎಸ್. ಭಟ್ ಅವರ 'ಸ್ಫೂರ್ತಿಯ ಸೆಲೆ', ಸಂಪ್ರೀತಾ ಎಸ್. ಶೆಟ್ಟಿಗಾರ್ ಅವರ 'ಅಂತರಾಳದ ಧ್ವನಿ', ಡಾ. ಟಿ.ಕೆ. ಕೃಷ್ಣಮೂರ್ತಿ ಉಜಿರೆ ರವರ 'ಪರಿವರ್ತನೆ ಮತ್ತು ಕಸ ಪುರಾಣ' ಕೃತಿಗಳನ್ನು ತೊಟ್ಟಿಲಿನಲ್ಲಿಟ್ಟು ಬಿಡುಗಡೆಗೊಳಿಸಲಾಯಿತು.

ಎಸ್‌ಡಿಎಂ ಕಾಲೇಜು: ಶೈಕ್ಷಣಿಕ ಸಾಂಸ್ಕೃತಿಕ ಉತ್ಸವ ಉದ್ಘಾಟನೆ

ಬೆಳ್ತಂಗಡಿ: ಪ್ರಚಲಿತ ಜನಜನಿತ ಸಿದ್ಧಸೂತ್ರಗಳಾಚೆಗೆ ಯೋಚಿಸಿ ಹೊಸ ಟ್ರೆಂಡ್ ಹುಟ್ಟುಹಾಕುವ ಪ್ರಯೋಗ ಶೀಲತೆಯ ಕಡೆಗೆ ಹೆಚ್ಚು ಆದ್ಯತೆ ನೀಡಿದಾಗ ವಿಭಿನ್ನವಾದ ವ್ಯಕ್ತಿಗತ ಪ್ರತಿಭಾನ್ವಿತ ಕಲಾತ್ಮಕತೆ ಸಾಧ್ಯವಾಗುತ್ತದೆ ಎಂದು ಅಂತರರಾಷ್ಟ್ರೀಯ ಖ್ಯಾತಿಯ ಸ್ಪೀಡ್ ಪೇಂಟಿಂಗ್ ಕಲಾವಿದ ವಿಲಾಸ್ ನಾಯಕ್ ಹೇಳಿದರು.

ಉಜಿರೆಯ ಎಸ್.ಡಿ.ಎಂ ಸ್ನಾತಕೋತ್ತರ ಕೇಂದ್ರವು ಝೇಂಕಾರ ಸೀಜನ್ 6ರ ಶೀರ್ಷಿಕೆಯಡಿ ಆಯೋಜಿಸಿದ ಎರಡು ದಿನಗಳ ರಾಷ್ಟ್ರಮಟ್ಟದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಉತ್ಸವವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಈ ಸಂದರ್ಭ ಅತ್ಯಂತ ಕಡಿಮೆ ಅವಧಿಯಲ್ಲಿ ಕ್ಷಿಪ್ರವಾಗಿ ಕರಾವಳಿಯ ಕಲಾತ್ಮಕತೆಯ ವಿನೂತನ ಅಸ್ಮಿತೆಯನ್ನು ಕಾಣಿಸುವ ಚಿತ್ರವಿನ್ಯಾಸವನ್ನು ಬಿಡಿಸಿ ವಿಲಾಸ್ ನಾಯಕ್ ಗಮನ ಸೆಳೆದರು.



ಝೇಂಕಾರದ ಟ್ರೋಫಿಗಳನ್ನು ಅನಾವರಣಗೊಳಿಸಿ ಎಸ್.ಡಿ.ಎಂ ಎಜ್ಯುಕೇಷನಲ್ ಸೊಸೈಟಿಯ ಕಾರ್ಯದರ್ಶಿ ಡಾ.ಸತೀಶ್ಚಂದ್ರ ಎಸ್. , ಸ್ಪರ್ಧಾತ್ಮಕ ಉತ್ಸವಗಳು ಕಲಾತ್ಮಕ ಅಭಿವ್ಯಕ್ತಿಗೆ ಅವಕಾಶ ಒದಗಿಸುವ ವೇದಿಕೆಗಳಷ್ಟೇ ಅಲ್ಲ, ವಿವಿಧ ಕ್ಷೇತ್ರಗಳು ನಿರೀಕ್ಷಿ ಸುವ ನಾಯಕತ್ವದ ಗುಣಗಳ ರೂಪಿಸಿಕೊಳ್ಳಲೂ ಪೂರಕವಾಗುತ್ತವೆ ಎಂದರು.

ಅಧ್ಯಕ್ಷತೆ ವಹಿಸಿ ಎಸ್.ಡಿ.ಎಂ ಕಾಲೇಜಿನ ಪ್ರಾಚಾರ್ಯ ಪ್ರೊ.ವಿಶ್ವನಾಥ ಪಿ. ಅವರು ಕೃತಕ ಬುದ್ಧಿಮತ್ತೆಯ ತಾಂತ್ರಿಕ ಆವಿಷ್ಕಾರ ಸೃಷ್ಟಿಸಿರುವ ಆತಂಕಗಳನ್ನು ಕಾಡಿಸಿಕೊಳ್ಳುವ ಬದಲು ಯುವವಲಯ ಭವಿಷ್ಯದಲ್ಲಿ ತಂತ್ರಜ್ಞಾನ ಸೃಷ್ಟಿಸಲಿರುವ ಸ್ಥಿತ್ಯಂತರಗಳಿಗೆ ಅನುಗುಣ ಕೌಶಲ್ಯ ಮರುರೂಪಿಸಿಕೊಳ್ಳುವುದರ ಕಡೆಗೆ ಹೆಚ್ಚು ಗಮನಹರಿಸಬೇಕು ಎಂದರು.

ವೈಷ್ಣವಿ– ಸಂಗಡಿಗರು ಪ್ರಾರ್ಥಿಸಿ, ಎಸ್‌ಡಿಎಂ ಸ್ನಾತಕೋತ್ತರ ಕೇಂದ್ರದ ಡೀನ್ ಡಾ.ಸೌಮ್ಯ ಬಿ.ಪಿ. ಸ್ವಾಗತಿಸಿ , ಸಹ ಪ್ರಾಧ್ಯಾಪಕಿ ಡಾ.ನೆಫೀಸತ್ ಪಿ. ನಿರೂಪಿಸಿದರು. ಪ್ರದೀಪ್‌ವಂದಿಸಿದರು.

> **ಹೊಸ ಟ್ರೆಂಡ್ ಸೃಷ್ಟಿಸಬೇಕು**
>
> ಸೋಷಿಯಲ್ ಮೀಡಿಯಾದಲ್ಲಿ ಒಂದು ರೀಲ್ ಅಥವಾ ಯಾವುದೇ ಬಗೆಯ ಅಭಿವ್ಯಕ್ತಿ ಜನಜನಿತವಾದರೆ ಅದೇ ಮಾದರಿ ಅನುಸರಿಸುವಂ ತಹ ದೃಶ್ಯಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಈ ಬಗೆ ಪುನರಾವರ್ತಿತ ಮಾದರಿಗಳನ್ನಷ್ಟೇ ನೆಚ್ಚಿಕೊಳ್ಳದೇ ಸ್ವಂತ ಪ್ರತಿಭೆಯ ಕಲಾತ್ಮಕತೆ ವಿಸ್ತರಿಸಿಕೊಳ್ಳುವ ಹಂಬಲದೊಂದಿಗೆ ಆಲೋಚಿಸಬೇಕು. ಆ ಮೂಲಕ ಹೊಸ ಟ್ರೆಂಡ್‌ನ್ನು ಸೃಷ್ಟಿಸಬೇಕು.
>
> ● ವಿಲಾಸ್ ನಾಯಕ್

ನಿರ್ದಿಷ್ಟ ಕ್ಷೇತ್ರದಲ್ಲಿ ಸಾಧಿಸುವ ಹೆಜ್ಜೆಯಿರಿಸಬೇಕು: ನಟ ಪೃಥ್ವಿ

ಬೆಳ್ತಂಗಡಿ: ವ್ಯಕ್ತಿಗತ ಸಮಸ್ಯೆಗಳಿಂದ ವಿಚಲಿತರಾಗದೇ ನಿರ್ದಿಷ್ಟಕ್ಷೇತ್ರದಲ್ಲಿ ಸಾಧಿಸುವ ದೃಢಸಂಕಲ್ಪದೊಂದಿಗೆ ಹೆಜ್ಜೆಯಿರಿಸಿದರೆ ಮುಂದೊಂದು ದಿನ ನಿಶ್ಚಿತವಾಗಿ ಯಶಸ್ಸು ಜೊತೆಯಾಗುತ್ತದೆ ಎಂದು ಖ್ಯಾತ ಚಲನಚಿತ್ರ ನಟ ಪೃಥ್ವಿ ಅಂಬರ್ ಅಭಿಪ್ರಾಯಪಟ್ಟರು.

ಅವರು ಎಸ್‌ಡಿಎಂ ಸ್ನಾತಕೋತ್ತರ ಕೇಂದ್ರವು ಆಯೋಜಿಸಿದ ಎರಡು ದಿನಗಳ ಝೇಂಕಾರ ಸೀಜನ್ 6 ಉತ್ಸವದ ಭಾಗವಾಗಿ ಗುರುವಾರ ಏರ್ಪಟ್ಟ ಸ್ಟಾರ್‌ನೈಟ್ ಕಾರ್ಯಕ್ರಮ ನಡೆಸಿಕೊಟ್ಟ ಅವರು ತಮ್ಮ ವೃತ್ತಿಪರ ಯಾನದ ಮಹತ್ವದ ಹೆಜ್ಜೆಗಳನ್ನು ಮೆಲುಕು ಹಾಕುತ್ತಾ ಮಾತನಾಡಿದರು. ಹದಿನೈದು ವರ್ಷಗಳ ಹಿಂದೆ ಕೊರಿಯೋಗ್ರಫಿ ವಲಯದಲ್ಲಿ ಮಹತ್ವದ್ದನ್ನು ಸಾಧಿಸುವ ಹಂಬಲದೊಂದಿಗೆ ನೃತ್ಯಕಲೆಯಲ್ಲಿ ತೊಡಗಿಸಿಕೊಂಡಾಗ ಕಲೆಯೊಂದಿಗಿನ ಸೆಳೆತ ಆವರಿಸಿಕೊಂಡಿತ್ತು. ಈಗಿನ ಹಾಗೆ ತಂತ್ರಜ್ಞಾನದ ನೆರವಿನೊಂದಿಗೆ ಸುಲಭವಾಗಿ ನೃತ್ಯದ ಮಾದರಿಗಳು ಸಿಗುವ ಹಾಗೆ ನೇರವಾಗಿ ಲಭ್ಯವಾಗು ತ್ತಿರಲಿಲ್ಲ, ಅವುಗಳ ಹುಡುಕಾಟ ನಡೆಸಿ ಗಮನಿಸಿ ಅಭ್ಯಸಿಸಬೇಕಾಗುತ್ತಿತ್ತು. ಅಂತಹ ಪೂರ್ವತಯಾರಿಯು ಸಾಧನೆ ಹುಮ್ಮಸ್ಸು ಹೆಚ್ಚಿಸುತ್ತಿತ್ತು ಎಂದು ನೆನಪಿಸಿಕೊಂಡರು.



'ದಿಯಾ' ಸಿನಿಮಾ ಬಿಡುಗಡೆಯಾ ಗಿದ್ದು ನಿರ್ಮಾಣವಾಗಿ 5 ವರ್ಷಗಳ ನಂತರ. ಸಿನಿಮಾವೊಂದರಲ್ಲಿ ನಟಿಸಿ ಅಷ್ಟು ಸುಧೀರ್ಘ ಅವಕಾಶದ ನಂತರ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು. ಲಾಕ್‌ಡೌನ್ ಅವಧಿಯಲ್ಲಿ ಬಿಡುಗಡೆಯಾದ ನಂತರ ಹೊಸ ಅಲೆ ಮೂಡಿಸಿತು. ಸಿನಿಮಾಮೆಚ್ಚುಗೆ ಪಡೆಯುವವರೆಗಿನ ಹಾದಿ ಭಾವನಾ ತ್ಮಕ ತೊಳಲಾಟ ಗಳೊಂದಿಗೆ ಕೂಡಿತ್ತು. ಈ ಹಂತದಲ್ಲಿ ಸಿನಿಮಾ ರಂಗದಲ್ಲಿ ವಿಶೇಷ ಹೆಜ್ಜೆಗುರುತು ಮೂಡಿಸಬಲ್ಲೆ ಎಂಬ ಆತ್ಮವಿಶ್ವಾಸ ಮೂಡಿಸಿದವರು ನನ್ನ ತಾಯಿ ಎಂದು ತಿಳಿಸಿದರು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನದ ನಂತರ ಅವಕಾಶದ ಬಾಗಿಲುಗಳು ತೆರೆದುಕೊಂಡವು. ಆ್ಯಂಕರ್ ಆಗಿ ನಿರೂಪಣೆ ಕೌಶಲ್ಯ ನೆಚ್ಚಿಕೊಂಡು ಹೆಜ್ಜೆಯರಿಸಿದೆ. ಕೋರಿಯೋಗ್ರಫಿಯ ಕುರಿತಾದ ಆಸಕ್ತಿ ಕಲಾವಲಯದ ಪ್ರವೇಶಕ್ಕೆ ಒತ್ತಾಸೆಯಾಯಿತು. ನಂತರ ನಟನೆಯ ಅವಕಾಶಗಳು ಲಭ್ಯವಾದವು ಎಂದು ಹೇಳಿದರು.

ತಂದೆ, ತಾಯಿ ಸೇರಿದಂತೆ ಬೆಳವಣಿಗೆ ವಿವಿಧ ಹಂತಗಳಲ್ಲಿ ನೆರವಾಗುವ ಕುಟುಂಬದ ಸದಸ್ಯರೊಂದಿಗೆ ಕೊನೆಯವರೆಗೂ ಇರಬೇಕು. ಸಾಧನೆಯ ಉತ್ತುಂಗ ತಲುಪಿದಾಗ ಆ ಸಂದರ್ಭ ಸಂಭ್ರಮದಲ್ಲೂ ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ರಬೇಕು. ಹಾಗಿದ್ದಾಗ ಮಾತ್ರ ಸಾಧನೆಯ ಸಂಭ್ರಮದ ಕ್ಷಣಗಳು ಅರ್ಥಪೂರ್ಣವಾಗುತ್ತವೆ ಎಂದರು.

ಅರ್ಚಿತ್ ಜೈನ್, ಪಲ್ಲವಿ ನಿರೂಪಿಸಿದರು. ಈ ಸಂದರ್ಭ ಎಸ್‌ಡಿಎಂ ಕಾಲೇಜಿನ ಪ್ರಾಂಚಾರ್ಯ ಡಾ. ವಿಶ್ವನಾಥ ಪಿ. ಪೃಥ್ವಿ ಅಂಬರ್ ಅವರನ್ನು ಅಭಿನಂದಿಸಿದರು.

ಸುತ್ತ ಮುತ್ತ

ಇಂದು ನಾಳೆ ಆಲಾಡಿ ದೈವಸ್ಥಾನದಲ್ಲಿ ವಾರ್ಷಿಕ ಕೋಲ ಬಲಿ

ಮಂಗಳೂರು: ಬೋಂದೆಲ್ ಪಡುಶೆಡ್ಡೆ ಆಲಾಡಿ ಶ್ರೀ ಕೋರ್ದಬ್ಬು ರಾಹುಗುಳಿಗ (ಆದಿ) ಹಾಗೂ ಪರಿವಾರ ದೈವಗಳ ದೈವಸ್ಥಾನದಲ್ಲಿ ಮಾ.28 ಹಾಗೂ 29ರಂದು ಶ್ರೀ ಕೋರ್ದಬ್ಬು ರಾಹುಗುಳಿಗ ಹಾಗೂ ಪರಿವಾರ ದೈವಗಳ ವಾರ್ಷಿಕ ಕೋಲ ಬಲಿ ನಡೆಯಲಿದೆ. ಮಾ.28ರಂದು ಬೆಳಗ್ಗೆ 7ಕ್ಕೆ ಆಲಾಡಿ ನಾಗಬನದಲ್ಲಿ ತಂಬಿಲ ಸೇವೆ, ಸಂಜೆ 7ಕ್ಕೆ ಭಂಡಾರ ಸಾನದಿಂದ ಗಡುವಿಗೆ ಭಂಡಾರ ಬಂದು ಭಂಡಾರ ಏರಿಸುವುದು. ರಾತ್ರಿ 8ಕ್ಕೆ ಸಾರ್ವಜನಿಕ ಅನ್ನಸಂತರ್ಪಣೆ, ರಾತ್ರಿ 10ಕ್ಕೆ ಕೋರ್ದಬ್ಬು ತನ್ನಿಮಾನಿಗ ದೈವಗಳ ಕೋಲ ಬಲಿ ಸೇವೆ ನಡೆಯಲಿದೆ. ಮಾ.29ರಂದು ಸಂಜೆ 7ಕ್ಕೆ ಗುಳಿಗ ಪಂಜುರ್ಲಿ ದೈವಗಳ ಕೋಲ ಬಲಿ ಸೇವೆ, ರಾತ್ರಿ 10ಕ್ಕೆ ರಾಹುಗುಳಿಗ ದೈವದ ಕೋಲ ಬಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹಂಪು ತೆರವು: ಕೃತಜ್ಞತೆ ಸಲ್ಲಿಸಿದ ವೆಂಕಟರಮಣ ದೇವಳ ಆಡಳಿತ ಮಂಡಳಿ


ಕುಂದಾಪುರ: 200 ವರ್ಷಗಳಿಗಿಂತ ಹೆಚ್ಚಿನ ಇತಿಹಾಸ ಹೊಂದಿರುವ ಇಲ್ಲಿನ ಪೇಟೆ ಶ್ರೀ ವೆಂಕಟರಮಣ ದೇವಸ್ಥಾನದ ವಾರ್ಷಿಕ ಬ್ರಹ್ಮ ರಥೋತ್ಸವ ಸಂದರ್ಭ ದೇವರನ್ನು ಕುಳ್ಳಿರಿಸಿಕೊಂಡು ಬ್ರಹ್ಮ ರಥ ಸಾಗುವ ಪೇಟೆಯ ಎರಡು ಪ್ರಮುಖ ರಸ್ತೆಗಳಲ್ಲಿ ಅಡಚಣೆಯಾಗದಂತೆ ರಸ್ತೆಯ ಹಂಪುಗಳನ್ನು ತೆರವುಗೊಳಿಸಲು ಸಹಕಾರ ನೀಡಿದ ಮಾಜಿ ಸಂಸದ ಕೆ.ಜಯಪ್ರಕಾಶ್ ಹೆಗ್ಡೆ, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಹಾಗೂ ಇತರ ಅಧಿಕಾರಿಗಳಿಗೆ ದೇವಳದ ಆಡಳಿತ ಮಂಡಳಿ ಕೃತಜ್ಞತೆ ಸಲ್ಲಿಸಿದೆ. ವರ್ಷಂಪ್ರತಿ ನಡೆಯುವ ಬ್ರಹ್ಮ ರಥೋತ್ಸವ ಸಾಂಗವಾಗಿ ಸಾಗಲು ಪುರಸಭೆಯಿಂದ ಅಳವಡಿಸಿದ ಹಂಪುಗಳನ್ನು ತೆರವುಗೊಳಿಸಲು ದೇವಸ್ಥಾನದ ಆಡಳಿತ ಮಂಡಳಿ ಮಾಡಿದ ಮನವಿಗೆ ಪೂರಕವಾಗಿ ಸ್ಪಂದಿಸಿದ್ದ ಮಾಜಿ ಸಂಸದರು, ಈ ಕುರಿತು ಜಿಲ್ಲಾಧಿಕಾರಿಗಳು, ಕಂದಾಯ ಉಪ ಆಯುಕ್ತೆ ರಶ್ಮಿ ಎಸ್.ಆರ್. ಹಾಗೂ ಪುರಸಭೆಯ ಮುಖ್ಯಾಧಿಕಾರಿ ಆನಂದ ಜೆ. ಅವರೊಂದಿಗೆ ಮಾತನಾಡಿ ಸಮಸ್ಯೆ ಪರಿಹರಿಸಲು ಸಹಕರಿಸಿದ್ದರು. ದೇವಳದ ಭಕ್ತರ ಬೇಡಿಕೆಗೆ ಸ್ಪಂದಿಸಿ ಸಹಕರಿಸಿದ ಎಲ್ಲರಿಗೂ ದೇವಸ್ಥಾನದ ಆಡಳಿತ ಮೊಕ್ತೇಸರ ಕೆ.ರಾಧಾಕೃಷ್ಣ ಶೆಣೈ, ಜೊತೆ ಮೊಕ್ತೇಸರ ಎಚ್.ಜನಾರ್ಧನ್ ಮಲ್ಯ, ಪಿ.ತ್ರಿವಿಕ್ರಂ ಪೈ ಮತ್ತಿತರರು ಕೃತಜ್ಞತೆ ಸಲ್ಲಿಸಿದ್ದಾರೆ.

ಕೋದಂಡ ರಾಮ ದೇವಳ: ರಾಮನವಮಿ

ಸುಂಟಿಕೊಪ್ಪ: ವಿಹಿಂಪ ಮತ್ತು ಗೌರಿ ಗಣೇಶೋತ್ಸವ ಸಮಿತಿ ವತಿಯಿಂದ ಕೋದಂಡ ರಾಮ ದೇವಾಲಯದಲ್ಲಿ ಗುರುವಾರ ಶ್ರದ್ಧಾಭಕ್ತಿಯಿಂದ ರಾಮನವಮಿಯನ್ನು ಆಚರಿಸಲಾಯಿತು.
ಕೊದಂಡ ರಾಮ ಮಂದಿರದಲ್ಲಿ ಬೆಳಿಗ್ಗೆ ರಾಮ,ಸೀತೆ, ಲಕ್ಷ್ಮಣ, ಆಂಜನೇಯ ಸ್ವಾಮಿಗೆ ಬೆಳ್ಳಿಯ ಕವಚವನ್ನು ಅಳವಡಿಸಿ ಪೂಜಾ ಕೈಂಕಾರ್ಯವನ್ನು ದೇವಾಲಯದ ಮುಖ್ಯ ಅರ್ಚಕ ಜಯಂತ್ ಭಟ್ ಅವರ ನೇತೃತ್ವದಲ್ಲಿ ನೆರವೇರಿಸಿದರು.
ಬಳಿಕ ಕುಂಕುಮಾರ್ಚನೆ, ಪಂಚಾಮೃತ ಅಭಿಷೇಕದ ಬಳಿಗೆ ರಾಮತಾರಕ ಹೋಮವನ್ನು ಪ್ರಧಾನ ಅರ್ಚಕ ಹಾ.ಮಾ.ಗಣೇಶ್ ಶರ್ಮಾ ನೇತೃತ್ವದಲ್ಲಿ ಜಯಂತ್ ಭಟ್, ನರಸಿಂಹ ಭಟ್,ಪುರುಷೋತ್ತಮ ಭಟ್, ಮನೋಜ್ ಭಟ್ ನೆರವೇರಿಸಿದರು. ಗೌರಿ ಗಣೇಶೋತ್ಸವ ಸಮಿತಿ ಅಧ್ಯಕ್ಷ ವಿಘ್ನೇಶ್, ನಿಖಿಲ್, ಪಿ.ಆರ್.ಸುನಿಲ್ ಕುಮಾರ್, ಧನು ಕಾವೇರಪ್ಪ ಜೆ.ಎನ್. ಚಂದ್ರಶೇಖರ್, ಸದಾಶಿವ ರೈ,ಸುರೇಶ್ ಗೋಪಿ, ಬಿ.ಕೆ.ಪ್ರಶಾಂತ್, ಎಂ.ಎಸ್.ಸುನಿಲ್, ಮಹೇಂದ್ರ, ಲೀಲಾಮೇದಪ್ಪ ಪವಿತ್ರ ಶೆಟ್ಟಿ ಮತ್ತಿತರರಿದ್ದರು.

ಕರ್ನಾಟಕ ಸಂಗೀತ , ನೃತ್ಯ ಅಕಾಡೆಮಿ ಶಿಷ್ಯವೇತನಕ್ಕೆ ಶಮಾ ವಳಕ್ಕುಂಜ ಆಯ್ಕೆ

ಬದಿಯಡ್ಕ: ಕರ್ನಾಟಕ ರಾಜ್ಯ ಸರಕಾರದ



ಆದೀನದಲ್ಲಿರುವ ಕರ್ನಾಟಕ ಸಂಗೀತ – ನೃತ್ಯ ಅಕಾಡೆಮಿಯ 2025 – 26ನೇ ಸಾಲಿನ ಶಿಷ್ಯವೇತನಕ್ಕೆ ಕುಮಾರಿ ಶಮಾ ವಳಕುಂಜ ಆಯ್ಕೆಯಾಗಿರುತ್ತಾಳೆ. ಪುತ್ತೂರಿನ ವೈಷ್ಣವೀ ನಾಟ್ಯಾಲಯದ ವಿದುಷಿ ಯೋಗೀಶ್ವರೀ ಜಯಪ್ರಕಾಶ್ ಇವರ ಶಿಷ್ಯೆಯಾಗಿರುವ ಈಕೆ ಕಳೆದ 12 ವರ್ಷಗಳಿಂದ ಭರತನಾಟ್ಯ ನೃತ್ಯವನ್ನು ಅಭ್ಯಾಸ ಮಾಡುತ್ತಿದ್ದಾಳೆ. ದೇಶೀಯ , ರಾಜ್ಯ ಮಟ್ಟದಲ್ಲಿ ಹಲವಾರು ನೃತ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿರುವ ಈಕೆ ಮಹೇಶ್ ವಳಕುಂಜ– ಶಾಲಿನಿ ದಂಪತಿ ಪುತ್ರಿ. ಪುತ್ತೂರಿನ ಅಂಬಿಕಾ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ. ಈಕೆ ಸಾಧನೆಗೆ ವೈಷ್ಣವೀ ನಾಟ್ಯಾಲಯದ ತಂಡ ಅಭಿನಂದಿಸಿದೆ.

ಎಲ್‌ಕೆಜಿಯಿಂದ ಪದವಿಯವರೆಗೂ ಇಲ್ಲಿ ಒಂದೇ ಸೂರಿನಡಿ ಸಿಗುತ್ತಿದೆ ಶಿಕ್ಷಣ

ಗ್ರಾಮೀಣ ಭಾಗದ ಅಕ್ಷರ ದೇಗುಲ ಈ 'ಸವಣೂರು ವಿದ್ಯಾರಶ್ಮಿ'

ಪುತ್ತೂರು: ಜ್ಞಾನ ಮತ್ತು ನೈತಿಕ ಮೌಲ್ಯಗಳ ಬೆಳಕಿನಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವ ಜತೆಗೆ ಸಮಾಜಕ್ಕೆ ಉತ್ತಮ ನಾಗರಿಕರನ್ನು ನೀಡುವ ಮಹತ್ವದ ಉದ್ದೇಶದೊಂದಿಗೆ ಸ್ಥಾಪಿತವಾದ ಸವಣೂರಿನ ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ತನ್ನದೇ ಆದ ಹೆಗ್ಗಳಿಕೆ ಹೊಂದಿದೆ.
ಪುತ್ತೂರಿನಿಂದ ಸುಬ್ರಹ್ಮಣ್ಯ ರಸ್ತೆಯಲ್ಲಿ ಸುಮಾರು 15 ಕಿ.ಮೀ. ದೂರದಲ್ಲಿರುವ ಸವಣೂರಿನ 27 ಎಕರೆ ವಿಶಾಲ ವಿಸ್ತೀರ್ಣದ ನಿಸರ್ಗ ರಮಣೀಯ ಪ್ರದೇಶದಲ್ಲಿ 2001 ರಲ್ಲಿ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ, ಶಿಕ್ಷಣ ಪ್ರೇಮಿ ಸವಣೂರು ಕೆ. ಸೀತಾರಾಮ ರೈ ಈ ಸಂಸ್ಥೆ ಸ್ಥಾಪಿಸಿದರು. ಗ್ರಾಮೀಣ ಮಕ್ಕಳಿಗೂ ನಗರ ಮಟ್ಟದ ಶಿಕ್ಷಣ ಸಿಗಬೇಕು ಎಂಬ ಸಂಕಲ್ಪದಿಂದ ಆರಂಭವಾದ ಈ ಪಯಣ ಇದೀಗ 25ನೇ ವರ್ಷಕ್ಕೆ ಕಾಲಿಡುತ್ತಾ ಅನೇಕ ಸಾಧನೆಗಳನ್ನು ದಾಖಲಿಸಿದೆ. ಎಲ್.ಕೆ.ಜಿ.ಯಿಂದ ಆರಂಭಗೊಂಡು ಪಿಯುಸಿ (ಸೈನ್ಸ್–ಪಿ.ಸಿ.ಎಂ.ಬಿ./ಪಿ.ಸಿ.ಎಂ.ಸಿ., ಕಾಮರ್ಸ್– ಇ.ಬಿ.ಎ.ಎಸ್./ಇ.ಬಿ.ಎ.ಸಿ.), ಪದವಿ (ಬಿಸಿಎ– ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಬಿ.ಕಾಂ., ಬಿ.ಎ.) ವರೆಗಿನ ವ್ಯಾಸಾಂಗ ಒಂದೇ ಸೂರಿನಡಿ ಲಭ್ಯವಿದೆ.

> **ಗುಣಮಟ್ಟದ ಶಿಕ್ಷಣ**
>
> 
>
> ಗ್ರಾಮೀಣ ಪ್ರದೇಶದ ಮಕ್ಕಳಿಗೂ ನಗರ ಮಟ್ಟದ ಗುಣಮಟ್ಟದ ಶಿಕ್ಷಣ ದೊರಕಬೇಕು ಮತ್ತು ಸರ್ವಾಂಗೀಣ ಪ್ರಗತಿ ಅವರಲ್ಲಿ ಕಾಣಿಸಬೇಕೆಂಬುದು ನಮ್ಮ ಕನಸು. ಆ ಕನಸನ್ನು ಸಾಕಾರಗೊಳಿಸುವ ದಿಕ್ಕಿನಲ್ಲಿ ವಿದ್ಯಾರಶ್ಮಿ ವಿದ್ಯಾ ಸಂಸ್ಥೆಗಳು ನಿರಂತರವಾಗಿ ಶ್ರಮಿಸುತ್ತಿದೆ.
>
> • ಸವಣೂರು ಕೆ. ಸೀತಾರಾಮ ರೈ, ಸಂಚಾಲಕರು

ಸತತ 100 ಶೇ. ಫಲಿತಾಂಶ

ವಿಶೇಷವಾಗಿ 10ನೇ ತರಗತಿ ಹಾಗೂ ಪಿಯುಸಿಯಲ್ಲಿ ಸತತ ಶೇ. 100 ಫಲಿತಾಂಶ ದಾಖಲಿಸಿ ಸಂಸ್ಥೆ ಗಮನ ಸೆಳೆದಿದೆ. ವಿದ್ಯಾರ್ಥಿಗಳ ವೈಯಕ್ತಿಕ ಪ್ರಗತಿಗೆ ಒತ್ತು ನೀಡುವ ಕ್ರಮ, ಮುಂಚಿತ ಪಾಠ ಪೂರ್ಣಗೊಳಿಸಿ ಪುನರಾವಲೋಕನ ವ್ಯವಸ್ಥೆ ಸಂಸ್ಥೆ ಯಶಸ್ಸಿಗೆ ಕಾರಣವಾಗಿದೆ. ವಿಜ್ಞಾನ ಪ್ರಯೋಗಾಲಯಗಳಲ್ಲಿ ಆಧುನಿಕ ಸೌಲಭ್ಯಗಳ ಜತೆಗೆ ಕ್ರೀಡೆ, ಸಾಂಸ್ಕೃತಿಕ , ಕೌಶಲಾಭಿವೃದ್ಧಿ ಚಟುವಟಿಕೆಗಳಿಗೆ ಸಮಾನ ಪ್ರಾಮುಖ್ಯತೆ ನೀಡಲಾಗಿದೆ. ವಸತಿ, ಸಾರಿಗೆ, ಸಿಸಿಟಿವಿ ಭದ್ರತೆ, ಕೌನ್ಸಿಲಿಂಗ್ ವ್ಯವಸ್ಥೆ ವಿದ್ಯಾರ್ಥಿ ಗಳ ಸಮಗ್ರ ಬೆಳವಣಿಗೆಗೆ ಪೂರಕವಾಗಿದೆ. ಸಂಸ್ಥೆ ಆಡಳಿತಾಧಿಕಾರಿ ಯಾಗಿ ಅಶ್ವಿನ್ ಎಲ್. ಶೆಟ್ಟಿ ಕಾರ್ಯನಿರ್ವಹಿಸುತ್ತಿದ್ದು ನವೀನ ಶಿಕ್ಷಣ ಪದ್ಧತಿಗಳ ಮೂಲಕ ಸಂಸ್ಥೆ ಮತ್ತಷ್ಟು ಅಭಿವೃದ್ಧಿ ದಿಕ್ಕಿನಲ್ಲಿ ಮುನ್ನಡೆಸುತ್ತಿದ್ದಾರೆ.
ವಿದ್ಯಾಸಂಸ್ಥೆಯು 'ರುಪ್ಸ ಕರ್ನಾಟಕ ಬೆಸ್ಟ್ ಮೇನೇಜ್‌ಮೆಂಟ್' ಅವಾರ್ಡ್ ಪಡೆದುಕೊಂಡಿದೆ. 'ಪರಿಪೂರ್ಣತೆ ಕಡೆಗೆ' ಎಂಬ ಧ್ಯೇಯ ವಾಕ್ಯದೊಂದಿಗೆ ಕಾರ್ಯಾಚರಿಸುತ್ತಿರುವ ಈ ಸಂಸ್ಥೆಗಳಲ್ಲಿ ಕರ್ನಾಟಕ, ಕೇರಳ ಮತ್ತು ಆಂಧ್ರಪ್ರದೇಶ ,ಇನ್ನಿತರ ಪ್ರದೇಶಗಳ ವಿದ್ಯಾರ್ಥಿಗಳು ವ್ಯಾಸಂಗ ನಿರತರಾಗಿದ್ದಾರೆ.

ಶಾಲೆಯ ವಿಶೇಷತೆಗಳು

- 10ನೇ ತರಗತಿಯಲ್ಲಿ ಮತ್ತು ದ್ವಿತೀಯ ಪಿ.ಯು.ಸಿ ವಾಣಿಜ್ಯ ವಿಭಾಗದಲ್ಲಿ ಮತ್ತು ವಿಜ್ಞಾನ ವಿಭಾಗದಲ್ಲಿ ಸತತ ಶೇ.100 ಫಲಿತಾಂಶ, 100 ಎಂಬಿಪಿಎಸ್ ವೇಗದ ಅಂತರ್ಜಾಲ ಸಂಪರ್ಕವಿರುವ ಕಂಪ್ಯೂಟರ್ ಪ್ರಯೋಗಾಲಯಗಳು
- ಗೋಡೆಯ ಕುಂಬಾ ವರ್ಣಮಯ ವರ್ಷ ಚಿತ್ರಗಳ ಮೂಲಕ ಭಾರತೀಯ ಸಂಸ್ಕೃತಿಯ ಪ್ರಸಾರ, ವಿಜ್ಞಾನ ಪ್ರಯೋಗಾಲಯಗಳ ವ್ಯವಸ್ಥೆ ಡ್ರೋನ್ ನಿರ್ಮಾಣ ತರಬೇತಿ, ಕಂಪ್ಯೂಟರ್ ಕೋಡಿಂಗ್ ತರಬೇತಿ, ವಿಜ್ಞಾನ ಮಾದರಿ ತಯಾರಿ ತರಬೇತಿ ಇನ್‌ಸ್ಪೈರ್ ಅವಾರ್ಡ್ ತರಬೇತಿ, ಉಚಿತ ಸಂಸ್ಕೃತ ಕಲಿಕೆ, ಭಾಷಣ ಕಲೆ, ಯೋಗ- ಪ್ರಾಣಾಯಾಮ, ಸ್ಪೋಕನ್ ಇಂಗ್ಲೀಷ್ ತರಬೇತಿಗಳು
- ಭಜನೆ, ಕರಾಟೆ, ಶಾಸ್ತ್ರೀಯ ಸಂಗೀತ, ಪಾಶ್ಚಾತ್ಯ ನೃತ್ಯ, ವಾಲಿಬಾಲ್, ತ್ರೋಬಾಲ್, ಕಬಡ್ಡಿ,ಕ್ರಿಕೆಟ್, ಅಥ್ಲೆಟಿಕ್ ಇತರ ಆಟೋಟಗಳ ತರಬೇತಿ, ವೈಟ್ ಲಿಫ್ಟಿಂಗ್, ಜಿಮ್ ಸೌಲಭ್ಯ, ಗ್ರಾಮೀಣ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ

ಶೈಕ್ಷಣಿಕ-ಶೈಕ್ಷಣಿಕೇತರ ಸೌಲಭ್ಯಗಳು

- ಅನುಭವಿ ಉಪನ್ಯಾಸಕರಿಂದ ಸಿಇಟಿ/ ನೀಟ್ ತರಬೇತಿ, ಅತ್ಯಾಧುನಿಕ ತಂತ್ರಜ್ಞಾನದ ಡ್ರೋನ್, 3ಡಿ ಪ್ರಿಂಟರ್, ಹೊಸ ತಲೆಮಾರಿನ ದೂರದರ್ಶಕಗಳು , ಅಟಲ್ ಟಿಂಕರಿಂಗ್ ಲ್ಯಾಬ್, ಸ್ಮಾರ್ಟ್ ಬೋರ್ಡ್
- ಕೆ.ಜಿ. ವಿಭಾಗದ ಮಕ್ಕಳಿಗಾಗಿ ಅತ್ಯಾಧುನಿಕ ತಂತ್ರಜ್ಞಾನದ, ಅತ್ಯಾಕರ್ಷಕವಾದ ಡಬಲ್ ಡೂಮ್ ಬಿಲ್ಡಿಂಗ್, ಶಾಲಾ ಬಸ್‌ಗಳು.
- ಮಕ್ಕಳ ಸುಭದ್ರತೆಗಾಗಿ ಎಲ್ಲೆಡೆ ಸಿ.ಸಿ.ಟಿ.ವಿ. ಕ್ಯಾಮರಾಗಳ ಕಣ್ಗಾವಲು, 6ನೇ ತರಗತಿ ಯಿಂದ ಮೇಲ್ಪಟ್ಟ ಮಕ್ಕಳಿಗೆ ಸುಸಜ್ಜಿತ ವಸತಿ ನಿಲಯಗಳು. (ಬೇಡಿಕೆಯನ್ನಾಧರಿಸಿ ಪುಟ್ಟ ಮಕ್ಕಳಿಗೂ ಹಾಸ್ಟೆಲ್ ವ್ಯವಸ್ಥೆ)
- ಸುಸಜ್ಜಿತ ಆಟದ ಮೈದಾನದೊಂದಿಗೆ ಪುಟಾಣಿ ಮಕ್ಕಳಿಗೆ ಆಟೋಪಕರಣ ಗಳು, ವಿಶಾಲ -ವ್ಯವಸ್ಥಿತವಾದ ಸಭಾಂಗಣ

ಮನೆ ದುರಸ್ತಿ ಮಾಡಿ ಮಾನವೀಯತೆ ಮೆರೆದ ವಗ್ಗ ಶೌರ್ಯ ವಿಪತ್ತು ನಿರ್ವಹಣಾ ಘಟಕ





ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ಬಂಟ್ವಾಳ ಇದರ ವಗ್ಗ ವಲಯದ ಶೌರ್ಯ ವಿಪತ್ತು ನಿರ್ವಹಣಾ ಘಟಕ ಕಾಡಬೆಟ್ಟು ವಗ್ಗ ವತಿಯಿಂದ ಬಂಟ್ವಾಳ ತಾಲೂಕಿನ ಕಾಡಬೆಟ್ಟು ಗ್ರಾಮದ ಕಾಡಬೆಟ್ಟು ಗುತ್ತಿನಬೈಲು ನಿವಾಸಿ ರಮಣಿ ಅವರ ಮನೆಯನ್ನು ಶ್ರಮದಾನದ ಮೂಲಕ ದುರಸ್ತಿ ಮಾಡಿ ಮಾನವೀಯತೆ ಮೆರೆದಿದ್ದಾರೆ.
ಇಲ್ಲಿನ ತೀರಾ ಬಡಕುಟುಂಬವಾದ ರಮಣಿಯವರ ಮನೆಯನ್ನು ಆಲಂಪುರಿ ಗುತ್ತಿನ ಉದ್ಯಮಿ ಶ್ರುತಾಂಜನ ಜೈನ್ ಸಹಕಾರದಲ್ಲಿ ಮಳೆಗಾಲದ ಮುನ್ನವೇ ದುರಸ್ತಿ ಗೊಳಿಸುವ ಕಾರ್ಯ ಕೈಗೊತ್ತಿಕೊಂಡಿದ್ದಾರೆ.
ರಮಣಿಯವರು ಒರ್ವ ಪುತ್ರ, ಪುತ್ರಿ, ಮೊಮ್ಮಗಳೊಂದಿಗೆ ವಾಸಿಸುತ್ತಿದ್ದು ಮನೆಗೆ ಆಧಾರ ಸ್ತಂಭವಾಗಿದ್ದ ಮಗನು ಅನಾರೋಗ್ಯದಿಂದ ಕೂಡಿದ್ದಾನೆ.
ಮನೆ ತೀರ ದುಃಸ್ಥಿತಿಯಲ್ಲಿದ್ದು ಮಳೆಗಾಲದಲ್ಲಿ ಬೀಳುವ ಪರಿಸ್ಥಿತಿಯಲ್ಲಿದ್ದ ಮನೆಯನ್ನು ಕಳೆದ ಬಾರಿ ಶೌರ್ಯ ತಂಡದ ಸದಸ್ಯರು ಟರ್ಪಲ್ ಹಾಕಿ ವ್ಯವಸ್ಥೆ ಮಾಡಿಕೊಟ್ಟಿದ್ದು,ಈ ಬಾರಿ ಮಳೆಗಾಲ ಆರಂಭಕ್ಕೆ ಮೊದಲೇ ಮನೆ ರಿಪೇರಿ ಮಾಡಿಕೊಟ್ಟು ಮಾನವೀಯತೆ ಮೆರೆದಿದ್ದಾರೆ.
ಧನು ಪೂಜೆ ಶೌರ್ಯ ತಂಡದ ಇಬ್ಬರು ಸದಸ್ಯರನ್ನು ಜೊತೆಗೂಡಿಸಿಕೊಂಡು ಮನೆ ಪೂರ್ತಿ ಹಂಚು ತೆಗೆದು ದುರಸ್ತಿ ಮಾಡಿ ಕೊಟ್ಟರು. ರಿಪೇರಿಗೆ ಬೇಕಾದ ಕಚ್ಚಾ ಸಾಮಗ್ರಿಗಳ ಸಹಿತ ಎಲ್ಲಾ ಖರ್ಚು– ವೆಚ್ಚ ಉದ್ಯಮಿ ಶ್ರುತಾಂಜನ ಜೈನ್ ಮಾಡಿದ್ದರು.
ಶ್ರಮದಾನದಲ್ಲಿ ಶೌರ್ಯ ಘಟಕ ಪ್ರತಿನಿಧಿ ಪ್ರವೀಣ್, ಸಂಯೋಜಕೀ ರೇಖಾ ಪಿ.. ಸದಸ್ಯರಾದ ಸಂಪತ್ ಶೆಟ್ಟಿ ಮೋಹನಂದ, ನಾರಾಯಣ್ ಶೆಟ್ಟಿ ಅಶೋಕ ಹಾರೊದ್ದು ಮಹಾಬಲ ರೈ ಪವಿತ್ರ, ಶಶಿಕಲಾ, ಪವನ್, ರೋಹಿತ್, ಲಕ್ಷ್ಮಣ್ , ವಿನೋದ್, ಅಶೋಕ ಬೊಲ್ಮರ್, ರಮೇಶ್ ನಾರಾಯಣ ಪೂಜಾರಿ ಜನಾರ್ದನ , ಧನುಪೂಜೆ ಶೌರ್ಯ ಘಟಕ ಸದಸ್ಯರಾದ ಗಣೇಶ್ ಆಚಾರ್ಯ, ಹಾಗೂ ಪ್ರಮೋದ್ ಆಚಾರ್ಯ ಭಾಗವಹಿಸಿದ್ದರು.
2 ವರ್ಷದಲ್ಲಿ ಪ್ರವೀಣ್ ಕಾಡಬೆಟ್ಟು ನೇತೃತ್ವದ ಶೌರ್ಯ ಘಟಕ ಸುಮಾರು 125 ಸಮಾಜ ಸೇವೆ ಕಾರ್ಯ ಮಾಡಿರುತ್ತಾರೆ.
ಹೃದಯ ಸಂಬಂಧಿತ ಕಾಯಿಲೆಯಿಂದ ಬಳಲುತ್ತಿರುವ ರಮಣಿ ಅವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ ಮೂಲಕ ಪ್ರತಿ ತಿಂಗಳು ಮಾಶಾಸನ ನೀಡಲಾಗುತ್ತಿದೆ. ಇದರಿಂದ ಸ್ವಲ್ಪಮಟ್ಟಿನ ಖರ್ಚು ಅವರು ನಿಭಾಯಿಸುವಂತಾಗಿದೆ.

ಮೂಲ್ಕಿ ರಾಜ್ಯ ಹೆದ್ದಾರಿಯಲ್ಲಿ ಅವೈಜ್ಞಾನಿಕ ಪೈಪ್‌ಲೈನ್ ಕಾಮಗಾರಿ: ಸ್ಥಳೀಯರ ಆಕ್ರೋಶ





ಮುಲ್ಕಿ: ಕಿನ್ನಿಗೋಳಿ ಹಾಗೂ ಮುಲ್ಕಿ ಪ.ಪಂ.ಗೆ ನೀರುಣಿಸುವ ಬಹು ಕೋಟಿ ವೆಚ್ಚದ ಅಮೃತ್ 2.0 ಪೈಪ್‌ಲೈನ್ ಕಾಮಗಾರಿ ಕಿಲ್ಪಾಡಿ ಪಂಚಾಯತ್ ವ್ಯಾಪ್ತಿಯ ಕುಬೆವೂರು ಕಿನ್ನಿಗೋಳಿ ಮೂಲ್ಕಿ ರಾಜ್ಯ ಹೆದ್ದಾರಿ ಬಳಿ ಅವೈಜ್ಞಾನಿಕವಾಗಿ ನಡೆಯುತ್ತಿದ್ದು ಅಪಾಯಕಾರಿಯಾಗಿ ಪರಿಣಮಿಸಿದೆ.
ಕುಬೆವೂರು ರಾಜ್ಯ ಹೆದ್ದಾರಿಯ ತಿರುವು ಬಳಿ ಕಳೆದ ಕೆಲ ದಿನಗಳಿಂದ ಪೈಪ್‌ಲೈನ್ ಕಾಮಗಾರಿ ನಿಧಾನ ಗತಿಯಲ್ಲಿ ನಡೆಯುತ್ತಿದೆ ಇದರಿಂದಾಗಿ ಪರಿಸರ ಧೂಳುಮಯವಾಗಿ ರೋಗದ ಭೀತಿ ಎದುರಾಗಿದೆ . ಕೆಲ ಕಡೆ ಕುಡಿಯುವ ನೀರಿನ ಪೈಪ್‌ಲೈನ್ ಹೆದ್ದಾರಿಯನ್ನು ಅಗೆದು ಹಾಕಿದ್ದು ಸರಿಯಾಗಿ ಮುಚ್ಚದೆ ದ್ವಿಚಕ್ರ ವಾಹನ ಸವಾರರಿಗೆ ಕಂಠಕವಾಗಿ ಪರಿಣಮಿಸಿದೆ
ಅರ್ಧಂಬರ್ಧ ಪೈಪ್‌ಲೈನ್ ಕಾಮಗಾರಿಯಿಂದ ಕಳೆದ ಮಳೆಗಾಲದಲ್ಲಿ ಕುಬೆವೂರು ಬಳಿ ಹೆದ್ದಾರಿ ಕುಸಿತದ ಭೀತಿ ಎದುರಾಗಿದ್ದು ಈ ಬಗ್ಗೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿ ಕಾಮಗಾರಿ ನಡೆಸುವವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಆದರೂ ಗುತ್ತಿಗೆದಾರರು ಕ್ಯಾರೇ ಎನ್ನದೆ ತಾವು ಆಡಿದ್ದೆ ಆಟ ಎಂದು ಅವೈಜ್ಞಾನಿಕ ಕಾಮಗಾರಿ ನಡೆಸುತ್ತಿದ್ದಾರೆ ನಿಧಾನ ಗತಿಯ ಕಾಮಗಾರಿಯಿಂದ ವಾಹನ ಸವಾರರು ಮತ್ತು ಸ್ಥಳೀಯರು ಸಂಕಷ್ಟಕ್ಕೀಡಾಗಿದ್ದು ಪೈಪ್‌ಲೈನ್ ಕಾಮಗಾರಿಯ ಗುತ್ತಿಗೆದಾರರಿಗೆ ಹಿಡಿ ಶಾಪ ಹಾಕುತ್ತಿದ್ದಾರೆ

ಕಾಮಗಾರಿ ಮುಗಿಸಲು ಮೀನಮೇಷ

ಕಳೆದ ವರ್ಷದ ಹಿಂದೆ ಕಿನ್ನಿಗೋಳಿ , ಮುಲ್ಕಿ ಪಟ್ಟಣ ಪಂಚಾಯಿತಿಗೆ ಬಹು ಕೋಟಿ ವೆಚ್ಚದ ಅಮೃತ್2.0ಕುಡಿಯುವನೀರಿನಯೋಜನೆಗೆ ಚಾಲನೆ ನೀಡಲಾಗಿತ್ತು. ಕಿನ್ನಿಗೋಳಿ ಪ.ಪಂ. ವ್ಯಾಪ್ತಿಯ ಹಲವೆಡೆ ಗುತ್ತಿಗೆದಾರರಿಂದ ಎರ್ರಾಬಿರ್ರಿ ಕಾಮಗಾರಿ ನಡೆದು ಸ್ಥಳೀಯರು ಆಕೋಶ ವ್ಯಕ್ತಪಡಿಸಿ ಸಂಬಂಧಪಟ್ಟ ಇಲಾಖೆಗೆ ದೂರು ನೀಡಿದ್ದರು. ಆದರೂ ಕಾಮಗಾರಿ ಇದುವರೆಗೆ ಮುಗಿಯುವ ಲಕ್ಷಣ ಕಾಣುತ್ತಿಲ್ಲ, ಇದೇ ರೀತಿ ಮುಲ್ಕಿ ಪ.ಪಂ. ವ್ಯಾಪ್ತಿಯಲ್ಲಿ ಸುಮಾರು ಏಳೆಂಟು ವರ್ಷಗಳ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ನಡೆದು ರಸ್ತೆಯನ್ನು ಅಲ್ಲಲ್ಲಿ ಅಗೆದುಹಾಕಿ ಸಾರ್ವಜನಿಕರು, ವಾಹನಸವಾರರು ಸಂಕಷ್ಟಕ್ಕೀಡಾಗಿದ್ದರು.ಬಳಿಕ ಪೈಪ್‌ಲೈನ್ ನಲ್ಲಿ ಕುಡಿಯುವ ನೀರು ಬಾರದೆ ಬೋಗಸ್ ಕುಡಿಯುವ ನೀರಿನ ಯೋಜನೆಯಾಗಿ ಪರಿಣಮಿಸಿ ಪೈಪ್‌ಲೈನ್ ಮಣ್ಣು ಪಾಲಾಗಿದ್ದು ಹೇಳುವವರು ಕೇಳುವವರು ಯಾರು ಇಲ್ಲದಂತಾಯಿತು ಎಂದು ಸಾರ್ವಜನಿಕರು ನೆನಪಿಸಿಕೊಳ್ಳುತ್ತಿದ್ದಾರೆ.

ಏ.5-10: ಬಲ್ಯ ಬಾಳಿಕೆ ಬೋಳ್ನಾಡುಗುತ್ತು ಧರ್ಮಚಾವಡಿ ಗೃಹ ಪ್ರವೇಶ, ಕಲಶಾಭಿಷೇಕ



ಉಳ್ಳಾಲ: ಕೋಟೆಕಾರು ಪಟ್ಟಣ ಪಂಚಾಯತ್‌ವ್ಯಾಪ್ತಿಯಬಲ್ಯಬಾಳಿಕೆ– ಬೋಳ್ನಾಡುಗುತ್ತು ಕುಟುಂಬಸ್ಥರ ಶ್ರೀ ಅರಸು ಮಂಜಿಷ್ಣಾರ್ ಮತ್ತು ಸಪರಿವಾರ ದೈವಗಳ ಪುನರ್ ಪ್ರತಿಷ್ಠೆ ಕಲಶಾಭಿಷೇಕ, ಧರ್ಮ ಚಾವಡಿಯ ಗೃಹ ಪ್ರವೇಶ ಮತ್ತು ಶ್ರೀ ದೈವಗಳ ನೇಮ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ನೀಲೇಶ್ವರ ಉಚ್ಚಿಲತ್ತಾಯ ಪದ್ಮನಾಭ ತಂತ್ರಿವರ್ಯರ ಪೌರೋಹಿತ್ಯದಲ್ಲಿ ಏ.5 ರಿಂದ 10ರವರೆಗೆ ನಡೆಯಲಿದೆ ಎಂದು ಕುಟುಂಬಸ್ಥರಾದ ನಳಿನಾಕ್ಷ ಶೆಟ್ಟಿ ಹೇಳಿದ್ದಾರೆ.
ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.5ರಂದು ಬೆಳಗ್ಗೆ ನಾಗದೇವರಿಗೆ ತಂಬಿಲ, ಸಂಜೆ 5ಕ್ಕೆ ತಂತ್ರಿಗಳ ಆಗಮನ, ಸಾಮೂಹಿಕ ಪ್ರಾರ್ಥನೆ, ಪ್ರಸಾದ ಪರಿಗ್ರಹ, ಬಿಂಬ ಪರಿಗ್ರಹ, ಪುಣ್ಯಾಹ, ಪ್ರಾಸಾದ ಶುದ್ಧಿ, ವಾಸ್ತು ರಕ್ಷೋಘ್ನ ಹೋಮ, ವಾಸ್ತುಬಲಿ ನಡೆಯಲಿದೆ.

ದೈವಗಳ ಪ್ರತಿಷ್ಠೆ ಕಲಶಾಭಿಷೇಕ

ಏ.6ರಂದು ಬೆಳಿಗ್ಗೆ 7ಕ್ಕೆ ಗಣಪತಿ ಹೋಮ, ಬಿಂಬ ಶುದ್ಧಿ, 9.33ರಿಂದ 10.43ರ ವೃಷಭ ಲಗ್ನದಲ್ಲಿ ಗೃಹ ಪ್ರವೇಶ, ಮಾಡಸಾನ ಮತ್ತು ಕಟ್ಟೆಯಲ್ಲಿ ದೈವಗಳ ಪ್ರತಿಷ್ಠೆ ಕಲಶಾಭಿಷೇಕ. ಮಧ್ಯಾಹ್ನ 3ಕ್ಕೆ ಮನೆಯಿಂದ ಮಾಡಕ್ಕೆ ಭಂಡಾರ ಹೊರಡುವುದು. ಸಂಜೆ 6ಕ್ಕೆ ಅಣ್ಣ ದೈವದ ನೇಮ, 9ಕ್ಕೆ ತಮ್ಮ ದೈವದ ನೇಮ, ರಾತ್ರಿ 1ಕ್ಕೆ ವೈದ್ಯನಾಥ ದೈವದ ನೇಮ, ಭಂಡಾರ ಇಳಿಯುವುದು.

ದೈವದ ನೇಮ

ಏ.7ಕ್ಕೆ ಸಂಜೆ 4ಕ್ಕೆ ಮಹಿಷಂದಾಯ ದೈವದನೇಮ,ಸಂಜೆ7ಕ್ಕೆಕೊರತಿ ದೈವದ ಕೋಲ, ರಾತ್ರಿ 10ಕ್ಕೆ ಗುಳಿಗ ದೈವದ ಕೋಲ ನಡೆಯಲಿದೆ. ಏ.10ಕ್ಕೆ ರಾತ್ರಿ ಗುರುಹಿರಿಯರ ಆರಾಧನೆ ನಡೆಯಲಿದೆ ಎಂದು ತಿಳಿಸಿದರು.
ಬಲ್ಯ ಬಾಳಿಕೆ– ಬೋಳ್ನಾಡುಗುತ್ತು ಕುಟುಂಬಸ್ಥರ ಹಿರಿಯರಾದ ಚಂದ್ರಹಾಸ ರೈ ಬಲ್ಯ ಬಾಳಿಕೆ ಮಾತನಾಡಿದರು.
ಕುಟುಂಬಸ್ಥರಾದ ಸದಾನಂದ ಶೆಟ್ಟಿ, ವಿಶ್ವನಾಥ ಶೆಟ್ಟಿ, ಚಂದ್ರಶೇಖರ ಶೆಟ್ಟಿ ಮುಂಬೈ, ಉಮೇಶ್ ಗಾಂಭೀರ್, ಗೋಪಾಲ ಶೆಟ್ಟಿ, ಪದ್ಮನಾಭ ಅಡ್ಯಂತಾಯ, ರಾಮಚಂದ್ರ ಶೆಟ್ಟಿ, ಸುಧೀರ್ ಕುಮಾರ್ ರೈ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಂಗರಗುಡ್ಡೆಯ ಶ್ರೀ ರಾಮ ಭಜನಾ ಮಂದಿರ: ಶ್ರೀ ರಾಮನವಮಿ ಉತ್ಸವ



ಮುಲ್ಕಿ: ಅಂಗರಗುಡ್ಡೆ ಶ್ರೀರಾಮ ಭಜನಾ ಮಂದಿರದಲ್ಲಿ ಶ್ರೀ ರಾಮನವಮಿ ಉತ್ಸವ ವಿಜೃಂಭಣೆಯಿಂದ ನಡೆಯಿತು
ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ಅರ್ಚಕ ಪುರುಷೋತ್ತಮ್ ದಾಸ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಭಜನಾ ಕಾರ್ಯಕ್ರಮಕ್ಕೆ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಲಾಯಿತು.
ಈ ಸಂದರ್ಭದಲ್ಲಿ ಶ್ರೀರಾಮ ಭಜನಾ ಮಂದಿರದ ಅಧ್ಯಕ್ಷ ಸಂಪತ್ ಕುಮಾರ್, ಉದ್ಯಮಿ ತಾರನಾಥ್ ದೇವಾಡಿಗ, ಸುಧೀರ್ ಸತೀಶ್ ಪೂಜಾರಿ,ಶೆಟ್ಟಿ, ಸತೀಶ್ ಆಚಾರ್ಯ, ಸುಕೇಶ್, ರೋಷನ್, ಭಾಸ್ಕರ್ ಶೆಟ್ಟಿಗಾರ್, ಬಾಲಕೃಷ್ಣ ಶೆಟ್ಟಿ ಸುಕೇಶ್, ಜಯ ಸಿ. ಸಾಲ್ಯಾನ್ , ಚಂದ್ರಶೇಖರ್ , ದೇವದಾಸ್, ಹರೀಶ್,ಅನಿತಾ ಶೆಟ್ಟಿ, ಪುಷ್ಪ ಸಾಲ್ಯಾನ್ ಪ್ರಮೀಳಾ ಶೆಟ್ಟಿ, ರೂಪಾಕ್ಷಿ ಶೆಟ್ಟಿಗಾರ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು
ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ, ಮಹಾ ಅನ್ನಸಂಪರ್ಪಣೆ, ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು

ಕಿನ್ನಿಗೋಳಿ ಶ್ರೀ ರಾಮ ಮಂದಿರದಲ್ಲಿ ರಾಮೋತ್ಸವ, ಚತುರ್ವಿಂಶತಿ ಕಲಶ



ಕಿನ್ನಿಗೋಳಿ: ಕಿನ್ನಿಗೋಳಿ ಶ್ರೀ ರಾಮ ಮಂದಿರದಲ್ಲಿ ರಾಮನವಮಿ ಪ್ರಯುಕ್ತ ರಾಮೋತ್ಸವ ನಡೆಯಿತು. ಈ ಸಂದರ್ಭ ಶ್ರೀ ರಾಮ ದೇವರಿಗೆ ಚತುರ್ವಿಂಶತಿ ಕಲಶಾಭಿಷೇಕ, ಸಾನಿಧ್ಯ ಹವನ , ದೇವರಿಗೆ ವಿವಿಧ ಅಭಿಷೇಕ, ಭಜನಾ ಕಾರ್ಯಕ್ರಮ ಸಮಾರಾಧನೆ ವಿಜ್ರಂಭಣೆಯಿಂದ ನಡೆಯಿತು.
ಮಂದಿರದಪ್ರಧಾನಅರ್ಚಕವೇದಮೂರ್ತಿ ಗಿರೀಶ್ ಭಟ್ ಮುತವರ್ಜಿಯಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಮಂದಿರದ ಅಧ್ಯಕ್ಷರಾದ ರಾಜೇಶ್ ನಾಯಕ್ , ಉಪಾಧ್ಯಕ್ಷರಾದ ಆದಿತ್ಯ ಕಾಮತ್, ಕಾರ್ಯದರ್ಶಿ ರಾಘವೇಂದ್ರ ಪ್ರಭು, ಕೋಶಾಧಿಕಾರಿ ಸುಧೀರ್ ಶೆಣೈ, ಆಡಳಿತ ಮಂಡಳಿಯ ವಿನಾಯಕ ಮಲ್ಯ , ಅಚ್ಯುತ ಪ್ರಭು, ಪ್ರಜ್ವಲ್ ನಾಯಕ್, ಗಣನಾಥ ಮಲ್ಯ , ನರೇಂದ್ರ ಪ್ರಭು , ರಾಧಾಕೃಷ್ಣ ನಾಯಕ್ , ಅನಂತ ಕಾಮತ್ ಮಾತೃ ಮಂಡಳಿಯ ಸದಸ್ಯರು, ಯೂತ್ ಜಿ.ಎಸ್.ಬಿ. ಸದಸ್ಯರು ಮೊದಲಾದವರು ಈ ಸಂದರ್ಭದಲ್ಲಿ ಉಪಿಸ್ಥರಿದ್ದರು.

ಕೊಲಕಾಡಿ ಶ್ರೀ ಶಿರಿಡಿ ಸಾಯಿ ಬಾಬಾ ಮಂದಿರದಲ್ಲಿ ರಾಮನವಮಿ ಉತ್ಸವ





ಮುಲ್ಕಿ: ಕೊಲಕಾಡಿ ಶ್ರೀ ಶಿರಿಡಿ ಸಾಯಿ ಬಾಬಾ ಮಂದಿರದಲ್ಲಿ 15ನೇವರ್ಷದ ಶ್ರೀರಾಮ ನವಮಿ ಉತ್ಸವ ವೇ.ಮೂ. ವಾದಿರಾಜ ಉಪಾಧ್ಯಾಯ ಕುಂಜಾರ ಗಿರಿ ಮಾರ್ಗದರ್ಶನದಲ್ಲಿ ನಡೆಯಿತು.
ಗುರುವಾರ ಬೆಳಿಗ್ಗೆ ಕ್ಷೇತ್ರದ ಪ್ರಧಾನ ಅರ್ಚಕ ಸಂತೋಷ್ ಶಾಂತಿ ಕುದ್ರೋಳಿ ಪೌರೋಹಿತ್ಯದಲ್ಲಿ ವಿಶೇಷ ಪ್ರಾರ್ಥನೆ, ಶ್ರೀ ದೇವರಿಗೆ ಕಾಕಡ ಆರತಿ ನಡೆಯಿತು. ಭಜನಾ ಜ್ಯೋತಿಯನ್ನು ಅತಿಕಾರಿಬೆಟ್ಟು ದೆಪ್ಪುಣಿಗುತ್ತು ಗುತ್ತಿನಾರ್ ಸುಧಾಕರ ಶೆಟ್ಟಿ ಉದ್ಘಾಟಿಸಿದರು. ಅರ್ಚಕ ಪ್ರದೀಪ್ , ಅತಿಕಾರಿಬೆಟ್ಟು ಗ್ರಾಪಂ.ಮಾಜಿ ಅಧ್ಯಕ್ಷ ಮನೋಹರ ಕೋಟ್ಯಾನ್, ಉದ್ಯಮಿ ಜೀವನ್ ಶೆಟ್ಟಿ ಕಾರ್ನಾಡ್, ಕ್ಷೇತ್ರದ ಗೌರವಾಧ್ಯಕ್ಷ ಶೇಖರ ಶೆಟ್ಟಿ ಕಿಲ್ಪಾಡಿ ಭಂಡಸಾಲೆ ಅಧ್ಯಕ್ಷ ಈಶ್ವರ ಎಲ್ ಶೆಟ್ಟಿ ಮನ್ನಾಲಯ ಗುತ್ತು, ರಂಗನಾಥ ಶೆಟ್ಟಿ ಶ್ರೀಧರ ಕೋಟ್ಯಾನ್, ಜಯಶ್ರೀ, ಕೇಶವ ಶೆಟ್ಟಿ ಶಿಮಂತೂರು, ಪ್ರಕಾಶ್ ಸುವರ್ಣ, ಜಗದೀಶ್ ಹೆಗ್ಡೆ ಮಾನಂಪಾಡಿ, ಯತೀಶ್ ಮತ್ತಿತರರಿದ್ದರು.

ಇಂದು ಮುಕ್ಕ ಕ್ಯಾಂಪಸ್‌ನಲ್ಲಿ ಶ್ರೀನಿವಾಸ ವಿಶ್ವವಿದ್ಯಾಲಯದ 8ನೇ ವಾರ್ಷಿಕ ಘಟಿಕೋತ್ಸವ

ಮಂಗಳೂರು: ಶ್ರೀನಿವಾಸ ವಿಶ್ವವಿದ್ಯಾಲಯದ 8ನೇ ವಾರ್ಷಿಕ ಘಟಿಕೋತ್ಸವ ಮಾ.28 ರಂದು ಬೆಳಿಗ್ಗೆ 10ಕ್ಕೆ ಶ್ರೀನಿವಾಸ ವಿವಿ ಮುಕ್ಕ ಕ್ಯಾಂಪಸ್‌ನಲ್ಲಿ ನಡೆಯಲಿದೆ.
ಕರ್ಣಾಟಕ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಘವೇಂದ್ರ ಶ್ರೀನಿವಾಸ್ ಭಟ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ನಡೆಯುವ ಘಟಿಕೋತ್ಸವ ಮುಂದುವರಿದ ಕಾರ್ಯಕ್ರಮದಲ್ಲಿ ಮಂಗಳೂರು ಕೆಐಒಸಿಎಲ್ ಲಿಮಿಟೆಡ್‌ನ ಉತ್ಪಾದನಾ ಹಾಗು ಯೋಜನಾ ವಿಭಾಗದ ಅಧ್ಯಕ್ಷ ಗಾಂತಿ ವೆಂಕಟ್ ಕಿರಣ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀನಿವಾಸ ವಿವಿ ಮೌಲ್ಯಮಾಪನ ಕುಲಸಚಿವ ಡಾ. ಶ್ರೀನಿವಾಸ್ ಮಯ್ಯ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.
ಘಟಿಕೋತ್ಸವದಲ್ಲಿ2769 ಪದವೀಧರರು(ಸ್ನಾತಕೋತ್ತರ –626, ಪದವಿ– 2023) ಪ್ರಮಾಣಪತ್ರ ಸ್ವೀಕರಿಸಲಿದ್ದು ವಿಶ್ವವಿದ್ಯಾಲಯವು ವಿವಿಧ ಕಾರ್ಯಕ್ರಮಗಳಿಗೆ 236 ರ‍್ಯಾಂಕ್‌ಗಳನ್ನು ಪ್ರಕಟಿಸಿದೆ ಮತ್ತು 48 ಪದವೀಧರರು ಘಟಿಕೋತ್ಸವದ ಸಮಯದಲ್ಲಿ ಕುಲಾಧಿಪತಿಗಳ ಚಿನ್ನದ ಪದಕವನ್ನು ಸ್ವೀಕರಿಸಲಿದ್ದಾರೆ. ಘಟಿಕೋತ್ಸವದಲ್ಲಿ 1 ಡಿ.ಎಸ್‌ಸಿ., 1 ಡಿ.ಲಿಟ್. ಮತ್ತು 118 ಪಿಎಚ್‌ಡಿ ಪದವಿ ಪ್ರದಾನಿಸಲಾಗುವುದು ಎಂದರು.

> **ಸತೀಶ್ ಪೈಗೆ ಗೌರವ ಪದವಿ ಪ್ರದಾನ**
>
> ಪ್ರತಿಷ್ಠಿತ ಡಾಕ್ಟರ್ ಆಫ್ ಲಿಟರೇಚರ್ (ಡಿ.ಲಿಟ್- ಗೌರವ ಪದವಿ)ಯನ್ನು ಮಣಿಪಾಲ ಮೀಡಿಯಾ ನೆಟ್ವರ್ಕ್ ಲಿಮಿಟೆಡ್ ನಿರ್ದೇಶಕ ಟಿ. ಸತೀಶ್ ಯು. ಪೈ ಅವರಿಗೆ ಅವರ ವಿಶಿಷ್ಟ ಕೊಡುಗೆಗಳನ್ನು ಗೌರವಿಸಿ ಪ್ರದಾನ ಮಾಡಲಾಗುವುದು.
>
> • ಡಾ. ಶ್ರೀನಿವಾಸ ಮಯ್ಯ

ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ

ಸಂಸ್ಥಾಪಕರ ದಿನಾಚರಣೆಯ ಸಂದರ್ಭ ಶ್ರೀನಿವಾಸ ವಿವಿ ಮತ್ತು ಶ್ರೀನಿವಾಸ ಗ್ರೂಪ್ ಆಫ್ ಕಾಲೇಜುಗಳ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ. ಶಾಮ ರಾವ್ ಪ್ರತಿಷ್ಠಾನ ವತಿಯಿಂದ ಕಡಬ ಸರ್ಕಾರಿ ಪ್ರೌಢ ಶಾಲೆ ಉಪ ಮುಖ್ಯ ಶಿಕ್ಷಕಿ ಡಾ. ವೇದಾವತಿ ಬಿ. ಮತ್ತು ಕೊಂಚಾಡಿ ಶ್ರೀ ರಾಮಕೃಷ್ಣ ಸಂಸ್ಥೆ ಪ್ರಾಂಶುಪಾಲ ರಾಜೇಶ್ ಕದ್ರಿ ಅವರನ್ನು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ನೀಡಿದ ಕೊಡುಗೆಗಾಗಿ ಎ. ಶಾಮರಾವ್ ಸ್ಮಾರಕ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ - 2026ಗೆ ಆಯ್ಕೆ ಮಾಡಲಾಗಿದೆ.
ಈ ಸಂದರ್ಭದಲ್ಲಿ ಶ್ರೀನಿವಾಸ ವಿಶ್ವವಿದ್ಯಾಲಯ ಮತ್ತು ಶ್ರೀನಿವಾಸ ಗ್ರೂಪ್ ಆಫ್ ಕಾಲೇಜುಗಳ ಅಧ್ಯಾಪಕರು, ಪೇಟೆಂಟ್, ಸಂಶೋಧನಾ ನಿಿಿ, ವಿದೇಶಗಳಲ್ಲಿ ನಡೆದ ಸಮ್ಮೇಳನಗಳಲ್ಲಿ ಸಂಶೋಧನಾ ಪ್ರಬಂಧ ಮಂಡನೆ, ಪಿಎಚ್ ಡಿ ಪದವಿ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಮಾಡಿದ ವಿಶಿಷ್ಟ ಸಾಧನೆಗಳಿಗೆ ಸುಮಾರು 200 ಮಂದಿಗೆ ವಿಶೇಷವಾಗಿ ಸನ್ಮಾನಿಸಲಾಗುವುದು. ವಿಶ್ವವಿದ್ಯಾಲಯದಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ನೀಡಿ ಗೌರವಿಸಲಾಗುವುದು

ನಾಳೆ ಪದವಿ ಪ್ರದಾನ ಕಾರ್ಯಕ್ರಮ

ಶ್ರೀನಿವಾಸ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ನ ಪದವಿ ಪ್ರದಾನ ಕಾರ್ಯಕ್ರಮ ಮಾ. 29ರಂದು ಬೆಳಿಗ್ಗೆ 10ಕ್ಕೆ ಶ್ರೀನಿವಾಸ ವಿಶ್ವವಿದ್ಯಾಲಯ ಮುಕ್ತ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದೆ. ಬೆಂಗಳೂರಿನ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ ಸೊಲ್ಯೂಷನ್ ಆರ್ಕಿಟೆಕ್ಟ್ ಅರವಿಂದ ಹೊಳ್ಳ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಒಟ್ಟು 1058 ಪದವೀಧರರಿಗೆ ಈ ಸಂದರ್ಭದಲ್ಲಿ ಪದವಿ ಪ್ರದಾನಿಸಲಾಗುವುದು.

ಪ್ರತಿಭಾ ದಿನಾಚರಣೆ

ಶ್ರೀನಿವಾಸ ವಿವಿ ಮತ್ತು ಶ್ರೀನಿವಾಸ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ವಿದ್ಯಾರ್ಥಿಗಳ ಪ್ರತಿಭಾ ದಿನಾಚರಣೆ ಮಾ. 30ರಂದು ಬೆಳಿಗ್ಗೆ 9.30ಕ್ಕೆ ಶ್ರೀನಿವಾಸ ವಿಶ್ವವಿದ್ಯಾಲಯ ಮುಕ್ಕ ಕ್ಯಾಂಪಸ್ ನಲ್ಲಿ ಆಯೋಜಿಸಲಾಗಿದೆ.

ಮಾ.31: ಸಂಸ್ಥಾಪಕರ, ಕಾಲೇಜು ದಿನಾಚರಣೆ

ಶ್ರೀನಿವಾಸ ವಿಶ್ವವಿದ್ಯಾಲಯ ಮತ್ತು ಶ್ರೀನಿವಾಸ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ಗಳ ಸಂಸ್ಥಾಪಕರ ದಿನಾಚರಣೆ ಮತ್ತು ಕಾಲೇಜು ದಿನಾಚರಣೆ ಮಾ. 31ರಂದು ಬೆಳಿಗ್ಗೆ 10ಕ್ಕೆ ಶ್ರೀನಿವಾಸ ವಿಶ್ವವಿದ್ಯಾಲಯ ಮುಕ್ತ ಕ್ಯಾಂಪಸ್ ನಲ್ಲಿ ಆಯೋಜಿಸಲಾಗಿದೆ. ಎನ್‌ಎಂಪಿಎ ಉಪಾಧ್ಯಕ್ಷೆ ಎಸ್. ಶಾಂತಿ ಮುಖ್ಯ ಅತಿಥಿಯಾಗಿ ಸಂಸ್ಥಾಪಕರ ದಿನದ ಮುಖ್ಯ ಭಾಷಣ ಮಾಡಲಿದ್ದಾರೆ. ಶ್ರೀನಿವಾಸ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ ಎ. ಶ್ರೀನಿವಾಸ್ ರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ವಿವಿ ಆಡಳಿತ ಮಂಡಳಿ ಟ್ರಸ್ಟಿಗಳಾದ ಎ. ವಿಜಯಲಕ್ಷ್ಮಿ ಆರ್. ರಾವ್, ಪ್ರೊ. ಎ. ಮಿತ್ರಾ ಎಸ್. ರಾವ್, ಪದ್ಮನಿ ಕುಮಾರ್ ಉಪ ಕುಲಪತಿ ಡಾ. ಸತ್ಯನಾರಾಯಣ ರೆಡ್ಡಿ, ಕುಲಸಚಿವರಾದ ಡಾ. ಅನಿಲ್ ಕುಮಾರ್, ಡಾ.ಶ್ರೀನಿವಾಸ್ ಮಯ್ಯ ಡಾ. ಅಜಯ್ ಕುಮಾರ್, ಆದಿತ್ಯ ಕುಮಾರ್ ಮಯ್ಯ ಭಾಗವಹಿಸುವರು ಎಂದು ವಿವರಿಸಿದರು.
ವಿವಿ ಕುಲಸಚಿವರಾದ ಡಾ.ಅನಿಲ್ ಕುಮಾರ್, ಡಾ.ಅಜಯ್ ಕುಮಾರ್, ವಳಚ್ಚಿಲ್ ಶ್ರೀನಿವಾಸ ಕಾಲೇಜು ಆಫ್ ಫಾರ್ಮಸಿ ಪ್ರಾಂಶುಪಾಲ ಡಾ. ರಾಮಕೃಷ್ಣ ಶಬರಾಯ ಎ. ಉಪಸ್ಥಿತರಿದ್ದರು.

ಸುತ್ತ ಮುತ್ತ

ಇಂದು ಜಿಲ್ಲಾ ಚುಟುಕು ಸಾಹಿತ್ಯೋತ್ಸವ, ಕವಿಗೋಷ್ಠಿ

ಕಾಸರಗೋಡು: ಕಾಸರಗೋಡು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ನೇತೃತ್ವದಲ್ಲಿ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಕಾಸರಗೋಡು ಜಿಲ್ಲಾ ಚುಟುಕು ಸಾಹಿತ್ಯೋತ್ಸವ ಮಾ.28ರಂದು ಅಪರಾಹ್ನ 2.30ಕ್ಕೆ ಕಾಸರಗೋಡು ಕನ್ನಡ ಗ್ರಾಮದಲ್ಲಿ ಜರಗಲಿದೆ. ಚುಟುಕು ಸಾಹಿತ್ಯ ಪರಿಷತ್ ಕೇಂದ್ರಸಮಿತಿ ಪ್ರಧಾನ ಸಂಚಾಲಕ ಡಾ.ಎಂ.ಜಿ.ಆರ್.ಅರಸ್ ಮೈಸೂರು ಉದ್ಘಾಟಿಸ ುವರು. ಕಾಸರಗೋಡು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವರಾಮ ಕಾಸರಗೋಡು ಅಧ್ಯಕ್ಷತೆ ವಹಿಸುವರು. ರಾಧಾಕೃಷ್ಣ ಕೆ. ಉಳಿಯತಡ್ಕ ದಿಕ್ಸೂಚಿ ಭಾಷಣ ಮಾಡುವರು. ನಗರಸಭಾ ಸದಸ್ಯೆ ಶಾರದಾ ಬಿ., ಸಾಹಿತಿ ಹರೀಶ್ ಸುಲಾಯ ಒಡ್ಡಂಬೆಟ್ಟು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಕಾಸರಗೋಡು – ಕರ್ನಾಟಕ ಚುಟುಕು ವಾಚನ ಗೋಷ್ಠಿಯಲ್ಲಿ ಹಿರಿಯ ಕವಿ ವೆಂಕಟ ಭಟ್ ಎಡನೀರು ಅಧ್ಯಕ್ಷತೆ ವಹಿಸುವರು. ಸಾಹಿತಿ ಗುಣಾಜೆ ರಾಮಚಂದ್ರ ಭಟ್, ಡಾ.ವಾಣಿಶ್ರೀ ಕಾಸರಗೋಡು ಅತಿಥಿಗಳಾಗಿ ಭಾಗವಹಿಸುವರು. ಕಾಸರಗೋಡು ಮತ್ತು ಕರ್ನಾಟಕ ಕವಿಗಳು ಚುಟುಕುಗಳನ್ನು ವಾಚಿಸುವರು. ವಿರಾಜ್ ಅಡೂರು ನಿರೂಪಿಸುವರು.

ನಾಳೆಯಿಂದ ಕುಂಟಾರು ಶ್ರೀ ದೇವಳ ವಾರ್ಷಿಕ ಜಾತ್ರೆ

ಮುಳ್ಳೇರಿಯ: ಕುಂಟಾರು ಶ್ರೀ ಮಹಾ ವಿಷ್ಣು ಮೂರ್ತಿ ದೇವಾಲಯದ ವಾರ್ಷಿಕ ಜಾತ್ರೆ ಮಾ.29 ರಿಂದ 31ರ ತನಕ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಮಾ.29ರಂದು ಬೆಳಿಗ್ಗೆ 8.30ರಿಂದ ಗಣಪತಿ ಹೋಮ, ನವಕ, 9ರಿಂದ ಶ್ರೀ ಅಯ್ಯಪ್ಪ ಭಜನಾ ಸಂಘ ಕುಂಟಾರು, 10 ರಿಂದ ಶ್ರೀ ಮೂಕಾಂಬಿಕಾ ಭಜನಾ ಸಂಘ ಉಯಿತ್ತಡ್ಕ, 11ಕ್ಕೆ ಹರಿಪ್ರಿಯಾ ಮಹಿಳಾ ಭಜನಾ ಸಂಘದವರಿಂದ ಭಜನೆ, ಮಧ್ಯಾಹ್ನ 12ಕ್ಕೆ ಶ್ರೀಕೃಷ್ಣ ಮಹಿಳಾ ಕುಣಿತ ಭಜನಾ ಸಂಘದವ ರಿಂದ ಕುಣಿತ ಭಜನೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, 1.30ರಿಂದ ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರದವ ರಿಂದ ಯಕ್ಷಗಾನ ತಾಳಮದ್ದಳೆ, ಸಂಜೆ 4.30ಕ್ಕೆ ಕುಣಿತ ಭಜನೆ ನಡೆಯಲಿದೆ. 5.30ಕ್ಕೆ ಭಜನೆ, 6.30ಕ್ಕೆ ತಾಯಂಬಕ, ಕುಂಟಾರು ಶಾರದಾ ಸಂಗೀತ ಶಾಲೆಯ ಮಕ್ಕಳಿಂದ ಭಕ್ತಿಗಾನ ಮೇಳ, ರಾತ್ರಿ 7.30ಕ್ಕೆ ಮಹಾ ಪೂಜೆ, 8.30ಕ್ಕೆ ಶ್ರೀ ದೇವರ ಭೂತಬಲಿ ಉತ್ಸವ, ಕಟ್ಟೆ ಪೂಜೆ, ಸುಡುಮದ್ದು ಪ್ರದರ್ಶನ ನಡೆಯಲಿದೆ. ಮಾ.30ರಂದು ಬೆಳಿಗ್ಗೆ 6ರಿಂದ ದೇವರ ಉತ್ಸವ, ದರ್ಶನ ಬಲಿ, ರಾಜಾಂಗಣಪ್ರಸಾದ, 10ರಿಂದ ಭಜನೆ ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಸಂಜೆ 6.30ಕ್ಕೆ ಕುಣಿತ ಭಜನೆ, ರಾತ್ರಿ 7ಕ್ಕೆ ಸಭಾ ಕಾರ್ಯಕ್ರಮ, ಹಿರಿಯರಿಗೆ ಗೌರವಾರ್ಪಣೆ, ವಿದ್ಯಾರ್ಥಿ ಗಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ. ರಾತ್ರಿ 7.30ಕ್ಕೆ ರಂಗಪೂಜೆ, ಯಕ್ಷಗಾನ ನಡೆಯಲಿದೆ. ಮಾ.31ರಂದು ಬೆಳಿಗ್ಗೆ 9ಕ್ಕೆ ಕುಂಟಾರು ಚಾಮುಂಡಿ ದೈವದ ನೇಮ, 11.30ಕ್ಕೆ ಪಡ್ಪೆ ಚಾಮುಂಡಿ ದೈವದ ನೇಮ, ಸಂಜೆ 4ಕ್ಕೆ ವೆಳುತೇಡನ್ ತರವಾಡು ಪರಿಸರ ದಲ್ಲಿ ಕುಂಟಾರು ಚಾಮುಂಡಿ ದೈವದ ನೇಮ ನಡೆಯಲಿದೆ.

ಮಾ.29ರಂದು ಚಾಕಟೆಗುಳಿ ದೈವಸ್ಥಾನ ವಾರ್ಷಿಕೋತ್ಸವ

ಮಂಜೇಶ್ವರ: ಪೈವಳಿಕೆ ಸಮೀಪದ ಬಾಯಾರು ಕನಿಯಾಲ ಚಾಕಟೆಗುಳಿ ಶ್ರೀ ಕೊರಗು ತನಿಯ ಮತ್ತು ಪರಿವಾರ ದೈವಗಳ ಸೇವಾ ಸಮಿತಿಯ ಆಶ್ರಯದಲ್ಲಿ ದೈವಸ್ಥಾನದ ವಾರ್ಷಿಕೋತ್ಸವ ಹಾಗೂ ಕೋಲ ಕಾರ್ಯಕ್ರಮವು ಮಾ.29ರಂದು ವಿವಿಧ ವಿS ವಿಧಾನಗಳೊಂದಿಗೆ ಜರಗಲಿದೆ.
ಬೆಳಗ್ಗೆ 8.30ಕ್ಕೆ ಕನಿಯಾಲ ಸತ್ಯನಾರಾಯಣ ಭಟ್ ತಂತ್ರಿಯವರಿಂದ ಗಣಪತಿ ಹವನ, ಸಂಜೆ 5ಕ್ಕೆ ಶ್ರೀ ಗುಳಿಗ ದೈವದ ಕೋಲ, 6 ಗಂಟೆಗೆ ಶ್ರೀ ಮುಗೇರ ದೈವಗಳಿಗೆ ಮಂಜ, ರಾತ್ರಿ 7.30ಕ್ಕೆ ಶ್ರೀ ಕೊರಗ ತನಿಯ ದೈವದ ಕೋಲ, 9.30ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ.

ಸ್ಕಾಲರ್ ಶಿಪ್‌ಗೆ ಸೌರವ್ ಆಯ್ಕೆ

ಕುಂಬಳೆ: ಕೇರಳ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸ್ಥಳೀಯಾಡಳಿತ ಸಂಸ್ಥೆ ಜಂಟಿಯಾಗಿ ಕಾರ್ಯಗತಗೊಳಿಸುವ ಇಕೋ ಸೆನ್ಸ್ ಸ್ಕಾಲರ್ ಶಿಪ್ ಗೆ ಸೂರಂಬೈಲು ಸರಕಾರಿ ಪ್ರೌಢಶಾಲೆಯ ಒಂಭತ್ತನೇ ತರಗತಿಯ ವಿದ್ಯಾರ್ಥಿ ಸೌರವ್ ಆಯ್ಕೆಯಾಗಿದ್ದಾನೆ. ಈತನ ಸಾಧನೆಗೆ ಶಾಲಾ ರಕ್ಷಕ ಶಿಕ್ಷಕ ಸಂಘ ಅಭಿನಂದನೆ ಸಲ್ಲಿಸಿದೆ.



ಪೋತನ್ನೂರಿನಿಂದ ಮಂಗಳೂರು ತನಕ ಪ್ರಥಮ ಹಂತದಲ್ಲಿ ಕಾರ್ಯಚಟುವಟಿಕೆ

ರೈಲು ಅಪಘಾತ ತಡೆಗೆ ಸುರಕ್ಷಾ ಬೇಲಿ ನಿರ್ಮಾಣ ಯೋಜನೆ

ಕಾಸರಗೋಡು: ಕಾಸರಗೋಡು ಜಿಲ್ಲೆಯ ಹಳಿಗಳಲ್ಲೂ ರೈಲುಗಾಡಿಗಳು ಅತ್ಯಂತ ವೇಗವಾಗಿ ಸಂಚರಿಸುತ್ತಿರುವ ಹಿನ್ನೆಲೆಯಲ್ಲಿ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸುರಕ್ಷಾ ಬೇಲಿ ನಿರ್ಮಾಣಕ್ಕೆ ರೈಲ್ವೆ ಇಲಾಖೆಯು ಮುಂದಾಗಿದೆ. ಇದರ ಅಂಗವಾಗಿ ಪಾಲಕ್ಕಾಡ್ ಡಿವಿಷನ್ ನೇತೃತ್ವದಲ್ಲಿ ಕಾರ್ಯಯೋಜನೆ ಸಿದ್ಧಪಡಿಸಲಾಗಿದೆ.
ರೈಲು ಹಳಿ ಬಳಿಯ ಪ್ರದೇಶಗಳಲ್ಲಿ ಜನರ ಅನಧಿಕೃತ ಪ್ರವೇಶ ಮತ್ತು ಹಳಿ ದಾಟುವಿಕೆಯನ್ನು ನಿಯಂ ತ್ರಿಸಲು ಈ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಯಾಣಿಕರ ಹಾಗೂ ಸಾರ್ವಜನಿಕರ ಸುರಕ್ಷತೆ ಹೆಚ್ಚಿಸುವುದು ಯೋಜನೆಯ ಬಹುಮುಖ್ಯ ಉದ್ದೇಶವಾಗಿದೆ.
ಈ ಯೋಜನೆಯ ಮೊದಲ ಹಂತದಲ್ಲಿ ದೇಶದ 16,398 ಕಿಲೋ ಮೀಟರ್ ಬೇಲಿ ನಿರ್ಮಿಸಲಾಗುತ್ತಿದ್ದು, ಈ ಪೈಕಿ ದಕ್ಷಿಣ ರೈಲ್ವೆ ವಲಯದಲ್ಲಿ 827 ಕಿಲೋ ಮೀಟರ್ ಸುರಕ್ಷಾ ಬೇಲಿ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಅದರಂತೆ ಪೋತನ್ನೂರಿನಿಂದ ಮಂಗಳೂರು ವರೆಗಿನ 530 ಕಿಲೋ ಮೀಟರ್ ರೈಲು ಹಳಿಯನ್ನು ಮೊದಲ ಹಂತದಲ್ಲಿ ಸೇರ್ಪಡೆಗೊಳಿಸಲಾಗಿದ್ದು, ಪ್ರಕ್ರಿಯೆ





ಈಗಾಗಲೇ ಆರಂಭಿಸಲಾಗಿದೆ.
ಈ ನಿಟ್ಟಿನಲ್ಲಿ 320 ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ ಎಂದು ರೈಲ್ವೆ ವಿಭಾಗವು ತಿಳಿಸಿದೆ. ಮಂಗಳೂರಿನಿಂದ ಕಾಸರಗೋಡು ಮೂಲಕ ತಿರುವನಂತಪುರ ಮತ್ತು ತಮಿಳುನಾಡು ರಾಜ್ಯದ ಹಳಿಗಳಲ್ಲಿ ರೈಲುಗಳ ಸಂಖ್ಯೆ ಹಾಗೂ ವೇಗವನ್ನೂ ಹೆಚ್ಚಿಸಲಾಗಿದೆ. ರೈಲುಗಾಡಿಗಳ ಇಂಜಿನ್‌ಗಳನ್ನು ವಿದ್ಯುತ್‌ಗೆ ಮಾರ್ಪಡಿಸಿದಾಗ ಶಬ್ದ ಕಡಿಮೆ ಯಾಗುತ್ತದೆ. ಅಲ್ಲದೆ ಮಿಂಚಿನಂತೆ ರೈಲುಗಾಡಿ ಆಗಮನ ವಾಗುತ್ತದೆ. ಈ ಹಿನ್ನೆಲೆಯಲ್ಲಿ ರೈಲ್ವೆಯು ಸುರಕ್ಷಾ ಬೇಲಿ ನಿರ್ಮಿಸಲು ನಿರ್ಧರಿಸಿರುವುದಾಗಿದೆ. ಜನರು ಹಳಿ ದಾಟಿ ಬರುವುದಲ್ಲದೆ ಜಾನುವಾರುಗಳು ಹಳಿ ಪ್ರವೇಶಿಸುವುದನ್ನು ನಿಯಂತ್ರಿಸಲು ಉದ್ದೇಶಿಸ ಲಾಗಿದೆ. ಪ್ರೀ ಕಾಸ್ಟ್ ಕಾಂಕ್ರೀಟ್ ಬ್ಲಾಕ್‌ಗಳನ್ನು ನಿರ್ಮಾಣಕ್ಕೆ ಉಪಯೋಗಿಸಲಾಗುವುದು. ಗಂಟೆಗೆ 110 ಕಿಲೋ ಮೀಟರ್‌ಗಿಂತ ಹೆಚ್ಚು ವೇಗವಿರುವ ಪ್ರಧಾನ ರೂಟ್‌ಗಳಲ್ಲಿ ಪ್ರಸ್ತುತ ಸುರಕ್ಷಾ ಬೇಲಿ ನಿರ್ಮಿಸಲು ಕಾರ್ಯಯೋಜನೆ ರೂಪಿಸಲಾಗಿದೆ. ಕಾಸರಗೋಡು ಜಿಲ್ಲೆಯ ಹಳಿಗಳಲ್ಲಿ ವಂದೇ ಭಾರತ್ ರೈಲುಗಾಡಿಯು 130 ಕಿಲೋ ಮೀಟರ್ ವೇಗದಲ್ಲಿ ಸಂಚರಿಸುತ್ತಿದ್ದು, ಈ ವಲಯದಲ್ಲಿ ಸುರಕ್ಷಾ ಬೇಲಿಯನ್ನು ಮೊದಲ ಹಂತದಲ್ಲೇ ಸ್ಥಾಪಿಸಲಾಗುವುದು. ಪೋತನ್ನೂರಿನಿಂದ ಮಂಗಳೂರು ತನಕದ ಹಳಿಯಲ್ಲಿ 110 ಕಿಲೋ ಮೀಟರ್ ವೇಗವನ್ನು 130 ಕಿಲೋ ಮೀಟರ್‌ಗೆ ಏರಿಸಿರುವುದರಿಂದ ಪ್ರಥಮ ಹಂತದಲ್ಲಿ ಈ ಸೆಕ್ಷನ್‌ನ್ನು ಪರಿಗಣಿಸಲಾಗಿದೆ ಎಂದು ರೈಲ್ವೆ ಪಾಲಕ್ಕಾಡ್ ವಿಭಾಗ ಮಾಹಿತಿ ನೀಡಿದೆ.

ಕಾಸರಗೋಡು ಜಿಲ್ಲೆಯ ಪ್ರಮುಖ ನಿಲ್ದಾಣಗಳ ಅಭಿವೃದ್ಧಿ

ರೈಲು ಹಳಿಗಳಿಗೆ ಸುರಕ್ಷಾ ಬೇಲಿಯನ್ನು ಸ್ಥಾಪಿಸಿ ಜನರನ್ನು ಹಾಗೂ ಜಾನುವಾರುಗಳನ್ನು ಸಂರಕ್ಷಿಸುವ ಯೋಜನೆ ತಯಾರಿಸಲಾಗಿದ್ದು, ಅದರೊಂದಿಗೆ ಕಾಸರಗೋಡು ಜಿಲ್ಲೆಯ ಎಲ್ಲಾ ಪ್ರಮುಖ ರೈಲು ನಿಲ್ದಾಣಗಳಲ್ಲಿ ಅಗತ್ಯದ ಮೂಲಭೂತ ಸೌಲಭ್ಯಗಳನ್ನು ಅಳವಡಿಸಿ ಅಭಿವೃದ್ಧಿಗೊಳಿಸಲು ನಿರ್ಧರಿಸಲಾಗಿದೆ. ಈಗಾಗಲೇ ಕಾಸರಗೋಡು ನಗರದ ರೈಲು ನಿಲ್ದಾಣ, ಕಾಞಂಗಾಡು, ಕುಂಬಳೆ, ಮಂಜೇಶ್ವರ ರೈಲು ನಿಲ್ದಾಣಗಳಲ್ಲಿ ಅಗತ್ಯದ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.

ಕಾಸರಗೋಡು ನಿಲ್ದಾಣದಲ್ಲಿ ಅಮೃತ್ ಭಾರತ್ ಯೋಜನೆ

ಕಾಸರಗೋಡು ನಗರ ನಿಲ್ದಾಣವನ್ನು ಅಮೃತ್ ಭಾರತ್ ಯೋಜನೆಯಲ್ಲಿ ಒಳಪಡಿಸಿ ಕೇಂದ್ರ ಸರಕಾರವು ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಕ್ಕೆ ತಂದಿದೆ. ಜೊತೆಗೆ ರೈಲು ನಿಲ್ದಾಣಕ್ಕೆ ತೆರಳುವ ರಸ್ತೆಯನ್ನು ಕೂಡಾ ಅಗಲಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಕಾಸರಗೋಡು ರೈಲು ನಿಲ್ದಾಣದಲ್ಲಿ ಪಾರ್ಕಿಂಗ್ ವ್ಯವಸ್ಥೆ, ಆಸನದ ವ್ಯವಸ್ಥೆ, ಟಿಕೆಟ್ ಕೌಂಟರ್, ಹವಾ ನಿಯಂತ್ರಿತ ಕೊಠಡಿ, ಕುಡಿಯುವ ನೀರು, ಲಿಫ್ಟ್, ವಿಶ್ರಾಂತಿ ಕೊಠಡಿ, ಮಹಿಳಾ ಕೊಠಡಿ, ಸರಕು ಸಂಗ್ರಹ ಕೇಂದ್ರ, ಸುಸಜ್ಜಿತ ಶೌಚಾಲಯ ಇತ್ಯಾದಿಗಳನ್ನು ಈಗಾಗಲೇ ನಿರ್ಮಿಸಲಾಗಿದೆ. ಈ ಮಧ್ಯೆ ಇನ್ನೊಂದು ಲಿಫ್ಟ್ ಸ್ಥಾಪಿಸುವ ನಿಟ್ಟಿನಲ್ಲಿ ಕಾಮಗಾರಿ ಮುಂದುವರಿದಿದೆ.

ಕೊಡ್ಯಮೆ ಅಂತಲ ಧರ್ಮಚಾವಡಿಯ ವಾರ್ಷಿಕ ನೇಮದ ಆಮಂತ್ರಣ ಬಿಡುಗಡೆ



ಕುಂಬಳೆ: ಇತಿಹಾಸ ಪ್ರಸಿದ್ಧ ಕುಂಬಳೆ ಸೀಮೆಯ ಕೊಡ್ಯಮೆ ಅಂತಲ ಶ್ರೀ ಧರ್ಮಚಾವಡಿ ಧರ್ಮ ದೈವಗಳ ವಾರ್ಷಿಕ ನೇಮೋತ್ಸವವು ಮೇ 2 ರಿಂದ 7ರ ತನಕ ಜರಗಲಿದೆ. ಇದರ ಆಮಂತ್ರಣ ಪತ್ರಿಕೆಯನ್ನು ಬಾಯಾರು ಓಂ ಶ್ರೀ ಶಕ್ತಿಪೀಠ ಶ್ರೀ ಕ್ಷೇತ್ರ ಬೊಳ್ಳಿಮಲೆ ಇಲ್ಲಿನ ಶ್ರೀ ಶಾರದಾತನಯ ಬಾಯಾರು ಅವರು ಬಿಡುಗಡೆಗೊಳಿಸಿ ಮಾತನಾಡಿದರು.
ಸಮುದಾಯವು ಅಚಲ ದೇವ ಭಕ್ತಿ ಆರಾಧನೆಗೆ ಮೂಲ ಸ್ವರೂಪವಾ ಗಿದೆ. ಪಾರಂಪರಿಕ ದೈವಿಕ ಶಕ್ತಿಗಳ ಆರಾಧನೆಯಿಂದ ನಾಡಿಗೆ ಕ್ಷೇಮವುಂಟಾಗಲಿ. ಆರಾಧನೆಯ ಮೂಲಕ ಧರ್ಮಜಾಗೃತಿ ಉಂಟಾಗಬೇಕಿದೆ. ಯುವ ಸಮುದಾಯವು ಧಾರ್ಮಿಕ ಕಾರ್ಯಗಳಲ್ಲಿ ಭಕ್ತಿಶ್ರದ್ಧೆಯಿಂದ ಪಾಲ್ಗೊಳ್ಳುವಂತೆ ಹಿರಿಯರ ಪ್ರೋತ್ಸಾಹವಿರಬೇಕು ಎಂದರು.
ಕೊಡ್ಯಮೆ ಅಂತಲ ಶ್ರೀ ಧರ್ಮಚಾವಡಿಯ ಸೇವಾ ಸಮಿತಿ ಹಾಗೂ ಆಡಳಿತ ಸಮಿತಿಯ ಪದಾಧಿಕಾರಿಗಳು, ಆಶಾ ಶಾರದಾತನಯ ಮೊದಲಾದವರು ಉಪಸ್ಥಿತರಿದ್ದರು.

ಮಾ.29ರಂದು ಸಾಮೂಹಿಕ ಆಶ್ಲೇಷ ಬಲಿ ಸೇವೆ

ಬದಿಯಡ್ಕ: ನೀರ್ಚಾಲು ಸಮೀಪದ ಬೇಳ ಕುಮಾರಮಂಗಲ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಸಾಮೂಹಿಕ ಆಶ್ಲೇಷ ಬಲಿ ಸೇವೆಯು ಮಾ.29ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಬೆಳಗ್ಗೆ 10.30ಕ್ಕೆ ಪೂಜಾ ಸಂಕಲ್ಪ ನೆರವೇರಲಿದೆ. ಸೇವೆ ಮಾಡಿಸುವವರು ಬೆಳಗ್ಗೆ 10 ಗಂಟೆಯೊಳಗೆ ಶ್ರೀ ಕ್ಷೇತ್ರಕ್ಕೆ ತಲುಪಬೇಕೆಂದು ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ಸಾಮೂಹಿಕ ಚಿತ್ರಕಲೆ , ಸ್ವಚ್ಛತಾ ರ‍್ಯಾಲಿ, ತ್ಯಾಜ್ಯ ಮುಕ್ತ ಕೇರಳಕ್ಕೆ ವಿವಿಧ ಕಾರ್ಯಕ್ರಮ



ಕಾಸರಗೋಡು: ಕಾಸರಗೋಡು ನಗರಸಭೆ, ಕೇರಳ ಘನತ್ಯಾಜ್ಯ ನಿರ್ವಹಣಾ ಯೋಜನೆ, ಶುಚಿತ್ವಾ ಮಿಷನ್ ನೇತೃತ್ವದಲ್ಲಿ ಸಾಮೂಹಿಕ ಚಿತ್ರಕಲೆ, ಸ್ವಚ್ಛತಾ ರ‍್ಯಾಲಿ ಮತ್ತು ತ್ಯಾಜ್ಯ ಮುಕ್ತ ಕೇರಳಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾಧಿಕಾರಿ ಉದ್ಘಾಟನೆ

ಹಸಿರು ವಿಧಾನಸಭಾ ಚುನಾವಣೆಯ ಅಭಿಯಾನದ ಭಾಗವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜಿಲ್ಲಾ ಚುನಾವಣಾಧಿಕಾರಿ , ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಚಿತ್ರ ರಚಿಸುವ ಮೂಲಕ ಸಮಾರಂಭವನ್ನು ಉದ್ಘಾಟಿಸಿ, ವಿಧಾನಸಭಾ ಚುನಾವಣೆಯಲ್ಲಿ ಪ್ರತಿಯೋರ್ವರೂ ಹಸಿರು ಶಿಷ್ಟಾಚಾರವನ್ನು ಪಾಲಿಸಬೇಕು ಎಂದು ಕರೆ ನೀಡಿದರು.
ಕಾಸರಗೋಡು ಹೊಸ ಬಸ್ ನಿಲ್ದಾಣದಲ್ಲಿ ಶುಕ್ರವಾರ ನಡೆದ ಈ ಕಾರ್ಯಕ್ರಮವನ್ನು ಚಿತ್ರ ರಚನೆಗಾರರಾದ ನ್ಯಾಷನಲ್ ಅಬ್ದುಲ್ಲ, ಕಮಲಾಕ್ಷನ್, ಕಾಸರಗೋಡು ಸರಕಾರಿ ಕಾಲೇಜಿನ ಎನ್ನೆಸ್ಸೆಸ್ ವಿದ್ಯಾರ್ಥಿಗಳು ಮತ್ತು ಹಸಿರು ಕ್ರಿಯಾ ಸೇನೆ ಕಾರ್ಯಕರ್ತರು ಚಿತ್ರ ರಚನೆಯಲ್ಲಿ ಸಾಮೂಹಿಕವಾಗಿ ಪಾಲ್ಗೊಂಡಿದ್ದರು. ಜಿಲ್ಲೆಯ ಪ್ರತಿಯೊಬ್ಬರೂ ಮತದಾನದಲ್ಲಿ ಭಾಗಿಯಾಗಬೇಕೆಂದು ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.
ಕಾಸರಗೋಡು ನಗರಸಭಾ ಕಾರ್ಯದರ್ಶಿ ಜಿ.ಎಸ್.ಆಶಿಶ್ ಅಧ್ಯಕ್ಷತೆ ವಹಿಸಿದ್ದರು. ಶುಚಿತ್ವ ಮಿಷನ್ ಜಿಲ್ಲಾ ಸಂಯೋಜಕ ಜಯನ್, ಸ್ವೀಪ್ ನೋಡಲ್ ಅಧಿಕಾರ ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್ ಮತ್ತು ನವ ಕೇರಳ ಕ್ರಿಯಾ ಯೋಜನೆಯ ಜಿಲ್ಲಾ ಸಂಯೋಜಕ ಕೆ.ಬಾಲಕೃಷ್ಣನ್, ಜಿಲ್ಲಾ ವಾರ್ತಾಧಿಕಾರಿ ಎಂ.ಮಧುಸೂದನನ್ ಮಾತನಾಡಿದರು. ಉಪ ಜಿಲ್ಲಾ ಸಂಯೋಜಕ ಮಿಥುನ್‌ಕೃಷ್ಣನ್ ಸ್ವಾಗತಿಸಿ, ಡಾ.ಸೂರಜ್ ವಂದಿಸಿದರು.



ಶ್ರೀ ಮಾಣ್ಯಾಳಮ್ಮ ವಿಷ್ಣುಮೂರ್ತಿ ದೈವಸ್ಥಾನ ಯಾದವ ತರವಾಡು ಪುಂಜಂಗೋಡು ಮಲ್ಲ ಇದರ ನೂತನ ತರವಾಡು ಮನೆಯ ಗೃಹಪ್ರವೇಶ, ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಕಾರ್ಯಕ್ರಮಕ್ಕೆ ದಕ್ಷಿಣ ಕನ್ನಡ ಸಂಸದ ಕ್ಯಾ.ಬ್ರಿಜೇಶ್ ಚೌಟ ಆಗಮಿಸಿ ಶುಭಕೋರಿದರು.



ಕೊಡುಗೈದಾನಿ, ಬಡವರ ಬಂಧು, ಧಾರ್ಮಿಕ ಹಾಗೂ ಸಾಮಾಜಿಕ ಮುಂದಾಳು ಸದಾಶಿವ ಶೆಟ್ಟಿ ಕುಳೂರು ಕನ್ಯಾನ ಅವರು ಸೋಂಕಾಲಿನಲ್ಲಿರುವ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಚುನಾವಣಾ ಕಚೇರಿಗೆ ಶುಕ್ರವಾರ ಭೇಟಿ ನೀಡಿ ಕಾರ್ಯಕರ್ತರಲ್ಲಿ ಹುಮ್ಮಸ್ಸು ಇಮ್ಮಡಿಗೊಳಿಸಿದರು.

ಐಕ್ಯರಂಗದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಿ: ಜಿಪಂ ಸದಸ್ಯ ಸೋಮಶೇಖರ



ಮಂಜೇಶ್ವರ: ವಿಧಾನಸಭಾ ಚುನಾವಣೆ ಯಲ್ಲಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಐಕ್ಯರಂಗದ ಅಭ್ಯರ್ಥಿಯಾದ ಮುಸ್ಲಿಂಲೀಗ್‌ನ ಎ.ಕೆ.ಎಂ.ಅಶ್ರಫ್ ಅವರ ಗೆಲುವಿಗೆ ಎಲ್ಲರೂ ಒಂದಾಗಿ ಶ್ರಮಿಸಬೇಕು ಎಂದು ಕಾಸರಗೋಡು ಜಿ.ಪಂ. ಸದಸ್ಯ, ಕಾಂಗ್ರೆಸ್ ಮುಖಂಡ ಸೋಮಶೇಖರ ಜೆ.ಎಸ್. ಕರೆ ನೀಡಿದ್ದಾರೆ.
ಪೈವಳಿಕೆ ಪಂಚಾಯತ್ ಯುಡಿಫ್ ಚುನಾವಣಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಯುಡಿಎಫ್ ಪಂಚಾಯತ್ ಸಮಿತಿ ಅಧ್ಯಕ್ಷ ವಸಂತ ಮಾಸ್ತರ್ ಚೇರಾಲು ಅಧ್ಯಕ್ಷತೆ ವಹಿಸಿ ದ್ದರು. ಯುಡಿಎಫ್ ಕ್ಷೇತ್ರ ಸಂಚಾಲಕ ಅಸೀಸ್ ಮರಿಕ್ಕೆ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಾದ ಡಿ.ಎಂ.ಕೆ.ಮೊಹಮ್ಮದ್, ಲಕ್ಷ್ಮಣ ಪ್ರಭು ಕುಂಬಳೆ, ಬ್ಲಾಕ್ ಪಂಚಾಯತ್ ಅಧ್ಯಕ್ಷ ಸೈಫುಲ್ಲಾ ತಂಙಳ್, ಜಿಲ್ಲಾ ಪಂಚಾಯತ್ ಸದಸ್ಯ ಹರ್ಷಾದ್ ವರ್ಕಾಡಿ ಮಾತನಾಡಿದರು.
ಪ್ರಮುಖರಾದ ಅಬ್ದುಲ್ ಹಮೀದ್, ಮೋಹನ ರೈ, ಸಾಲಿ ಹಾಜಿ, ಹಮೀದ್ ಕುಂಞಾಲಿ, ಬದ್ರುನ್ನೀಸ ಸಲೀಂ, ರಾಘವೇಂದ್ರ ಭಟ್ ತಲೆಂಗಳ, ಕೆ.ಮೋನಪ್ಪ ಶೆಟ್ಟಿ, ಅಬ್ದುಲ್ಲ ಹಾಜಿ, ಪಂ.ಸದಸ್ಯರು ಉಪಸ್ಥಿತರಿದ್ದರು. ಝುಡ್. ಎ. ಕಯ್ಯಾರು ಸ್ವಾಗತಿಸಿ, ಅಸೀಸ್ ಕಳಾಯಿ ವಂದಿಸಿದರು.

ಚುನಾವಣಾ ಸಮಿತಿ ರಚನೆ

ಇದೇ ವೇಳೆ ಯುಡಿಎಫ್ ಚುನಾವಣಾ ಸಮಿತಿ ರೂಪಿಸಲಾಯಿತು. ಅಧ್ಯಕ್ಷರಾಗಿ ವಸಂತ ಮಾಸ್ತರ್ ಚೇರಾಲು, ಪ್ರಧಾನ ಸಂಚಾಲಕರಾಗಿ ಝುಡ್. ಎ.ಕಯ್ಯಾರು, ಸಂಚಾಲಕರಾಗಿ ಅಸೀಸ್ ಕಳಾಯಿ, ಕೋಶಾಧಿಕಾರಿಯಾಗಿ ರಾಘವೇಂದ್ರ ಭಟ್ ತಲೆಂಗಳ ಅವರನ್ನು ಒಳಗೊಂಡ 251 ಮಂದಿ ಸದಸ್ಯರ ಚುನಾವಣಾ ಸಮಿತಿಯನ್ನು ರಚಿಸಲಾಯಿತು.

ಮಾ.31: ಅಂಚೆ ಮತದಾನ ಕೇಂದ್ರಗಳು, ಮತದಾರರ ಸೌಲಭ್ಯ ಕೇಂದ್ರ ಕಾರ‍್ಯಾರಂಭ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಅಂಚೆ ಮತದಾನ ಕೇಂದ್ರಗಳು (ಪಿವಿಸಿ) ಮತ್ತು ಮತದಾರರ ಸೌಲಭ್ಯ ಕೇಂದ್ರಗಳು (ವಿಎಫ್‌ಸಿ) ಮಾ.31 ರಂದು ಕಾರ್ಯಾರಂಭ ಮಾಡಲಿವೆ.



ಸೌಲಭ್ಯ ಒದಗಿಸಲಿವೆ

ಈ ಕೇಂದ್ರಗಳಲ್ಲಿ ಅಧಿಕಾರಿಗಳು ಮತ್ತು ಚುನಾವಣಾ ಕರ್ತವ್ಯ ನಿರತ ಸಿಬ್ಬಂದಿಗಳು ತಮ್ಮ ಮತಗಳನ್ನು ನೋಂದಾಯಿಸಲು ಸೌಲಭ್ಯಗಳನ್ನು ಒದಗಿಸಲಿವೆ. ಚುನಾವಣಾ ಕೆಲಸದಲ್ಲಿ ತೊಡಗಿರುವವರ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು ಪ್ರಾರಂಭಿಸಲಾದ ಮಂಜೇಶ್ವರ ಮತ್ತು ಕಾಸರಗೋಡು ಕ್ಷೇತ್ರಗಳ 'ಲ್ಲಿನ ಅಂಚೆ ಮತದಾನ ಮತ್ತು ಮತದಾರರ ಸೌಲಭ್ಯ ಕೇಂದ್ರಗಳು ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಕಾರ್ಯನಿರ್ವಹಿಸಲಿವೆ ಎಂದು ಜಿಲ್ಲಾ ಚುನಾವಣಾ ವಿಭಾಗವು ತಿಳಿಸಿದೆ.
ನಾಯನ್ಮಾರಮೂಲೆ ಟಿಐಎಚ್‌ಎಸ್ ಶಾಲೆಯಲ್ಲಿ ಉದುಮ ಕ್ಷೇತ್ರದ ಅಧಿಕೃತ ಮತದಾನ ಕೇಂದ್ರವು ಕಾರ್ಯವೆಸಗಲಿದೆ. ಕಾಞಂಗಾಡು ಕ್ಷೇತ್ರದ ಅಂಚೆ ಮತದಾನ ಕೇಂದ್ರವನ್ನು ಹೊಸದುರ್ಗ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಮತ್ತು ಕಾಞಂಗಾಡು ಸ್ವಾಮಿ ನಿತ್ಯಾನಂದ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿಯಲ್ಲಿ ಮತದಾರರ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಲಾಗುವುದು. ತೃಕ್ಕರೀಪ್ಪುರ ಕ್ಷೇತ್ರದ ಅಂಚೆ ಮತದಾನ ಕೇಂದ್ರ ಮತ್ತು ಮತದಾನ ಸೌಲಭ್ಯಗಳ ಕೇಂದ್ರವನ್ನು ತೃಕ್ಕರೀಪ್ಪುರ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸ್ಥಾಪಿಸಲು ನಿರ್ಧರಿಸಲಾಗಿದೆ.

ಮತ ಚಲಾಯಿಸಬಹುದು

ಅಗತ್ಯ ಸೇವೆಗಳಲ್ಲಿ ಮತ್ತು ಚುನಾವಣಾ ಕೆಲಸಗಳಲ್ಲಿ ತೊಡಗಿರುವವರು ಮಾ.31ರಿಂದ ಏಪ್ರಿಲ್ 6ರ ವರೆಗೆ ಅಂಚೆ ಮತದಾನಕ್ಕಾಗಿ ಮತ್ತು ಏಪ್ರಿಲ್ 1 ರಿಂದ 6ರ ತನಕ ಮತದಾರರ ಸೌಲಭ್ಯ ಕೇಂದ್ರಗಳಿಗೆ ತಮ್ಮ ಕ್ಷೇತ್ರಗಳಲ್ಲಿ ಸ್ಥಾಪಿಸಲಾದ ಕೇಂದ್ರಗಳ ಮೂಲಕ ಮತ ಚಲಾಯಿಸಬಹುದು ಎಂದು ಪೋಸ್ಟರ್ ಬ್ಯಾಲೆಟ್‌ನ ಉಸ್ತುವಾರಿ ವಹಿಸಿರುವ ನೋಡಲ್ ಅಧಿಕಾರಿಯಾದ ಎಲ್‌ಎಸ್‌ಜಿಡಿ ಆಂತರಿಕ ಜಾಗೃತಿ ಅಧಿಕಾರಿ ಟಿ.ಟಿ.ಸುರೇಂದ್ರನ್ ಮಾಹಿತಿ ನೀಡಿದ್ದಾರೆ.
ಮಾತ್ರವಲ್ಲದೆ ಏಪ್ರಿಲ್ 1 ರಿಂದ 6ರ ವರೆಗೆ ಕಲೆಕ್ಟರೇಟ್‌ನಲ್ಲಿ ಸ್ಥಾಪಿಸಲಾದ ಗೊತ್ತುಪಡಿಸಿದ ಮತದಾನ ಸೌಲಭ್ಯ ಕೇಂದ್ರಗಳ ಮೂಲಕವೂ ಮತ ಚಲಾಯಿಸಬಹುದೆಂದು ತಿಳಿಸಿದ್ದಾರೆ.



ಮಂಗಲ್ಪಾಡಿ ಪುಳಿಕುತ್ತಿ ಐಲ ಬ್ರಹ್ಮಶ್ರೀ ಮೊಗೇರ ಮಹಾಕಾಳಿ ದೈವಸ್ಥಾನ ದಲ್ಲಿ ನಡೆಯುತ್ತಿರುವ ವಾರ್ಷಿಕ ನೇಮದ ಪ್ರಯುಕ್ತ ಶ್ರೀ ಕೊರಗತನಿಯ, ಅಣ್ಣಪ್ಪ ಪಂಜುರ್ಲಿ, ಕಲ್ಲುರ್ಟಿ ದೈವದ ನೇಮ ಗುರುವಾರ ನಡೆಯಿತು.



ಕ್ಯಾಂಪ್ಕೋ ಸದಸ್ಯರ ವೈದ್ಯಕೀಯ ಸಹಾಯ ನಿಧಿಯಡಿ ಆಂಜಿಯೋಪ್ಲಾಸ್ಟಿಯ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ 50,000 ರೂ.ಚೆಕ್ ಅನ್ನು ನಾರಾಯಣನ್ ಪಿ. ರಾಣಿಪುರಂ ಅವರಿಗೆ ಕ್ಯಾಂಪ್ಕೋ ನಿರ್ದೇಶಕ ವಿವೇಕಾನಂದ ಗೌಡ ಬಂದಡ್ಕ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಸ್ತಾಂತರಿಸಿದರು. ಕ್ಯಾಂಪ್ಕೋ ಬದಿಯಡ್ಕ ಪ್ರಾದೇಶಿಕ ವ್ಯವಸ್ಥಾಪಕ ಚಂದ್ರ ಎಂ., ಬಂದಡ್ಕ ಶಾಖೆ ಸಿಬ್ಬಂದಿಗಳಿದ್ದರು.

ಬೇಸಿಗೆ ಬಿಸಿಲಿಗೆ ಬಳಲಿ ಬರುವ ಬಾನಾಡಿಗಳಿಗೆ ಎಲ್ಲಾ ಮನೆ ಹಿತ್ತಿಲಿನಲ್ಲಿ ನೀರು

ಹಕ್ಕಿಗಳಿಗೆ ನೀರುಣಿಸುತ್ತಿದ್ದಾರೆ ದೇಶೀಯ ವೇದಿಕೆ ಕಾರ್ಯಾಲಯ

ಕುಂಬಳೆ: ಅತಿಯಾದ ಬಿಸಿಲು ಹಾಗೂ ಉಷ್ಣತೆಯಿಂದ ನೀರಿನ ಕ್ಷಾಮ ತೀವ್ರಗೊಳ್ಳು ತ್ತಿರುವ ಸಂದರ್ಭ ಹಕ್ಕಿಗಳ ದಾಹ ತೀರಿಸುವ ಗುರಿಯೊಂದಿಗೆ ಮೊಗ್ರಾಲ್ ದೇಶೀಯ ವೇದಿಯ ಕಾರ್ಯಕರ್ತರು ರಂಗಕ್ಕಿಳಿದಿದ್ದಾರೆ.
ವೇದಿಕೆಯ ತೀರ್ಮಾನದ ಪ್ರಕಾರ 21 ಎಕ್ಸಿಕ್ಯೂಟಿವ್ ಸದಸ್ಯರ ಮನೆಯ ಹಿತ್ತಿಲಿನಲ್ಲಿ ಹಕ್ಕಿಗಳಿಗೆ ನೀರಿರಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಮಾತ್ರವಲ್ಲದೆ ಬಳಿಕ ಇತರ ಸದಸ್ಯರ ಮನೆ ಪರಿಸರ ದಲ್ಲಿ ಇದೇ ವ್ಯವಸ್ಥೆಗಳನ್ನು ಮಾಡಲಾಯಿತು.
ಬಿಸಿಲು ವಿಪರೀತವಾಗಿ ಏರಿಕೆಯಾಗಿ ಕುಡಿಯುವ ನೀರು ಲಭಿಸದೆ ಕಳೆದ ವರ್ಷಗಳಲ್ಲಿ ಕುಂಬಳೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹಕ್ಕಿಗಳು, ಕಾಗೆಗಳು ಅಪಾರ ಸಂಖ್ಯೆಯಲ್ಲಿ ಸತ್ತುಹೋದ ಘಟನೆಗಳು ಸಂಭವಿಸಿದ್ದವು. ಈ ಬಾರಿ ಅಂತಹ ಸನ್ನಿವೇಶ ಉಂಟಾಗಬಾರದೆಂಬ ಗುರಿಯೊಂದಿಗೆ ದೇಶೀಯ ವೇದಿ ಕಾರ್ಯಕರ್ತರು ಹಕ್ಕಿಗಳಿಗೆ ನೀರುಣಿಸುವ ಪ್ರಕ್ರಿಯೆ ಕೈಗೊಂಡಿ ದ್ದಾರೆ.
ಈ ಯೋಜನೆಯ ಉದ್ಘಾಟನೆಯನ್ನು ದೇಶೀಯ ವೇದಿ ಜೊತೆ ಕಾರ್ಯದರ್ಶಿ ಅಶ್ರಫ್‌ರ ಮನೆ ಹಿತ್ತಿಲಿನಲ್ಲಿ ಅಧ್ಯಕ್ಷ ಎ.ಎಂ.ಸಿದ್ದಿಕ್ ರೆಹಮಾನ್ ನೆರವೇರಿಸಿದರು. ಪ್ರಧಾನ ಕಾರ್ಯದರ್ಶಿ ಎ.ಎಂ. ಮೊಹಮ್ಮದ್ ಕುಂಞಿ, ಜೊತೆ ಕಾರ್ಯದರ್ಶಿ ಬಿ.ಎ.ಮೊಹಮ್ಮದ್ ಕುಂಞಿ, ಎಕ್ಸಿಕ್ಯೂಟಿವ್ ಸದಸ್ಯ ಕೆ.ಮೊಹಮ್ಮದ್ ಕುಂಞಿ ನಾಂಗಿ, ಎಚ್.ಎ.ಕರೀಂ ಮೊದಲಾದವರ ಮನೆ ಅಂಗಳದಲ್ಲೂ ಹಕ್ಕಿಗಳಿಗೆ ನೀರು ಉಣಿಸುವ ವ್ಯವಸ್ಥೆ ಮಾಡಲಾಯಿತು.



- **ನೀರಿನ ಕ್ಷಾಮ ತೀವ್ರಗೊಳ್ಳುತ್ತಿರುವ ಸಂದರ್ಭ ಹಕ್ಕಿಗಳ ದಾಹ ತೀರಿಸುವ ಗುರಿಯೊಂದಿಗೆ ಮೊಗ್ರಾಲ್ ದೇಶೀಯ ವೇದಿಯ ಕಾರ್ಯಕರ್ತರಿಂದ ವಿನೂತನ ಕಾರ್ಯ**
- **21 ಎಕ್ಸಿಕ್ಯೂಟಿವ್ ಸದಸ್ಯರ ಮನೆಯ ಹಿತ್ತಿಲಿನಲ್ಲಿ ಹಕ್ಕಿಗಳಿಗೆ ನೀರಿರಿಸುವ ಕಾರ್ಯಕ್ಕೆ ಚಾಲನೆ**

ವೆಕೇಶನ್ ಫಾಸ್ಟರ್ ಕೇರ್ 2026:

ಮಾ.31ರವರೆಗೆ ಅರ್ಜಿ ಸಲ್ಲಿಸಲು ಅವಕಾಶ

ಕಾಸರಗೋಡು: ಜಿಲ್ಲೆಯ ಅನುಮೋದಿತ ಮಕ್ಕಳ ಆರೈಕೆ ಸಂಸ್ಥೆಗಳಲ್ಲಿ ವಾಸಿಸುವ ಮಕ್ಕಳನ್ನು ಬೇಸಿಗೆ ರಜೆಯಲ್ಲಿ ಮನೆಗಳಿಗೆ ಕರೆತರಲು ಆಸಕ್ತಿ ಹೊಂದಿರುವ ಪೋಷಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಮಕ್ಕಳ ಆರೈಕೆ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ರಜೆಯ ಅವಧಿಯಲ್ಲಿ ಕುಟುಂಬದ ಗಮನ, ರಕ್ಷಣೆ ಮತ್ತು ಪ್ರೀತಿಯ ಆರೈಕೆಯನ್ನು ಒದಗಿಸುವುದು, ಅವರು ಸುರಕ್ಷಿತವಾಗಿ ಬೆಳೆಯುವ ವಾತಾವರಣವನ್ನು ಸೃಷ್ಟಿಸುವುದು ಈ ಯೋಜನೆಯ ಉದ್ದೇಶವಾಗಿದೆ.
ಈ ಯೋಜನೆಯಡಿ ಶಿಶುಪಾಲನಾ ಸಂಸ್ಥೆಗಳಲ್ಲಿ ವಾಸಿಸುವ ಆರು ವರ್ಷಕ್ಕಿಂತ ಮೇಲ್ಪಟ್ಟ ಬಾಲಕ ಮತ್ತು ಬಾಲಕಿಯರನ್ನು ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಶಾಲಾ ರಜಾದಿನಗಳಲ್ಲಿ ಸೂಕ್ತ ಪೋಷಕರ ಮನೆಗಳಲ್ಲಿ ಪಾಲನೆ ಮಾಡಲು ವ್ಯವಸ್ಥೆ ಮಾಡಿಕೊಡಲಾಗುತ್ತದೆ. ಮಕ್ಕಳನ್ನು ನೋಡಿಕೊಳ್ಳಲು ಸಮರ್ಥ ಮತ್ತು ಇಚ್ಛಾಶಕ್ತಿಯುಳ್ಳ 35 ವರ್ಷಕ್ಕಿಂತ ಮೇಲ್ಪಟ್ಟ ದಂಪತಿಗಳು ಅರ್ಜಿ ಸಲ್ಲಿಸಬಹುದು.
ರಜಾ ಪಾಲನಾ ಆರೈಕೆ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ದಂಪತಿಗಳನ್ನು ದೀರ್ಘಾವಧಿಯ ಪಾಲನಾ ಆರೈಕೆಗೆ ಪರಿಗಣಿಸಲಾಗುತ್ತದೆ. ಆಸಕ್ತರು ತಮ್ಮ ಅರ್ಜಿಗಳನ್ನು ಕಾಸರಗೋಡು ವಿದ್ಯಾನಗರ ಸಿವಿಲ್ ಸ್ಟೇಷನ್‌ನಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಚೇರಿಗೆ ಸಲ್ಲಿಸಬೇಕು. ಕೊನೆಯ ದಿನಾಂಕ ಮಾ.31 ಆಗಿದ್ದು, ಹೆಚ್ಚಿನ ಮಾಹಿತಿಗೆ ದೂರವಾಣಿ: 04994 256990 ಕರೆ ಮಾಡಬಹುದು.

- **ಮಕ್ಕಳನ್ನು ನೋಡಿಕೊಳ್ಳಲು ಸಮರ್ಥ ಮತ್ತು ಇಚ್ಛಾಶಕ್ತಿಯುಳ್ಳ 35 ವರ್ಷಕ್ಕಿಂತ ಮೇಲ್ಪಟ್ಟ ದಂಪತಿಗಳು ಅರ್ಜಿ ಸಲ್ಲಿಸಬಹುದು.**
- **ಅರ್ಜಿ ಸಲ್ಲಿಸಲು ಮಾ.31 ಕೊನೆ ದಿನ**

ಸುತ್ತಮುತ್ತ

ಶರವೂರು ದೇಗುಲ ಇಂದಿನ ಕಾರ್ಯಕ್ರಮ

ಆಲಂಕಾರು: ಮಾ.28ರ ಬೆಳಗ್ಗೆ ವಿವಿಧ ಭಜನಾ ಮಂಡಳಿಗಳಿಂದ ಭಜನಾ ಸೇವೆ, ಶ್ರೀ ದುರ್ಗಾಂಬಾ ಕಲಾ ಸಂಗಮದ ಕಲಾವಿದರಿಂದ ಯಕ್ಷಗಾನ ತಾಳಮದ್ದಲೆ ಮಧ್ಯಾಹ್ನದ ಬಳಿಕ ನಾಗಪ್ರಿಯ ಕುತ್ರೋಟ್ಟು ಮತ್ತು ಜ್ಞಾನಶ್ರೀ ಕುತ್ರೋಟ್ಟು ಬೆಳ್ತಂಗಡಿ ಇವರಿಂದ ಸ್ಯಾಕ್ಸೋಫೋನ್ ಕಚೇರಿ ಸಂಜೆ ಅರ್ಪಿತಾ ಮತ್ತು ಬಳಗ ಕುಂಜೂರು ಪಂಜ ಅವರಿಂದ ಭಕ್ತಿಗಾನ, ತ್ರಿನೇತ್ರ ಕಲಾವಿದರು ಕುಡ್ಲ ಪೌರಣಿಕ ನಾಟಕ, ಬಳಿಕ ನಡೆಯುವ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಸುಬ್ರಹ್ಮಣ್ಯ ರಾವ್ ನಗ್ರಿ ವಹಿಸಲಿದ್ದಾರೆ. ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನಮ್ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು, ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ಕ್ಷೇತ್ರದ ಶ್ರೀ ಗುರುದೇವಾನಂದ ಸ್ವಾಮಿಜಿ ಆಶೀರ್ವಚನ ನೀಡಲಿದ್ದಾರೆ. ಕರ್ನಾಟಕ ಉಚ್ಚನ್ಯಾಯಲಯದ ನ್ಯಾಯಮೂರ್ತಿ ರಾಜೇಶ್ ರೈ ಕಲ್ಲಂಗಳ ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ದೇವಾಲಯ ಮತ್ತು ಆಗಮ ಪದ್ದತಿ ಬಗ್ಗೆ ಖ್ಯಾತ ವಾಸ್ತುಶಿಲ್ಪಿ ಡಾ.ಪ್ರಸಾದ್ ಮುನಿಯಂಗಳ ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ.

ಏ.1ರಿಂದ ಕಬಡ್ಡಿ ತರಬೇತಿ ಶಿಬಿರ

ಮಂಗಳೂರು: ತಾಲೂಕು ಅಮೆಚೂರು ವತಿಯಿಂದ ಉರ್ವ ಒಳಾಂಗಣ ಕಬಡ್ಡಿ ಕ್ರೀಡಾಂಗಣದಲ್ಲಿ ಏ. 1ರಿಂದ ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ ಕಾಲೇಜಿನ ಬಾಲಕ, ಬಾಲಕಿಯರಿಗೆ ಉಚಿತ ಕಬಡ್ಡಿ ತರಬೇತಿ ಆರಂಭವಾಗಲಿದೆ. ಆಸಕ್ತರು ಸಂಘಟನೆಯ ಕಾರ್ಯದರ್ಶಿ ಸತೀಶ್ ಪೂಜಾರಿ (ದೂ.ಸಂ. 9060124814) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾ. 28-29: ಉಪ ನೋಂದಣಿ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಣೆ

ಉಡುಪಿ: ರಾಜ್ಯದ ಎಲ್ಲಾ ಉಪ ನೊಂದಣಿ ಕಚೇರಿಗಳು ಮಾ. 28 ಮತ್ತು 29 ರಂದು ಕರ್ತವ್ಯ ನಿರ್ವಹಿಸುವ ಬಗ್ಗೆ ರಾಜ್ಯ ಸರ್ಕಾರದಿಂದ ಆದೇಶ ಹೊರಡಿಸಲಾಗಿದ್ದು ಆದರಂತೆ ಉಡುಪಿ ಜಿಲ್ಲೆಯ ಎಲ್ಲ ಉಪ ನೋಂದಣಾಧಿಕಾರಿಗಳ ಕಚೇರಿಗಳು ಶನಿವಾರ ಮತ್ತು ಭಾನುವಾರ ಕಾರ್ಯನಿರ್ವಹಿಸಲಿದೆ ಎಂದು ಉಡುಪಿ ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ರಾಷ್ಟ್ರಧ್ವಜ ಅವರೋಹಣ

ಪುತ್ತೂರು: ಮಳೆಯ ಮುನ್ಸೂಚನೆ ಇರುವುದರಿಂದ, ಮುಂಜಾಗರೂಕತಾ ಕ್ರಮವಾಗಿ ನೆಲ್ಲಿಕಟ್ಟೆಯ ಬೃಹತ್ ರಾಷ್ಟ್ರಧ್ವಜವನ್ನು ಶುಕ್ರವಾರ ಅವರೋಹಣ ನಡೆಸಲಾಗಿದೆ. ಪುತ್ತೂರು ನಗರಸಭೆ ಹಾಗೂ ನಗರ ಯೋಜನಾ ಪ್ರಾಧಿಕಾರದ ಅಭಿಪ್ರಾಯದಂತೆ ಮಳೆಯ ಬಿರುಸು ಕಡಿಮೆಯಾಗಿ ವಾತಾವರಣ ಪ್ರಶಾಂತವಾದ ತಕ್ಷಣ ಪುನಃ ಧ್ವಜಾರೋಹಣ ಮಾಡಲಾಗುವುದು ಎಂದು ಪುಡಾ ಅಧ್ಯಕ್ಷ ಅಮಳ ರಾಮಚಂದ್ರ ತಿಳಿಸಿದ್ದಾರೆ.

ವಿಕಲಚೇತನರ ಪಿಂಚಣಿ ಆದಾಯಮಿತಿ ಹೆಚ್ಚಳ ಮಾಡುವಂತೆ ಮನವಿ

ಪುತ್ತೂರು: ವಿಕಲಚೇತನರ ಪಿಂಚಣಿಯ ಆದಾಯಮಿತಿಯನ್ನು ಹೆಚ್ಚಳ ಮಾಡಲು ಸರಕಾರವನ್ನು ಒತ್ತಾಯಿಸುವಂತೆ ಶಾಸಕ ಅಶೋಕ್ ರೈ ಅವರಿಗೆ ವಿಕಲಚೇತನರ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು ಮನವಿ ನೀಡಿದ್ದಾರೆ. ಸಾಮಾಜಿಕ ಭದ್ರತಾ ಯೋಜನೆಯಡಿ ನೀಡುವ ಮಾಸಾಶನಗಳಿಗೆ ಕುಟುಂಬದ ವಾರ್ಷಿಕ ರೂ.32 ಸಾವಿರ ನಿಗದಿಪಡಿಸಲಾಗಿದೆ. ವಸ್ತುತ ತಂತ್ರಾಶದ ಮೂಲಕ ಇದನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿರುವುದರಿಂದ ಅನೇಕ ವಿಕಲಚೇತನರು ಹಾಗೂ ಹಿರಿಯನಾಗರಿಕರ ಪಿಂಚಣಿ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. ವಿಕಲಚೇತನರಿಗೆ ಶೇ.40ರಿಂದ ಶೇ.74ರವರೆಗೆ ರೂ.800 ಹಾಗೂ ಶೇ.75 ಮೇಲ್ಪಟ್ಟವರಿಗೆ ರೂ.1400, ಶೇ 75 ಮೇಲ್ಪಟ್ಟ ಮನೋವೈಕ್ಯಲತೆಯಿರುವ ಬೌದ್ಧಿಕ ವಿಕಲತೆವುಳ್ಳವರಿಗೆ 2000 ಮಾಶಾಸನ ಕಂದಾಯ ಇಲಾಖೆಯಿಂದ ನೀಡುತ್ತಿದ್ದಾರೆ. ಈಗಾಗಲೇ ಪ್ರತಿ ಗ್ರಾಮದ ಆಡಳಿತಾಧಿಕಾರಿಯವರಿಗೆ ಪಿಂಚಣಿ ಪುನರ್ ಪರಿಶೀಲನೆ ಮಾಡಲು ಕೈಗೊಳ್ಳುತ್ತಿರುವುದು ವಿಕಲಚೇತನರಲ್ಲಿ ಮತ್ತು ಹಿರಿಯನಾಗರಿಕರಲ್ಲಿ ಆತಂಕ ಉಂಟು ಮಾಡಿದೆ. ಆದ್ದರಿಂದ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಫಲಾನುಭವಿಗಳಿಗೆ ಆದಾಯದ ಮಿತಿಯನ್ನು ರೂ.32 ಸಾವಿರದಿಂದ ರೂ.1,20,000ಕ್ಕೆ ಹೆಚ್ಚಿಸಬೇಕೆಂದು ವಿಕಲಚೇತನರು ಮತ್ತು ಹಿರಿಯನಾಗರಿಕರ ಪರವಾಗಿ ಮನವಿ ಮಾಡಲಾಗಿದೆ.

ಕರಾವಳಿ ಫ್ರೆಂಡ್ಸ್ ಕ್ರಿಕೆಟ್: ಪೋಸ್ಟರ್ ಬಿಡುಗಡೆ

ಕೋಟ: ಕೋಟತಟ್ಟುವಿನ ಕರಾವಳಿ ಫ್ರೆಂಡ್ಸ್ ಆಶ್ರಯದಲ್ಲಿ ಐದನೇ ಬಾರಿಗೆ ಲೀಗ್ ಮಾದರಿಯ 60 ಗಜಗಳ ಕ್ರಿಕೆಟ್ ಪಂದ್ಯಾಕೂಟ ಕೆಪಿಎಲ್ 2026 ಏ. 19ರಂದು ಕರಾವಳಿ ಮೈದಾನ ಕೋಟತಟ್ಟು ದಲ್ಲಿ ಆಯೋಜಿಸಿದ್ದು, ಪೋಸ್ಟರನ್ನು ಕೋಟ ಅಮೃತೇಶ್ವರೀ ದೇಗುಲದ ಅಧ್ಯಕ್ಷ ಆನಂದ್ ಸಿ ಕುಂದರ್ ಬಿಡುಗಡೆಗೊಳಿಸಿದರು.

ಈ ಸಂದರ್ಭದಲಿ ಮಾಜಿ ಜಿ.ಪಂ ಸದಸ್ಯ ರಾಘವೇಂದ್ರ ಕಾಂಚನ್ ಬಾರಿಕೆರೆ, ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಕುಂದರ್, ಸಿಎ ಬ್ಯಾಂಕ್ ನಿರ್ದೇಶಕ ರಂಜೀತ್ ಕುಮಾರ್, ಕೋಟ ಅಮೃತೇಶ್ವರೀ ದೇಗುಲದ ಟ್ರಸ್ಟಿ ಸುಭಾಷ್ ಶೆಟ್ಟಿ, ಕರಾವಳಿ ಫ್ರೆಂಡ್ಸ್ ರೋಹಿತ್, ರಂಜೀತ್, ಸಂತೋಷ್, ರತ್ನಾಕರ್ ಬಾರಿಕೆರೆ, ವಿಜಯ್ ಪೂಜಾರಿ,ಅವಿನಾಶ್ ಮರಕಾಲ,ಪವನ್ ಕುಂದರ್, ಅಶೋಕ್ ಪಡುಕರೆ ಉಪಸ್ಥಿತರಿದ್ದರು.

ಸದ್ದುಗದ್ದಲಗಳಿಲ್ಲದೆ ಆಡಳಿತಾಧಿಕಾರಿ ಕಚೇರಿಯಲ್ಲಿ ಚುಟುಕು ಸಭೆ | ರೂ.10.93 ಕೋಟಿ ಖರ್ಚು

ಸುಳ್ಯ ಪಟ್ಟಣ ಪಂಚಾಯತ್ ಬಜೆಟ್ ರೂ. 13.59 ಕೋಟಿ

ಸುಳ್ಯ: ಸುಳ್ಯ ನಗರ ಪಂಚಾಯತ್ 2026-27ನೇ ಸಾಲಿನ ಆಯವ್ಯಯವನ್ನು ಆಡಳಿತಾಧಿಕಾರಿ ಹಾಗೂ ಸುಳ್ಯ ತಾಲೂಕು ತಹಶೀಲ್ದಾರ್ ಮಂಜುಳ ಎಂ. ಆಡಳಿತಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳ ಉಪಸ್ಥಿತಿಯಲ್ಲಿ ಮಂಡಿಸಿದ್ದು, ಒಟ್ಟು ರೂ.13.59 ಕೋಟಿ ಬಜೆಟ್ ರೂಪಿಸಲಾಗಿದೆ. ಇದರ ಆರಂಭಿಕ ಶಿಲ್ಕು ರೂ. 4,57,03,609 ಸೇರಿ ಪ್ರಸ್ತುತ ವರ್ಷ ಒಟ್ಟು ಆದಾಯ ರೂ.13,59,41,892 ಮತ್ತು ರೂ.10,93,05,457 ಖರ್ಚು ನಿರೀಕ್ಷಿಸಲಾಗಿದೆ.



ಸರಕಾರದಿಂದ ಬರಬಹುದಾದ ಅನುದಾನಗಳನ್ನು ಸೇರ್ಪಡೆಗೊಳಿಸಿ ಎಸ್‌ಎಫ್‌ಸಿ ವೇತನ ಅನುದಾನ ರೂ. 83 ಲಕ್ಷ, ಎಸ್‌ಎಫ್‌ಸಿ ವಿದ್ಯುತ್ ಅನುದಾನ ರೂ.1.45 ಕೋಟಿ, ಎಸ್‌ಎಫ್‌ಸಿ ಮುಕ್ತನಿಧಿ ರೂ.5 ಲಕ್ಷ, 16ನೇ ಹಣಕಾಸು ಅನುದಾನ ರೂ.1.85 ಕೋಟಿ, ಎನ್‌ಯುಎಲ್‌ಎಂ ಅನುದಾನ ರೂ.5 ಲಕ್ಷ, ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ ರೂ.5 ಲಕ್ಷ ಸೇರಿ ರೂ.4.28 ಕೋಟಿ ಅನುದಾನ ಹಾಗೂ ರೂ.4.74 ಕೋಟಿ ಸ್ವಂತ ಆದಾಯ ಸೇರಿ ಒಟ್ಟು ರೂ.9,02,38,283 ಆದಾಯ ನಿರೀಕ್ಷಿಸಲಾಗಿದೆ.

ಖರ್ಚಿನಲ್ಲಿ ಕಟ್ಟಡಗಳ ವರ್ಗ 1ರಲ್ಲಿ ರೂ.2 ಕೋಟಿ, ಭೂಸ್ವಾಧೀನ ವೆಚ್ಚ ರೂ.40 ಲಕ್ಷ, ರಸ್ತೆ, ಕಲ್ಲು ಹಾಸು, ಪಾದಾಚಾರಿ ಮಾರ್ಗ ರೂ.1.28 ಕೋಟಿ, ಚರಂಡಿ ರೂ.30 ಲಕ್ಷ, ಘನ ತ್ಯಾಜ್ಯ ಯಂತ್ರೋಪಕರಣ ರೂ.25 ಲಕ್ಷ, ಕಟ್ಟಡ ದುರಸ್ತಿ, ನಿರ್ವಹಣೆ ರೂ.10 ಲಕ್ಷ, ವೇತನ ಭತ್ಯೆಗಳು, ಘನ ತ್ಯಾಜ್ಯ ನಿರ್ವಹಣೆ ಪೌರ ಕಾರ್ಮಿಕರ ವೇತನ ರೂ.21 ಲಕ್ಷ, ಘನ ತ್ಯಾಜ್ಯ ವಿಲೇವಾರಿ ಇಂಧನ ರೂ.5 ಲಕ್ಷ, ಹಸಿ ಕಸ ವಿಲೇವಾರಿ, ಘನ ತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ವಿದ್ಯುತ್ ವೆಚ್ಚ ರೂ.1.28 ಕೋಟಿ, ವೇತನ ಭತ್ಯೆ ರೂ.1.79 ಕೋಟಿ, ಘನತ್ಯಾಜ್ಯ ನಿರ್ವಹಣೆ ನೇರ ಪಾವತಿ ಪೌರ ಕಾರ್ಮಿಕರ ವೇತನ ರೂ.21 ಲಕ್ಷ, ಹಸಿ ಕಸ ತ್ಯಾಜ್ಯ ವಿಲೇವಾರಿ ರೂ.2.50 ಲಕ್ಷ, ಹೊರಗುತ್ತಿಗೆ ಕಾರ್ಯಾಚರಣೆ ವೆಚ್ಚ ಘನತ್ಯಾಜ್ಯ ನಿರ್ವಹಣೆ ರೂ.12 ಲಕ್ಷ ಸೇರಿದಂತೆ ವಿವಿಧ ಖರ್ಚುಗಳ ಬಾಬ್ತು ಒಟ್ಟು ರೂ.10,93,05,457 ವೆಚ್ಚ ನಿರೀಕ್ಷಿಸಲಾಗಿದೆ. ಬಳಿಕ ಬಜೆಟ್ ಬಗ್ಗೆ ಚರ್ಚೆ ನಡೆದು ಕೆಲವೊಂದು ತಿದ್ದುಪಡಿಗಳನ್ನು ಸಭೆಯಲ್ಲಿ ಸೂಚಿಸಲಾಯಿತು.

ತ್ಯಾಜ್ಯ ಸಮಸ್ಯೆಗೆ ಪರಿಹಾರ, ವೇತನಕ್ಕೆ ಸಿಂಹಪಾಲು

ಸುಳ್ಯ ಪಟ್ಟಣ ಪಂಚಾಯತ್ ಪ್ರತಿಬಾರಿಯಂತೆ ಈ ಬಾರಿಯು ತ್ಯಾಜ್ಯ ಹಾಗೂ ಸಿಬ್ಬಂದಿಗಳ ವೇತನಕ್ಕೆ ಸಿಂಹ ಪಾಲು ನೀಡಿದ್ದು ಅಭಿವೃದ್ಧಿಗೊಳ್ಳಬೇಕಾದ ಅನುದಾನಗಳನ್ನು ಕಛೇರಿ ಗುತ್ತಿಗೆ ಆಧಾರಿತ ನೌಕರರ ವೇತನ ಹಾಗೂ ಶೆಡ್‌ನಲ್ಲಿ ತುಂಬಿ ದುರ್ನಾತ ಬೀರುತ್ತಿರುವ ತ್ಯಾಜ್ಯ ಹಾಗೂ ಕಾರ್ಯ ನಿರ್ವಹಿಸದ ಬರ್ನಿಂಗ್ ಕೇಂದ್ರ ಸೇರಿದಂತೆ ಸಂಪೂರ್ಣವಾಗಿ ತ್ಯಾಜ್ಯ ಹಾಗೂ ಸಿಬಂದಿಗಳ ವೇತನ ಪಾವತಿಗೆ ಈ ಬಾರಿಯ ಬಜೆಟ್‌ನಲ್ಲಿ ಸಿಂಹಪಾಲು ನೀಡಲಾಗಿದೆ.

ಸದ್ದು-ಗದ್ದಲಗಳಿಲ್ಲ

ಸುಳ್ಯ ಪಟ್ಟಣ ಪಂಚಾಯತ್ ಇತಿಹಾಸದಲ್ಲಿ ಮೊದಲ ಬಾರಿಗೆ ಆಡಳಿತಾಧಿಕಾರಿ ಕಚೇರಿಯಲ್ಲಿ ಬಜೆಟ್ ಮಂಡನೆಯಾಗಿದೆ. ಬಜೆಟ್ ಮಂಡನೆ ವಿಚಾರವನ್ನು ಗೌಪ್ಯವಾಗಿರಿಸಿ ಮಾಧ್ಯಮಗಳಿಗೆ ಮಾಹಿತಿ ನೀಡದೆ ಸಿದ್ಧತೆ ನಡೆಸಲಾಗಿತ್ತು. ಇದು ಮಾಧ್ಯಮದ ಕೆಲ ಪ್ರತಿನಿಧಿಗಳ ಗಮನಕ್ಕೆ ಬಂದು ಅಲ್ಲಿಗೆ ತೆರಳಿ ವರದಿ ಪಡೆದುಕೊಂಡರು. ಅಲ್ಲದೆ, ಈ ಬಾರಿ ಯಾವುದೇ ಸದ್ದು ಗದ್ದಲಗಳಿಲ್ಲದೇ ಮಿತ ವ್ಯಯದ ಬಜೆಟನ್ನು ಕೆಲವೇ ನಿಮಿಷಗಳಲ್ಲಿ ಪೂರ್ಣಗೊಳಿಸಿದರು.

ಬಜೆಟ್ ಸಭೆಯಲ್ಲಿ ಮುಖ್ಯಾಧಿಕಾರಿ ಬಸವರಾಜ, ಇಂಜಿನಿಯರ್ ಶಿವಕುಮಾರ್, ಲೆಕ್ಕಾಧಿಕಾರಿ ರಮೇಶ್ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀ ದುರ್ಗಾಂಬ ಅಲಂಕಾರ ಸಮಿತಿಯ ಆಂಬುಲೆನ್ಸ್ ಲೋಕಾರ್ಪಣೆ

ಸಮಾನ ಮನಸ್ಕರಿಂದಷ್ಟೇ ಸೇವೆ: ಈಶ್ವರ್ ಮಲ್ಪೆ

ಆಲಂಕಾರು: ಸಮಾನ ಮನಸ್ಕರಿಂದ ಮಾತ್ರ ಸಮಾಜ ಸೇವೆ ಮಾಡಲು ಸಾಧ್ಯ. ಸಂಸ್ಕಾರಯುತ ಶಿಕ್ಷಣದಿಂದ ಮತ್ತು ಸಮಾಜ ಮುಖಿಯಾದ ಸಂಘಟನೆಯಿಂದ ಪರಸ್ಪರ ಸಹಕಾರ ಸಹಬಾಳ್ವೆಯ ಜೀವನ ಪದ್ಧತಿಯನ್ನು ಕಲಿಸುತ್ತದೆ. ಉತ್ತಮ ಸಮಾಜವನ್ನು ನಿರ್ಮಿಸಲು ಪ್ರೇರಣೆ ನೀಡುತ್ತದೆ ಎಂದು ಖ್ಯಾತ ಮುಳುಗು ತಜ್ಞ ಈಶ್ವರ್ ಮಲ್ಪೆ ಹೇಳಿದರು.



ಅವರು ಬುಧವಾರ ಶರವೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಂದರ್ಭ ಶ್ರೀ ದುರ್ಗಾಂಬ ಅಲಂಕಾರ ಸಮಿತಿ ಆಲಂಕಾರು ಇದರ ಆಶ್ರಯದಲ್ಲಿ ಬಿಡುಗಡೆಗೊಳಿಸಿದ ನೂತನ ಆ್ಯಂಬುಲೆನ್ಸ್ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಅದೃಷ್ಟ ಚೀಟಿಯನ್ನು ಮಾರಿ ಅದರಿಂದ ಬಂದ ಮೊತ್ತದಲ್ಲಿ ಆ್ಯಂಬುಲೆನ್ಸ್ ಖರೀದಿಸಿ ದೇವಿಯ ಬ್ರಹ್ಮಕಲಶೋತ್ಸವ ಸಂದರ್ಭ ಬಿಡುಗಡೆ ಮಾಡಿರುವುದು ಶ್ಲಾಘನೀಯ. ಈ ಮೂಲಕ ಯುವ ಶಕ್ತಿಗೆ ಸಮಾಜ ಸೇವೆ ಮಾಡಲು ದುರ್ಗಾಂಬ ಅಲಂಕಾರ ಸಮಿತಿ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಈ ಭಾಗದ ಜನತೆಯ ಜೀವ ರಕ್ಷಕನಾಗಿ ಯಶಸ್ವಿನ ಹಾದಿ ನಿಮ್ಮದಾಗಲಿ ಎಂದು ಅವರು ಆಶಿಸಿದರು.

ಜನತೆಯ ಅದೃಷ್ಟ

ಮಾಣಿಲ ಶ್ರೀಧಾಮದ ಮೋಹನದಾಸ ಸ್ವಾಮೀಜಿ ಮಾತನಾಡಿ, ಸಮಾಜದಿಂದ ಅದೃಷ್ಟ ಚೀಟಿಯ ಮೂಲಕ ಪಡೆದ ಸಂಪತ್ತನ್ನು ಸಮಾಜಕ್ಕೆ ನೀಡಿರುವುದು ಈ ಭಾಗದ ಜನತೆಯ ಅದೃಷ್ಟವಾಗಿದೆ. ಯುವಕರ ಈ ಕಾರ್ಯ ಇನ್ನೊಂದು ಭಾಗದ ಜನತೆಗೆ ಮಾದರಿಯಾಗಲಿದೆ. ಅಲಂಕಾರ ಸಮಿಯ ಸಂಘಟನೆಯಿಂದ ಇನ್ನೂ ಸಮಾಜಮುಖಿ ಕಾರ್ಯಗಳು ನಡೆದು ಬರಲಿ ಎಂದು ಹಾರೈಸಿದರು.

ದುರ್ಗಾಂಬ ಅಲಂಕಾರ ಸಮಿತಿಯ ಅಧ್ಯಕ್ಷ ಗಣರಾಜ ಕೆ. ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭವನ್ನು ಸಮಾಜ ಸೇವಕ ರವಿ ಕಕ್ಕೆಪದವು ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭ ವೇದಿಕೆಯಲ್ಲಿ ಕಡಬ ಉಪ ತಹಶೀಲ್ದಾರರ ಜಿ. ಗೋಪಾಲ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ಸುಬ್ರಹ್ಮಣ್ಯ ರಾವ್, ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ. ಹೇಮಂತ ರೈ ಮನವಳಿಕೆಗುತ್ತು, ಡಾ. ಮಮತಾ ಪಿ. ಶೆಟ್ಟಿ ಸೀತಾರಾಮ ರೈ ಸವಣೂರು, ಅಲಂಕಾರ ಸಮಿತಿಯ ಗೌರವಾಧ್ಯಕ್ಷ ರಿತೇಶ್ ಭಂಡಾರಿ, ಮಾಜಿ ಶಾಸಕ ಎಸ್. ಅಂಗಾರ, ಡಾ.ಎಂ.ವಿ. ಭಟ್, ಡಾ. ಹರಿದಾಸ ಭಟ್, ಡಾ. ಕೃತಿ ಶೆಟ್ಟಿ ಡಾ. ಕುಮಾರ ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ ಸ್ವಾಗತಿಸಿದರು. ಕೌಶಿಕ್ ವಂದಿಸಿದರು. ಮೋಹನ್ ಕುಮಾರ್ ಪಟ್ಟೆ ಅಶೋಕ್ ಶರವೂರು, ಶೇಷಪ್ಪ ಪೂಜಾರಿ ನೆಕ್ಕಿಲಾಡಿ, ಶಶಿಕಿರಣ್ ಸಹಕರಿಸಿದರು.

ಮಡಿಕೇರಿ | ಅರೆಭಾಷೆ ವಿಚಾರ ಸಂಕಿರಣದಲ್ಲಿ ಪ್ರೊ.ಅಶೋಕ್ ಸಂಗಪ್ಪ ಆಶಯ

ಕನ್ನಡದ ಜೊತೆ ಸಣ್ಣ ಸಣ್ಣ ಭಾಷೆಗಳು ಬೆಳೆಯಲಿ

ಮಡಿಕೇರಿ: ರಾಜ್ಯದ ಕರಾವಳಿ ಮತ್ತು ಮಲೆನಾಡು ಭಾಗವು ಬಹುಭಾಷೆ ಮತ್ತು ಬಹು ಸಂಸ್ಕೃತಿ ಒಳಗೊಂಡಿರುವ ಪ್ರದೇಶವಾಗಿದೆ. ಆ ದಿಸೆಯಲ್ಲಿ ನಾಡಿನ ಭಾಷೆ ಜೊತೆಗೆ ಅರೆಭಾಷೆ ಸೇರಿದಂತೆ ಸಣ್ಣ ಸಣ್ಣ ಭಾಷೆಗಳನ್ನು ಉಳಿಸಿ, ಬೆಳೆಸುವಂತಾಗಬೇಕು ಎಂದು ಕೊಡಗು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಅಶೋಕ್ ಸಂಗಪ್ಪ ಆಲೂರ ತಿಳಿಸಿದ್ದಾರೆ.



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮತ್ತು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಸಹಯೋಗದಲ್ಲಿ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಸಭಾಂಗಣದಲ್ಲಿ ಗುರುವಾರ ನಡೆದ ರಾಜ್ಯ ಮಟ್ಟದ ಅರೆಭಾಷೆ ವಿಚಾರ ಸಂಕಿರಣ ಮತ್ತು ಪದ ಕಟ್ಟುವ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಜಿಲ್ಲೆಗಳಲ್ಲಿ ಬಹುಭಾಷೆ ಮತ್ತು ಬಹು ಸಂಸ್ಕೃತಿ ಇರುವುದನ್ನು ಕಾಣಬಹುದಾಗಿದೆ. ನಾಡಿನ ಭಾಷೆಯ ಜೊತೆಗೆ ಹಲವು ಸ್ಥಳೀಯ ಭಾಷೆ ಕಾಣಬಹುದಾಗಿದೆ ಎಂದು ಹೇಳಿದರು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಅವರು ಮಾತನಾಡಿ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಶಾಲಾ-ಕಾಲೇಜುಗಳಲ್ಲಿ ಅರೆಭಾಷೆ ಅಭಿವೃದ್ಧಿ ಮತ್ತು ಬೆಳವಣಿಗೆ ಸಂಬಂಧ 'ಅರೆಭಾಷೆ ಸಂಘ'ಗಳನ್ನು ರಚಿಸಲಾಗಿದ್ದು, ಕೊಡಗು ಜಿಲ್ಲೆಯಲ್ಲಿಯೂ ಸಹ ಕಾಲೇಜುಗಳಲ್ಲಿ ಅರೆಭಾಷೆ ಸಂಘಗಳ ರಚನೆಗೆ ಸಹಕರಿಸುವಂತೆ ಕೊಡಗು ವಿವಿ ಕುಲಪತಿ ಅವರಲ್ಲಿ ಮನವಿ ಮಾಡಿದರು.

ಅರೆಭಾಷೆ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತರು ಮತ್ತು ಸಮಾಜ ಸೇವಕ ಚಂಡೀರ ಕೆ.ಬಸಪ್ಪ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಪ್ರೊ.ಮೆ. ರಾಘವ ಬಿ., ಬರಹಗಾರ್ತಿ ಸುಶೀಲಾ ಕುಶಾಲಪ್ಪ ಅಂಬೆಕಲ್ಲು, ಮೈಸೂರು ಯುವರಾಜ ಕಾಲೇಜು ಮತ್ತು ಮಹಾರಾಜ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಚೆರಿಯಮನೆ ಬೆಳ್ಯಪ್ಪ ಡಾ.ರಾಮಚಂದ್ರ, ಮೈಸೂರು ಶೇಷಾದ್ರಿಪುರಂ ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಲಾವಣ್ಯ ಸಿ.ಪಿ., ಕಾರ್ಯಕ್ರಮದ ಸದಸ್ಯ ಸಂಚಾಲಕ ಗೋಪಾಲ್ ಪೆರಾಜೆ ಮಾತನಾಡಿದರು.

ಪದಕಟ್ಟು ಕಾರ್ಯಾಗಾರದಲ್ಲಿ ನಿವೃತ್ತ ಪ್ರಾಧ್ಯಾಪಕ ಸಂಜೀವ ಕುದ್ಪಾಜೆ, ಸಾಹಿತಿ ಹಾಗೂ ಕವಯತ್ರಿ ಲೀಲಾವತಿ ದಾಮೋದರ ಕುಂದಲ್ಪಾಡಿ ಅವರು ಪಾಲ್ಗೊಂಡಿದ್ದರು.

ಅಕಾಡೆಮಿ ಸದಸ್ಯರಾದ ಸೂದನ ಎಸ್. ಈರಪ್ಪ, ಲತಾ ಪ್ರಸಾದ್ ಕುದ್ಪಾಜೆ, ಕುದ್ಪಾಜೆ ಕೆ.ಪ್ರಕಾಶ್, ವಿನೋದ್ ಮೂಡಗದ್ದೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ, ರಿಜಿಸ್ಟ್ರಾರ್ ಚಿನ್ನಸ್ವಾಮಿ ಇತರರು ಇದ್ದರು. ಪೂಳಕಂಡ ಸಂದೀಪ್ ಸ್ವಾಗತಿಸಿ, ವರ್ಷಾ ಕೋಡಿಮನೆ ನಿರೂಪಿಸಿದರು. ಸಪ್ನಾ, ಚೊಂದಮ್ಮ, ಲಿಖಿತಾ ನಾಡಗೀತೆ ಹಾಡಿದರು. ಪೊನ್ನಚ್ಚನ ಮೋಹನ್ ವಂದಿಸಿದರು.

ಕಿನ್ಯ ಕೇಶವ ಶಿಶು ಮಂದಿರದಲ್ಲಿ ಪಾಲಕರ ಸಭೆ, ಸಪ್ತ ಶಕ್ತಿ ಸಂಗಮ



ಉಳ್ಳಾಲ: ನಾವು ಅಬ್ಬಕ್ಕ, ಚೆನ್ನಮ್ಮ ಆಳಿದ ನಾಡಿನವರು. ಅವರ ಧೈರ್ಯ ನಮಗೆ ಬರಬೇಕಿದೆ ಅದಕ್ಕಾಗಿ ನಮ್ಮ ಮಕ್ಕಳನ್ನು ಬಾಲ್ಯದಲ್ಲಿಯೇ ತಯಾರು ಮಾಡಬೇಕಾಗಿದೆ. ಮಕ್ಕಳಿಗೆ ಶಿಕ್ಷಣದಲ್ಲಿ ಉತ್ತಮ ಸಂಸ್ಕಾರವನ್ನು ಕೊಡಬೇಕು, ಮಕ್ಕಳ ಹುಟ್ಟುಹಬ್ಬದಲ್ಲಿ ಮಾಡುವ ದುಬಾರಿ ಖರ್ಚನ್ನು ಉಳಿಸಿ ಸಮಾಜದ ಪರಿವರ್ತನೆಗೆ ಬಳಸಬಹುದು. ದುರ್ಬಲರಿಗೆ ಸಹಾಯ ಮಾಡುವ ಪ್ರವೃತ್ತಿಯನ್ನು ಹಾಗೂ ಪ್ರಕೃತಿಯನ್ನು ಉಳಿಸುವ ಜವಾಬ್ದಾರಿಯನ್ನು ಬೆಳೆಸೋಣ ಎಂದು ಕಲ್ಲಡ್ಕ ಶ್ರೀ ರಾಮ ಶಿಶುಮಂದಿರದ ಆಡಳಿತ ಮಂಡಳಿ ಅಧ್ಯಕ್ಷೆ ಮಲ್ಲಿಕಾ ಆರ್. ಶೆಟ್ಟಿ ಹೇಳಿದರು.

ಅವರು ಕಿನ್ಯ ಕೇಶವ ಶಿಶು ಮಂದಿರದಲ್ಲಿ ನಡೆದ ಪಾಲಕರ ಸಭೆ ಹಾಗೂ ಸಪ್ತ ಶಕ್ತಿ ಸಂಗಮದಲ್ಲಿ ಮಾತಾಡಿದದರು.ಕಲ್ಲಡ್ಕ ಶ್ರೀ ರಾಮ ಶಿಶು ಮಂದಿರದ ಆಡಳಿತ ಮಂಡಳಿ ಸದಸ್ಯೆ ಶುಭಲಕ್ಷ್ಮೀ ಶಿವಗಿರಿ ಸಪ್ತ ಶಕ್ತಿ ಸಂಗಮದ ಬಗ್ಗೆ ಮಾತನಾಡಿ, ಸ್ತ್ರೀಯಲ್ಲಿರುವಂತಹ ಏಳು ಗುಣಗಳನ್ನು ಕ್ರಮವಾಗಿ ಕೀರ್ತಿ, ಶ್ರೀ, ವಾಕ್, ಸ್ಮೃತಿ, ಮೇಧಾ, ಧೃತಿ, ಕ್ಷಮಾ ಎಂದು ವಿವರಿಸಿದ್ದಾರೆ ನಾವು ನಮ್ಮ ಕುಟುಂಬದಲ್ಲಿ ಯಾವ ರೀತಿ ಪರಿವರ್ತನೆ ಮಾಡಬಹುದು ಎಂದರು.

ದುರ್ಗಾಪರಮೇಶ್ವರಿ ದೇವಸ್ಥಾನದ ಮಾಜಿ ಸದಸ್ಯೆ ಆಶಾಪದ್ಮ ನಾಥ ಶೆಟ್ಟಿ, ಶಿಶು ಮಂದಿರದ ಗೌರವಾಧ್ಯಕ್ಷ ಶಿವರಾಮ್ ಶೆಟ್ಟಿ, ಅಧ್ಯಕ್ಷಸುಂದರ್ ಅಂಚನ್ ಉಪಸ್ಥಿತರಿದ್ದರು. ವ್ಯವಸ್ಥಾಪಕ ನಾರಾಯಣ ಕಜೆ, ಸುಧಾಕರ ಆಳ್ವ, ರವಿಕನಕ ಮುಗೇರ್, ಸಚಿದಾನಂದ ಕಜೆ, ಚೇತನ್ ಪಿಲಿಕೂರ್, ಶ್ರೀನಿವಾಸ ಗಟ್ಟಿ ಸೋವೂರ್,ರಾಜೇಶ್ವರಿ ಪಿಲಿಕೂರ್, ಬಬಿತ ಕನಕ ಮುಗೇರ್,ಪ್ರಸಾದ್ ಮಿತ್ತಡ, ಶ್ರೀಮತಿ ಗೀತಾಶೆಟ್ಟಿ ತಚ್ಚಣಿ, ಶ್ರೀಮತಿ ಪದ್ಮಿನಿ ತಚ್ಚಣಿ, ಪಂಚಾಯತ್ ಉಪಾಧ್ಯಕ್ಷೆ ಸೀತಾ ತಚ್ಚಣಿ, ಅಶ್ವಿನಿ ಮಾತಾಜಿ, ಸಹಾಯಕಿ ಪ್ರಜ್ಞಾ ಅಲ್ಲದೆ ಮಕ್ಕಳ ಪೋಷಕರು ಭಾಗವಹಿಸಿದ್ದರು. ಕವಿತ ಕೊಂಡಾಣ ಸ್ವಾಗತಿಸಿದರು ರಶ್ಮಿ ಸಂದೇಶ್ ವಂದಿಸಿದರು.

ಕೆ.ಎಸ್.ಹೆಗ್ಡೆ ಆಸ್ಪತ್ರೆಯಲ್ಲಿ ಸಮುದಾಯ ಆಧಾರಿತ ವಿಪತ್ತು ನಿರ್ವಹಣೆ ಕಾರ್ಯಾಗಾರ



ಉಳ್ಳಾಲ: ಪರಿಣಾಮಕಾರಿ ವಿಪತ್ತು ನಿರ್ವಹಣೆಯು ಗ್ರಾಮೀಣ ಮಟ್ಟದಿಂದಲೇ ಆರಂಭವಾಗುವುದಕ್ಕೆ ವಿವಿಧ ವಿಭಾಗಗಳ ಸಮನ್ವಯತೆ ಅಗತ್ಯವಿದ್ದು,ಯುವಜನತೆ ಮತ್ತು ಎನ್‌ಎಸ್‌ಎಸ್ ಸ್ವಯಂಸೇವಕರು ಸಮುದಾಯ ಸೇವೆ ಹಾಗೂ ವಿಪತ್ತು ನಿರ್ವಹಣಾ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ನಿಟ್ಟೆ ಪರಿಗಣಿತ ವಿವಿಯ ಎನ್‌ಎಸ್‌ಎಸ್ ಸಂಯೋಜಕರಾದ ಶಶಿಕುಮಾರ್ ಶೆಟ್ಟಿ ಕರೆ ನೀಡಿದರು.

ದೇರಳಕಟ್ಟೆಯ ನಿಟ್ಟೆ ಉಷಾ ಇನ್ಸಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಹಾಗೂ ನಿಟ್ಟೆ ಪರಿಗಣಿತ ವಿವಿಯ ಸಮುದಾಯ ಆರೋಗ್ಯ ನರ್ಸಿಂಗ್ ವಿಭಾಗದ ವತಿಯಿಂದ ದೇರಳಕಟ್ಟೆಯ ಜಸ್ಟಿಸ್ ಕೆ.ಎಸ್. ಹೆಗ್ಡೆ ಆಸ್ಪತ್ರೆಯ ಚಿಂತನಾ ಸಭಾಂಗಣದಲ್ಲಿ ನಡೆದ ಸಮುದಾಯ ಆಧಾರಿತ ವಿಪತ್ತು ನಿರ್ವಹಣೆ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಮುದಾಯದ ಸಿದ್ಧತೆ ಮತ್ತು ತರಬೇತಿ ಪಡೆದ ಸ್ವಯಂಸೇವಕರ ಪಾತ್ರದ ಮಹತ್ವವನ್ನು ಅವರು ವಿವರಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಡಾ. ಸರಿತಾ ಟೆಲ್ಮಾ ಫರ್ನಾಂಡಿಸ್, ಡಾ.ವರ್ಷಾ ಶೆಟ್ಟಿ, ಡಾ.ದಶರಥ ಅಂಗಡಿ ಮತ್ತು ಡಾ. ಶ್ರುತಿ ಅವರು ಸಮುದಾಯ ಆಧಾರಿತ ವಿಪತ್ತು ನಿರ್ವಹಣೆಯ ಗತಿಯಾಂಶಗಳು, ಸಿದ್ಧತೆ, ಪ್ರತಿಕ್ರಿಯೆ ಹಾಗೂ ಪುನರ್ವಸತಿ ಕುರಿತಂತೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಒಟ್ಟು 70 ಮಂದಿ ಅಧ್ಯಾಪಕರು, ಎನ್‌ಎಸ್‌ಎಸ್ ಸ್ವಯಂ ಸೇವಕರು, ವೈಆರ್‌ಸಿ ಸದಸ್ಯರು ಭಾಗವಹಿಸಿದ್ದರು. ಕಾರ್ಯಕ್ರಮ ಆಯೋಜನಾ ಅಧ್ಯಕ್ಷ ಡಾ. ನೀತಾ ಕಾಮತ್ ಸ್ವಾಗತಿಸಿದರು. ಕಾರ್ಯದರ್ಶಿ ಡಾ.ಸರಿತಾ ಟೆಲ್ಮಾ ಫರ್ನಾಂಡಿಸ್ ವಂದಿಸಿದರು. ಡಾ. ಸುಚಿತ್ರಾ ಬಿ.ಎಸ್ ನಿರೂಪಿಸಿದರು.

ಪೆರುವಾಜೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಸುಳ್ಯ: ಬೆಳ್ಳಾರೆ ಪೆರುವಾಜೆ ಡಾ.ಕೆ. ಶಿವರಾಮ ಕಾರಂತ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ಕೋಶ, ಯುವ ರೆಡ್ ಕ್ರಾಸ್ ಹಾಗೂ ಆಂತರಿಕ ಗುಣಮಟ್ಟ ಭರವಸಾ ಕೋಶದ ಸಹಭಾಗಿತ್ವದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ವಿಶೇಷಉಪನ್ಯಾಸಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿದ್ದ ಪುತ್ತೂರಿನ ವಕೀಲ ಕೃಷ್ಣಪ್ರಸಾದ್ ನಡ್ಸರ್, ಮಹಿಳಾ ದಿನಾಚರಣೆಯಮಹತ್ವ,ಮಹಿಳೆಯರ ಮೇಲೆ ನಡೆಯುವ ವಿವಿಧ ರೀತಿಯ ದೌರ್ಜನ್ಯಗಳು, ಅವುಗಳಿಗೆ ಸಬಂಧಿಸಿದ ಕಾನೂನುಗಳು ಮತ್ತು ಮಹಿಳೆಯರು ಪಡೆಯಬಹುದಾದ ನ್ಯಾಯ ಹಾಗೂ ರಕ್ಷಣಾ ಕ್ರಮಗಳ ಕುರಿತು ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಮಾಹಿತಿಯನ್ನು ನೀಡಿದರು.

ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳಾ ಸಬಲೀಕರಣ ವಿಷಯದ ಕುರಿತು ಆಯೋಜಿಸಲಾಗಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ಹಾಗೂ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಪ್ರೊ. ಬಾಲಸುಬ್ರಹ್ಮಣ್ಯ ಪಿ.ಎಸ್. ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಯುವ ರೆಡ್ ಕ್ರಾಸ್ ಘಟಕದ ಸಂಚಾಲಕ ಮಧು ಎನ್.ಎಂ. ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಹಿಳಾ ಕೋಶದ ಸಂಯೋಜಕಿ ಶಾಲಿನಿ ಆರ್. ಪ್ರಾಸ್ತಾವಿಸಿದರು. ದ್ವಿತೀಯ ಎಂಎಸ್ ಡಬ್ಲ್ಯೂ ವಿದ್ಯಾರ್ಥಿನಿ ಅನ್ವಿತಾ ಸ್ವಾಗತಿಸಿ, ತೃತೀಯ ಬಿ.ಕಾಂ.ನ ಶ್ರೇಯಾ ಎ.ಪಿ. ವಂದಿಸಿದರು. ಆಜ್ಞಶ್ರೀ ರೈ ಡಿ. ಕಾರ್ಯಕ್ರಮ ನಿರ್ವಹಿಸಿದರು.

ವಿದ್ಯಾರ್ಥಿಗಳ ಶೈಕ್ಷಣಿಕ, ವೃತ್ತಿ ಅಭಿವೃದ್ಧಿಗೆ ಆದ್ಯತೆ | ಕಾಲೇಜಿನ ವತಿಯಿಂದ ಉಚಿತ ಕ್ರ್ಯಾಶ್ ಕೋರ್ಸ್‌ಗಳಿಗೆ ಚಾಲನೆ

ಪುತ್ತೂರಿನ ಅಕ್ಷಯ ಪದವಿಪೂರ್ವ ಕಾಲೇಜಿನಲ್ಲಿ ಉಚಿತ ಸಿಇಟಿ ತರಬೇತಿ ಆರಂಭ

ಪುತ್ತೂರು: ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳನ್ನು ಮುಂದಿನ ಹಂತಕ್ಕೆ ತಲುಪಿಸುವ ನಿಟ್ಟಿನಲ್ಲಿ ಸಂಪ್ಯದಲ್ಲಿರುವ ಅಕ್ಷಯ ಪಿಯು ಕಾಲೇಜು ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ವೃತ್ತಿ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ಕಾಲೇಜ್ ವತಿಯಿಂದ ಉಚಿತ ಕ್ರ್ಯಾಶ್ ಕೋರ್ಸ್‌ಗಳನ್ನು ಆರಂಭಿಸಲಾಗಿದೆ.



ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಲ್ಲಿ ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರುವ ಈ ಸಂಸ್ಥೆ ಸ್ಪರ್ಧಾತ್ಮಕ ಪರೀಕ್ಷೆಗಳಾದ ಸಿಇಟಿ, ನೀಟ್ ಹಾಗೂ ಐಐಟಿ-ಜೆಇಇಗೆ ವಿಶೇಷ ತರಬೇತಿ ನೀಡುತ್ತಿದೆ. ಶ್ರೀ ಚೈತನ್ಯ ಇನ್‌ಸ್ಟಿಟ್ಯೂಶನ್ ಮತ್ತು ಇನ್‌ಫಿನಿಟಿ ಲರ್ನ್ ಸಹಭಾಗಿತ್ವದಲ್ಲಿ ನೀಡಲಾಗುತ್ತಿರುವ ಈ ತರಬೇತಿಗಳು ವಿದ್ಯಾರ್ಥಿಗಳಿಗೆ ಗುರಿ ಸಾಧನೆಯಲ್ಲಿ ಸಹಕಾರಿಯಾಗಿವೆ. ವಾಣಿಜ್ಯ ವಿದ್ಯಾರ್ಥಿಗಳಿಗೆ ಸಿಎ ಫೌಂಡೇಶನ್ ಜೊತೆಗೆ ಯುಪಿಎಸ್‌ಸಿ ಪರೀಕ್ಷೆಗಳಿಗೂ ಮಾರ್ಗದರ್ಶನ ಒದಗಿಸಲಾಗುತ್ತಿದೆ.

ಅಕ್ಷಯ ಎಜುಕೇಶನಲ್ ಎಂಡ್ ಚಾರಿಟೇಬಲ್ ಟ್ರಸ್ಟ್ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಕಾಲೇಜ್, ಸ್ಥಾಪನೆಯಿಂದಲೇ ಶೈಕ್ಷಣಿಕ ಗುಣಮಟ್ಟ ಮತ್ತು ಫಲಿತಾಂಶಗಳಲ್ಲಿ ಉತ್ತಮ ಸಾಧನೆ ದಾಖಲಿಸಿಕೊಂಡಿದೆ. 2019ರಲ್ಲಿ ಪ್ರಾರಂಭವಾದ ಈ ಸಂಸ್ಥೆ, ಪ್ರಾಂತ್ಯದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಅನುಭವಸಂಪನ್ನ ಉಪನ್ಯಾಸಕರಿಂದ ಪಾಠ ಬೋಧನೆ, ನವೀನ ಅಧ್ಯಯನ ವಿಧಾನಗಳು ಮತ್ತು ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸುವ ತರಬೇತಿಗಳ ಮೂಲಕ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲಾಗುತ್ತಿದೆ. ಇಂತಹ ಪ್ರಯತ್ನಗಳ ಭಾಗವಾಗಿ 2025-26ರ ಶೈಕ್ಷಣಿಕ ವರ್ಷದಲ್ಲಿ ಪಿಯುಸಿ ಮೊದಲ ತಂಡ ಯಶಸ್ವಿಯಾಗಿ ಇದೀಗ ಸಿಇಟಿ ಸ್ಪರ್ಧಾತ್ಮಕ ಪರೀಕ್ಷೆಗೆ ಬರೆಯಲಿರುವ ವಿದ್ಯಾರ್ಥಿಗಳಿಗೆ ಉಚಿತ ತರಬೇತಿಯನ್ನು ನೀಡುವ ಮೊದಲ ಹೆಜ್ಜೆಯನ್ನಿಟ್ಟು ವಿದ್ಯಾರ್ಥಿಗಳಲ್ಲಿ ಭರವಸೆಯನ್ನು ಮೂಡಿಸಿದೆ.

ಈ ಮಾರ್ಗದರ್ಶಿ ಉಚಿತ ತರಬೇತಿಯನ್ನು ನುರಿತ ತರಬೇತುದಾರರು ಹಾಗೂ ಅನುಭವಿ ಉಪನ್ಯಾಸಕ ವೃಂದದವರು ನಡೆಸಿ ಕೊಡಲಿದ್ದಾರೆ.

ಪ್ರತಿವಾರದ 5 ದಿನಗಳಲ್ಲಿ ನಡೆಯಲಿರುವ ಈ ತರಬೇತಿಯನ್ನು, ಅಭ್ಯಾಸ ಪರೀಕ್ಷೆ, ಸಮಸ್ಯೆಗಳ ಪರಿಹಾರ, ಸುಲಭ ವಿಧಾನಗಳು ಹೀಗೆ ಹತ್ತು ಹಲವು ರೀತಿಯಲ್ಲಿ ಸಿಇಟಿ ಪರೀಕ್ಷಾರ್ಥಿಗಳಿಗೆ ಉಪಯೋಗ ಆಗುವಂತೆ ಆಯೋಜಿಸಲಾಗಿದೆ. ಸರಿಸುಮಾರು 50ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಪದವಿ ಪೂರ್ವ ಕಾಲೇಜ್‌ಗಳ ವಿದ್ಯಾರ್ಥಿಗಳು ಸಿಇಟಿ ಕ್ರ್ಯಾಶ್ ಕೋರ್ಸ್‌ಗೆ ಅತ್ಯುತ್ಸಾಹದಿಂದ ಹಾಜರಾಗಿದ್ದಾರೆ. ಗ್ರಾಮೀಣ ಭಾಗದಲ್ಲಿರುವ ಆರ್ಥಿಕವಾಗಿ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳ ಆಸೆ, ಕನಸು ಮತ್ತು ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಒದಗಿಸಿ ಕೊಡುವ ಸದುದ್ದೇಶದಿಂದ ಆರಂಭಗೊಂಡಿರುವ ಈ ಉಚಿತ ಸಿಇಟಿ ಕ್ರ್ಯಾಶ್ ಕೋರ್ಸ್ ಮೊದಲ ಹೆಜ್ಜೆಯಲ್ಲೇ ಹೆಗ್ಗುರುತನ್ನು ಮೂಡಿಸಿದೆ.

ಮುಂದಿನ ಏ.15ರಿಂದ 10ನೇ ತರಗತಿ, ಪ್ರಥಮ

ಸುತ್ತಮುತ್ತ

ಸ್ವಾತಿಗೆ ಪಿಎಚ್‌ಡಿ



ಕಾರ್ಕಳ: ಶ್ರೀ ಭುವನೇಂದ್ರ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಸ್ವಾತಿ ಕೆ ಅವರು "A²TM: Algorithms for Authentication of Digital Transactions based on Multi-biometrics" ಎಂಬ ವಿಷಯದ ಮೇಲೆ ಸಲ್ಲಿಸಿರುವ ಮಹಾ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯ ಪಿಎಚ್ಡಿ ಪದವಿ ಪ್ರದಾನ ಮಾಡಿದೆ. ಇವರು ಮಂಗಳೂರು ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಬಿ. ಎಚ್. ಶೇಖರ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿರುತ್ತಾರೆ. ಕೆ. ಚಂದ್ರಶೇಖರ ರಾವ್ ಮತ್ತು ಜಯಂತಿ ಕೆ ಅವರ ಪುತ್ರಿ, ಹಾಗೂ ನಂದ ಕಿಶೋರ್ ಕೆ. ಅವರ ಪತ್ನಿ.

ಶಾರದಾ ಮಹಿಳಾ ಮಂಡಳಿ ಅಧ್ಯಕ್ಷರಾಗಿ ಜ್ಯೋತಿ ಫಾಟಕ್ ಆಯ್ಕೆ



ಕಾರ್ಕಳ: ಕಾರ್ಕಳ ಶಾರದಾ ಮಹಿಳಾ ಮಂಡಳಿ ಇದರ 2026–28ನೇ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಇತ್ತೀಚೆಗೆ ನಡೆಯಿತು. ಅಧ್ಯಕ್ಷರಾಗಿ ಜ್ಯೋತಿ ಫಾಟಕ್, ಉಪಾಧ್ಯಕ್ಷರಾಗಿ ಸ್ವಾತಿ ಸಂತೋಷ್ ಕಾರ್ಯದರ್ಶಿಯಾಗಿ ಸ್ವಾತಿ ಶಾಮ್ಸುನಕರ್, ಜೊತೆ ಕಾರ್ಯದರ್ಶಿಯಾಗಿ ಸುಧಾ ಪ್ರಭು ಹಾಗೂ ಕೋಶಾಧಿಕಾರಿಯಾಗಿ ಸಾವಿತ್ರಿ ಮನೋಹರ್ ಆಯ್ಕೆಯಾದರು. ಕ್ರೀಡಾ ಕಾರ್ಯದರ್ಶಿಗಳಾಗಿ ಸೌಮ್ಯ ರಾವ್ ಹಾಗೂ ರಶ್ಮಿ, ಸಾಂಸ್ಕೃತಿಕ ಕಾರ್ಯದರ್ಶಿಗಳಾಗಿ ಮಲ್ಲಿಕಾ ಹೆಬ್ಬಾರ್ ಮತ್ತು ಐ.ಕೆ. ಪ್ರಭಾವತಿ, ಭಜನಾ ಕಾರ್ಯದರ್ಶಿಗಳಾಗಿ ಅಕ್ಷತಾ ಪ್ರಭು ಮತ್ತು ಶೈಲಜಾ ರತ್ನಾಕರ್ ಇವರುಗಳು ಆಯ್ಕೆಯಾಗಿದ್ದಾರೆ. ಸುಮಾರು 36 ವರ್ಷಗಳ ಹಿಂದೆ ಪ್ರಾರಂಭವಾದ ಈ ಮಹಿಳಾ ಮಂಡಳಿ ಸುಮಾರು 75ರಷ್ಟು ಸದಸ್ಯೆಯರನ್ನು ಹೊಂದಿ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಮುಂದೆಯೂ ಕೂಡ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸುವ ವಿಚಾರವನ್ನು ನೂತನ ಪದಾಧಿಕಾರಿಗಳು ಹಂಚಿಕೊಂಡಿದ್ದಾರೆ.

ಪೆಟ್ರೋಲ್, ಡೀಸೆಲ್ ಸುಂಕ ಇಳಿಸಿದ ನಡೆ ಅಭಿನಂದನೀಯ



ಉಡುಪಿ: ಪಶ್ಚಿಮ ಏಷ್ಯಾದ ಬಿಕ್ಕಟ್ಟಿನಿಂದಾಗಿ ಜಾಗತಿಕ ಕಚ್ಚಾ ತೈಲ ಬೆಲೆ ಏರಿಕೆಯಿಂದ ಗ್ರಾಹಕರನ್ನು ರಕ್ಷಿಸಲು ಮತ್ತು ಇಂಧನ ದರಗಳು ವಿಪರೀತ ಏರದಂತೆ ತಡೆಯಲು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕದಲ್ಲಿ ಭಾರೀ ಕಡಿತವನ್ನು ಘೋಷಿಸಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ನಡೆ ಪ್ರಶಂಸನೀಯ ಎಂದು ಜಿಲ್ಲಾ ಬಿಜೆಪಿ ತಿಳಿಸಿದೆ. ದೂರದರ್ಶಿತ್ವದ ಚಿಂತನೆಯಿಂದ ಇಂಧನ ದರ ಇಳಿಕೆ ಮೂಲಕ ಜನ ಸಾಮಾನ್ಯರ ಸಂಕಷ್ಟಕ್ಕೆ ಸ್ಪಂದಿಸಿರುವ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಇಂಧನ ಖಾತೆ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ತಿಳಿಸಿದ್ದಾರೆ. ಪೆಟ್ರೋಲ್ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ ರೂ.10ರಷ್ಟು ಕಡಿತಗೊಳಿಸಿ ರೂ.13 ರಿಂದ ರೂ.3ಕ್ಕೆ ಇಳಿಸಲಾಗಿದೆ. ಡೀಸೆಲ್ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ ರೂ.10 ರಷ್ಟು ಕಡಿತಗೊಳಿಸಿ ಶೂನ್ಯಕ್ಕೆ ಇಳಿಸಲಾಗಿದೆ. ಈ ಅಬಕಾರಿ ಸುಂಕದ ಕಡಿತವನ್ನು ಮಾಡಿರುವುದು ಎಲ್ಲ ವರ್ಗದ ಜನತೆಯ ಮುಖದಲ್ಲಿ ಮಂದಹಾಸ ಮೂಡಿಸಿದೆ ಎಂದು ಕುತ್ಯಾರು ನವೀನ್ ಶೆಟ್ಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಬೈಂದೂರು: ಎಸ್‌ಎಫ್‌ಸಿ ಅನುದಾನದಡಿ ನೆರವು

ಬೈಂದೂರು: ಬೈಂದೂರು ಪಟ್ಟಣ ಪಂಚಾಯತ್‌ನ 2021–22ನೇ ಸಾಲಿನ ಎಸ್‌ಎಫ್‌ಸಿ ಅನುದಾನದಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕಲ್ಯಾಣ ಕಾರ್ಯಕ್ರಮ ಉಳಿಕೆ ಮೊತ್ತಕ್ಕೆ ಪರಿಶಿಷ್ಟ ಜಾತಿಯ ಅರ್ಹ ಫಲಾನುಭವಿಗಳಿಗೆ ವೈದ್ಯಕೀಯ ವೆಚ್ಚ ಮರುಪಾವತಿ ಹಾಗೂ ಪರಿಶಿಷ್ಟ ಪಂಗಡ ಜನಾಂಗದ ಅರ್ಹ ಫಲಾನಭವಿಗಳಿಗೆ ಕೃತಕ ಅಂಗ ಜೋಡಣೆಗೆ ಸಹಾಯಧನ, ಶಸ್ತ್ರ ಚಿಕಿತ್ಸೆಗೆ ಧನ ಸಹಾಯ ನೀಡುವುದು ಅನುದಾನ ಕಾಯ್ದಿರಿಸಿದ್ದು, ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿನ ಫಲಾನುಭವಿಗಳು ಸೂಕ್ತ ದಾಖಲೆಗಳೊಂದಿಗೆ ಮಾ.30ರೊಳಗೆ ಅರ್ಜಿಯನ್ನು ಸಲ್ಲಿಸುವಂತೆ ಮುಖ್ಯಾಧಿಕಾರಿ ಅಜಯ್ ಭಂಡಾರ್‌ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಸ್ಕಾಂ ತಲ್ಲೂರು ಉಪವಿಭಾಗ ವ್ಯಾಪ್ತಿಯ ಜನಸಂಪರ್ಕ ಸಭೆಯಲ್ಲಿ ಎಇಇ ಹರೀಶ್‌ಕುಮಾರ್ ಮನವಿ

ವಿದ್ಯುತ್ ಕಳ್ಳತನದ ವಿರುದ್ಧ ವಿಚಕ್ಷಣದಳಕ್ಕೆ ಮಾಹಿತಿ ನೀಡಿ



ಕುಂದಾಪುರ: ಜನಸಂಪರ್ಕ ಸಭೆ ಬಗ್ಗೆ ಸರಿಯಾದ ಪ್ರಚಾರ ನಡೆಸಿಲ್ಲ, ತಲ್ಲೂರು ಉಪವಿಭಾಗ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಗಳಿಗೂ ಜನಸಂಪರ್ಕ ಸಭೆ ಬಗ್ಗೆ ಮಾಹಿತಿ ನೀಡಿಲ್ಲ, ಜನಸಂಪರ್ಕ ಸಭೆ ಇರುವ ಬಗ್ಗೆ ಯಾವುದೇ ಗ್ರಾಹಕರಿಗೆ ಸರಿಯಾದ ಮಾಹಿತಿ ಇಲ್ಲ, ಕಾಟಾಚಾರಕ್ಕೆ ಸಭೆ ನಡೆಸುವ ಬದಲು ಗ್ರಾಹಕರಿಗೆ ಮಾಹಿತಿ ನೀಡಿ ಯಾವುದಾದರೊಂದು ಸಭಾಂಗಣದಲ್ಲಿ ಜನಸಂಪರ್ಕ ಸಭೆ ನಡೆಸಬೇಕು ಎಂದು ತಲ್ಲೂರು ಗ್ರಾ.ಪಂ.ನ ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಉದಯಕುಮಾರ್ ತಲ್ಲೂರು ಆಗ್ರಹಿಸಿದರು.

ತಲ್ಲೂರು ಮೆಸ್ಕಾಂ ಉಪವಿಭಾಗ ಕಚೇರಿಯಲ್ಲಿ ಶುಕ್ರವಾರ ನಡೆದ ಮೆಸ್ಕಾಂ ತಲ್ಲೂರು ಉಪವಿಭಾಗ ವ್ಯಾಪ್ತಿಯ ಜನಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು. ತಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯತ್ ಶಿಫಾರಸ್ಸಿಗೆ ಬೆಲೆ ನೀಡದೆ ರಾಜಕೀಯ ಪಕ್ಷದ ಮುಖಂಡರೊಬ್ಬರು ಹೇಳಿದ ಕೂಡಲೇ ವಿದ್ಯುತ್ ಸಂಪರ್ಕ ನೀಡಿರುವುದು ಸರಿಯಲ್ಲ, ಅನಧಿಕೃತ ವಿದ್ಯುತ್ ಸಂಪರ್ಕದ ಬಗ್ಗೆ ಅನೇಕ ಜನಸಂಪರ್ಕ ಸಭೆಗಳಲ್ಲಿ ಮಾಹಿತಿ ನೀಡಿದರೂ ಈವರೆಗೆ ಯಾವುದೇ ಕ್ರಮಕೈಗೊಂಡಿಲ್ಲ, ವಿದ್ಯುತ್ ಕಳ್ಳತನ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ, ಮೆಸ್ಕಾಂ ಬಗ್ಗೆ ಸಾಕಷ್ಟು ಸಮಸ್ಯೆಗಳಿದ್ದು, ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳು ಗಮನಹರಿಸುತ್ತಿಲ್ಲ ವಿದ್ಯುತ್ ಸಂಪರ್ಕ ನೀಡಲು ಸತಾಯಿಸುತ್ತಿದ್ದಾರೆ ಎಂದು ಆರೋಪಿಸಿದರು.

ತಲ್ಲೂರು ಗ್ರಾಮ ಪಂಚಾಯತ್ ಮಾಜಿ ಸದಸ್ಯ ಕೃಷ್ಣ ಪೂಜಾರಿ ಮಾತನಾಡಿ, ಸ್ವಂತ ಖರ್ಚಿನಿಂದ ಮಾಡಿಕೊಂಡ ವಿದ್ಯುತ್ ಸಂಪರ್ಕ ಕೇಬಲ್ ಮತ್ತು ಮೀಟರನ್ನು ಮೆಸ್ಕಾಂ ಅಧಿಕಾರಿಗಳು ತಂದು ಕಚೇರಿಯಲ್ಲಿ ಇಟ್ಟುಕೊಂಡಿದ್ದು, ಈ ರೀತಿ ಮಾಡಲು ಅವಕಾಶ ಇದೆಯೇ ಎಂದು ಪ್ರಶ್ನಿಸಿದ ಅವರು, ಮೆಸ್ಕಾಂ ಕಚೇರಿಯಲ್ಲಿ ಹೊರಗುತ್ತಿಗೆ ನೌಕರರ ನೇಮಕದ ಬಗ್ಗೆ ಇರುವ ಮಾನದಂಡಗಳೇನು ಎಂದು ಅವರು ಹೇಳಿದರು.

ತಂತಿ ಸರಿಪಡಿಸಲು ಸೂಚನೆ

ಹೆಮ್ಮಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸರಕಾರಿ ಶಾಲೆ ಬಳಿ ಜೋತಾಡುತ್ತಿರುವ ವಿದ್ಯುತ್ ಸರ್ವಿಸ್ ತಂತಿಯನ್ನು ಸರಿಪಡಿಸುವಂತೆ ಸೂಚನೆ ನೀಡಲಾಗುವುದು ಎಂದು ತಲ್ಲೂರು ಜೆಇ ಸುರೇಶ ಬಾಬು ಹೇಳಿದರು.

ಮಾಹಿತಿ ನೀಡಲಾಗಿದೆ

ತಲ್ಲೂರು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹರೀಶ ಕುಮಾರ್ ಮಾತನಾಡಿ, ಜನಸಂಪರ್ಕ ಸಭೆ ಬಗ್ಗೆ ದಿನಪತ್ರಿಕೆಗಳಲ್ಲಿ ಮಾಹಿತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಸಭಾಂಗಣದಲ್ಲಿ ಜನಸಂಪರ್ಕ ಸಭೆಯನ್ನು ಆಯೋಜಿಸಲು ಚಿಂತನೆ ನಡೆಸಲಾಗುವುದು ಎಂದು ಹೇಳಿದರು.

ಲೈನ್‌ಮ್ಯಾನ್‌ಗಳ ನೇಮಕಾತಿ

ವಿದ್ಯುತ್ ಕಳ್ಳತನದ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ, ವಿದ್ಯುತ್ ಕಳ್ಳತನ ನಡೆಯುತ್ತಿದ್ದರೆ ಮೆಸ್ಕಾಂ ವಿಚಕ್ಷಣ ದಳಕ್ಕೆ ಮಾಹಿತಿ ನೀಡಿ ಕ್ರಮಕೈಗೊಳ್ಳಲಾಗುವುದು. ಖಾಲಿ ಇರುವ ಲೈನ್ ಮ್ಯಾನ್ ನೇಮಕಾತಿ ನಡೆಯುತ್ತಿದೆ ಎಂದರು.

ಸಭೆಯಲ್ಲಿ ಲೆಕ್ಕಾಧಿಕಾರಿ ಶಿವಕುಮಾರ್, ಸಹಾಯಕ ಇಂಜಿನಿಯರ್ ಶಶಿರಾಜ್, ಗಂಗೊಳ್ಳಿ ಶಾಖಾಧಿಕಾರಿ ದಿನೇಶ ಶೆಟ್ಟಿ, ನಾಡಾ ಶಾಖಾಧಿಕಾರಿ ವಿಜಯ ಕುಮಾರ್, ವಂಡ್ಸೆ ಶಾಖಾಧಿಕಾರಿ ಚಂದ್ರಶೇಖರ ಬಿ., ಹಿರಿಯ ಸಹಾಯಕ ವಾಸು ಮರಾಠಿ ಹಾಗೂ ಗ್ರಾಹಕರು ಉಪಸ್ಥಿತರಿದ್ದರು.

ಪಾಂಡೇಶ್ವರ ಗ್ರಾ.ಪಂ. ವಿಶೇಷ ಗ್ರಾಮಸಭೆಯಲ್ಲಿ ಗ್ರಾಮಸ್ಥರ ಆಗ್ರಹ

ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣವಾಗಲಿ



ಕೋಟ: ಇಲ್ಲಿನ ಪಾಂಡೇಶ್ವರ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪಶು ಆಸ್ಪತ್ರೆ ನೀಡಬೇಕು ಎಂದು ಪಾಂಡೇಶ್ವರ ವಿಶೇಷ ಗ್ರಾಮಸಭೆಯಲ್ಲಿ ಆಗ್ರಹ ಕೇಳಿ ಬಂತು.

ಶುಕ್ರವಾರ ಪಾಂಡೇಶ್ವರ ಗ್ರಾ.ಪಂ ಸಭಾಂಗಣದಲ್ಲಿ ವಿಶೇಷ ಗ್ರಾಮಸಭೆಯಲ್ಲಿ ಗ್ರಾಮಸ್ಥರು ಆಗ್ರಹಿಸಿ ನಮ್ಮ ಗ್ರಾಮದಲ್ಲಿ ಈ ವರೆಗೆ ಸ್ಥಳೀಯವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪಶು ಆಸ್ಪತ್ರೆ ಇಲ್ಲವಾಗಿದೆ. ಈ ಬಗ್ಗೆ ನಿರ್ಣಯ ಕೈಗೊಂಡು ಸರಕಾರಕ್ಕೆ ಪ್ರಾಸ್ತಾವನೆ ಸಲ್ಲಿಸಿ ಎಂದು ಗ್ರಾಮಸ್ಥರು ಆಗ್ರಹಿಸಿದರು.

ಸಾಸ್ತಾನ ಟೋಲ್ ಸುತ್ತಮುತ್ತ ಹಾಗೂ ಪಂಚಾಯತ್ ವ್ಯಾಪ್ತಿಯ ಕೆಲ ಅಂಗಡಿ ಮುಂಗಟ್ಟುಗಳ ಆಸುಪಾಸು ಕಸ ಹಾಗೂ ಎಳನೀರಿನ ಬೊಂಡದ ರಾಶಿಯಿಂದ ಪರಿಸರ ಮಲಿನಗೊಳ್ಳುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಟೋಲ್ ಹಾಗೂ ಅಂಗಡಿಮುಂಗಟ್ಟುಗಳಿಗೆ ನೋಟೀಸ್ ಮೂಲಕ ಜಾಗೃತಿ ಮೂಡಿಸಿ ಎಂದು ಗ್ರಾಮಸ್ಥರು ಆಗ್ರಹಿಸಿದರು.

ಜಲಜೀವನ್ ಯೋಜನೆಯ ನಳದಲ್ಲಿ ನೀರು ಬರುತ್ತಿಲ್ಲ, ಈ ಬಗ್ಗೆ ತಕ್ಷಣ ಕ್ರಮಕೈಗೊಳ್ಳಬೇಕು. ಪರಿಶಿಷ್ಟ ಪಂಗಡದ ಕೆಲ ಮಕ್ಕಳು ವಿದ್ಯಾಭ್ಯಾಸ ಮೊಟಕುಗೊಳಿಸಿದ್ದು, ಈ ಬಗ್ಗೆ ಸ್ಥಳೀಯಾಡಳಿತ ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಇಲಾಖೆ ಮೂಲಕ ಕ್ರಮ, ಕೋಟ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಸಂಬಂಧಿಸಿದ ವೈದ್ಯರನ್ನು ವರ್ಗಾಯಿಸಿ ಅಲ್ಲಿ ಹೆರಿಗೆ ಕೇಂದ್ರವನ್ನು ಮುಚ್ಚಿದ್ದಾರೆ. ಇದರಿಂದ ಕೋಟ ಹೋಬಳಿ ಭಾಗದ ಸಾಕಷ್ಟು ಬಡ ವರ್ಗದವರಿಗೆ ಅದರಲ್ಲೂ ನಮ್ಮ ಪಂಚಾಯತ್ ವ್ಯಾಪ್ತಿಯ ಫಲಾನುಭವಿಗಳು ವಂಚಿರಾಗಿ ದೂರದ ತಾಲೂಕು ಜಿಲ್ಲಾಸ್ಪತ್ರೆಗೆ ಹೋಗುವ ಪ್ರಸಂಗ ಎದುರಾಗಿದೆ. ಈ ಬಗ್ಗೆ ವೈದ್ಯರನ್ನು ಮರುನೇಮಕಗೊಳಿಸುವ ಸಂಬಂಧ ನಿರ್ಣಯ ಕೈಗೊಳ್ಳಿ ಎಂದು ಸಭೆ ಆಗ್ರಹಿಸಿತು.

ಅಧ್ಯಕ್ಷತೆಯನ್ನು ಆಡಳಿತ ಅಧಿಕಾರಿ ಪಶು ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಸೂರಜ್ ವಹಿಸಿದ್ದರು. ಸಾಸ್ತಾನ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ರಾಘವೇಂದ್ರ ರಾವ್ ಬೇಸಿಗೆಯ ಹಿನ್ನಲೆಯಲ್ಲಿ ಆರೋಗ್ಯದ ಮೇಲಾಗುವ ವ್ಯತ್ಯಯ, ಸ್ವಚ್ಛ ಕುಡಿಯುವ ನೀರು ಉಪಯೋಗಿಸುವ ಸಂಬಂಧಿಸಿದಂತೆ ಸಮಗ್ರ ಆರೋಗ್ಯ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಇದೇ ವೇಳೆ ಕ್ಷಯ ಮುಕ್ತ ಗ್ರಾ.ಪಂ. ಪ್ರಥಮ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಸಭೆಯಲ್ಲಿ ವೈದ್ಯಾಧಿಕಾರಿಗಳು ಅಭಿನಂದನೆ ಸಲ್ಲಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯ ಬ್ರಹ್ಮಾವರ ತಾಲೂಕಿನ ಅಧಿಕಾರಿ ಭಾಗೀರಥಿ ಮಾಹಿತಿ ನೀಡಿದರು. ಗ್ರಾಮಾಡಳಿತಾಧಿಕಾರಿ ಐರಿನ್ ಶಾಂತಿ ಫೇರೆರಾ ಉಪಸ್ಥಿತರಿದ್ದರು. ಪಿಡಿಒ ವಂದನಾ ಸ್ವಾಗತಿಸಿದರು. ಕಾರ್ಯದರ್ಶಿ ವಿಜಯ ಭಂಡಾರಿ ನಿರ್ವಹಿಸಿದರು.

ಬಂಟಕಲ್ಲು ಶಾಲಾ ಶತ ಸಂಭ್ರಮ | ಆಮಂತ್ರಣ ಪತ್ರಿಕೆಯ ಬಿಡುಗಡೆ

ಏ.11, 12ರಂದು ಶತಮಾನೋತ್ಸವ ಸಮಾರೋಪ



ಶಿರ್ವ: ಶತಮಾನೋತ್ಸವ ಸಂಭ್ರಮದಲ್ಲಿರುವ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ಅನುದಾನಿತ ಹಿರಿಯ ಪ್ರಾಥಮಿಕ ಶಾಲಾ ಶತಮಾನೋತ್ಸವ –ಸಮಾರೋಪ ಸಮಾರಂಭ ಏ.11, 12ರಂದು ಜರಗಲಿದ್ದು ಅದರ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಮಂಗಳವಾರ ಶಾಲಾ ಶತಮಾನೋತ್ಸವ ವೇದಿಕೆಯಲ್ಲಿ ಜರುಗಿತು.

ಶಾಲಾ ನಿವೃತ್ತ ಹಿರಿಯ ಶಿಕ್ಷಕ ಬಿ. ಪುಂಡಲೀಕ ಮರಾಠೆ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡುತ್ತಾ, ನಾವು ಕಲಿತ ಶಾಲೆಯ ನೂರರ ಸಂಭ್ರಮದಲ್ಲಿ ಪಾಲ್ಗೊಳ್ಳುವ ಸುವರ್ಣ ಅವಕಾಶ ದೇವರು ನಮಗೆ ಕರುಣಿಸಿದ್ದಾರೆ. ಕನ್ನಡ ಶಾಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಎಲ್ಲಾ ಹಳೆವಿದ್ಯಾರ್ಥಿಗಳು, ಶಿಕ್ಷಣಾಭಿಮಾನಿಗಳು ಕೈಜೋಡಿಸಬೇಕಾಗಿದೆ. ಈ ಎರಡು ದಿನಗಳ ಸಮಾರಂಭ ಊರಿನ ಜಾತ್ರಾ ಮಹೋತ್ಸವವಾಗಿ ಇತಿಹಾಸದ ಪುಟದಲ್ಲಿ ದಾಖಲಿಸುವಂತೆ ಊರಿನ ಎಲ್ಲಾ ಸಂಘಟನೆಗಳು ಸಹಕರಿಸಬೇಕು. ಎಲ್ಲರಿಗೂ ಕರೆಯೋಲೆ ಮುಟ್ಟಿಸುವ ಕಾರ್ಯ ನಡೆಯಬೇಕು ಎಂದರು.

ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಶಶಿಧರ ವಾಗ್ಲೆ, ವಿಶ್ವಕರ್ಮ ಸಂಘದ ಅಧ್ಯಕ್ಷ ಮುರಲೀಧರ ಆಚಾರ್ಯ, ಶ್ರೀದುರ್ಗಾ ಚಂಡೆ ಬಳಗದ ಅಧ್ಯಕ್ಷೆ ಗೀತಾ ವಾಗ್ಲೆ, ನಿವೃತ್ತ ಶಿಕ್ಷಕ ಎಸ್.ಎಸ್.ಪ್ರಸಾದ್, ಶ್ರೀಬಬ್ಬುಸ್ವಾಮಿ ದೈವಸ್ಥಾನದ ಗುರಿಕಾರ ಶಂಕರ ಪದಕಣ್ಣಾಯ, ವಿಕಾಸ ಸೇವಾ ಸಮಿತಿಯ ಅಧ್ಯಕ್ಷ ಮಾಧವ ಆಚಾರ್ಯ ಹೇರೂರು ಮಾತನಾಡಿದರು.

ವೇದಿಕೆಯಲ್ಲಿ ಶಾಲಾ ಸಂಚಾಲಕ ರಾಮದಾಸ್ ಪ್ರಭು, ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ರಾಘವೇಂದ್ರಸ್ವಾಮಿ ಹೇರೂರು, ದಾಮೋದರ ಆಚಾರ್ಯ, ದಿನೇಶ ದೇವಾಡಿಗ, ಉಮೇಶ ರಾವ್, ಮಂಜುನಾಥ ಪೂಜಾರಿ, ಡೇನಿಸ್ ಡಿಸೋಜ, ಸ್ಯಾಮ್ಸನ್ ನೊರೋನ್ಹಾ, ರಾಜೇಶ ದೇವಾಡಿಗ, ವಿದ್ಯಾ ಆಚಾರ್ಯ, ಪೂರ್ಣಿಮಾ, ಭಾಸ್ಕರ ದೇವಾಡಿಗ, ಶಾಲಾ ಮುಖ್ಯ ಶಿಕ್ಷಕಿ ಸಂಗೀತಾ ಆರ್ ಪಾಟ್ಕರ್, ಸಭೆಯಲ್ಲಿ ಬಂಟಕಲ್ಲು ರಾಮಕೃಷ್ಣ ಶರ್ಮಾ, ಶಾಲಾ ಎಸ್‌ಡಿಎಮ್‌ಸಿ ಅಧ್ಯಕ್ಷ ರವೀಂದ್ರ ಪಾಟ್ಕರ್, ಶಿಕ್ಷಕ ದೇವದಾಸ್ ಪಾಟ್ಕರ್ ಸಹಿತ ವಿವಿಧ ಸಮಿತಿಗಳ ಪದಾಧಿಕಾರಿಗಳು, ಗೌರವ ಶಿಕ್ಷಕಿಯರು ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಶಾಲಾ ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಮಾಧವ ಕಾಮತ್ ವಹಿಸಿ, ಈ ಒಂದು ವರ್ಷದಲ್ಲಿ ಆದ ಅಭಿವೃದ್ಧಿ ಕಾರ್ಯಗಳು, ಆಗಬೇಕಾದ ಕೆಲಸಗಳ ಬಗ್ಗೆ ತಿಳಿಸಿ ಸಮಾರೋಪ ಸಮಾರಂಭ ಅದ್ದೂರಿಯಾಗಿ ಜರುಗಿಸುವಲ್ಲಿ ಸರ್ವರೂ ಸಹಕರಿಸುವಂತೆ ವಿನಂತಿಸಿದರು. ಶಾಲಾ ವಿದ್ಯಾರ್ಥಿಗಳ ಕುಣಿತ ಭಜನಾ ತಂಡಕ್ಕೆ ಸಮಿತಿಯ ವತಿಯಿಂದ ನೀಡಿದ ಸಮವಸ್ತ್ರವನ್ನು ಶಾಲಾ ಗೌರವ ಶಿಕ್ಷಕಿ ವಿನುತಾ ಆಚಾರ್ಯ, ಮುಖ್ಯ ಶಿಕ್ಷಕಿ ಸಂಗೀತಾ ಪಾಟ್ಕರ್ ಸ್ವೀಕರಿಸಿದರು. ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಆರ್ .ಪಾಟ್ಕರ್ ಪ್ರಾಸ್ತಾವಿಕ ಮಾತುಗಳೊಂದಿಗೆ ಕಾರ್ಯಕ್ರಮ ನಿರೂಪಿಸಿದರು.

ಏ. 19ರಂದು ಕೋಡಿಕನ್ಯಾಣದಲ್ಲಿ 'ಜನಪದ ಸಿರಿ': ಪೋಸ್ಟರ್ ಬಿಡುಗಡೆ



ಕೋಟ: ಶ್ರೀ ಬ್ರಾಹ್ಮ ಗ್ರೂಪ್ ಕೋಡಿ ಕನ್ಯಾಣ, ವಿಶ್ವ ಮಾನವ ಫೌಂಡೇಶನ್ ಗುರುಮಿಠಕಲ್ ಯಾದಗಿರಿ ಜಿಲ್ಲೆ, ತನ್ಮಯ್ ಪ್ರೊಡಕ್ಷನ್ ಇವರ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರ-ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕೃತ ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಯ 200ಕ್ಕೂ ಮಿಕ್ಕಿ ಜಾನಪದ ಕಲಾವಿದರ ಕೂಡುವಿಕೆಯಲ್ಲಿ ಕಡಲೂರು ಕೋಡಿ ಕನ್ಯಾಣದಲ್ಲಿ ಇದೇ ಮೊದಲ ಬಾರಿಗೆ ಜನಪದ ಸಿರಿ ಜಾನಪದ ಕಲಾಪ್ರಕಾರಗಳ ಸಾಕ್ಷಾತ್ಕಾರ 2026 ಕಾರ್ಯಕ್ರಮ ಏಪ್ರಿಲ್ 19ರಂದು ಕೋಡಿಕನ್ಯಾಣದ ಮಹಾಸತೀಶ್ವರಿ ದೇಗುಲದ ಸಮೀಕ ಆಯೋಜಿಸಿದ್ದು ಇದರ ಪೋಸ್ಟರ್ ಬಿಡುಗಡೆ ಸಮಾರಂಭ ಕೋಟ ಅಮೃತೇಶ್ವರೀ ದೇಗುಲದಲ್ಲಿ ಗುರುವಾರ ಜರಗಿತು.

ಪೋಸ್ಟರ್‌ನ್ನು ಕೋಟ ಅಮೃತೇಶ್ವರೀ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಆನಂದ್ ಸಿ ಕುಂದರ್ ಬಿಡುಗಡೆಗೊಳಿಸಿ ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಮಾಜಿ ಜಿ.ಪಂ ಸದಸ್ಯ ಶಂಕರ್ ಎ ಕುಂದರ್,ಕೋಟ ಸಿ ಎ ಬ್ಯಾಂಕ್ ಅಧ್ಯಕ್ಷ ಡಾ. ಕೃಷ್ಣ ಕಾಂಚನ್ ,ಕೋಟ ಅಮೃತೇಶ್ವರೀ ದೇಗುಲದ ಟ್ರಸ್ಟಿ ಸುಭಾಷ್ ಶೆಟ್ಟಿ ಗಿಳಿಯಾರು,ಮೊಗವೀರ ಯುವ ಸಂಘಟನೆಯ ಮಾಜಿ ಜಿಲ್ಲಾಧ್ಯಕ್ಷ ಜಯಂತ್ ಅಮೀನ್, ಜಿಲ್ಲಾ ಘಟಕದ ಉಪಾಧ್ಯಕ್ಷ ಸತೀಶ್ ಮರಕಾಲ,ಉದ್ಯಮಿ ಶಂಕರ್ ಕುಂದರ್, ಕೋಡಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಪ್ರಭಾಕರ್ ಮೆಂಡನ್, ಕಾಂಗ್ರೆಸ್ ಮುಖಂಡ ದಿನೇಶ್ ಬಂಗೇರ, ಕೋಟ ಸಿ ಎ ಬ್ಯಾಂಕ್ ನಿರ್ದೇಶಕ ರಂಜೀತ್ ಕುಮಾರ್, ಬ್ರಾಹ್ಮೀ ಗ್ರೂಪ್ಸ್‌ನ ಪ್ರಮುಖರಾದ ಸತೀಶ್ ತಿಂಗಳಾಯ, ಶಂಕರ್ ಬಂಗೇರ, ಉದಯ್ ತಿಂಗಳಾಯ, ಸಂತೋಷ್ ಮೆಂಡನ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಕೋಟೇಶ್ವರ ಕಾಲೇಜಿನಲ್ಲಿ 'ವ್ಯವಹಾರ ಕ್ಷೇತ್ರದ ಹೊಸ ಮಾದರಿ' ಕಾರ್ಯಾಗಾರ



ಕುಂದಾಪುರ: ಯಾವುದೇ ಹೊಸ ವ್ಯವಹಾರ ಮಾದರಿಯ ಅನ್ವೇಷಣೆ, ಚಾಲ್ತಿಯಲ್ಲಿರುವ ಮಾದರಿಗಳಲ್ಲಿನ ಬದಲಾವಣೆಗಳು ಹಲವಾರು ಸವಾಲುಗಳನ್ನು ಸೃಷ್ಟಿಸುತ್ತದೆ ಹಾಗೂ ಹೊಸ ಅವಕಾಶಗಳನ್ನು ತೆರೆದು ಕೊಡುತ್ತದೆ. ಉದ್ಯಮ ರಂಗದ ಮಾದರಿಗಳಲ್ಲಾಗುವ ವ್ಯತ್ಯಾಸವು ಉದ್ದಿಮೆದಾರರ, ಉದ್ಯೋಗಿ ಗಳ, ಗ್ರಾಹಕರ ಹಾಗೂ ಉದ್ಯೋಗ ಆಕಾಂಕ್ಷಿಗಳ ಜೀವನದ ಮೇಲೆ ಪ್ರಭಾವವನ್ನು ಬೀರುತ್ತದೆ ಎಂದು ಹಳೆಯಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಲೋಕೇಶ ಹೇಳಿದರು.

ಕೋಟೇಶ್ವರದ ಕಾಳಾವರ ವರದರಾಜ ಎಂ. ಶೆಟ್ಟಿ ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಇಲ್ಲಿನ ಆಂತರಿಕ ಗುಣಮಟ್ಟ ಭರವಸಾ ಕೋಶ ಹಾಗೂ ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗ ಇದರ ಸಂಯುಕ್ತ ಆಶ್ರಯದಲ್ಲಿ ವ್ಯವಹಾರ ಕ್ಷೇತ್ರದ ಹೊಸ ಮಾದರಿಗಳು ಎಂಬ ವಿಷಯದಲ್ಲಿ ಆಯೋಜಿಸಲಾಗಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು. ಪ್ರಾಂಶುಪಾಲ ಪ್ರೊ. ರಾಮರಾಯ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಐಕ್ಯೂ ಎಸಿ ಸಂಚಾಲಕ ಪ್ರೊ. ನಾಗರಾಜ ಯು., ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ನಾಗರಾಜ ವೈದ್ಯ ಎಂ., ವಾಣಿಜ್ಯಶಾಸ್ತ್ರ ವಿಭಾಗ ಮುಖ್ಯಸ್ಥ ಡಾ. ಶೇಖರ ಬಿ., ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಕಾರ್ತಿಕ್ ಪೈ, ಉಪನ್ಯಾಸಕರಾದ ಉಜ್ವಲ ಶೆಟ್ಟಿ, ಸಾವಿತ್ರಿ, ಶಾಂತಿ ಇದ್ದರು. ಪೂಜಾ ಸ್ವಾಗತಿಸಿದರು. ಡಾ. ಉದಯ ಶೆಟ್ಟಿ ಕೆ. ಪ್ರಾಸ್ತಾವಿಕವಾಗಿ ಮಾತನಾಡಿದರು. ಅಮೃತ ಪೂಜಾರಿ ನಿರೂಪಿಸಿದರು. ಪ್ರತಿಮಾ ವಂದಿಸಿದರು.

ಕೋಟ ಶ್ರೀಅಮೃತೇಶ್ವರೀ ದೇಗುಲ: ಅಬಕಾರಿ ಜಂಟಿ ಆಯುಕ್ತರ ಭೇಟಿ



ಕೋಟ: ಇಲ್ಲಿನ ಕೋಟ ಅಮೃತೇಶ್ವರೀ ಹಲವು ಮಕ್ಕಳ ತಾಯಿ ದೇಗುಲಕ್ಕೆ ಅಬಕಾರಿ ಇಲಾಖೆಯ ಮಂಗಳೂರು ವಿಭಾಗದ ಜಂಟಿ ಆಯುಕ್ತ ಎ.ಎನ್ ನಾಗೇಶ್ ದಂಪತಿ ಗುರುವಾರ ಭೇಟಿ ನೀಡಿದರು.

ದೇಗುಲದ ಅಧ್ಯಕ್ಷ ಆನಂದ್ ಸಿ. ಕುಂದರ್ ಶಾಲು ಹೊದಿಸಿ ಪ್ರಸಾದ ನೀಡಿ ಗೌರವಿಸಿದರು. ದೇಗುಲದ ಟ್ರಸ್ಟಿ ಸುಭಾಷ್ ಶೆಟ್ಟಿ,ಜೀರ್ಣೋದ್ಧಾರ ಸಮಿತಿಯ ಭುಜಂಗ ಗುರಿಕಾರ, ಅರ್ಚಕ ಪ್ರತಿನಿಧಿ ಅರವಿಂದ ಜೋಗಿ, ರಾಘವೇಂದ್ರ ಜೋಗಿ,ವಿಜಯ ಜೋಗಿ ಉಪಸ್ಥಿತರಿದ್ದರು.



ಬಸ್ರೂರು ಶ್ರೀ ಶಾರದಾ ಕಾಲೇಜು ಇಲ್ಲಿನ ಐಕ್ಯೂಎಸಿ ಮತ್ತು ವಾಣಿಜ್ಯ ವಿಭಾಗ ಆಶ್ರಯದಲ್ಲಿ ಅಭಿಪ್ರೇರಣೆ ಕಾರ್ಯಕ್ರಮ ಜರಗಿತು. ಪ್ರಾಂಶುಪಾಲೆ ಡಾ. ಚಂದ್ರಾವತಿ ಶೆಟ್ಟಿ, ತೆಂಕನಿಡಿಯೂರು ಕಾಲೇಜಿನ ಪ್ರಾಧ್ಯಾಪಕ ಡಾ. ಗಣೇಶ ಪ್ರಸಾದ ನಾಯಕ, ಕಾಲೇಜಿನ ಆಡಳಿತಾಧಿಕಾರಿ ಡಾ. ಮೋಹನ ಕೆ.ಎನ್., ವಾಣಿಜ್ಯ ವಿಭಾಗದ ಮುಖ್ಯಸ್ಥ ಡಾ. ರವಿಚಂದ್ರ ಇದ್ದರು.

ಪಾಂಡೇಶ್ವರ ಶಾಲೆ ಹಿಂಭಾಗದಲ್ಲಿ ಎರಡು ಕುಟುಂಬಗಳ ನಡುವೆ ದಾರಿ ಸಮಸ್ಯೆ

ಕಂದಾಯ ಅಧಿಕಾರಿಗಳ ಭೇಟಿ, ಸ್ಥಳ ಪರಿಶೀಲನೆ



ಕೋಟ: ಇಲ್ಲಿನ ಪಾಂಡೇಶ್ವರ ಗ್ರಾಮಪಂಚಾಯತ್ ವ್ಯಾಪ್ತಿಯ ಪಾಂಡೇಶ್ವರ ಶಾಲೆ ಹಿಂಭಾಗದ ತೋಟದ ಮನೆ ರಸ್ತೆ ಎಂಬಲ್ಲಿ ಕುಟುಂಬಗಳ ಮಧ್ಯೆ ನಡೆಯುವ ದಾರಿಯ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಕೋಟ ಕಂದಾಯ ಅಧಿಕಾರಿ ಮಂಜು ಬಿಲ್ಲವ ಶುಕ್ರವಾರ ಸ್ಥಳ ಪರಿಶೀಲನೆ ನಡೆಸಿದರು.

ಈ ಸಂಬಂಧ ಎರಡು ಕುಟುಂಬದ ಪ್ರಮುಖರು ಹಾಜರಿದ್ದು, ಅಧಿಕಾರಿಗಳ ಮುಂದೆ ತಮ್ಮ ಅಹವಾಲುಗಳನ್ನು ಮಂಡಿಸಿದರು.

ಈ ಬಗ್ಗೆ ಕೋಟ ಹೋಬಳಿ ಕಂದಾಯ ಅಧಿಕಾರಿ ಮಂಜು ಬಿಲ್ಲವ ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿ ನಡೆಯುವ ದಾರಿಯನ್ನು ರಸ್ತೆಯಾಗಿಸಿಕೊಳ್ಳಿ. ಕಲಹ ಒಳ್ಳೆದಯದಲ್ಲ, ಬದಲಾಗಿ ನಿಮ್ಮೊಳಗೆ ಪರಿಹಾರ ಕಂಡುಕೊಳ್ಳುವುದು ಸೂಕ್ತ. ಕಾನೂನಿನ ಮೂಲಕ ಹೊದರೆ ಸಮಸ್ಯೆ ಮತ್ತಷ್ಟು ಜಟಿಲಗೊಳ್ಳುತ್ತದೆ ಎಂದು ಕಿವಿ ಮಾತು ಹೇಳಿದರು.

ಈ ಬಗ್ಗೆ ಎರಡು ಕುಟುಂಬಗಳ ಮಧ್ಯೆ ಮಾತುಕತೆ ಮುರಿದು ಬಿದ್ದ ಪರಿಣಾಮ ಸ್ಥಳದಿಂದ ಅಧಿಕಾರಿಗಳು ನಿರ್ಗಮಿಸಿದರು. ಪಾಂಡೇಶ್ವರ ಗ್ರಾಮ ಆಡಳಿತಾಧಿಕಾರಿ ಐರಿನ್ ಶಾಂತಿ ಫೇರೆರಾ, ಸಹಾಯಕ ಶ್ರೀಧರ ಗಾಣಿಗ, ಪಾಂಡೇಶ್ವರ ಪಂಚಾಯತ್ ಮಾಜಿ ಉಪಾಧ್ಯಕ್ಷ ವೈ.ಬಿ. ರಾಘವೇಂದ್ರ ಇದ್ದರು.

ಶ್ರೀದೇವಿಯ ಪಲ್ಲಕಿ ಉತ್ಸವ, ಪಲ್ಲಪೂಜೆ | ಶ್ರೀ ಮಹಾಲಕ್ಷ್ಮೀ ಆರಾಧನೆ

ಶ್ರೀಕ್ಷೇತ್ರ ಬಂಟಕಲ್ಲು ದೇಗುಲ ಪ್ರತಿಷ್ಠಾ ವರ್ಧಂತಿ



ಶಿರ್ವ: ಶ್ರೀಕ್ಷೇತ್ರ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಳದ ವಾರ್ಷಿಕ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಶುಕ್ರವಾರ ಜರುಗಿತು.

ಗುರುವಾರ ಸಂಜೆ ವೇದಮೂರ್ತಿ ಸಂದೇಶ್ ಭಟ್ ನೇತೃತ್ವದಲ್ಲಿ ವಾಸ್ತು ರಾಕ್ಷೋಘ್ನ ಹೋಮ, ಮಂಡಲದಲ್ಲಿ ಶ್ರೀಮಹಾಲಕ್ಷ್ಮೀ ಆರಾಧನೆ, ಶ್ರೀಸೂಕ್ತ ಹೋಮ, ಶುಕ್ರವಾರ ಪೂರ್ವಾಹ್ನ ಪ್ರಾರ್ಥನೆ, ಮಹಾಗಣಪತಿ ಹೋಮ, ಪ್ರಧಾನ ಹೋಮ, ಶ್ರೀದೇವಿಗೆ ನವಕ ಕಲಶಾಭಿಷೇಕ, ಪರಿವಾರ ದೇವತೆಗಳ ಆರಾಧನೆ, ಮಧ್ಯಾಹ್ನ ಮಹಾಪೂಜೆ, ಶ್ರೀದೇವಿಯ ಪಲ್ಲಕಿ ಉತ್ಸವ, ಪಲ್ಲಪೂಜೆ ನಡೆಯಿತು. ಧಾರ್ಮಿಕ ಅನುಷ್ಠಾನದಲ್ಲಿ ಕ್ಷೇತ್ರದ ವೈದಿಕರಾದ ಸುಧೀಂದ್ರ ಭಟ್, ಶ್ರೀಕಾಂತ್ ಭಟ್, ಮಂಜುನಾಥ್ ಭಟ್, ಸಹ ವೈದಿಕರಾದ ರಂಜಿತ್ ಭಟ್, ರವಿಚಂದ್ರ ಭಟ್, ಹರಿ ಭಟ್ ಸಗ್ರಿ ಸಹಕರಿಸಿದರು.

ಅಪರಾಹ್ನ ಶ್ರೀದುರ್ಗಾ ಯಕ್ಷಬಳಗ ಬಂಟಕಲ್ಲು ಇವರಿಂದ 'ದ್ರೌಪದಿ ಪ್ರತಾಪ' ಯಕ್ಷಗಾನ ಬಯಲಾಟ ಪ್ರದರ್ಶನ ಗೊಂಡಿತು. ಸಂಜೆ ಶ್ರೀರಾಮ ಭಜನೆ, ರಾತ್ರಿ ರಂಗಪೂಜೆ, ರಥೋತ್ಸವ, ಬಲಿ ಉತ್ಸವ ಜರುಗಿತು. ಈ ವೇಳೆ ಕ್ಷೇತ್ರದ ಆಡಳಿತ ಮೊಕ್ತೇಸರ ಜಯರಾಮ ಪ್ರಭು ಗಂಪದಬೈಲು, ಅಧ್ಯಕ್ಷ ಉಮೇಶ ಪ್ರಭು ಪಾಲಮೆ, ಆಡಳತ ಮಂಡಳಿ ಸದಸ್ಯರು, ಸಮಾಜದ ವಿವಿಧ ದೇವಳಗಳ ವೈದಿಕರು, ಆಡಳಿತ ಮೊಕ್ತೇಸರರು ಪಾಲ್ಗೊಂಡಿದ್ದರು.

ಶ್ರೀ ಮಾಣ್ಣಾಳಮ್ಮ ವಿಷ್ಣುಮೂರ್ತಿ ದೈವಸ್ಥಾನ ಯಾದವ ತರವಾಡು ಪುಂಜಂಗೋಡು





ಪುಂಜಂಗೋಡು ಅಂಚೆ, ಮಲ್ಲ, ಮುಳಿಯಾರು ಗ್ರಾಮ, ಕಾಸರಗೋಡು



ನೂತನ ತರವಾಡು ಮನೆಯ ಗೃಹಪ್ರವೇಶ

ಪುನರ್‌ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಮತ್ತು ದೈವಗಳ ನೃತ್ಯೋತ್ಸವ

2026 ಮಾರ್ಚ್ 26 ರಿಂದ ಮಾರ್ಚ್ 29 ರವರೆಗೆ



ತಾ. 28.03.2026 ಶನಿವಾರ ಮತ್ತು 29.03.2026 ಆದಿತ್ಯವಾರಗಳಂದುಶ್ರೀ ದೈವಗಳ ನೃತ್ಯೋತ್ಸವವು ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನಮ್ ಶ್ರೀಮದ್ ಎಡನೀರು ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಶುಭಾಶೀರ್ವಾದದೊಂದಿಗೆ, ಶ್ರೀ ಕ್ಷೇತ್ರದ ತಂತ್ರಿವರ್ಯರಾದ ಬ್ರಹ್ಮಶ್ರೀ ವೇದಮೂರ್ತಿ ವಾಸುದೇವ ತಂತ್ರಿ ಕುಂಟಾರು ಮತ್ತು ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು ಇವರ ಪೌರೋಹಿತ್ಯದಲ್ಲಿ ತರವಾಡು ಹಿರಿಯರ ಆಶೀರ್ವಾದದೊಂದಿಗೆ ವಿವಿಧ ವೈದಿಕ, ತಾಂತ್ರಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಶುಭಕಾರ್ಯಗಳಿಗೆ ಆಸ್ತಿಕ ಬಂಧುಗಳಾದ ತಾವೆಲ್ಲರೂ ಬಂಧು ಮಿತ್ರರೊಡಗೂಡಿ ಭಾಗವಹಿಸಿ ಶ್ರೀ ದೈವಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ

ತರವಾಡಿನ ಇತಿಹಾಸ

ಇತಿಹಾಸ ಪ್ರಸಿದ್ಧವಾದ ಕುಂಬಳೆ ಸೀಮೆಯ ಕಾಸರಗೋಡು ತಾಲೂಕು ಮುಳಿಯಾರು ಗ್ರಾಮದ ಸುಪ್ರಸಿದ್ಧ ಮಲ್ಲ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದ ಪೂರ್ವಕ್ಕೆ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿ ಯಾದವ ವಂಶಕ್ಕೆ ಸೇರಿದ ಆರು ಇಲ್ಲಂ'ಗಳ ಪೈಕಿ ಪಚ್ಚೆಮಾರ್' (ಬಮ್ಮಣಕೋಡನ್) ಎಂದು ಗುರುತಿಸಲಾದ ಮನೆತನಕ್ಕೆ ಸೇರಿದ ಪುರಾತನ ಹಾಗೂ ಪ್ರಸಿದ್ಧ ತರವಾಡುಗಳಲ್ಲಿ ಒಂದಾದ ಪುಂಜಂಗೋಡು ಶ್ರೀ ಮಾಣ್ಣಾಳಮ್ಮ ವಿಷ್ಣುಮೂರ್ತಿ ಯಾದವ ತರವಾಡು ಸುಮಾರು 175 ವರ್ಷಗಳ ಇತಿಹಾಸವನ್ನು ಹೊಂದಿದೆ. ಹಿರಿಯರಿಂದ ಕಿರಿಯರಿಗೆ ತಲತಲಾಂತರಗಳಿಂದ ಬಾಯ್ದೆರೆಯಾಗಿ ಲಭಿಸಿದ ಮಾಹಿತಿಗಳು ಮತ್ತು ಸ್ವರ್ಣ ಪ್ರಶ್ನ ಚಿಂತನೆಗಳಲ್ಲಿ ಮೂಡಿಬಂದ ವಿಚಾರಗಳ ಪ್ರಕಾರ ಕಾಂಚನಗಡದ (ಇಂದಿನ ಕಾಂಞಂಗಾಡ್) ಉತ್ತರ ಭಾಗದಲ್ಲಿರುವ ಸುಪ್ರಸಿದ್ಧ ಮಡಿಯನ್ ಕೂಲಂ' ಕ್ಷೇತ್ರಕ್ಕೆ ಸೇರಿದ ಸನ್ಯಾಸಿ ಶ್ರೇಷ್ಠರೂ ಪರಮ ಸಾದ್ವಿಗಳೂ ಅನೇಕ ಸಿದ್ದಿಗಳನ್ನು ಕರಗತ ಮಾಡಿಕೊಂಡವರೂ ಆದ ಗುರುಶ್ರೇಷ್ಠರು ಈ ದೈವಸ್ಥಾನವನ್ನು ನಿರ್ಮಿಸಿದರೆಂಬುದಕ್ಕೆ ಐತಿಹ್ಯವೊಂದಿದೆ.

ಹಿಂದೊಮ್ಮೆ ಈ ಗುರುಶ್ರೇಷ್ಠರು ಕ್ಷೇತ್ರ ದರ್ಶನಕ್ಕೆಂದು ಮಲ್ಲಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಆಗಮಿಸಿದ ಸಂದರ್ಭದಲ್ಲಿ ಈ ಭೂಮಿಯ ಒಡೆಯರೂ ಅಗರ್ಭ ಶ್ರೀಮಂತರೂ ಆಗಿದ್ದ ಬಲ್ಲಾಳ ಮನೆತನದ ವಂಶದಕುಡಿಯು ಸರ್ಪದಂಶನದಿಂದ ಮೃತಪಟ್ಟಿರುವುದಾಗಿಯೂ ಅಂತ್ಯಕ್ರಿಯೆಗೆ ಸಿದ್ಧತೆ ಮಾಡುತ್ತಿರುವುದಾಗಿಯೂ ತಿಳಿದು ನೇರ ಅಲ್ಲಿಗೆ ತೆರಳಿದ ಅವರು ಆ ಕನ್ಯೆಯನ್ನು ಪರೀಕ್ಷಿಸಿ, ಜೀವದ ತುಡಿತವನ್ನರಿತು ಅಂತ್ಯಕ್ರಿಯೆಯನ್ನು ಮುಂದೂಡುವಂತೆ ಸೂಚಿಸಿ ತಮ್ಮಲ್ಲಿದ್ದ ದೈವಿಕಶಕ್ತಿ, ನೀಲಿಕಲ್ಲು ಹಾಗೂ ಗಿಡಮೂಲಿಕೆಗಳ ಸಹಾಯದಿಂದ ಅವಳಿಗೆ ಪುನರುಜೀವ ನೀಡಿದರು. ಇದಕ್ಕೆ ಪ್ರತಿಯಾಗಿ ಹರ್ಷಚಿತ್ತರಾದ ಬಲ್ಲಾಳ ಮನೆತನದವರು ಗುರುಗಳಿಗೆ ಪುಂಜಂಗೋಡಿನಲ್ಲಿ 35 ಎಕ್ರೆ ಭೂಮಿಯನ್ನು ಬಳುವಳಿಯಾಗಿ ನೀಡಿದರು. ಇದೂ ಅಲ್ಲದೆ ಅನಂತರದ ಕಾಲದಲ್ಲಿ ಮಾಯಿಪ್ಪಾಡಿ ಅರಸರುಗಳಿಗೆ ಸೇರಿದ ಆನೆಗಳ ತಾಣವಾದ ಆನೆಮಜಲಿನಲ್ಲಿ ಆನೆಯೊಂದಕ್ಕೆ ಚಿಕಿತ್ಸೆ ನೀಡಿ ಅದರ ಜೀವವನ್ನು ರಕ್ಷಿಸಿದುದಕ್ಕೆ ಪ್ರತಿಫಲವಾಗಿ ಆನೆಮಜಲಿನ ಒಂದು ಭಾಗವನ್ನೇ ದಾನವಾಗಿ ನೀಡಿದರು. ಹೀಗೆ ವಿಸ್ತಾರವಾದ ಭೂಪ್ರದೇಶವು ಪುಂಜಂಗೋಡಿನ ಭಾಗವಾಯಿತು.

ಉತ್ತು ಬಿತ್ತಿದರೆ ಹೊನ್ನು ಬೆಳೆಯಲು ಸಾಧ್ಯವಿರುವ ಫಲವತ್ತಾದ ಜಮೀನಿನಲ್ಲಿ ಯಾರನ್ನು ಸ್ಥಿರವಾಸಕ್ಕೆ ಕಳುಹಿಸುವುದೆಂದು ಚಿಂತಿಸುತ್ತಿದ್ದಂತೆ, ಸಹೋದರರೊಂದಿಗೆ ವೈಮನಸ್ಯವಿದ್ದ ಕುಟುಂಬದ ಮಹಿಳೆಯರಿಬ್ಬರ ಸಮಸ್ಯೆಗಳು ಅವರ ಗಮನಕ್ಕೆ ಬಂತು. ಹುಡುಕಿದ ಹಗ್ಗ ಕಾಲಿಗೆ ಎಡವಿತೆಂಬಂತೆ ಅವರಿಬ್ಬರನ್ನು ಪುಂಜಂಗೋಡಿಗೆ ಕರೆತಂದರು. ಕಾಲಕ್ರಮೇಣ ಅಕ್ಕ ಪುಂಜಂಗೋಡಿನಲ್ಲೂ ತಂಗಿ ಕೊಡವಂಜಿಯಲ್ಲೂ ವಾಸ್ತವ್ಯ ಹೂಡಿದರು. ಹಾಗೂ ಇವು ಎರಡು ಬೇರೆ ಬೇರೆ ತರವಾಡುಗಳಾಗಿ ಅಭಿವೃದ್ಧಿ ಹೊಂದಿದವು. ತನ್ಮಧ್ಯೆ ಪುಂಜಗೋಡು ತರವಾಡು ಸ್ಥಾಪಕರಾದ ಗುರುವರ್ಯರು ತಮ್ಮ ಆರಾಧ್ಯ ದೇವಿಯಾದ ಶ್ರೀ ಮಾಣ್ಣಾಳಮ್ಮನಿಗೆ ಪ್ರಥಮ ಸ್ಥಾನವನ್ನು ಕಲ್ಪಿಸಿ ಪ್ರತಿಷ್ಠೆ ಮಾಡಿ ವಿಷ್ಣುಮೂರ್ತಿ ಮತ್ತು ಇತರ ಪರಿವಾರ ದೈವಗಳನ್ನೂ ಸಾಲಿಗ್ರಾಮವನ್ನೂ ತಾವೇ ಪ್ರತಿಷ್ಠೆ ಮಾಡಿ ಆರಾಧಿಸಲಾರಂಭಿಸಿದರು. ಅವರ ಕಾಲಾನಂತರ ತರವಾಡು ಜೀರ್ಣಿಸಲಾರಂಭಿಸಿದಾಗ ಈ ಸಾಲಿಗ್ರಾಮ (ವಿಷ್ಣುಸಾಲಿಗ್ರಾಮ)ವು ಭೂಗತವಾಯಿತು ಮತ್ತು ಕಾಲಕ್ರಮೇಣ ತರವಾಡು ಅನ್ಯಾಧೀನವಾಯಿತು. ಅನೇಕ ವರ್ಷಗಳ ಬಳಿಕ ದಿ. ಜಯರಾಮ ಮಾಸ್ತರ್ ದೈವಸ್ಥಾನವನ್ನು ನವೀಕರಿಸುವ ಸಂದರ್ಭದಲ್ಲಿ ಈ ಸಾಲಿಗ್ರಾಮವು ಕೆಲಸದಾಳೊಬ್ಬನ ಕೈಸೇರಿ ಆತ ಅದನ್ನು ಮನೆಯಲ್ಲಿಟ್ಟು ಪೂಜಿಸಲಾರಂಭಿಸಿದನು. ಇದನ್ನು ವಿರೋಧಿಸಿದ ಆತನ ಮನೆಯವರು ಸದ್ರಿ ಸಾಲಿಗ್ರಾಮವನ್ನು ನಾಶಮಾಡಲು ಹವಣಿಸಿದರು. ಇದರಿಂದ ಕೋಪಗೊಂಡ ಆತ ಅದನ್ನು ಮಧೂರು ಕ್ಷೇತ್ರಕ್ಕೆ ಸಮರ್ಪಿಸಲು ತೆರಳಿದಾಗ ಅಲ್ಲಿಯೂ ವ್ಯತಿರಿಕ್ತ ಅಭಿಪ್ರಾಯವುಂಟಾಗಿ ಮುಂದೆ ಈ ಸಾಲಿಗ್ರಾಮವನ್ನು ಪರಕ್ಕಿಲ ಕ್ಷೇತ್ರಕ್ಕೆ ಸಮರ್ಪಣೆ ಮಾಡುವಂತೆ ಸೂಚಿಸಲಾಯಿತು. ಈ ಸಾಲಿಗ್ರಾಮವು ಇಂದೂ ಕೂಡ ಅಲ್ಲಿ ಪೂಜಿಸಲ್ಪಡುತ್ತಿದೆ.

ಶ್ರೀ ಮಾಣ್ಣಾಳಮ್ಮ ಸಾಕ್ಷಾತ್ ಕಾಳರಾತ್ರಿಯಾಗಿದ್ದಾಳೆ. ದೇವಕೀ ವಸುದೇವರ ಎಂಟನೇ ಪುತ್ರನಿಂದ ಮರಣ ಸಂಭವಿಸುವುದೆಂಬ ಅಶರೀರವಾಣಿಗೆ ಬೆದರಿ ಮತಿಗೆಟ್ಟ ಕಂಸ ತನ್ನ ಸಹೋದರಿಯ ಎಲ್ಲಾ ಶಿಶುಗಳನ್ನು ನಿಷ್ಕರುಣೆಯಿಂದ ಹತ್ಯೆಗೈದ ಬಳಿಕ ಎಂಟನೇ ಶಿಶುವನ್ನು ನೆಲಕಪ್ಪಳಿಸಿ ಕೊಲ್ಲಲು ಹವಣಿಸಿದಾಗ ಆತನ ಕೈಯಿಂದ ತಪ್ಪಿಸಿಕೊಂಡು ನಭಸ್ಸಿಗೇರಿ ನಿನ್ನನ್ನು ಕೊಲ್ಲುವ ಶಿಶು ನಂದಗೋಕುಲದಲ್ಲಿ ಬೆಳೆಯುತ್ತಿದ್ದಾನೆ' ಎಂಬ ಅಶರೀರವಾಣಿಯನ್ನು ಮೊಳಗಿಸುತ್ತಾ ಮಾಯವಾಯಿತು. ಹೀಗೆ ಮಾಯವಾದ ದೇವಿಸ್ವರೂಪವೇ ಮಾಣ್ಣಾಳಮ್ಮ (ಮಾಣ್ಣ+ಅಮ್ಮ).

ಶ್ರೀ ಲಲಿತ ಸಹಸ್ರನಾಮಾವಳಿಯಲ್ಲಿ ಶ್ರೀನಾಥ ಸೋದರೀಭೂತ ಶೋಭಿತಾಯೈ ನಮಃ, ಶ್ರೀ ಮೂಕಾಂಬಿಕಾದೇವಿಯ ಸಹಸ್ರನಾಮಾವಳಿಯಲ್ಲಿ ಯಾದವ ಸ್ತ್ರೀಯೆ ನಮಃ ಎಂದು ಸಂಬೋಧಿತಳಾದ ಈಕೆಯನ್ನು ಕೇರಳದ ಬಡಗುಭಾಗದ ಯಾದವ ತರವಾಡುಗಳಲ್ಲಿ ಮಾಣ್ಣಾಳಮ್ಮನೆಂದೂ ತೆಂಕುಭಾಗದ ಯಾದವ ತರವಾಡುಗಳಲ್ಲಿ ಕಣ್ಣಂಕಾಟ್ (ಕಣ್ಣನೆ ಕಾಟಿಯ) ಭಗವತಿಯೆಂದೂ ಕರೆಯುತ್ತಾರೆ. ಈ ಎರಡು ದೇವತಾ ಶಕ್ತಿಗಳ ಐತಿಹ್ಯವೂ ಭೂತಕೋಲ ಕಟ್ಟಿಯಾಡಿಸುವಾಗ ಉಪಯೋಗಿಸುವ ವೇಷಭೂಷಣಗಳೂ ಒಂದೇ ಆಗಿವೆ.





ಆಕರ್ಷಕ ವಿನ್ಯಾಸದ ತೀರ್ಥಬಾವಿ



ಕಾರ್ಯಕ್ರಮಗಳು

28.03.2026 ಶನಿವಾರ

ಪೂರ್ವಾಹ್ನ ಗಂಟೆ 8ರಿಂದ : ಗಣಪತಿಹೋಮ, 9ರಿಂದ : ನಾಗದೇವರಿಗೆ ತಂಬಿಲ, ಗಂಟೆ 10ರಿಂದ : ಹರಿಸೇವೆ, ಪ್ರಸಾದ ವಿತರಣೆ. ಮಧ್ಯಾಹ್ನ ಗಂಟೆ 1ರಿಂದ : ಅನ್ನಸಂತರ್ಪಣೆ.

ಸಂಜೆ ಗಂಟೆ 5.30ರಿಂದ: ಭಜನೆ – ಶ್ರೀ ಗೋಪಾಲಕೃಷ್ಣ ಭಜನಾ ಸಮಿತಿ ಅಗಲ್ಪಾಡಿ.

ಸಂಜೆ ಗಂಟೆ 6.30ರಿಂದ : ಶ್ರೀ ದೈವಗಳ ಭಂಡಾರ ತೆಗೆಯುವುದು

ರಾತ್ರಿ ಗಂಟೆ 8ರಿಂದ : ಶ್ರೀ ದೈವಗಳ ತೊಡಂಜಲ್

ರಾತ್ರಿ ಗಂಟೆ 9ರಿಂದ : ಅನ್ನಸಂತರ್ಪಣೆ

ರಾತ್ರಿ ಗಂಟೆ 10ರಿಂದ : ಶ್ರೀ ಕೊರತ್ತಿ ಅಮ್ಮನ ಕೋಲ

29.03.2026 ಆದಿತ್ಯವಾರ

ಪೂರ್ವಾಹ್ನ ಗಂಟೆ 3ರಿಂದ : ಶ್ರೀ ಮಾಣ್ಣಾಳಮ್ಮನವರ ದೈವಕೋಲ

ಪೂರ್ವಾಹ್ನ ಗಂಟೆ 5ರಿಂದ : ತುಲಾಭಾರ ಸೇವೆ, ಪ್ರಸಾದ ವಿತರಣೆ

ಬೆಳಿಗ್ಗೆ ಗಂಟೆ 10ರಿಂದ : ಶ್ರೀ ವಿಷ್ಣುಮೂರ್ತಿ ದೈವದ ಕೋಲ, ಪ್ರಸಾದ ವಿತರಣೆ

ಮಧ್ಯಾಹ್ನ ಗಂಟೆ 1ರಿಂದ : ಅನ್ನಸಂತರ್ಪಣೆ

ಸಂಜೆ ಗಂಟೆ 4.00ರಿಂದ : ಶ್ರೀ ಗುಳಿಗ ದೈವದ ಕೋಲ.

ಸಂಜೆ ಗಂಟೆ 5.00ರಿಂದ : ಶ್ರೀ ದೈವಗಳ ಭಂಡಾರ ನಿರ್ಗಮನ

ಪುನರ್‌ಪ್ರತಿಷ್ಠಾ ಬ್ರಹ್ಮಕಲಶೋತ್ಸವಕ್ಕೆ ಶುಭ ಕೋರುವ



ಶ್ರೀ ಪಿ. ನಾರಾಯಣ ಮಣಿಯಾಣಿ ಗೋರಿಗುಡ್ಡ ಮಂಗಳೂರು
ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ ಪುಂಜಂಗೋಡು




ವೇಣು ಗೋಪಾಲ ಮಾಸ್ಟರ್ ಎಡನೀರು
ಗೌರವಾಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ ಪುಂಜಂಗೋಡು



ಶ್ರೀಮತಿ ರಾಧಾ ಮತ್ತು ಶ್ರೀ ಶ್ರೀಧರ್ ಮಣಿಯಾಣಿ, ಮಂಗಳೂರು
ಅಧ್ಯಕ್ಷರು ತರವಾಡು ಸಮಿತಿ ಹಾಗೂ ಜೀರ್ಣೋದ್ಧಾರ ಸಮಿತಿ



ಶ್ರೀಮತಿ ಸಂಧ್ಯಾ ಮತ್ತು ಸುಬೇದಾರ್ ರಾಜೇಶ ಪಿ.
ದುಗ್ಗಲಡ್ಕ, ಸುಳ್ಯ



ದಾಮೋದರ ಮಾಸ್ಟರ್ ಮಲ್ಲ
ಕೋಶಾಧಿಕಾರಿ ಜೀರ್ಣೋದ್ಧಾರ ಸಮಿತಿ




ಶ್ರೀಮತಿ ಭಾನು ಟೀಚರ್ ಮತ್ತು ಶ್ರೀ ರಾಧಾಕೃಷ್ಣ ಮುಳ್ಳೇರಿಯ
ಉಪಾಧ್ಯಕ್ಷರು, ತರವಾಡು ಸಮಿತಿ ಪುಂಜಂಗೋಡು




ಶ್ರೀಮತಿ ಶಾಂಭವಿ ಮತ್ತು ಶ್ರೀ ಸಂಜೀವ ಮಣಿಯಾಣಿ
ಸೋಮೇಶ್ವರ, ಉಳ್ಳಾಲ



ಶ್ರೀಮತಿ ಶೀಲಾವತಿ ಮತ್ತು ಶ್ರೀ ಹರೀಶ್ ಹೊಸಪೇಟೆ
ಆಡೂರು



ಶ್ರೀಮತಿ ಜಯಂತಿ ಮತ್ತು ಶ್ರೀ ಅಚ್ಚುತ ಅಟ್ಟೂರ್
ಜೊತೆ ಕಾರ್ಯದರ್ಶಿ ತರವಾಡು ಸಮಿತಿ



ಶ್ರೀಮತಿ ಜಲಜ ಮತ್ತು ಶ್ರೀ ಗಂಗಾಧರ ಮಣಿಯಾಣಿ ಎಸ್.
ಮಹಾಬಲತೊಟ್ಟಿ, ಅಗಲ್ಪಾಡಿ



ಶ್ರೀಮತಿ ನಿಖಿಲಾಕ್ಷಿ ಮತ್ತು ಶ್ರೀ ಅಭಿಲಾಷ್
ವಾಂತಿಚ್ಚಾಲು, ಬದಿಯಡ್ಕ




ಶ್ರೀ ಶಾಂತಾ ಕುಮಾರಿ ಟೀಚರ್ ಎಡನೀರು
ಅಧ್ಯಕ್ಷರು, ಮಾತೃ ಸಮಿತಿ ತರವಾಡು ಬ್ರಹ್ಮಕಲಶೋತ್ಸವ ಸಮಿತಿ



ಮುತ್ತಕ್ಕ ಶ್ರೀ ಗೋಕುಲ್ ಪದ್ಮಾರು
ಹಿರಿಯರು ತರವಾಡು ಸದಸ್ಯೆ



ರಮ್ಯ ದೀಪಕ್ ಯಾದವ ಅಗಲ್ಪಾಡಿ
ಅಧ್ಯಕ್ಷರು, ಯುವ ವಿಭಾಗ ಬ್ರಹ್ಮಕಲಶೋತ್ಸವ ಸಮಿತಿ ತರವಾಡು ಸಮಿತಿ



ಶ್ರೀಮತಿ ಲತಾ ಮತ್ತು ಶ್ರೀ ರಾಮಚಂದ್ರ
ಎಡನೀರು



ರಮೇಶ್ ಕೃಷ್ಣ ಪದ್ಮಾರ್
ಗೌರವಾಧ್ಯಕ್ಷರು, ಯುವ ಸಮಿತಿ ಶ್ರೀ ಮಾಣ್ಣಾಳಮ್ಮ ವಿಷ್ಣುಮೂರ್ತಿ ತರವಾಡು ಪುಂಜಂಗೋಡು




ಶಿವರಾಮ ಕೆದುಮೂಲೆ
ಆಹಾರ ಸಮಿತಿ ಅಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ



ನಾರಾಯಣ ಡಿ.ಎಂ.
ದೇವರಮೆಟ್ಟು ತರವಾಡು ಸದಸ್ಯರು



ವಿಜಯ ಕುಮಾರ್ ಎಡನೀರು
ತರವಾಡು ಸದಸ್ಯರು



ಶ್ರೀಮತಿ ಪ್ರಶಾಂತಿ ಅಪ್ಪಕುಂಞ್ಞಿ
ಗರಡಿ ಬೇಳ



ಶ್ರೀಮತಿ ಪ್ರಮೀಳಾ ಮಹಾಲಿಂಗ
ಮೂರಿಬೆಟ್ಟು ಪುಣಚ



ದಾಮೋದರ ಚೇಕೋಡ್
ತರವಾಡು ಸದಸ್ಯರು



ಶ್ರೀಧರ ಪದ್ಮಾರ್
ತರವಾಡು ಸದಸ್ಯರು



Saathvika, Deepak, & Joshika Ganesh
Agalpady